ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಾರಾಜೋಡಿ

ಬಹುಭಾಷಾ ನಟಿ ತಮನ್ನಾ ಭಾಟಿಯಾ ಮತ್ತು ನಟ ವಿಜಯ್ ವರ್ಮಾ ಅವರು ಮುಂಬೈನಲ್ಲಿ ನಡೆದ ಕಾರ್ಯಕ್ರಮದಲ್ಲಿ ಕಾಣಿಸಿಕೊಂಡಿದ್ದು ಹೀಗೆ

FIITJEE Bangalore Centre Produces Noteworthy Results in JEE Main 2024*

*Session 1

NTA Score 99.96

Tanmay Arya Rajeevalochana
Student of Two Year Classroom Program (XI - XII)

Hello
My Name is Tanmay Arya and I had enrolled in 2 year classroom program at FIITJEE HSR Layout. From the Beginning the faculty here have been very encouraging. The packages for each chapter extensively covered each topic from JEE Main to JEE Advanced. Phase Tests, Monthly tests, AITS, AI²TS helped boost my preparation.
I would Recommend FIITJEE to anyone who wants to secure a top engineering college.
Tan

NTA Score 99.93

Aditya
Student of Two Year Classroom Program (XI - XII)

I am Aditya, student of FIITJEE Bangalore since 2 years. I joined FIITJEE to prepare thoroughly for JEE Main and JEE Advanced Examinations.
The teachers here are extremely supportive. They help us find and rectify our mistakes and always motivate us to perform better.
The conceptual clarity they provide in all the subjects is definitely of the highest order.
The test series conducted by FIITJEE, including AI²TS, AITS, Phase tests, are challenging and help us properly assess ourselves. In my perspective, the mock tests were the most important factors in helping me improve my accuracy and exam temperament.
Aditya

Other Top Scorers in JEE Main 2024 (session 1) from FIITJEE Bangalore Centre

99.87 NTA Score

Pranav Prabhu Kumble
PINNACLE - Two Year Integrated School Program (XI - XII)

99.81 NTA Score

Aakash Rajan
Two Year Classroom Program (XI - XII)

99.78 NTA Score

Achutan M
Two Year Classroom Program (XI - XII)

99.77 NTA Score

Ishika Bhuin
Four Year Classroom Program (IX - XII)

99.70 NTA Score

A.siddharth Ramasamy
Four Year Classroom Program (IX - XII)

99.65 NTA Score

Tejas Kurian Sajith
Three Year Classroom Program (X - XII)

99.64 NTA Score

Fadeel Khan
Four Year Classroom Program (IX - XII)

99.62 NTA Score

Ritvik Ghosh
Four Year Classroom Program (IX - XII)

99.60 NTA Score

Nistla Sriamritha Varshini
Three Year Classroom Program (X - XII)

99.47 NTA Score

Mahendra Varma B
Two Year Classroom Program (XI - XII)

99.37 NTA Score

Soham Raychaudhuri
Three Year Classroom Program (X - XII)

99.25 NTA Score

Ritika Sahu
Four Year Classroom Program (IX - XII)

17 FIITJEE Classroom Program Students secure **99 or better NTA Score**

Come, join a FIITJEE Classroom Program and begin Your Journey of Transformation

For Students going to Class VI, VII, VIII, IX, X, XI & XII

✓ DRONACHARYA (II) 360° DIAGNOSTIC & SCHOLARSHIP EXAM
Exam Dates : 31st March & 7th April 2024
For more details, visit www.fiitjee.com/dronacharya

✓ Diagnostic cum Scholarship Test - 14th & 28th April 2024

For Students going to Class VII, VIII, IX, X & XI

✓ ACCELERATE
Your chance to catch up with early starters and Accelerate to your Goal.
19th May 2024
For more details, visit https://admissiontest.fiitjee.com/accelerate

✓ Diagnostic cum Scholarship Test - 2nd June 2024

✓ Diagnostic cum Scholarship Test : Class XI - 23rd June 2024

XII appearing / pass Students appearing in JEE Main & JEE Advanced 2024

If you think you cannot achieve the desired success in JEE Main / JEE Advanced or you did not sincerely prepare this year, then

Embark on a journey to optimum success in JEE Main 2025* & JEE Advanced 2025

*(those who have passed class XII in 2023 are eligible for JEE Main 2025)

ONE YEAR EXTENDED CLASSROOM PROGRAM
For JEE Main 2025 (XII Pass Students)
For JEE Main & Advanced 2025 (XII Appearing Students)

EARLY LEAD EXAM
Diagnostic cum Scholarship Test : 16th April 2024

For more details, visit https://admissiontest.fiitjee.com/earlylead

✓ RENAISSANCE 1 : Class XII Appeared / Pass - 5th May 2024 ✓ RENAISSANCE 2 : Class XII Pass - 16th June 2024
For more details, visit https://admissiontest.fiitjee.com/renaissance

✓ Diagnostic cum Scholarship Test : Class XII Pass - 23rd June 2024

Register at https://registration.fiitjee.com

Where winning is a habit !

FIITJEE
31+ YEARS OF INNOVATION, SINCERITY, ETHICS, CONSISTENCY & HARD WORK

To Discover Key to Holistic Development of Children - please turn over

While Students at Other Institutes are Stressed or in Tension

FIITJEE Students Walk into Top Ranks in

JEE Main 2024*

*Session 1

indulging in Their Favourite Sports & Extracurricular Activities

A National Level Archer & Khelo India Athlete achieves 100 NTA Score in JEE Main 2024

SUCCESS JOURNEY

Sriyashas Mohan Kalluri
Student of Four Year Classroom Program (IX - XII), upgraded to PINNACLE - Two Year Integrated Program (XI - XII)

100 NTA SCORE — Perfect Score 300/300 — in JEE Main 2024 (Session-1)

Class VIII – Oct 2019 - Appeared in FIITJEE's BBE Test. Date of Enrolment - 28 Nov 2019. Enrolled in FIITJEE's Four Year Classroom Program (IX-XII)

Class IX – April 2020 - Started classes at FIITJEE. Won GOLD MEDAL in Archery at 2021 Sub Junior (U-17) State Level Selections

Class X – Scored A+ in all 9 Subjects - Cambridge IGCSEs. Won GOLD MEDAL in Archery at 2021 Sub Junior State Level Selection Trials

Class XI – Program upgraded to PINNACLE - Two Year Integrated Program (XI-XII)

Class XI – Scored '5' in all 3 Advanced Placement (AP) exams and became AP Scholar with distinction

Class XI – Received Overall Champion Award & Team Silver Medal at VANDA International Science Olympiad (Singapore)

Class XI – Won GOLD MEDAL in Archery at 2022 Junior State Level Selection Trials

Class XII – Represented Telangana State at the 40th NTPC Sub Junior National Championships in Archery held at Raipur, India

Class XII – One of the 18 archers selected to the 'Khelo India 2023' held in Chennai

Class XII – Cleared NSEC & NSEA National Standard Examination in Chemistry & Astronomy

Class XII – Got an acceptance from Cambridge University, England

A Hindustani Classical Music Distinction Holder achieves 100 NTA Score in JEE Main 2024

SUCCESS JOURNEY

Madhav Bansal
Student of Four Year Classroom Program (IX - XII) + UDAYA : Two Year Classroom Program (VII - VIII)

100 NTA SCORE in JEE Main 2024 (Session-1)

Class VI – Dec 2017 - Appeared in FIITJEE's FTRE Test. Date of Enrolment - 27th Jan 2018. Enrolled in FIITJEE's UDAYA - Two Year Classroom Program (VII - VIII)

Class VII – April 2018 - Started Classes at FIITJEE

Class VIII – Got Awarded with a Distinction Certification in Hindustani Rashtriya Sangeet (Enrolled in since 2014)

Class IX – In the year 2020, he joined FIITJEE's Four Year Combined Program (CRP + Integrated School) For Class IX to XII

Class IX – Cleared IOQM (Indian Olympiad Qualifier for Maths) August 2021 - also started his own Youtube Channel

Class IX – Cleared MVPP 2021 with Rank - 6 (Mukhyamantri Vigyan Pratibha Pariksha)

Class XI – Cleared NSEA National Standard Examination in Astronomy

Class XII – Cleared NSEC National Standard Examination in Chemistry

Class XII – Cleared NSEP National Standard Examination in Physics

8 FIITJEE Students achieve an overall 100 NTA Score in JEE Main 2024*

*Session 1

Name	Program	State
Sriyashas Mohan Kalluri	Student of Four Year Classroom Program (IX - XII), upgraded to PINNACLE - Two Year Integrated Program (XI - XII)	Telangana State Topper
Aarav Bhatt	Student of Three Year Classroom Program (X - XII)	Haryana State Topper
Madhav Bansal	Student of Four Year Classroom Program (IX - XII) + UDAYA : Two Year Classroom Program (VII - VIII)	Joint Delhi State Toppers
Ipsit Mittal	Student of Three Year Classroom Program (X - XII)	Joint Delhi State Toppers
Thota Sai Karthik	Student of SUPREME - Four Year Integrated Program (IX - XII)	Andhra Pradesh State Topper
Gajare Nilkrishna Nirmalkumar	Student of All India Test Series (XII)	Maharashtra State Topper
Himanshu Thalor	Student of Rankers Study Material (XII)	Joint Rajasthan State Toppers
Ishaan Gupta	Student of Rankers Study Material (XI - XII)	Joint Rajasthan State Toppers

The impact we make to students' lives & our results speak louder than words. That is why FIITJEE is envied and hated by every competitor.

Parents, please scan the QR code to know what you should do for your children's career & life. Let there be no compromise on that. **Very Important. Please do not miss it.** Let us say NO to toxic coaching that leads to suicides. STOP STUDENT SUICIDES.

Holistic Development of Children is the Key, For Optimum Success & Bliss in Life

Education with Values...

FIITJEE

31+ YEARS OF INNOVATION, SINCERITY, ETHICS, CONSISTENCY & HARD WORK

Bangalore Centres - HSR Layout : 19, S.S. Plaza, 13th Cross, 6th Sector, Outer Ring Road, HSR Layout, Bangalore - 560 102 Ph: 9742288873 **Jayanagar :** 162, 36th Cross Road, 7th Main Rd, 5th Block, Jayanagar, Bangalore - 560041 Ph : 9742255583 **Sheshadripuram :** 113/ 114, 3rd Floor, HTR Chambers, Opp. Hoysala Hotel, S C Road, Sheshdripuram, Bangalore- 560020 Ph: 9742288873 **Web: www.fiitjeebangalore.com** | **Hostel Facility Available**

National Admissions Office: FIITJEE House, 29-A, Kalu Sarai, Sarvapriya Vihar, New Delhi | FIITJEE Helpline No: 7825895400 | FIITJEE eSchool Helpline No: 8400928400 | Web: www.fiitjee.com | Buy books at www.megacosmcognitions.com | www.facebook.com/fiitjeeindia123 | www.twitter.com/fiitjee | www.linkedin.com/company/fiitjee | www.youtube.com/fiitjeeltd | www.instagram.com/fiitjee.india

Discover Stress & Tension Free way to Excel, only with FIITJEE...

ಮಂಗಳವಾರ, ಮಾರ್ಚ್ 19, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 79 | ಪುಟ 16
www.prajavani.net
prajavani·net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ
ಕುರುಡುತನಕ್ಕೆ ಕಾರಣವಾಗುವ ಗ್ಲಾಕೋಮಾದ ಬಗ್ಗೆ ನಿರ್ಲಕ್ಷ್ಯ ಸಲ್ಲದು

ಆಳ-ಅಗಲ
ಬಸ್ ಮಾರಾಟ ಒಪ್ಪಂದದ ಅಸುಪಾಸಿನಲ್ಲಿ ಬಾಂಡ್ ಖರೀದಿ

‘ರಾಜ್ಯಪಾಲ ಸ್ಥಾನಕ್ಕೆ ರವಿ ಯೋಗ್ಯರಲ್ಲ’ 11
ಬಿಆರ್‌ಎಸ್ ಪಾಲು ಕೀಳಲು ಕೈ- ಕಮಲ ಯತ್ನ 7

ಸೆನ್ಸೆಕ್ಸ್	ನಿಫ್ಟಿ	₹/$
72,748 ▲	22,055 ▲	82.92 ▲

ಬಾಂಡ್: 21ರೊಳಗೆ ಪೂರ್ಣ ವಿವರ ಸಲ್ಲಿಸಲು ಸೂಚನೆ: ಎಸ್‌ಬಿಐಗೆ ಸುಪ್ರೀಂ ಕೋರ್ಟ್ ಮತ್ತೆ ತರಾಟೆ

ಮಾಹಿತಿ ಬಹಿರಂಗಕ್ಕೆ ಕಟ್ಟಪ್ಪಣೆ

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: ಚುನಾವಣಾ ಬಾಂಡ್‌ಗಳಿಗೆ ಸಂಬಂಧಿಸಿ ಪೂರ್ಣ ಮಾಹಿತಿ ಬಹಿರಂಗಪಡಿಸದ್ದಕ್ಕೆ ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ಅನ್ನು ಸುಪ್ರೀಂ ಕೋರ್ಟ್ ಮತ್ತೊಮ್ಮೆ ತೀವ್ರ ತರಾಟೆಗೆ ತೆಗೆದುಕೊಂಡಿದೆ.

‘ಅಲ್ಪ ಸ್ವಲ್ಪ ಮಾಹಿತಿ ನೀಡುವುದನ್ನು ನಿಲ್ಲಿಸಿ. ಮಾರ್ಚ್ 21ರ ಒಳಗಾಗಿ ಸಂಪೂರ್ಣ ಮಾಹಿತಿ ಬಹಿರಂಗಪಡಿಸಿ’ ಎಂದು ಸೋಮವಾರ ತಾಕೀತು ಮಾಡಿತು.

ಬಾಂಡ್‌ಗಳಿಗೆ ಇರುವ ವಿಶಿಷ್ಟ ಗುರುತಿನ ಸಂಖ್ಯೆಯನ್ನು ಬಹಿರಂಗ ಪಡಿಸುವಂತೆಯೂ ನಿರ್ದೇಶನ ನೀಡಿದೆ. ಈ ಸಂಖ್ಯೆಯನ್ನು ಬಹಿರಂಗಪಡಿಸಿ-ದರೆ ಬಾಂಡ್‌ಗಳ ಖರೀದಿದಾರರು ಯಾವ ರಾಜಕೀಯ ಪಕ್ಷಗಳಿಗೆ ಎಷ್ಟು ದೇಣಿಗೆ ನೀಡಿದ್ದಾರೆ ಎಂಬುದು ಬಯಲಾಗುತ್ತದೆ.

‘ಎಸ್‌ಬಿಐ ತನ್ನ ಬಳಿಯಿರುವ ಎಲ್ಲ ಮಾಹಿತಿ ಬಹಿರಂಗಪಡಿಸಬೇಕು ಎಂಬುದರಲ್ಲಿ ಯಾವ ಅನುಮಾನವೂ ಬೇಡ’ ಎಂದು ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ನೇತೃತ್ವದ ಐವರು ಸದಸ್ಯರ ಪೀಠ ಹೇಳಿತು.

ಎಸ್‌ಬಿಐ ನೀಡುವ ಮಾಹಿತಿಯನ್ನು ಚುನಾವಣಾ ಆಯೋಗವು ವೆಬ್‌ಸೈಟ್‌ನಲ್ಲಿ ಪ್ರಕಟಿಸಬೇಕು ಎಂದು ಪೀಠ ಸೂಚಿಸಿತು. ನ್ಯಾಯಮೂರ್ತಿ-ಗಳಾದ ಸಂಜೀವ್ ಖನ್ನಾ, ಬಿ.ಆರ್. ಗವಾಯಿ, ಜೆ.ಬಿ. ಪಾರ್ದೀವಾಲಾ ಮತ್ತು ಮನೋಜ್ ಮಿಶ್ರಾ ಅವರು ಪೀಠದ ಇತರ ಸದಸ್ಯರಾಗಿದ್ದಾರೆ.

‘ಆದೇಶವನ್ನು ಸಂಪೂರ್ಣವಾಗಿ ಕಾರ್ಯಗತಗೊಳಿಸಲು ಮತ್ತು ಭವಿಷ್ಯದಲ್ಲಿ ಯಾವುದೇ ವಿವಾದ ಉಂಟಾಗುವುದನ್ನು ತಪ್ಪಿಸಲು, ಚುನಾವಣಾ ಬಾಂಡ್‌ಗಳ ಎಲ್ಲ ವಿವರಗಳನ್ನು ಬಹಿರಂಗಪಡಿಸಿರುವುದನ್ನು ಸೂಚಿಸುವ ಪ್ರಮಾಣ ಪತ್ರವನ್ನು ಎಸ್‌ಬಿಐನ ವ್ಯವಸ್ಥಾಪಕ ನಿರ್ದೇಶಕರು ಗುರುವಾರ (ಮಾರ್ಚ್ 21) ಸಂಜೆಯೊಳಗೆ ಸಲ್ಲಿಸಬೇಕು’ ಎಂದು ಪೀಠ ನಿರ್ದೇಶಿಸಿತು.

‘ನಾವು ಎಲ್ಲ ಮಾಹಿತಿಯನ್ನೂ ನೀಡುತ್ತೇವೆ. ಯಾವುದನ್ನೂ ಮುಚ್ಚಿಡುವುದಿಲ್ಲ’ ಎಂದು ಬ್ಯಾಂಕ್ ಪರ ಹಾಜರಿದ್ದ ಹಿರಿಯ ವಕೀಲ ಹರೀಶ್ ಸಾಳ್ವೆ ಅವರು ಪೀಠಕ್ಕೆ ತಿಳಿಸಿದರು.

ಎನ್‌ಜಿಒ ಅರ್ಜಿ ತಿರಸ್ಕಾರ: ಬಾಂಡ್ ಯೋಜನೆ ಜಾರಿಯಾದಾಗಿನಿಂದ (2018) ಸುಪ್ರೀಂ ಕೋರ್ಟ್‌ನ ಮಧ್ಯಂತರ ಆದೇಶದವರೆಗಿನ (2019ರ ಏಪ್ರಿಲ್ 12) ಅವಧಿಯಲ್ಲಿ ಖರೀದಿಯಾದ ಬಾಂಡ್‌ಗಳ ವಿವರ ಗಳನ್ನು ಬಹಿರಂಗ ಪಡಿಸುವಂತೆ ಕೋರಿ ಸಿಟಿಜನ್ಸ್ ರೈಟ್ಸ್ ಟ್ರಸ್ಟ್ ಎಂಬ ಹೆಸರಿನ ಎನ್‌ಜಿಒ ಸಲ್ಲಿಸಿದ್ದ ಅರ್ಜಿಯನ್ನು ಪೀಠವು ತಿರಸ್ಕರಿಸಿತು.

ಪೀಠ ಹೇಳಿದ್ದು...

- ವಿಶಿಷ್ಟ ಗುರುತಿನ ಸಂಖ್ಯೆ ಸೇರಿದಂತೆ ಬಾಂಡ್‌ಗೆ ಸಂಬಂಧಿಸಿದ ಸಂಪೂರ್ಣ ಮಾಹಿತಿ ಬಹಿರಂಗಪಡಿಸುವಂತೆ ನಿರ್ದೇಶಿಸಿದ್ದೆವು. ಅಲ್ಪ ಸ್ವಲ್ಪ ಮಾಹಿತಿ ನೀಡಬಾರದು
- ಈ ಹಿಂದೆ ನೀಡಿದ ತೀರ್ಪನ್ನು ಎಸ್‌ಬಿಐ ಪಾಲಿಸಬೇಕು. ಈ ವಿಚಾರದಲ್ಲಿ ಇನ್ನೊಂದು ಆದೇಶಕ್ಕೆ ಕಾಯಬಾರದು
- ‘ಏನು ಬಹಿರಂಗಪಡಿಸಬೇಕೆಂದು ನೀವೇ ಹೇಳಿ, ನಾವು ಬಹಿರಂಗಪಡಿಸುತ್ತೇವೆ’ ಎಂಬ ಧೋರಣೆಯನ್ನು ಎಸ್‌ಬಿಐ ತೋರುತ್ತಿದೆ. ಇದು ಸರಿಯಲ್ಲ



ಮೂರನೇ ಬಾರಿ ಹಿನ್ನಡೆ

ಚುನಾವಣಾ ಬಾಂಡ್ ವಿಚಾರದಲ್ಲಿ ಎಸ್‌ಬಿಐಗೆ ಸುಪ್ರೀಂ ಕೋರ್ಟ್‌ನಲ್ಲಿ ಎಂಟು ದಿನಗಳ ಅಂತರದಲ್ಲಿ ಮೂರನೇ ಬಾರಿ ಹಿನ್ನಡೆ ಆಗಿದೆ.

- ಬಾಂಡ್ ಕುರಿತ ವಿವರಗಳನ್ನು ಸಲ್ಲಿಸಲು ನೀಡಿದ್ದ ಗಡುವು ವಿಸ್ತರಿಸುವಂತೆ ಕೋರಿ ಬ್ಯಾಂಕ್ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಮಾರ್ಚ್ 11ರಂದು ತಳ್ಳಿಹಾಕಿತ್ತು.
- ಬಾಂಡ್‌ಗಳಿಗೆ ಸಂಬಂಧಿಸಿದಂತೆ ಅಪೂರ್ಣ ಮಾಹಿತಿ ನೀಡಿದ್ದಕ್ಕಾಗಿ ಮಾರ್ಚ್ 15ರಂದು ಎಸ್‌ಬಿಐಅನ್ನು ತೀವ್ರ ತರಾಟೆಗೆ ತೆಗೆದುಕೊಂಡಿತ್ತು.

‘ಪ್ರಚಾರ ಗಿಟ್ಟಿಸಲು ಕಸರತ್ತು ಬೇಡ’

ಚುನಾವಣಾ ಬಾಂಡ್ ಮಾಹಿತಿ ಬಹಿರಂಗಪಡಿಸುವಂತೆ ನೀಡಿದ್ದ ತೀರ್ಪನ್ನು ಮರು ಪರಿಶೀಲಿಸುವಂತೆ ಕೋರಿ ಸುಪ್ರೀಂ ಕೋರ್ಟ್ ವಕೀಲರ ಸಂಘದ (ಎಸ್‌ಸಿಬಿಎ) ಅಧ್ಯಕ್ಷ ಆದಿಶ್ ಸಿ. ಅಗರವಾಲ್ ಬರೆದಿದ್ದ ಪತ್ರವನ್ನು ಪೀಠವು ಇದೇ ವೇಳೆ ತಳ್ಳಿಹಾಕಿತು.

‘ನೀವು ಹಿರಿಯ ವಕೀಲರು ಮಾತ್ರವಲ್ಲದೆ, ಎಸ್‌ಸಿಬಿಎ ಅಧ್ಯಕ್ಷರೂ ಆಗಿದ್ದೀರಿ. ಕಾನೂನು ಪ್ರಕ್ರಿಯೆ ಏನೆಂಬುದು ನಿಮಗೆ ತಿಳಿದಿದೆ’ ಎಂದು ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್, ಆದಿಶ್ ಅವರನ್ನು ಉದ್ದೇಶಿಸಿ ಹೇಳಿದರು.

‘ತೀರ್ಪನ್ನು ಸ್ವಯಂಪ್ರೇರಿತರಾಗಿ ಮರು ಪರಿಶೀಲಿಸುವಂತೆ ಕೋರಿ ಪತ್ರ ಬರೆದಿದ್ದೀರಿ. ಇವೆಲ್ಲವೂ, ಪ್ರಚಾರ ಗಿಟ್ಟಿಸಲು ನಡೆಸುವ ಕಸರತ್ತು. ಅದಕ್ಕೆ ನಾವು ಅವಕಾಶ ನೀಡೆವು. ನನಗೆ ಹೆಚ್ಚಿನದ್ದು ಹೇಳುವಂತೆ ಮಾಡಬೇಡಿ. ಇನ್ನೇನಾದರೂ ಹೇಳಿದರೆ ಅದು ನಿಮಗೆ ಇಷ್ಟವಾಗದು’ ಎಂದು ತರಾಟೆಗೆ ತೆಗೆದುಕೊಂಡರು.

ತುರ್ತು ವಿಚಾರಣೆಗೆ ಒಪ್ಪದ ಪೀಠ

ಚುನಾವಣಾ ಬಾಂಡ್ ಮಾಹಿತಿ ಬಹಿರಂಗಪಡಿಸದಂತೆ ಕೋರಿ ಭಾರತೀಯ ವಾಣಿಜ್ಯ ಮತ್ತು ಕೈಗಾರಿಕಾ ಒಕ್ಕೂಟ (ಅಸೋಚಾಮ್) ಹಾಗೂ ಭಾರತೀಯ ಕೈಗಾರಿಕಾ ಒಕ್ಕೂಟ (ಸಿಐಐ) ಸಲ್ಲಿಸಿದ್ದ ಅರ್ಜಿಯ ತುರ್ತು ವಿಚಾರಣೆಗೆ ಪೀಠವು ಒಪ್ಪಲಿಲ್ಲ.

ಪ್ರಧಾನಿ ನರೇಂದ್ರ ಮೋದಿ ಅವರು ಶಿವಮೊಗ್ಗದಲ್ಲಿ ಸೋಮವಾರ ನಡೆದ ಚುನಾವಣಾ ರ‍್ಯಾಲಿಯಲ್ಲಿ ನೆರೆದಿದ್ದ ಜನಸ್ತೋಮದತ್ತ ಕೈಬೀಸಿದರು. ದಾವಣಗೆರೆ ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ, ಶಿವಮೊಗ್ಗ ಕ್ಷೇತ್ರದ ಅಭ್ಯರ್ಥಿ ಬಿ.ವೈ.ರಾಘವೇಂದ್ರ ಜೊತೆಗಿದ್ದರು –ಪಿಟಿಐ ಚಿತ್ರ

ಮಧ್ಯ ಕರ್ನಾಟಕದಲ್ಲಿ ಪ್ರಧಾನಿ ಸಮಾವೇಶ

ರಾಜ್ಯದಲ್ಲಿ ಮೋದಿ ಪ್ರಚಾರ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಪ್ರಧಾನಿ ನರೇಂದ್ರ ಮೋದಿ ಅವರು ಬೃಹತ್ ಸಮಾವೇಶದ ಮೂಲಕ ಮಧ್ಯ ಕರ್ನಾಟಕ, ಮಲೆನಾಡು ಭಾಗದಲ್ಲಿ ಪಕ್ಷದ ಪರ ಲೋಕಸಭೆ ಚುನಾವಣೆ ಪ್ರಚಾರಕ್ಕೆ ಸೋಮವಾರ ಚಾಲನೆ ನೀಡಿದರು.

ನರೇಂದ್ರ ಮೋದಿ ಭಾಷಣ ಆಲಿಸಲು ಶಿವಮೊಗ್ಗ, ದಾವಣಗೆರೆ, ಚಿತ್ರದುರ್ಗ, ದಕ್ಷಿಣ ಕನ್ನಡ ಹಾಗೂ ಚಿಕ್ಕಮಗಳೂರು–ಉಡುಪಿ ಕ್ಷೇತ್ರಗಳಿಂದ ಭಾರಿ ಸಂಖ್ಯೆಯಲ್ಲಿ ಪಕ್ಷದ ಕಾರ್ಯಕರ್ತರು ಬಂದಿದ್ದರು. ಮಧ್ಯಾಹ್ನ 1.30ಕ್ಕೆ ಕಾರ್ಯಕ್ರಮ ನಿಗದಿಯಾಗಿತ್ತು. ಭದ್ರತೆಯ ಕಾರಣಕ್ಕೆ ಜನರು ಮಧ್ಯಾಹ್ನ 12 ಗಂಟೆಗೆ ಮುನ್ನವೇ ವೇದಿಕೆ ಎದುರು ಆಸೀನರಾಗಿದ್ದರು.

7ನೇ ಪುಟ ನೋಡಿ

ಈಶ್ವರಪ್ಪ ಗೈರು, ಕುಮಾರ್ ಹಾಜರು

ಹಾವೇರಿ ಕ್ಷೇತ್ರದ ಟಿಕೆಟ್ ಹಂಚಿಕೆ ವಿಷಯದಲ್ಲಿ ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ವಿರುದ್ಧ ಮುನಿಸಿಕೊಂಡಿರುವ ಮಾಜಿ ಉಪಮುಖ್ಯಮಂತ್ರಿ ಕೆ.ಎಸ್.ಈಶ್ವರಪ್ಪ ಅವರ ಮನವೊಲಿಸಲು ಈ ಸಮಾವೇಶ ವೇದಿಕೆ ಆಗಲಿದೆ ಎಂಬ ಕಾರ್ಯಕರ್ತರ ನಿರೀಕ್ಷೆ ಹುಸಿಯಾಯಿತು.

ಪ್ರಧಾನಿ ಕಾರ್ಯಕ್ರಮದಿಂದ ಕೆ.ಎಸ್.ಈಶ್ವರಪ್ಪ ದೂರ ಉಳಿದರು. ಇಡೀ ದಿನ ಶಿವಮೊಗ್ಗ ಜಿಲ್ಲೆಯ ವೀರಶೈವ–ಲಿಂಗಾಯತ ಮಠಗಳಿಗೆ ಭೇಟಿ ನೀಡಿ ಶ್ರೀಗಳ ಆಶೀರ್ವಾದ ಪಡೆದರು.

ಕಳೆದ ವಿಧಾನಸಭೆ ಚುನಾವಣೆಯಲ್ಲಿ ಸೋಲಿನ ನಂತರ ಪಕ್ಷದ ವೇದಿಕೆಗಳಿಂದ ಅಂತರ ಕಾಯ್ದುಕೊಂಡಿದ್ದ ಮಾಜಿ ಸಚಿವ ಕುಮಾರ್ ಬಂಗಾರಪ್ಪ, 10 ತಿಂಗಳ ನಂತರ ಪಕ್ಷದ ಕಾರ್ಯಕ್ರಮದಲ್ಲಿ ಭಾಗಿಯಾದರು. ಸಮಾರಂಭದಲ್ಲಿ ಸೇರಿದ್ದವರು ಕುಮಾರ್ ಅವರಿಗೆ ಭಾರಿ ಶಿಳ್ಳೆ–ಚಪ್ಪಾಳೆಯ ಸ್ವಾಗತ ಕೋರಿದರು.

> **ಶಿವಮೊಗ್ಗ ಯಡಿಯೂರಪ್ಪ ಅವರ ತಪೋಭೂಮಿ. ಬಿಜೆಪಿಯನ್ನು ಯಾರೂ ಗುರುತಿಸದ ಹೊತ್ತಿನಲ್ಲಿ, ಮುನ್ಸಿಪಾಲಿಟಿ ಸದಸ್ಯರೂ ಇಲ್ಲದ ವೇಳೆ ತಮ್ಮ ಯೌವನ ತ್ಯಾಗ ಮಾಡಿ ಪಕ್ಷ ಕಟ್ಟಿದ್ದಾರೆ**
> **ನರೇಂದ್ರ ಮೋದಿ,** ಪ್ರಧಾನಿ

ದೇಣಿಗೆ: ಗುಟ್ಟು ಬಿಟ್ಟುಕೊಡದ ಪಕ್ಷಗಳು

ನವದೆಹಲಿ (ಪಿಟಿಐ): ಚುನಾವಣಾ ಬಾಂಡ್ ಮೂಲಕ ದೇಣಿಗೆ ಪಡೆದ ಪ್ರಮುಖ ಪಕ್ಷಗಳು, ಕಾನೂನಿನ ಹಲವು ಅಂಶಗಳನ್ನು ಉಲ್ಲೇಖಿಸುವ ಮೂಲಕ ತಮಗೆ ದೇಣಿಗೆ ನೀಡಿದವರ ಹೆಸರನ್ನು ಬಹಿರಂಗಪಡಿಸಿಲ್ಲ. ಇನ್ನು ಕೆಲವು ಪಕ್ಷಗಳು, ‘ನಾವು ಅನಾಮಧೇಯ ಮೂಲಗಳಿಂದ ದೇಣಿಗೆ ಪಡೆದಿದ್ದೇವೆ’ ಎಂದು ಹೇಳಿವೆ. 11

ಒಳ ಪುಟಗಳು

ಎಎನ್‌ಎಫ್‌ನಿಂದ ತೀವ್ರ ಶೋಧ 5

ಡ್ರೈವ್‌ಗೆ ಬಾಲ್ಯದ ಚಿತ್ರ: ಖಾತೆ ತಡೆಹಿಡಿದ ಗೂಗಲ್ 11

ಕೋಲಾರ ಕ್ಷೇತ್ರ ಹಂಚಿಕೆ ಬಿಕ್ಕಟ್ಟು– ಮೈತ್ರಿಯಲ್ಲಿ ಬಿರುಕಿನ ಲಕ್ಷಣ

ಬಿಜೆಪಿ ಜತೆ ಮೈತ್ರಿ: ಎಚ್‌ಡಿಕೆ ಅಪಸ್ವರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಸಭಾ ಚುನಾವಣೆಯಲ್ಲಿ ಸೀಟು ಹಂಚಿಕೆ ಮತ್ತು ಪ್ರಚಾರ ಕಾರ್ಯಕ್ರಮದಲ್ಲಿ ಬಿಜೆಪಿ ನಾಯಕರ ಧೋರಣೆ ಕುರಿತು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಅಸಮಾಧಾನ ಹೊರಹಾಕಿದ್ದಾರೆ. ಇದರೊಂದಿಗೆ ಮೈತ್ರಿಕೂಟದಲ್ಲಿ ಬಿರುಕು ಮೂಡುವ ಲಕ್ಷಣಗಳು ಕಾಣಿಸಿವೆ.

ಕೋಲಾರ ಕ್ಷೇತ್ರವನ್ನು ಜೆಡಿಎಸ್ ಪಕ್ಷಕ್ಕೆ ಬಿಟ್ಟುಕೊಡಲು ಬಿಜೆಪಿ ಹಿಂದೇಟು ಹಾಕುತ್ತಿದೆ. ಇದರಿಂದ ಎರಡೂ ಪಕ್ಷಗಳ ಮಧ್ಯೆ ಬಿಕ್ಕಟ್ಟು ಸೃಷ್ಟಿಯಾಗಿದೆ. ಬಿಜೆಪಿ ನಾಯಕರ ತೀರ್ಮಾನ ಹೊರಬೀಳುವ ಮುನ್ನವೇ, ‘ಹಾಸನ, ಮಂಡ್ಯ ಮತ್ತು ಕೋಲಾರ ಕ್ಷೇತ್ರಗಳಲ್ಲಿ ಜೆಡಿಎಸ್ ಅಭ್ಯರ್ಥಿಗಳನ್ನು ಕಣಕ್ಕಿಳಿಸುತ್ತೇವೆ’ ಎಂದು ಕುಮಾರಸ್ವಾಮಿ ಘೋಷಿಸಿದ್ದಾರೆ.

ಲೋಕಸಭಾ ಚುನಾವಣೆ ಕುರಿತು ಜೆಡಿಎಸ್ ರಾಜ್ಯ ಘಟಕದ ಕಚೇರಿಯಲ್ಲಿ ಪಕ್ಷದ ‘ಕೋರ್ ಕಮಿಟಿ’ ಸದಸ್ಯರು, ಚುನಾವಣಾ ಉಸ್ತುವಾರಿಗಳು ಮತ್ತು ಸಹ ಉಸ್ತುವಾರಿಗಳ ಜತೆ ಸಭೆ ನಡೆಸಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಕುಮಾರಸ್ವಾಮಿ, ‘ಬಿಜೆಪಿಯು ನಮ್ಮನ್ನು ಗೌರವಯುತವಾಗಿ ನಡೆಸಿಕೊಳ್ಳುತ್ತಿಲ್ಲ’ ಎಂದು ದೂರಿದರು.

ಮೈತ್ರಿ ಬೇಕಿತ್ತಾ?: ‘ಸೀಟು ಹಂಚಿಕೆ ಕುರಿತು ಅಧಿಕೃತವಾಗಿ ಘೋಷಣೆ ಆಗುವವರೆಗೆ ನಾನು ಮಾತನಾಡುವುದಿಲ್ಲ. ನಾವು ಬಿಜೆಪಿಯಿಂದ 6–7 ಕ್ಷೇತ್ರ ಕೇಳಿಲ್ಲ. ಕೇಳಿರುವುದೇ 3–4 ಕ್ಷೇತ್ರ. ನಮ್ಮ ಶಕ್ತಿ ಅವರಿಗೂ ಗೊತ್ತು. ಮೂರರಿಂದ ನಾಲ್ಕು ಕ್ಷೇತ್ರ ಕೊಡುತ್ತಾರೆ ಎಂಬ ನಂಬಿಕೆ ಇದೆ. ಕೇವಲ ಎರಡು ಕ್ಷೇತ್ರ ತೆಗೆದುಕೊಳ್ಳಲು ನಾನು ಇಷ್ಟು ಪ್ರಯತ್ನಪಡಬೇಕಿತ್ತೆ? ಈ ಹೊಂದಾಣಿಕೆ ಬೇಕಿತ್ತಾ ನನಗೆ’ ಎಂದು ಕೇಳಿದರು.

7ನೇ ಪುಟ ನೋಡಿ

‘ಕಮಲ’ ನಾಯಕರ ನಡೆಗೆ ಜೆಡಿಎಸ್ ನಾಯಕರ ಕಿಡಿ

ಬಿಜೆಪಿಯ 20 ಅಭ್ಯರ್ಥಿಗಳ ಘೋಷಣೆಗೂ ಮುನ್ನ ಜೆಡಿಎಸ್ ನಾಯಕರ ಜತೆ ಚರ್ಚಿಸದೇ ಇರುವುದು, ಕಲಬುರಗಿ, ಶಿವಮೊಗ್ಗದಲ್ಲಿ ನಡೆದ ಪ್ರಧಾನಿ ನರೇಂದ್ರ ಮೋದಿಯವರ ಬಹಿರಂಗ ಸಭೆಗೆ ಜೆಡಿಎಸ್ ವರಿಷ್ಠರಿಗೆ ಆಹ್ವಾನ ನೀಡದಿರುವುದು ಮತ್ತು ಕೋಲಾರ ಲೋಕಸಭಾ ಕ್ಷೇತ್ರವನ್ನು ಬಿಟ್ಟುಕೊಡಲು ಹಿಂದೇಟು ಹಾಕುತ್ತಿರುವುದಕ್ಕೆ ಜೆಡಿಎಸ್‌ನ ಹಲವು ನಾಯಕರು ಬಿಜೆಪಿ ವಿರುದ್ಧ ತೀವ್ರ ಅಸಮಾಧಾನ ಹೊರಹಾಕಿದರು.

ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡ ಮತ್ತು ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಉಪಸ್ಥಿತಿಯಲ್ಲಿ ನಡೆದ ಸಭೆಯಲ್ಲಿ ಪಕ್ಷದ ಹಲವು ಪ್ರಮುಖರು ಬಿಜೆಪಿಯ ಧೋರಣೆಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದರು.

‘ಚುನಾವಣೆಯ ಆರಂಭದಲ್ಲೇ ಬಿಜೆಪಿಯು ಮಿತ್ರಪಕ್ಷವನ್ನು ಈ ರೀತಿ ನಡೆಸಿಕೊಂಡರೆ ಮುಂದೇನು’ ಎಂದು ಪ್ರಶ್ನಿಸಿದ ಕೆಲವರು, ‘ಪಕ್ಷವನ್ನು ಒತ್ತೆ ಇಡುವಂತಹ ಮೈತ್ರಿ ಬೇಡ’ ಎಂದು ಆಗ್ರಹಿಸಿದರು. ಪಕ್ಷದ ಮುಖಂಡರನ್ನು ಸಮಾಧಾನಪಡಿಸಿದ ದೇವೇಗೌಡ, ‘ದೆಹಲಿಗೆ ತೆರಳಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಜತೆ ಮತ್ತೊಮ್ಮೆ ಚರ್ಚಿಸಿ. ಇಲ್ಲವಾದರೆ ನಾನೇ ದೆಹಲಿಗೆ ಹೋಗುತ್ತೇನೆ’ ಎಂದರು.

ನಾಮಫಲಕ: ಬಲವಂತದ ಕ್ರಮ ಬೇಡ– ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಾಮಫಲಕಗಳಲ್ಲಿ ಶೇ 60ರಷ್ಟು ಕನ್ನಡ ಬಳಕೆ ಮಾಡದ ವಾಣಿಜ್ಯ ಸಂಸ್ಥೆಗಳು, ಅಂಗಡಿಗಳನ್ನು ಮುಚ್ಚಬಾರದು’ ಎಂದು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ಮಧ್ಯಂತರ ಆದೇಶ ನೀಡಿದೆ.

ಕನ್ನಡ ಕಡ್ಡಾಯಗೊಳಿಸುವ ಕಾಯ್ದೆ ಹಾಗೂ ಸುತ್ತೋಲೆಯನ್ನು ಪ್ರಶ್ನಿಸಿ ಮುಂಬೈನಲ್ಲಿ ಕೇಂದ್ರ ಕಚೇರಿ ಹೊಂದಿರುವ ‘ಭಾರತೀಯ ಚಿಲ್ಲರೆ ವ್ಯಾಪಾರಿಗಳ ಸಂಘ’ ಮತ್ತು ಏಳು ಕಂಪನಿಗಳು ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ಕೆಲಕಾಲ ವಾದ-ಪ್ರತಿವಾದ ಆಲಿಸಿದ ನ್ಯಾಯಪೀಠ, ‘ಸುತ್ತೋಲೆಯ ಅನುಸಾರ ವಾಣಿಜ್ಯ ಸಂಸ್ಥೆಗಳ ವಿರುದ್ಧ ಸದ್ಯಕ್ಕೆ ಬಲವಂತದ ಕ್ರಮ ಜರುಗಿಸಬಾರದು. ಅಂತೆಯೇ, ಕಾಯ್ದೆ ಯಾವ ದಿನದಿಂದ ಜಾರಿಗೆ ಬಂದಿದೆ? ಯಾವ ದಿನ ಸರ್ಕಾರದ ರಾಜ್ಯಪತ್ರದಲ್ಲಿ ಅಧಿಕೃತವಾಗಿ ಅಧಿಸೂಚನೆಗೊಂಡು ಪ್ರಕಟವಾಗಿದೆ ಎಂಬುದನ್ನು ಸ್ಪಷ್ಟಪಡಿಸಬೇಕು. ಈ ಕುರಿತ ದಾಖಲೆಗಳನ್ನು ಒದಗಿಸಿ’ ಎಂದು ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ ಅವರಿಗೆ ಸೂಚಿಸಿ ವಿಚಾರಣೆಯನ್ನು ಇದೇ 22ಕ್ಕೆ ಮುಂದೂಡಿತು.

ವಿಚಾರಣೆ ವೇಳೆ ನ್ಯಾಯಮೂರ್ತಿಗಳು, ‘ಕರ್ನಾಟಕದಲ್ಲಿ ವ್ಯಾಪಾರ ಮಾಡುವಾಗ ಕನ್ನಡ ನಾಮಫಲಕವಿರಬೇಕು. ಶೇ 60ರಷ್ಟು ಕನ್ನಡ ನಾಮಫಲಕ ಹಾಕಿದರೆ ಸಮಸ್ಯೆ ಏನು’ ಎಂದು ವಾಣಿಜ್ಯ ಮಳಿಗೆಗಳ ಸಂಘದ ಪರ ವಕೀಲರನ್ನು ಮೌಖಿಕವಾಗಿ ಪ್ರಶ್ನಿಸಿದರು.

5ನೇ ಪುಟ ನೋಡಿ

ಡಿ.ದೇವರಾಜ ಅರಸು ಟ್ರಕ್ ಟರ್ಮಿನಲ್

₹47 ಕೋಟಿ ಅಕ್ರಮ: ಸಿಐಡಿ ತನಿಖೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಿ.ದೇವರಾಜ ಅರಸು ಟ್ರಕ್ ಟರ್ಮಿನಲ್‌ನಲ್ಲಿ (ಡಿಡಿಯುಟಿಟಿಎಲ್) ನಡೆದಿದೆ ಎನ್ನಲಾದ ₹47.10 ಕೋಟಿ ಅಕ್ರಮದ ಬಗ್ಗೆ ಸಿಐಡಿ ಅಧಿಕಾರಿಗಳು ತನಿಖೆ ಆರಂಭಿಸಿದ್ದು, ಕಚೇರಿಗೆ ಸೋಮವಾರ ಭೇಟಿ ನೀಡಿ 600ಕ್ಕೂ ಹೆಚ್ಚು ದಾಖಲೆಗಳನ್ನು ಜಪ್ತಿ ಮಾಡಿದ್ದಾರೆ.

2021ರಿಂದ 2023ರ ನಡುವೆ ನಡೆದಿದೆ ಎನ್ನಲಾದ ಅಕ್ರಮದ ಬಗ್ಗೆ ಹಾಲಿ ವ್ಯವಸ್ಥಾಪಕ ನಿರ್ದೇಶಕ (ಎಂ.ಡಿ) ಸಿ.ಎನ್. ಶಿವಪ್ರಕಾಶ್ ಅವರು ವಿಲ್ಸನ್ ಗಾರ್ಡನ್ ಠಾಣೆಗೆ ದೂರು ನೀಡಿದ್ದರು. 2023ರ ಸೆಪ್ಟೆಂಬರ್ 23ರಂದು ಎಫ್‌ಐಆರ್ ದಾಖಲಾಗಿತ್ತು. ಇದೇ ಪ್ರಕರಣವನ್ನು ಸಿಐಡಿ ತನಿಖೆಗೆ ವಹಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿತ್ತು.

ಅಕ್ರಮ ಪ್ರಕರಣದ ತನಿಖೆ ಕೈಗೊಂಡಿರುವ ಸಿಐಡಿ ಅಧಿಕಾರಿಗಳ ತಂಡ, ದೂರುದಾರ ಸಿ.ಎನ್. ಶಿವಪ್ರಕಾಶ್ ಅವರಿಂದ ಮಾಹಿತಿ ಪಡೆದುಕೊಂಡಿದೆ. ಇದರ ಬೆನ್ನಲ್ಲೇ, ಅಧಿಕಾರಿಗಳು ಶಾಂತಿನಗರದಲ್ಲಿರುವ ಡಿ.ದೇವರಾಜ ಅರಸು ಟ್ರಕ್ ಟರ್ಮಿನಲ್ ಕಚೇರಿಗೆ ಸೋಮವಾರ ಭೇಟಿ ನೀಡಿದರು.

‘ತುಂಡು ಗುತ್ತಿಗೆ ಹೆಸರಿನಲ್ಲಿ ನಡೆದಿರುವ ಅಕ್ರಮದ ಬಗ್ಗೆ ತನಿಖೆ ಆರಂಭಿಸಲಾಗಿದೆ. ಇದೊಂದು ಆರ್ಥಿಕ ಅಪರಾಧ. ಹೀಗಾಗಿ, ಸೂಕ್ತ ದಾಖಲೆಗಳನ್ನು ಸುಪರ್ದಿಗೆ ಪಡೆದು ಪರಿಶೀಲಿಸುವ ಪ್ರಕ್ರಿಯೆ ಆರಂಭಿಸಲಾಗಿದೆ. ಆರೋಪಿಗಳ ವಿಚಾರಣೆಯೂ ನಡೆಯುತ್ತಿದೆ’ ಎಂದು ಸಿಐಡಿ ಮೂಲಗಳು ಹೇಳಿವೆ.

5ನೇ ಪುಟ ನೋಡಿ

‘ಬಿಜೆಪಿ ಸರ್ಕಾರದ ಅಕ್ರಮಕ್ಕೆ ಪುರಾವೆ’

‘ಬಿಜೆಪಿ ಅಧಿಕಾರದಲ್ಲಿದ್ದ ಸಂದರ್ಭದಲ್ಲಿ ಡಿ. ದೇವರಾಜ ಅರಸು ಟ್ರಕ್ ಟರ್ಮಿನಲ್‌ನಲ್ಲಿ ₹47.10 ಕೋಟಿ ಅಕ್ರಮ ನಡೆದಿದೆ. ಇದು, ಬಿಜೆಪಿ ಸರ್ಕಾರದ ಅಕ್ರಮಗಳಿಗೆ ಪುರಾವೆ’ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಆರೋಪಿಸಿದರು.

ಪ್ರಕರಣದ ಬಗ್ಗೆ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದ ಅವರು, ‘ನಿರ್ದೇಶಕ ಮಂಡಳಿ ಸಭೆಯ ನಡಾವಳಿ ತಿರುಚಿ ಅಕ್ರಮ ಎಸಗಲಾಗಿದೆ. ಈ ಅಕ್ರಮವನ್ನು ಪತ್ತೆ ಮಾಡಿರುವ ಈಗಿನ ವ್ಯವಸ್ಥಾಪಕ ನಿರ್ದೇಶಕರು ಪೊಲೀಸರಿಗೆ ದೂರು ನೀಡಿದ್ದಾರೆ. ಸಿಐಡಿ ತನಿಖೆ ನಡೆಯುತ್ತಿದೆ’ ಎಂದರು.

‘ಹಿಂದಿನ ಅಧ್ಯಕ್ಷ, ಎಂ.ಡಿ ಹಾಗೂ ಇತರರು ಅಕ್ರಮದಲ್ಲಿ ಭಾಗಿಯಾಗಿರುವ ಮಾಹಿತಿ ಇದೆ. ಸಿಐಡಿ ತನಿಖೆಯಿಂದ ನಿಜಾಂಶ ತಿಳಿಯಬೇಕಿದೆ’ ಎಂದು ಅವರು ತಿಳಿಸಿದರು.

ಕಾಡು ಪ್ರಾಣಿ- ಪಕ್ಷಿಗಳ ದಾಹ ನೀಗಿಸಲು ನೆರವು

ಬತ್ತಿದ ನದಿಗೆ ನೀರು ಹರಿಸುವ ರೈತ

• ರಿ. ರಾ. ರವಿಶಂಕರ್

ರಿಪ್ಪನ್‌ಪೇಟೆ (ಶಿವಮೊಗ್ಗ): ಮಳೆಯ ಕೊರತೆಯಿಂದಾಗಿ ತೀವ್ರ ಬರ ಆವರಿಸಿದ್ದರಿಂದ ಮಲೆನಾಡಿನಲ್ಲೂ ಕುಡಿಯುವ ನೀರಿಗೆ ಹಾಹಾಕಾರ ಶುರುವಾಗಿದೆ. ನೀರಿಲ್ಲದೇ ತತ್ತರಿಸಿರುವ ಕಾಡು ಪ್ರಾಣಿ–ಪಕ್ಷಿಗಳ ದಾಹ ತಣಿಸಲು ಇಲ್ಲಿನ ರೈತರೊಬ್ಬರು ತಮ್ಮ ಕೊಳವೆ ಬಾವಿಯ ನೀರನ್ನು ಬತ್ತಿರುವ ನದಿಗೆ ಹರಿಸುತ್ತಿದ್ದಾರೆ.

ಸಮೀಪದ ಅರಸಾಳು ಗ್ರಾಮ ಪಂಚಾಯಿತಿ (ಹೊಸನಗರ ತಾಲ್ಲೂಕು) ವ್ಯಾಪ್ತಿಯ ಸೂಡೂರು ಗೇಟ್ ಬಳಿಯ ನಿವಾಸಿ, ಪಾಪಣ್ಣ ಎಂದೇ ಹೆಸರಾಗಿರುವ ರೈತ ಮಂಜುನಾಥ ಭಟ್ ತಮ್ಮ ಏಳೂವರೆ ಎಕರೆ ಜಮೀನಿನ ಪಕ್ಕದಲ್ಲಿರುವ ಕುಮುದ್ವತಿ ನದಿ ಬತ್ತಿದ್ದನ್ನು ಮನಗಂಡು, ಕೊಳವೆಬಾವಿ ನೀರನ್ನು ನದಿಗೆ ಹರಿಸುತ್ತಿದ್ದಾರೆ.

ತಮ್ಮ ಜಮೀನಿನಲ್ಲಿರುವ ಕೊಳವೆ ಬಾವಿಯಿಂದ ನದಿ ದಂಡೆಯವರೆಗೆ ಪೈಪ್ ಅಳವಡಿಸಿ, ನಿತ್ಯವೂ ನದಿಗೆ ನೀರು ಹರಿಸುತ್ತಾರೆ. ಒಂದೊಮ್ಮೆ ವಿದ್ಯುತ್ ಸಂಪರ್ಕ ಇಲ್ಲದಿದ್ದರೆ ಡೀಸೆಲ್ ಎಂಜಿನ್‌ನ ಮೋಟರ್ ಮೂಲಕ ನೀರು ಹರಿಸುತ್ತಾರೆ.

ರಿಪ್ಪನ್‌ಪೇಟೆ ಸಮೀಪದ ಸೂಡೂರು ಗೇಟ್ ಬಳಿಯ ಮಂಜುನಾಥ ಭಟ್ ಅವರು ವನ್ಯಜೀವಿಗಳಿಗಾಗಿ ಕುಮುದ್ವತಿ ನದಿಗೆ ಕೊಳವೆಬಾವಿ ನೀರು ಹರಿಸುತ್ತಿದ್ದಾರೆ

> **ಕೆಲವು ವರ್ಷಗಳ ಹಿಂದೆ ಕುಮುದ್ವತಿ ನದಿ ಬೇಸಿಗೆಯಲ್ಲೂ ತುಂಬಿರುತ್ತಿತ್ತು. ವನ್ಯಜೀವಿಗಳು ನೀರಡಿಕೆಗೆ ಈ ನದಿಯ ನೀರನ್ನೇ ಅವಲಂಬಿಸಿವೆ. ನದಿ ಬತ್ತಿದರೆ ಪ್ರಾಣಿಗಳಿಗೆ ದಿಕ್ಕೇ ತೋಚದಂತಾಗುತ್ತದೆ**
> **ಮಂಜುನಾಥ ಭಟ್,** ರೈತ, ಸೂಡೂರು ಗೇಟ್

ಒಳ್ಳೆ ಸುದ್ದಿ

‘ಮೊದಲು ಬೇಸಿಗೆಯಲ್ಲಿ ನದಿ ಬತ್ತುತ್ತಿರಲಿಲ್ಲ. ಈಚಿನ ವರ್ಷಗಳಲ್ಲಿ ಮಳೆಯ ಕೊರತೆ ಹೆಚ್ಚಿ, ಮಲೆನಾಡು ಪ್ರದೇಶವೂ ಬಯಲುಸೀಮೆಯಂತೆ ನೀರಿನ ಸಮಸ್ಯೆ ಎದುರಿಸುತ್ತಿದೆ. ಜನರು ಬೇಸಿಗೆಯಲ್ಲಿ ಕೊಳವೆಬಾವಿ ಅಥವಾ ಬಾವಿಯ ನೀರನ್ನು ಕುಡಿಯಲು ಬಳಸುತ್ತಾರೆ. ಆದರೆ, ಈ ಪರಿಸರದಲ್ಲಿ-ರುವ ಕಾಡು ಪ್ರಾಣಿ- ಪಕ್ಷಿಗಳ ಮೂಕವೇದನೆ ಯಾರಿಗೂ ಅರ್ಥವಾಗುವುದಿಲ್ಲ. ಅದಕ್ಕೆಂದೇ ಕುಮುದ್ವತಿ ನದಿ ಬತ್ತಿದಾಗ ನಮ್ಮ ಕೊಳವೆ ಬಾವಿಯಲ್ಲಿ ಲಭ್ಯವಿರುವ ನೀರನ್ನು ಹರಿಸುತ್ತಿದ್ದೇನೆ. ಈ ಕೆಲಸವು ಕೆಲವು ವರ್ಷಗಳಿಂದ ನಡೆದಿದೆ’ ಎಂದು 68 ವರ್ಷದ ಮಂಜುನಾಥ ಭಟ್ ‘ಪ್ರಜಾವಾಣಿ’ಗೆ ತಿಳಿಸಿದರು.

5ನೇ ಪುಟ ನೋಡಿ

ಚಿನಕುರಳಿ
ಪ್ರಕಾಶ್ ಶೆಟ್ಟಿ

ಜಾಲತಾಣ ಆರಂಭ

ಬೆಂಗಳೂರು: ಒಮೆಗಾ ಇನ್ನೊವೇಟಿವ್ ಸಲ್ಯೂಷನ್ ಸಹಯೋಗದಲ್ಲಿ ಬೆಂಗಳೂರಿನಲ್ಲೂ FindMyplots.com ಜಾಲತಾಣ ಆರಂಭವಾಗಿದೆ. ಈ ಜಾಲತಾಣವು ಫ್ಲ್ಯಾಟ್‌ಗಳ ಮಾಲೀಕರು ಹಾಗೂ ಖರೀದಿದಾರರಿಗೆ ವೇದಿಕೆ ಒದಗಿಸಲಿದೆ.

ವಸತಿ ಫ್ಲ್ಯಾಟ್ ಮಾಲೀಕರು ತಮ್ಮ ಫ್ಲ್ಯಾಟ್‌ಗಳ ಮಾಹಿತಿ, ವಿನ್ಯಾಸ ಹಾಗೂ ದರವನ್ನು ಈ ಜಾಲತಾಣದಲ್ಲಿ ಹಾಕಬಹುದು. ಇದರಿಂದ ರಾಜ್ಯದ ಖರೀದಿದಾರರಿಗೆ ಫ್ಲ್ಯಾಟ್‌ಗಳ ಮಾಹಿತಿ ದೊರೆಯಲಿದೆ ಎಂದು ಪ್ರಕಟಣೆ ತಿಳಿಸಿದೆ. 'ಬೇರೆ ಜಾಲತಾಣಕ್ಕಿಂತ ಭಿನ್ನವಾಗಿ ಮಾಹಿತಿ ಒದಗಿಸುತ್ತಿದ್ದೇವೆ' ಎಂದು ಸಲ್ಯೂಷನ್‌ನ ವ್ಯವಸ್ಥಾಪಕ ಅಯೂಬ್ ಉರ್ ರೆಹಮಾನ್ ತಿಳಿಸಿದ್ದಾರೆ.

ನೈಋತ್ಯ ರೈಲ್ವೆ G20

ಇ-ಟೆಂಡರು ಸೂಚನೆ ಸಂ.: BE-29-2023-24-OT-32

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಬೆಂಗಳೂರು ವಿಭಾಗದಲ್ಲಿ ಒಂದು ವರ್ಷದ ಅವಧಿಗೆ ಸಬ್-ಸ್ಟೇಷನ್‌ಗಳ ಕಾರ್ಯ ಚಟುವಟಿಕೆ, ಸ್ವಿಚಿಂಗ್ & ನಿರ್ವಹಣಾ ಕಾರ್ಯಗಳು.	ರೂ. 2,01,58,656/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 05.04.2024, 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಕೊನೆಯ ದಿನಾಂಕದವರೆಗೆ ಯಾವುದಾದರೂ ತಿದ್ದುಪಡಿ ಇದ್ದಲ್ಲಿ ವೆಬ್‌ಸೈಟ್‌ಅನ್ನು ನೋಡುತ್ತಲೇ ಇರಿ

ವರಿಷ್ಠ ವಿಭಾಗೀಯ ಎಲೆಕ್ಟ್ರಿಕಲ್ ಇಂಜಿನಿಯರ್ ಬೆಂಗಳೂರು
PUB/760/AAD/PRB/SWR/2023-24
South Western Railway - SWR | SWRRLY | SWRRLY

ನೈಋತ್ಯ ರೈಲ್ವೆ G20

ಇ-ಟೆಂಡರು ಸೂಚನೆ ಸಂ. 07/MYS/2024
ದಿನಾಂಕ: 14.03.2024

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕ್ರಸಂ.	ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
1	ಅಮರಾವತಿ ಕಾಲೊನಿ – ಕೊಟ್ಟೂರು ವಿಭಾಗ: ಹರಪ್ಪನಹಳ್ಳಿ – ತೆಲಿಗಿ ನಿಲ್ದಾಣಗಳ ನಡುವೆ ಕಿಮೀ. 99/650-100/200 ರಲ್ಲಿ ದುರ್ಬಲವಾದ ಕಟಿಂಗ್‌ಗಳಿಗೆ ಎರಡೂ ಬದಿಗಳಲ್ಲಿ ಬೌಲ್ಡರ್ ನೆಟಿಂಗ್ ಮತ್ತು ಡ್ರೈನ್‌ಗಳಿಂದ ಸುರಕ್ಷತೆಯನ್ನು ಒದಗಿಸುವ ಕಾರ್ಯಗಳು.	ರೂ. 2,39,81,641/-
2	ಉಪ-ಕಾಮಗಾರಿ-1: ಸಹಾಯಕ ವಿಭಾಗೀಯ ಇಂಜಿನಿಯರ್ / ಚಿತ್ರದುರ್ಗ ಉಪ-ವಿಭಾಗದಲ್ಲಿ ಚಿಕ್ಕಜಾಜೂರು – ರಾಯದುರ್ಗ ವಿಭಾಗದ ನಡುವೆ ಆರ್‌ಯುಬಿ ಸಂ. 35ಎ, 123ಎ ರಲ್ಲಿ ಅಪ್ರೋಚ್ ರಸ್ತೆಗಳು ಮತ್ತು ಡ್ರೈನೇಜ್ ವ್ಯವಸ್ಥೆಗಳ ಅಭಿವೃದ್ಧಿ ಕೆಲಸಗಳು. ಉಪ-ಕಾಮಗಾರಿ-2: ಸಹಾಯಕ ವಿಭಾಗೀಯ ಇಂಜಿನಿಯರ್ / ಚಿತ್ರದುರ್ಗ ಉಪ-ವಿಭಾಗದಲ್ಲಿ ಚಿಕ್ಕಜಾಜೂರು – ರಾಯದುರ್ಗ ವಿಭಾಗದ ನಡುವೆ ಆರ್‌ಯುಬಿ ಸಂ. 79ಎ, ಮತ್ತು ಬೀರೂರು-ಚಿಕ್ಕಜಾಜೂರು ನಡುವೆ ಆರ್‌ಯುಬಿ ಸಂ. 74ಎ ರಲ್ಲಿ ಅಪ್ರೋಚ್ ರಸ್ತೆಗಳು ಮತ್ತು ಡ್ರೈನೇಜ್ ವ್ಯವಸ್ಥೆಗಳ ಅಭಿವೃದ್ಧಿ ಕೆಲಸಗಳು. ಉಪ-ಕಾಮಗಾರಿ-3: ಸಹಾಯಕ ವಿಭಾಗೀಯ ಇಂಜಿನಿಯರ್ / ಚಿತ್ರದುರ್ಗ ಉಪ-ವಿಭಾಗದಲ್ಲಿ ಚಿಕ್ಕಜಾಜೂರು – ರಾಯದುರ್ಗ ವಿಭಾಗದ ನಡುವೆ ಆರ್‌ಯುಬಿ ಸಂ. 12ಎ ರಲ್ಲಿ ಅಪ್ರೋಚ್ ರಸ್ತೆಗಳು ಮತ್ತು ರೀಟೇನಿಂಗ್ ವಾಲ್‌ಗಳ ಅಭಿವೃದ್ಧಿ ಕೆಲಸಗಳು. ಉಪ-ಕಾಮಗಾರಿ-4: ಸಹಾಯಕ ವಿಭಾಗೀಯ ಇಂಜಿನಿಯರ್ / ಚಿತ್ರದುರ್ಗ ಉಪ-ವಿಭಾಗದಲ್ಲಿ ಚಿಕ್ಕಜಾಜೂರು – ರಾಯದುರ್ಗ ವಿಭಾಗದ ನಡುವೆ ಆರ್‌ಯುಬಿ ಸಂ. 30ಎ ರಲ್ಲಿ ಅಪ್ರೋಚ್ ರಸ್ತೆಗಳು ಮತ್ತು ಡ್ರೈನೇಜ್ ವ್ಯವಸ್ಥೆಗಳ ಅಭಿವೃದ್ಧಿ ಕೆಲಸಗಳು.	ರೂ. 3,27,48,592/-
3	ಚಿಕ್ಕಜಾಜೂರು – ಸಾಸಲು ವಿಭಾಗದಲ್ಲಿರುವ ಚಿಕ್ಕಜಾಜೂರು – ರಾಯದುರ್ಗ ನಡುವೆ ಸ್ಟೋನ್ ಆರ್ಚ್ ಬ್ರಿಡ್ಜ್‌ಗಳ ಪುನರ್‌ನಿರ್ಮಾಣ ಹಾಗೂ ಜ್ಯಾಕೆಟಿಂಗ್ ಮೂಲಕ ಬ್ರಿಡ್ಜ್‌ಗಳನ್ನ ಬಲಪಡಿಸುವ ಕಾರ್ಯಗಳು. ಉಪ-ಕಾಮಗಾರಿ-1: ಸಹಾಯಕ ವಿಭಾಗೀಯ ಇಂಜಿನಿಯರ್ / ಚಿತ್ರದುರ್ಗ ಉಪ-ವಭಾಗ: ಚಿಕ್ಕಜಾಜೂರು – ರಾಯದುರ್ಗ ನಡುವೆ ಬ್ರಿಡ್ಜ್ ಸಂ. 7, 9, 10, 12ರಲ್ಲಿ ಸ್ಟೋನ್ ಆರ್ಚ್ ಬ್ರಿಡ್ಜ್‌ಗಳ ಪುನರ್‌ನಿರ್ಮಾಣ ಕಾರ್ಯಗಳು.	ರೂ. 3,30,98,670/-
3	ಮೈಸೂರು: ವಿಆರ್‌ಸಿ ಕಾಲೊನಿ, ಮೈಸೂರಿನಲ್ಲಿ ವಿವಿಧ ಸಿಬ್ಬಂದಿ ಸವಲತ್ತುಗಳು, ಹಳೆಯ ಅಧಿಕಾರಿಗಳ 9 ನಂ. (10/ಎ, 10/ಬಿ, 17, 18, 19, 22, 23, 24, 25) ಬಂಗಲೆಗಳಿಗೆ ಬೇಕಾಗಿರುವ ಅಭಿವೃದ್ಧಿ ಕಾರ್ಯಗಳು. (ಉಳಿದಿರುವ ಕೆಲಸಗಳು).	ರೂ. 1,12,36,220/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 05.04.2024, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ವರಿಷ್ಠ ವಿಭಾಗೀಯ ಇಂಜಿನಿಯರ್/ಸಂಯೋಜನೆ ಮೈಸೂರು
PUB/759/AAD/PRB/SWR/2023-24
South Western Railway - SWR | SWRRLY | SWRRLY

ಬಿಡಿಎ ನಿವೇಶನ ಕೊಡಿಸುವುದಾಗಿ ಹಣ ಪಡೆದು ವಂಚನೆ • ಸಿ.ಎಂ. ಆಪ್ತ ಕಾರ್ಯದರ್ಶಿ ಸೋಗು

ವಂಚನೆ: ₹ 44.10 ಲಕ್ಷ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಬಡಾವಣೆಗಳಲ್ಲಿ ನಿವೇಶನ ಕೊಡಿಸುವುದಾಗಿ ಹೇಳಿ ಜನರಿಂದ ಹಣ ಪಡೆದು ವಂಚಿಸಿದ್ದ ಅಪರಾಧಿ ಜಾನ್ ಮೈಕಲ್ ಎಂಬಾತನಿಗೆ 5 ವರ್ಷಗಳ ಜೈಲು ಶಿಕ್ಷೆ ಹಾಗೂ ₹44.10 ಲಕ್ಷ ದಂಡ ವಿಧಿಸಿ ನಗರದ 47ನೇ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯ (ಸಿಸಿಎಚ್-48) ಆದೇಶ ಹೊರಡಿಸಿದೆ.

ರಾಮಮೂರ್ತಿನಗರದ ಟಿ.ಸಿ.ಪಾಳ್ಯ ನಿವಾಸಿ ಜಾನ್ ಮೈಕಲ್ ವಿರುದ್ಧ ದಾಖಲಾಗಿದ್ದ ಪ್ರಕರಣದ ವಿಚಾರಣೆಯನ್ನು ನ್ಯಾಯಾಧೀಶರಾದ ಸಂತೋಷ್ ಗಜಾನನ ಭಟ್ ಅವರು ನಡೆಸಿದ್ದರು. ಪಬ್ಲಿಕ್ ಪ್ರಾಸಿಕ್ಯೂಟರ್ ಎಸ್.ಕೆ. ಅನುಪಮಾ ಅವರು ವಾದಿಸಿದ್ದರು.

'ನಾನು, ಮುಖ್ಯಮಂತ್ರಿ ಆಪ್ತ ಕಾರ್ಯದರ್ಶಿ' ಎಂಬುದಾಗಿ ಅಪರಾಧಿ ಜಾನ್ ಮೈಕಲ್ ಹೇಳಿಕೊಳ್ಳುತ್ತಿದ್ದ. ಮುಖ್ಯಮಂತ್ರಿ ವಿವೇಚನಾ ಕೋಟಾದಡಿ ಬಿಡಿಎ ನಿವೇಶನ ಕೊಡಿಸುವುದಾಗಿ ಜನರಿಗೆ ಹೇಳುತ್ತಿದ್ದ. ಇದಕ್ಕಾಗಿ ಹಣ ಖರ್ಚಾಗುವುದೆಂದು ತಿಳಿಸುತ್ತಿದ್ದ. ಈತನ ಮಾತು ನಂಬಿದ್ದ ದೂರುದಾರ ತಪನ್ ಭಂಡಾರಿ ಸೇರಿದಂತೆ ಮೂವರು, ಹಂತ ಹಂತವಾಗಿ ₹41.87 ಲಕ್ಷ ನೀಡಿದ್ದರು.

ಬಿಡಿಎ ನಿವೇಶನ ಹೆಸರಿನಲ್ಲಿ ನಕಲಿ ಹಂಚಿಕೆ ಪ್ರಮಾಣಪತ್ರ, ನಕಲಿ ಸೇಲ್ ಡೀಡ್ ಹಾಗೂ ಇತರೆ ದಾಖಲೆಗಳನ್ನು ಅಪರಾಧಿ ಸೃಷ್ಟಿಸಿದ್ದ. ಅದೇ ದಾಖಲೆಗಳನ್ನು ಸಂತ್ರಸ್ತರಿಗೆ ನೀಡಿ ನಂಬಿಸಿದ್ದ. ಕೆಲ ದಿನಗಳ ನಂತರ, ದಾಖಲೆಗಳು ನಕಲಿ ಎಂಬುದು ಸಂತ್ರಸ್ತರಿಗೆ ಗೊತ್ತಾಗಿತ್ತು. ಹಣ ವಾಪಸು ನೀಡುವಂತೆ ಸಂತ್ರಸ್ತರು ಕೇಳಿದ್ದರು. ಅಪರಾಧಿ ಹಣ ಕೊಟ್ಟಿರಲಿಲ್ಲ. ಅವಾಗಲೇ ಸಂತ್ರಸ್ತರು ಠಾಣೆಗೆ ದೂರು ನೀಡಿದ್ದರು. ಪ್ರಕರಣದ ತನಿಖೆ ಜವಾಬ್ದಾರಿ ವಹಿಸಿಕೊಂಡಿದ್ದ ಸಿಐಡಿ ಅಧಿಕಾರಿಗಳು, ಅಪರಾಧಿಯನ್ನು ಬಂಧಿಸಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

'ಸಂತ್ರಸ್ತರಾದ ತಪನ್ ಭಂಡಾರಿ ಅವರಿಗೆ ₹ 26 ಲಕ್ಷ, ಶ್ರೀಧರನ್ ಅವರಿಗೆ ₹ 12 ಲಕ್ಷ ಹಾಗೂ ಚಂದಾ ಭಂಡಾರಿ ಅವರಿಗೆ ₹ 6 ಲಕ್ಷ ಪರಿಹಾರ ಪಾವತಿಸುವಂತೆ ಆದೇಶದಲ್ಲಿ ತಿಳಿಸಲಾಗಿದೆ. ಉಳಿದ ಹಣವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಆದೇಶದಲ್ಲಿ ಉಲ್ಲೇಖಿಸಲಾಗಿದೆ' ಎಂದು ಪಬ್ಲಿಕ್ ಪ್ರಾಸಿಕ್ಯೂಟರ್ ಎಸ್.ಕೆ. ಅನುಪಮಾ ತಿಳಿಸಿದ್ದಾರೆ.

ಪರರ ಜಮೀನು ಮಾರಾಟ: ಅಪರಾಧಿಗೆ ಶಿಕ್ಷೆ

ಕೋಲಾರ ಜಿಲ್ಲೆಯ ಬಂಗಾರಪೇಟೆ ತಾಲ್ಲೂಕಿನ ಕಗ್ಗಲಹಳ್ಳಿಯ ಬೀರಪ್ಪ ಎಂಬುವವರ ಮಾಲೀಕತ್ವದ ಜಮೀನನ್ನು ತನ್ನದೆಂದು ಹೇಳಿ ಮಾರಾಟ ಮಾಡಿದ್ದ ಅಪರಾಧಿ ಮರಿಯಪ್ಪ ಎಂಬಾತನಿಗೆ 6 ತಿಂಗಳ ಸಾದಾ ಜೈಲು ಶಿಕ್ಷೆ ಹಾಗೂ ₹ 6 ಸಾವಿರ ದಂಡ ವಿಧಿಸಿ ನ್ಯಾಯಾಲಯ ಆದೇಶ ಹೊರಡಿಸಿದೆ.

'ಬೀರಪ್ಪ ಅವರ ಹೆಸರಿನಲ್ಲಿ 1 ಎಕರೆ 23 ಗುಂಟೆ ಜಮೀನಿದೆ. ತಾನೇ ಬೀರಪ್ಪ ಎಂಬುದಾಗಿ ಬಿಂಬಿಸಿ ನಕಲಿ ದಾಖಲೆ ಸೃಷ್ಟಿಸಿದ್ದ ಮರಿಯಪ್ಪ, ಇನ್ನೊಬ್ಬರಿಗೆ ಜಿಪಿಎ ಅಧಿಕಾರ ಪತ್ರ ನೀಡಿ ಹಕ್ಕು ಬದಲಾವಣೆ ಮಾಡಿಸಿದ್ದ. ನಂತರ, 28 ಗುಂಟೆ ಜಾಗವನ್ನು ಮಾರಿದ್ದ. ಈ ಸಂಗತಿ ಗೊತ್ತಾಗುತ್ತಿದ್ದಂತೆ ಬೀರಪ್ಪ ಅವರು ಬೇತಮಂಗಲ ಠಾಣೆಯಲ್ಲಿ ದೂರು ನೀಡಿದ್ದರು. ಇದರ ತನಿಖೆ ನಡೆಸಿದ್ದ ಸಿಐಡಿ ಅಧಿಕಾರಿಗಳು, ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ಅಶ್ಲೀಲ ವಿಡಿಯೊ ಕಳುಹಿಸಿದ್ದ ಅಪರಾಧಿಗೆ ಶಿಕ್ಷೆ: 2017ರಲ್ಲಿ ಮಹಿಳೆಯೊಬ್ಬರ ಇ-ಮೇಲ್‌ಗೆ ಅಶ್ಲೀಲ ವಿಡಿಯೊ ಕಳುಹಿಸಿ ಕಿರುಕುಳ ನೀಡಿದ್ದ ಅಪರಾಧಿ ರಾಘವನ್ ಸಂಪತ್ ಎಂಬಾತನಿಗೆ 1 ತಿಂಗಳ ಸಾದಾ ಶಿಕ್ಷೆ ಹಾಗೂ ₹45,000 ದಂಡ ವಿಧಿಸಿ ನ್ಯಾಯಾಲಯ ಆದೇಶ ಹೊರಡಿಸಿದೆ.

ಸುಬ್ರಹ್ಮಣ್ಯ ನಗರ ನಿವಾಸಿ ರಾಘವನ್ ವಿರುದ್ಧ ಸಿಐಡಿ ಸೈಬರ್ ಕ್ರೈಂ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು. ತನಿಖೆ ನಡೆಸಿದ್ದ ಸಿಐಡಿ ಅಧಿಕಾರಿಗಳು, ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದರು.

ಸುದ್ದಿ 2 ನಿಮಿಷ

ಬಾಂಡ್ ಮೂಲಕ ರಾಜಕೀಯ ಭ್ರಷ್ಟಾಚಾರ: ಪ್ರಕಾಶ್ ರಾಜ್

ಮಂಗಳೂರು: ಚುನಾವಣಾ ಬಾಂಡ್ ರಾಜಕೀಯ ಭ್ರಷ್ಟಾಚಾರಕ್ಕೆ ದಾರಿ ಮಾಡಿಕೊಡುತ್ತದೆ ಎಂದು ದೂರಿದ ನಟ, ರಂಗಕರ್ಮಿ ಪ್ರಕಾಶ್ ರಾಜ್ ಅವರು, ಬಾಂಡ್ ವಿಷಯದಲ್ಲಿ ಪ್ರಧಾನಮಂತ್ರಿ ಮತ್ತು ಗೃಹಸಚಿವರು ಮೌನ ವಹಿಸಿರುವುದು ಯಾಕೆ ಎಂದು ಪ್ರಶ್ನಿಸಿದರು.

ನಗರದಲ್ಲಿ ಸೋಮವಾರ ಮಾಧ್ಯಮದವರ ಜೊತೆ ಮಾತನಾಡಿದ ಅವರು ಚುನಾವಣಾ ಬಾಂಡ್ ಮೂಲಕ ಲೂಟಿ ಮಾಡುತ್ತಿರುವ ವಿಷಯವನ್ನು 'ಮನ್ ಕಿ ಬಾತ್'ನಲ್ಲಿ ಪ್ರಧಾನಮಂತ್ರಿ ಯಾಕೆ ಪ್ರಸ್ತಾಪಿಸುತ್ತಿಲ್ಲ ಎಂದು ಕೇಳಿದರು.

'ಬಿಜೆಪಿ ಪಡೆದಿರುವ ಬಾಂಡ್ ಹಣವೆಲ್ಲಾ ಇ.ಡಿ ದಾಳಿಯ ಬಳಿಕ ಸಂಗ್ರಹಿಸಿದ್ದು. ಚುನಾವಣೆಗೆ ಎಂದು ₹ 500 ಕೋಟಿ ಲಂಚ ಕೊಟ್ಟವನಿಗೆ ₹ 2 ಸಾವಿರ ಕೋಟಿ ಮೊತ್ತದ ಗುತ್ತಿಗೆ ನೀಡಿದರೆ ಆ ಗುತ್ತಿಗೆ ಹಣ ಜನರದ್ದಲ್ಲವೇ, ಚುನಾವಣೆಗೆ ಹಣ ಬೇಕು ಎಂದು ದೇಶವನ್ನು ಕೆಡಿಸುವುದು ಸರಿಯೇ' ಎಂದು ಪ್ರಶ್ನಿಸಿದ ಅವರು ಬಿಜೆಪಿಯವರು ಬಾಂಡ್ ಹಣದಲ್ಲೇ ಶಾಸಕರನ್ನು ಖರೀದಿ ಮಾಡಿದ್ದಿರಬೇಕು ಎಂದರು.

'ನಾವು ₹ 6000 ಕೋಟಿ ತೆಗೆದುಕೊಂಡಿದ್ದೇವೆ, ಆದರೆ, 330 ಸಂಸದರು ಇದ್ದಾರೆ. ಕಡಿಮೆ ಸಂಸದರು ಇರುವ ಪಕ್ಷಗಳು ಜಾಸ್ತಿ ತೆಗೆದುಕೊಂಡಿದ್ದಾರೆ ಎಂದು ಗೃಹ ಸಚಿವರು ಹೇಳುತ್ತಾರೆ. ಇದರರ್ಥ ಏನು? ಹೆಚ್ಚು ತೆಗೆದುಕೊಂಡು ಹಂಚಿಕೊಂಡರೆ ಶಿಕ್ಷೆ ಕಡಿಮೆ ಆಗಬೇಕು ಎಂದೇ' ಎಂದ ಅವರು 'ಲಾಟರಿ ಏಜೆಂಟ್ ಮಾರ್ಟಿನ್‌ನಿಂದ ಚುನಾವಣಾ ಬಾಂಡ್ ಮೂಲಕ ಹಣ ತೆಗೆದುಕೊಂಡಿರುವುದಾಗಿ ಡಿಎಂಕೆಯವರು ಹೇಳಿಕೊಂಡಿದ್ದಾರೆ. ಆದರೆ ಪ್ರಧಾನಮಂತ್ರಿ ಹೇಳದೇ ಇರುವುದು ಸರಿಯಲ್ಲ' ಎಂದರು.

ನಂದಿ: ರಸ್ತೆಯಲ್ಲಿ ವಾಹನ ನಿಲುಗಡೆಗೆ ನಿಷೇಧ

ಚಿಕ್ಕಬಳ್ಳಾಪುರ: ತಾಲ್ಲೂಕಿನ ನಂದಿ ಗ್ರಾಮದ ಭೋಗನಂದೀಶ್ವರ ದೇವಾಲಯದ ದಕ್ಷಿಣದ ರಸ್ತೆಯಲ್ಲಿ ಜನಸಂದಣಿ ಹಾಗೂ ವಾಹನದ ದಟ್ಟಣೆ ಹೆಚ್ಚಾಗಿದೆ. ಈ ಹಿನ್ನೆಲೆಯಲ್ಲಿ ಸಾರ್ವಜನಿಕರು ಓಡಾಡಲು ಹಾಗೂ ವಾಹನಗಳು ಸುಗಮವಾಗಿ ಸಂಚರಿಸುವ ಸಲುವಾಗಿ ಈ ರಸ್ತೆಯಲ್ಲಿ ನಂದಿ ಗ್ರಾಮದ ಅಶ್ವತ್ಥಕಟ್ಟೆಯಿಂದ ಸುಲ್ತಾನ್‌ಪೇಟ್ ವರೆಗೆ (ಪೂರ್ವದಿಂದ ಪಶ್ಚಿಮ) ಏಕಮುಖ ರಸ್ತೆ ಎಂದು ಜಿಲ್ಲಾಡಳಿತ ಘೋಷಿಸಿದೆ.

ಸುಲ್ತಾನ್ ಪೇಟೆ ಕಡೆಯಿಂದ ಬರುವ ವಾಹನಗಳು ದೇವಾಲಯದ ದಕ್ಷಿಣ ರಸ್ತೆಗೆ ಬಾರದಂತೆ ದೇವಾಲಯದ ಹಿಂಭಾಗದಿಂದ ಉತ್ತರದ ಗೇಟ್ ಮೂಲಕ ಚಿಕ್ಕಬಳ್ಳಾಪುರ ಕಡೆಗೆ ಹಾಗೂ ನಂದಿ ಕ್ರಾಸ್, ಕಾರಹಳ್ಳಿ ಕಡೆಗೆ ಸಂಚರಿಸಲು ದೇವಾಲಯದ ಪೂರ್ವ ರಸ್ತೆಯನ್ನು ಬಳಸುವಂತೆ ಆದೇಶಿಸಿದೆ. ಈ ರಸ್ತೆಗಳನ್ನು ಏಕಮುಖ ಹಾಗೂ ವಾಹನ ನಿಲುಗಡೆ ನಿಷೇಧಿತ ರಸ್ತೆ ಎಂದು ಘೋಷಿಸಲಾಗಿದೆ ಎಂದು ಜಿಲ್ಲಾಧಿಕಾರಿ ಪಿ.ಎನ್.ರವೀಂದ್ರ ತಿಳಿಸಿದ್ದಾರೆ.

ವಾಹನ ತಪಾಸಣೆ

ಲೋಕಸಭೆ ಚುನಾವಣೆ ಹಿನ್ನೆಲೆಯಲ್ಲಿ ಬೆಂಗಳೂರಿನ ರಾಜಾರಾಮ್ ಮೋಹನ್ ರಾಯ್ ರಸ್ತೆಯ ಚೆಕ್ ಪೋಸ್ಟ್‌ನಲ್ಲಿ ಚುನಾವಣಾ ಅಧಿಕಾರಿಗಳು ವಾಹನ ತಪಾಸಣೆ ನಡೆಸಿದರು

ಪ್ರಜಾವಾಣಿ ಚಿತ್ರ/ಪ್ರಶಾಂತ್ ಎಚ್.ಜಿ

ಕರುವಿನ ಮೇಲೆ ಹರಿದ ಕಾರು: ಹರಿದಾಡಿದ ವಿಡಿಯೊ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಾಲಕ್ಷ್ಮಿ ಲೇಔಟ್ ಬಳಿ ಕಾರೊಂದು ಕರುವಿನ ಮೇಲೆ ಹರಿದಿದ್ದು, ಈ ದೃಶ್ಯ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದೆ.

'ವಾರದ ಹಿಂದೆ ನಡೆದಿರುವ ಘಟನೆಯ ವಿಡಿಯೊವನ್ನು ಸಾರ್ವಜನಿಕರೊಬ್ಬರು ಸಾಮಾಜಿಕ ಮಾಧ್ಯಮಗಳಲ್ಲಿ ಅಪ್‌ಲೋಡ್ ಮಾಡಿದ್ದಾರೆ. ವಿಡಿಯೊ ಆಧರಿಸಿ ಮಾಹಿತಿ ಕಲೆಹಾಕಲಾಗುತ್ತಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ರಸ್ತೆಯಲ್ಲಿ ಹೋಗುತ್ತಿದ್ದ ಕರುವಿಗೆ ಕಾರು ಡಿಕ್ಕಿ ಹೊಡೆದಿದೆ. ರಸ್ತೆಗೆ ಬಿದ್ದ ಕರುವಿನ ಮೇಲೆಯೇ ಕಾರಿನ ಚಕ್ರಗಳು ಹರಿದಿವೆ. ಕರುವಿನ ಹೊಟ್ಟೆ ಹಾಗೂ ಕಾಲುಗಳಿಗೆ ಪೆಟ್ಟಾಗಿರುವುದು ಗೊತ್ತಾಗಿದೆ. ಕರು ಯಾರದ್ದು? ಎಂಬುದು ಗೊತ್ತಾಗಿಲ್ಲ. ಕಾರಿನ ಚಾಲಕನನ್ನೂ ಪತ್ತೆ ಮಾಡಲಾಗುತ್ತಿದೆ' ಎಂದು ಮೂಲಗಳು ತಿಳಿಸಿವೆ.

'ತಂದೆ-ತಾಯಿಯನ್ನು ಪ್ರೀತಿ, ಗೌರವದಿಂದ ಕಾಣಿ'

ಯಲಹಂಕ: ಮಕ್ಕಳ ಏಳಿಗೆಗಾಗಿ ತಮ್ಮ ಇಡೀ ಜೀವನವನ್ನೇ ಮುಡಿಪಾಗಿಟ್ಟು ಸಲಹುವ ತಂದೆ-ತಾಯಿಯರನ್ನು ಸಂಧ್ಯಾಕಾಲದಲ್ಲಿ ಪ್ರೀತಿ ಮತ್ತು ಗೌರವದಿಂದ ಕಾಣಬೇಕು ಎಂದು ನಗರಸಭೆ ಮಾಜಿ ಅಧ್ಯಕ್ಷ ಎಂ. ಹನುಮಂತೇಗೌಡ ಹೇಳಿದರು.

ಬ್ಯಾಟರಾಯನಪುರದಲ್ಲಿ ಆಯೋಜಿಸಿದ್ದ ಪಾರ್ವತಿ ಚಾರಿಟಬಲ್ ಟ್ರಸ್ಟ್‌ನ (ವೃದ್ಧಾಶ್ರಮ) 9ನೇ ವಾರ್ಷಿಕೋತ್ಸವ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಕುಟುಂಬದಲ್ಲಿ ಒಬ್ಬ ವೃದ್ಧರನ್ನು ಸಾಕುವುದಕ್ಕೆ ಬೇಸರಪಟ್ಟುಕೊಳ್ಳುವ ಈ ಸಮಾಜದಲ್ಲಿ ಹಲವು ಮಂದಿ ವೃದ್ಧರನ್ನು ಕರೆತಂದು ಸೌಕರ್ಯಗಳನ್ನು ಕಲ್ಪಿಸಿ, ಆರೈಕೆ ಮಾಡುತ್ತಿರುವ ಟ್ರಸ್ಟ್‌ನ ಕಾರ್ಯ ಶ್ಲಾಘನೀಯ ಎಂದರು.

ವಾರ್ಷಿಕೋತ್ಸವದ ಪ್ರಯುಕ್ತ ಕಣ್ಣು ಮತ್ತು ದಂತ ಪರೀಕ್ಷೆ ಶಿಬಿರ ಏರ್ಪಡಿಸಲಾಗಿತ್ತು. ವೃದ್ಧರಿಗೆ ಉಚಿತವಾಗಿ ಕನ್ನಡಕ ವಿತರಿಸಲಾಯಿತು.

ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ರವಿಕುಮಾರ್, ಟ್ರಸ್ಟ್‌ನ ಸಂಸ್ಥಾಪಕ ಅಧ್ಯಕ್ಷೆ ಸುಮಿತ್ರ ನಾಗೇಶ್, ಪ್ರಜಾಪಿತ ಬ್ರಹ್ಮಕುಮಾರಿ ಆಶ್ರಮದ ಅಂಬಿಕಾ, ಸುಮಂಗಲಿ ಸೇವಾಶ್ರಮದ ಪದ್ಮಾವತಿ, ಡಾ.ಜಗನ್ನಾಥ್, ಸ್ಥಳೀಯ ಮುಖಂಡರಾದ ಮುನಿರಾಜು, ಬಿ.ಎಸ್.ನಾರಾಯಣಸ್ವಾಮಿ, ರಾಜಣ್ಣ, ಕೃಷ್ಣಪ್ಪ, ಹನುಮಂತಪ್ಪ, ಪ್ರೇಮಾ ಸುರೇಶ್ ಉಪಸ್ಥಿತರಿದ್ದರು.

ನಕಲಿ ಡೈಮಂಡ್: ನಾಲ್ವರ ಬಂಧನ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ನಕಲಿ ಡೈಮಂಡ್ ಹರಳುಗಳನ್ನು ಅಸಲಿ ಎಂಬುದಾಗಿ ಬಿಂಬಿಸಿ ₹3 ಕೋಟಿಗೆ ಮಾರಾಟ ಮಾಡಲು ಯತ್ನಿಸಿದ್ದ ನಾಲ್ವರು ಆರೋಪಿಗಳನ್ನು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ನಕಲಿ ಡೈಮಂಡ್ ಮಾರಾಟದ ಬಗ್ಗೆ ಹೈದರಾಬಾದ್‌ನ ಲಕ್ಷ್ಮಿನಾರಾಯಣ ಅವರು ದೂರು ನೀಡಿದ್ದರು. ಆರೋಪಿಗಳಾದ ರವಿ, ನವೀನ್ ಕುಮಾರ್, ಅಹಮದ್ ಹಾಗೂ ಅಬ್ದುಲ್ ದಸ್ತಗಿರ್ ಎಂಬುವವರನ್ನು ಬಂಧಿಸಲಾಗಿದೆ. ಇವರಿಂದ ನಕಲಿ ಡೈಮಂಡ್ ಹರಳುಗಳು, ಪರೀಕ್ಷಾ ಯಂತ್ರ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ದೂರುದಾರರಿಗೆ ಮಾರ್ಚ್ 14ರಂದು ಕರೆ ಮಾಡಿದ್ದ ಆರೋಪಿಗಳು, 'ನಮ್ಮ ಬಳಿ ಡೈಮಂಡ್ ಹರಳುಗಳಿವೆ. ಕಡಿಮೆ ಬೆಲೆಗೆ ಮಾರುತ್ತೇವೆ. ಬಂದು ಭೇಟಿಯಾಗಿ' ಎಂದಿದ್ದರು. ಅವರ ಮಾತು ನಂಬಿದ್ದ ದೂರುದಾರ, ವಿಮಾನ ನಿಲ್ದಾಣ ಬಳಿಯ ಪಂಚತಾರಾ ಹೋಟೆಲ್‌ಗೆ ಮಾರ್ಚ್ 15ರಂದು ಬಂದಿದ್ದರು' ಎಂದರು.

'ಹೋಟೆಲ್ ಕೊಠಡಿಯಲ್ಲಿ ಸ್ವಾಮೀಜಿಯೊಬ್ಬರು ಉಳಿದುಕೊಂಡಿದ್ದರು. ದೂರುದಾರ ಅವರ ಆಶೀರ್ವಾದ ಪಡೆದಿದ್ದರು. ಅದೇ ಸ್ಥಳಕ್ಕೆ ಆರೋಪಿಗಳು ಬಂದಿದ್ದರು. ಅವರು ಸಹ ಸ್ವಾಮೀಜಿ ಆಶೀರ್ವಾದ ಪಡೆದಿದ್ದರು. ನಂತರ, ದೂರುದಾರ ಹಾಗೂ ಆರೋಪಿಗಳು, ಕೊಠಡಿಯಿಂದ ಹೊರಬಂದು ಹೋಟೆಲ್‌ನ ಉದ್ಯಾನದಲ್ಲಿ ಮಾತುಕತೆ ಮುಂದುವರಿಸಿದ್ದರು' ಎಂದು ಪೊಲೀಸರು ತಿಳಿಸಿದರು.

'ಡೈಮಂಡ್ ಹರುಳುಗಳು ಇದ್ದ ಬಾಕ್ಸ್ ತೋರಿಸಿದ್ದ ಆರೋಪಿಗಳು, 'ಇವುಗಳ ಮಾರುಕಟ್ಟೆ ಮೌಲ್ಯ ₹ 10 ಕೋಟಿ. ಇವುಗಳನ್ನು ಕೇವಲ ₹ 3 ಕೋಟಿಗೆ ಕೊಡುತ್ತೇವೆ' ಎಂದಿದ್ದರು. ದೂರುದಾರ ಹರಳುಗಳನ್ನು ಪರೀಕ್ಷಿಸಿದಾಗ ನಕಲಿ ಎಂಬ ಅನುಮಾನ ಬಂದಿತ್ತು. ಈ ಬಗ್ಗೆ ಠಾಣೆಗೆ ಮಾಹಿತಿ ನೀಡಿದ್ದರು. ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಸೆರೆ ಹಿಡಿಯಲಾಗಿದೆ' ಎಂದು ಹೇಳಿದರು.

ಬಿ.ಆರ್.ಲಕ್ಷ್ಮಣರಾವ್‌ಗೆ ಪ್ರಶಸ್ತಿ'

ಬೆಂಗಳೂರು: ಸುಂದರ ಪ್ರಕಾಶನ ನೀಡುವ 2024ನೇ ಸಾಲಿನ 'ಗೌರಿ ಸುಂದರ್ ವಾರ್ಷಿಕ ಪ್ರಶಸ್ತಿ'ಗೆ ಕವಿ ಬಿ.ಆರ್.ಲಕ್ಷ್ಮಣರಾವ್ ಅವರು ಆಯ್ಕೆಯಾಗಿದ್ದಾರೆ.

ಪ್ರಶಸ್ತಿಯು ₹10 ಸಾವಿರ ನಗದು ಮತ್ತು ಸ್ಮರಣಿಕೆಯನ್ನು ಒಳಗೊಂಡಿದೆ ಎಂದು ಪ್ರಶಸ್ತಿ ಆಯ್ಕೆ ಸಮಿತಿಯ ಅಧ್ಯಕ್ಷ ಕವಿ ಎಚ್.ಎಸ್.ವೆಂಕಟೇಶ್‌ಮೂರ್ತಿ ಮತ್ತು ಕಾರ್ಯದರ್ಶಿ ಇಂದಿರಾ ಸುಂದರ್ ತಿಳಿಸಿದ್ದಾರೆ. ಪ್ರಶಸ್ತಿ ಪ್ರದಾನ ಸಮಾರಂಭ ಮಾ. 30ರಂದು ಸಂಜೆ 6 ಗಂಟೆಗೆ ಬನಶಂಕರಿಯಲ್ಲಿರುವ ಸುಚಿತ್ರಾ ಫಿಲ್ಮ್ ಸೊಸೈಟಿಯಲ್ಲಿ ನಡೆಯಲಿದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೆದ್ದಾರಿಯಲ್ಲಿ ಇಳಿದ ವಾಯುಪಡೆ ವಿಮಾನ

ಬಪಾಟ್ಲ (ಪಿಟಿಐ): ರಾಷ್ಟ್ರೀಯ ಹೆದ್ದಾರಿಯಲ್ಲಿ ವಿಮಾನವನ್ನು ಇಳಿಸುವ ಪ್ರಯೋಗವನ್ನು ಭಾರತೀಯ ವಾಯುಪಡೆಯು ಯಶಸ್ವಿಯಾಗಿ ನಡೆಸಿದೆ. ಸೋಮವಾರ ಆಂಧ್ರ ಪ್ರದೇಶದ ಪುಚಿಕಲಗುಡಿಪಡು ಗ್ರಾಮದ ಬಳಿ ಇರುವ ರಾಷ್ಟ್ರೀಯ ಹೆದ್ದಾರಿ-16ರಲ್ಲಿ ಎಎನ್- 32 ಮತ್ತು ಡಾರ್ನಿಯರ್ ಎಂಬ ಎರಡು ಸಾರಿಗೆ ವಿಮಾನಗಳನ್ನು ಯಶಸ್ವಿಯಾಗಿ ಲ್ಯಾಂಡ್ ಮಾಡುವ ಮೂಲಕ ಈ ಪ್ರಯೋಗ ನಡೆಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸೋಮಶೇಖರ್‌ಗೆ ಶೀಘ್ರದಲ್ಲೇ ಭ್ರಮನಿರಸನ: ಶೋಭಾ ಕರಂದ್ಲಾಜೆ

ಪ್ರಜಾವಾಣಿ ವಾರ್ತೆ

ಕೆಂಗೇರಿ: 'ಶಾಸಕ ಎಸ್.ಟಿ.ಸೋಮಶೇಖರ್ ಅವರು ವೈಯಕ್ತಿಕ ವರ್ಚಸ್ಸಿನಿಂದ ಗೆಲುವು ಸಾಧಿಸಿದ್ದೇನೆ ಎಂಬ ಭ್ರಮೆಯಲ್ಲಿದ್ದಾರೆ. ಚುನಾವಣಾ ಫಲಿತಾಂಶ ಅವರ ಭ್ರಮೆಯನ್ನು ಬಡಿದೋಡಿಸಲಿದೆ' ಎಂದು ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಶೋಭಾ ಕರಂದ್ಲಾಜೆ ಹೇಳಿದರು.

ನಾಗರಬಾವಿ ಆಯೋಜಿಸಿದ್ದ ಬಿಜೆಪಿ-ಜೆಡಿಎಸ್ ಕಾರ್ಯಕರ್ತರ ಸಭೆಯಲ್ಲಿ ಅವರು ಮಾತನಾಡಿದರು.

'ಕಾಂಗ್ರೆಸ್ ನಂಬಿ ಹೊರಟಿರುವ ಎಸ್.ಟಿ.ಸೋಮಶೇಖರ್ ಅವರಿಗೆ ಶೀಘ್ರದಲ್ಲೇ ಭ್ರಮನಿರಸನವಾಗಲಿದೆ' ಎಂದರು.

'ಮೋದಿ ನಾಯಕತ್ವದಲ್ಲಿ ದೇಶದ ಹಿರಿಮೆ ಇಮ್ಮಡಿಗೊಂಡಿದೆ. ಹಾಗಾಗಿಯೇ ದೇವೇಗೌಡರು ಮೋದಿ ಅವರ ಪುನರಾಯ್ಕೆ ಬಯಸಿ ಬೆಂಬಲ ಘೋಷಿಸಿದ್ದಾರೆ. ಎರಡೂ ಪಕ್ಷಗಳ ಕಾರ್ಯಕರ್ತರು ಭಿನ್ನಾಭಿಪ್ರಾಯ ಬದಿಗೊತ್ತಿ ಎನ್‌ಡಿಎ ಗೆಲುವಿಗೆ ಶ್ರಮಿಸಬೇಕು' ಎಂದು ಮನವಿ ಮಾಡಿದರು.

ಜೆಡಿಎಸ್- ಬಿಜೆಪಿ ಮೈತ್ರಿಯಿಂದ ರಾಜ್ಯದಲ್ಲಿ ಎನ್‌ಡಿಎ ಬಲ ದ್ವಿಗುಣಗೊಂಡಿದೆ. ಉತ್ತರ ಕರ್ನಾಟಕದ ಕೆಲ ಭಾಗದಲ್ಲಿ ಜೆಡಿಎಸ್ ಕೂಡ ಮತ ಬ್ಯಾಂಕ್ ಹೊಂದಿದೆ. ಆ ಭಾಗದ ಕಾರ್ಯಕರ್ತರು ಕಮಲಕ್ಕೆ ಸಹಕಾರ ನೀಡಿದರೆ ಗೆಲುವಿನೊಂದಿಗೆ ಬಹುಮತದ ಅಂತರವು ಹೆಚ್ಚಾಗಲಿದೆ' ಎಂದರು.

ಶಾಸಕ ಗೋಪಾಲಯ್ಯ, ಮುಖಂಡರಾದ ಹರೀಶ್, ಆರ್.ಪಿ.ಪ್ರಕಾಶ್, ಅನಿಲ್ ಚಳಗೇರಿ, ರಂಗರಾಜು, ಸಿ.ಎಂ.ಮಾರೇಗೌಡ, ರ.ಆಂಜನಪ್ಪ, ಜಂಗಮ ರಮೇಶ್ ಉಪಸ್ಥಿತರಿದ್ದರು.

ಪುಟ್ಟಲಿಂಗಯ್ಯಗೌಡಗೆ ಕಸಾಪ ದತ್ತಿ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್‌ನ 'ನಾಗಡಿಕೆರೆ- ಕಿಟ್ಟಪ್ಪಗೌಡ ರುಕ್ಮಿಣಿ ತೀರ್ಥಹಳ್ಳಿ ದತ್ತಿ' ಪ್ರಶಸ್ತಿಗೆ 'ಉದಯಕಾಲ' ಪತ್ರಿಕೆ ಸಂಪಾದಕ ಕೆ.ಎನ್. ಪುಟ್ಟಲಿಂಗಯ್ಯಗೌಡ ಅವರು ಆಯ್ಕೆಯಾಗಿದ್ದಾರೆ.



ಪರಿಷತ್ ಅಧ್ಯಕ್ಷ ಮಹೇಶ ಜೋಶಿ ಅವರ ಅಧ್ಯಕ್ಷತೆಯಲ್ಲಿ ನಡೆದ ಆಯ್ಕೆ ಸಮಿತಿ ಸಭೆಯಲ್ಲಿ ಪುಟ್ಟಲಿಂಗಯ್ಯಗೌಡ ಅವರ ಹೆಸರು ಘೋಷಣೆ ಮಾಡಲಾಯಿತು ಎಂದು ಪ್ರಕಟಣೆ ತಿಳಿಸಿದೆ.

ನಗರದಲ್ಲಿ ಇಂದು

ವಿಶ್ವ ಸಾಮಾಜಿಕ ಕಾರ್ಯ ದಿನ-2024: ಉದ್ಘಾಟನೆ: ಲಿಂಗರಾಜ ಗಾಂಧಿ, ಅತಿಥಿಗಳು: ಸಿದ್ಧರಾಮಣ್ಣ, ಕೆ.ಟಿ. ತಿಪ್ಪೇಸ್ವಾಮಿ, ಉಪಸ್ಥಿತಿ: ಜವರೇಗೌಡ, ಅಧ್ಯಕ್ಷತೆ: ರಿತಿಕಾ ಸಿನ್ಹಾ, ಆಯೋಜನೆ: ಸಮಾಜ ಕಾರ್ಯ ವಿಭಾಗ, ಸ್ಥಳ: ಬೆಂಗಳೂರು ನಗರ ವಿಶ್ವವಿದ್ಯಾಲಯ, ಸೆಂಟ್ರಲ್ ಕಾಲೇಜಿನ ಆವರಣ, ಬೆಳಿಗ್ಗೆ 10.30

ಸಂಸ್ಥಾಪನಾ ದಿನಾಚರಣೆ, ಕಲಾಕೃತಿಗಳ ಪ್ರದರ್ಶನದ ಉದ್ಘಾಟನೆ: ವೀಣಾ ಶರ್ಮಾ ಭೂಸನೂರುಮಠ, ಅತಿಥಿಗಳು: ಬಿ.ವಿ. ರಾಜಾರಾಂ, ಎನ್. ಮಾಲತೇಶ್ ಭಟ್, ಅಧ್ಯಕ್ಷತೆ: ಡಿ. ಮಹೇಂದ್ರ, ಆಯೋಜನೆ ಮತ್ತು ಸ್ಥಳ: ಇಂದಿರಾಗಾಂಧಿ ರಾಷ್ಟ್ರೀಯ ಕಲಾಕೇಂದ್ರ, ಸಂಜೆ 4ರಿಂದ

'ದಶಾವತಾರ ಸ್ತುತಿ' ಪ್ರವಚನ: ಕಲ್ಲಾಪುರ ಪವಮಾನಾಚಾರ್, ಆಯೋಜನೆ: ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್, ಸ್ಥಳ: ವಿಜಯ ಮಧ್ವ ಸಂಘ, ಗಂಗಾಧರ ಬಡಾವಣೆ, ವಿಜಯನಗರ, ಸಂಜೆ 6

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080 - 45557160 /161/ 162/ 163/ 164 9845114560 / 9731810277/ 9886213331

JOB OPPORTUNITIES

Part-Time Jobs

PART TIME Job SMS Typing work Laptop Sellphone Simcard Company Provide (Fee 1099): 9258858119/ 9389525534

BUSINESS

Business Offers

Finance

NRI'S INVESTMENT And Finance Available On Low Interest Against Properties,Land& Building,Sites,Flats, Converted& Agriculture Lands Call:7204995189

PERSONAL

Lost

DOCUMENT LOST
I, SHASHIKALA N, Residing at #1981, 1st D Main Road, Vijayanagar, Bangalore-40, have lost my Original Partition Deed of B.K. Narayanaswamy, Family Tree, E.C. Uttarapattara Document / Identification No. 1816/59-60, Book 1, Volume 1737, Pages 231-234. While transit. If Found please Contact: 8553778431

DOCUMENT LOST
I, Smt. BHARATI, W/o GOPAL G, Residing at No. 123, 5th Cross, Samethanahalli, A G Halli Hobali, Hosakote Tq, Bengaluru Rural Dist. have lost my Original Sale Deed of Khatha No. 124, document No.15030040250050 1199, Property No. 190/138/124. (only fourth page) While doing Xerox in Samethanalli. If Found please Contact: 9242886427

Change of Name

I, DODDAYYA SIDDARAMAIAH HIREMATH resident of No.29/11, B3, Apurva Exquisite, 1st Cross, Sumangali Sevashrama Road, Hebbal Bengaluru-560024 have changed my name to DODDAYYA SIDDARAMAYYA HIREMATH vide affidavit dated 15/03/2024 sworn before notary Jalandhara, Bengaluru

I, SUNEETHA BHOJARAJA W/o.Mahesh Shankar Shetty. R/a#1/129, Rathnamma Nilaya, Asodu, Kundapura, Udupi District, Karnataka- 576222 have changed my Name to SUNITHA B SHETTY vide affidavit dated:16.3.2024 before Notary A.Idinabba, Bangalore.

I, R KAVITHA W/o MURALI MADHAVAN R/at No. 159 2nd cross AGB layout 2nd Stage Mahalakshmipuram Bangalore- 560096 have changed my name to KAVITHA RAMURTHY vide affidavit dated: 18/3/2024 Before Notary Kundan Babu.M Bangalore

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager The Printers (Mysore) Pvt. Ltd. Bengaluru

DH Classifieds More value, more impact | ಪ್ರಜಾವಾಣಿ
RECRUITMENT
BOOK YOUR JOB ADS IN DECCAN HERALD ALL KARNATAKA + PRAJAVANI BENGALURU CITY
CLASSIFIED DISPLAY @ 550/-* PER SQCM
SINGLE / DOUBLE / MULTIPLE COLUMN
www.dhclassifieds.com BOOK NOW
For more details contact: +91 9901641752 | +91 9845114560 | +91 9886213331

ಚಿತ್ರರಂಗದ ಹಲವು ನಿರ್ಮಾಪಕರು, ವಿತರಕರಿಂದ ಘೋಷಣೆ

ಗೀತಾ ಶಿವರಾಜ್‌ಕುಮಾರ್‌ಗೆ ಬೆಂಬಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿವಮೊಗ್ಗ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಗೀತಾ ಶಿವರಾಜ್‌ಕುಮಾರ್ ಅವರಿಗೆ ಕನ್ನಡ ಚಿತ್ರರಂಗದ ಹಲವು ನಿರ್ಮಾಪಕರು, ವಿತರಕರು ಹಾಗೂ ಪ್ರದರ್ಶಕರು ಬೆಂಬಲ ಘೋಷಿಸಿದ್ದಾರೆ.

ಸೋಮವಾರ (ಮಾರ್ಚ್ 18) ಶಿವರಾಜ್‌ಕುಮಾರ್ ಅವರ ನಿವಾಸದಲ್ಲಿ ಗೀತಾ ಶಿವರಾಜ್‌ಕುಮಾರ್ ಸಮ್ಮುಖದಲ್ಲಿ ಸುದ್ದಿಗೋಷ್ಠಿ ನಡೆಸಿದ ನಿರ್ಮಾಪಕರು ತಮ್ಮ ಬೆಂಬಲವನ್ನು ಘೋಷಿಸಿದರು.

ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ(ಕೆಎಫ್‌ಸಿಸಿ) ಅಧ್ಯಕ್ಷ ಎನ್.ಎಂ.ಸುರೇಶ್ ಮಾತನಾಡಿ, 'ಗೀತಾ ಅವರನ್ನು ಬಹುಮತದಿಂದ ಗೆಲ್ಲಿಸಲು ನಾವು ಕಾರಣವಾಗುತ್ತೇವೆ. ದೊಡ್ಮನೆ ಕುಟುಂಬ ಚಿತ್ರೋದ್ಯಮದ ಆಸ್ತಿ. ಚಿತ್ರರಂಗದ ಎಲ್ಲ ಸಂಸ್ಥೆಗಳು ಗೀತಾ ಅವರ ಬೆನ್ನಿಗೆ ನಿಲ್ಲಲಿವೆ. ನಾಮಪತ್ರ ಸಲ್ಲಿಸುವ ದಿನ ಇಡೀ ಚಿತ್ರರಂಗ ಅಲ್ಲಿರಲಿದೆ. ಪಕ್ಷಾತೀತವಾಗಿ ಚಿತ್ರರಂಗ ಬೆಂಬಲವಾಗಿ ನಿಲ್ಲಲಿದೆ' ಎಂದರು.

ಪ್ರದರ್ಶಕರ ಸಂಘದ ಅಧ್ಯಕ್ಷ ಕೆ.ವಿ. ಚಂದ್ರಶೇಖರ್, 'ಚಿತ್ರರಂಗದ ಸೇವೆಯನ್ನು ಮೊದಲಿಂದಲೂ ದೊಡ್ಮನೆ ಮಾಡುತ್ತಿದೆ. ಇದೀಗ ದೊಡ್ಮನೆಯವರು ಜನಸೇವೆ ಮಾಡಬೇಕು ಎಂದಾಗ ಚಿತ್ರರಂಗವು ಅವರ ಜೊತೆ ನಿಲ್ಲಬೇಕಾದದ್ದು ಕರ್ತವ್ಯ. ಈ ಮೂಲಕ ಋಣ ಸಂದಾಯ ಮಾಡಬೇಕು' ಎಂದರು.

ಮಾರ್ಚ್ 20ಕ್ಕೆ ಭದ್ರಾವತಿ ಪ್ರವೇಶ: 'ನಮ್ಮ ಶಕ್ತಿಯನ್ನೇ ಬಳಸಿಕೊಂಡು ಶಿವಮೊಗ್ಗ ಕ್ಷೇತ್ರದಲ್ಲಿ ಗೆಲ್ಲುತ್ತೇವೆ. ಬೇರೆಯವರ ಒಡೆದು ಹೋದ ಮನೆಯತ್ತ ನೋಡುವುದಿಲ್ಲ. ಗೆಲ್ಲಿಸುವುದಕ್ಕೇ ಗೀತಾ ಅವರನ್ನು ನಿಲ್ಲಿಸುತ್ತಿದ್ದೇವೆ. ಗೆದ್ದಮೇಲೆ ಗೀತಾ ಅವರೇ ಆ ಕ್ಷೇತ್ರವನ್ನು ನಡೆಸುತ್ತಾರೆ. ನಾನು ಮಧ್ಯಪ್ರವೇಶಿಸುವುದಿಲ್ಲ. ಮಾರ್ಚ್ 20ರಂದು ಭದ್ರಾವತಿಯಿಂದ ಗೀತಾ ಪ್ರಚಾರ ಆರಂಭಿಸುತ್ತಾರೆ. ಶಿವರಾಜ್‌ಕುಮಾರ್ ಅವರೂ ಇರುತ್ತಾರೆ. 21ಕ್ಕೆ ಕೊಲ್ಲೂರು ಮೂಕಾಂಬಿಕೆ ದರ್ಶನ ಮಾಡಿ ಬೈಂದೂರಿನಲ್ಲಿ ಪ್ರಚಾರ ನಡೆಸಲಿದ್ದಾರೆ' ಎಂದು ಶಿಕ್ಷಣ ಸಚಿವ ಮಧು ಬಂಗಾರಪ್ಪ ಮಾಹಿತಿ ನೀಡಿದರು.

'ಚುನಾವಣೆ ಮುಗಿದ ಬಳಿಕ ಸಿನಿಮಾ ನಿರ್ಮಾಣ ಮಾಡುತ್ತೇನೆ. ಪ್ರೊಡಕ್ಷನ್ ಆರಂಭಿಸುತ್ತೇನೆ. ನಿರ್ಮಾಪಕರು ಅನ್ನದಾತರು. ಅವರು ಗೀತಾ ಬೆಂಬಲಕ್ಕೆ ನಿಂತಿರುವುದು ಸಂತೋಷ' ಎಂದರು ಮಧು ಬಂಗಾರಪ್ಪ.

ಸುದ್ದಿಗೋಷ್ಠಿಯಲ್ಲಿ ವಾಣಿಜ್ಯ ಮಂಡಳಿಯ ಮಾಜಿ ಅಧ್ಯಕ್ಷರುಗಳಾದ ಸಾ.ರಾ. ಗೋವಿಂದ್, ಚೆನ್ನೇಗೌಡ, ಥಾಮಸ್ ಡಿಸೋಜ ಹಾಗೂ ನಿರ್ಮಾಪಕರ ಸಂಘದ ಅಧ್ಯಕ್ಷ ಉಮೇಶ್ ಬಣಕಾರ್ ಉಪಸ್ಥಿತರಿದ್ದರು.

'ಹೆಣ್ಮಕ್ಕಳೇ ಸ್ಟ್ರಾಂಗು ಗುರೂ'

ನಟ ಶಿವರಾಜ್‌ಕುಮಾರ್ ಮಾತನಾಡಿ, ಚಿತ್ರರಂಗವೆಂಬ ಈ ಇಡೀ ಕುಟುಂಬ ಗೀತಾ ಪರವಾಗಿ ನಿಂತಿರುವುದು ಹೆಮ್ಮೆಯ ವಿಷಯ. ನಾನಿದ್ದೇನೆ, ಮುಂದುವರಿ ಎಂದು ಗೀತಾಳಿಗೆ ಹೇಳಿದ್ದೇನೆ. ಹಲವರು ಅಪ್ಪಾಜಿಗೆ ರಾಜಕೀಯ ಆಗಲ್ಲ ಎನ್ನುತ್ತಿದ್ದರು. ಆದರೆ ಯಾವುದೇ ಕಾರ್ಯಕ್ರಮವಿದ್ದರೆ ರಾಜಕೀಯದವರು ಮೊದಲು ಬರುತ್ತಿದ್ದುದೇ ದೊಡ್ಮನೆಗೆ. ಅಪ್ಪಾಜಿಗೂ ರಾಜಕೀಯ, ರಾಜಕೀಯ ವ್ಯಕ್ತಿಗಳು ಬೇಕಿತ್ತು. ಇಲ್ಲದಿದ್ದರೆ ಯಾಕೆ ಬಂಗಾರಪ್ಪನ ಮಗಳನ್ನು ತಂದರು? ಅವರು ರಾಜಕೀಯದಿಂದ ದೂರ ಇದ್ದು, ನಟನೆಯಲ್ಲಷ್ಟೇ ಮುಂದುವರಿದರು. ಗೀತಾಳಲ್ಲಿ ಅವಳ ತಂದೆಯ ರಕ್ತವಿದೆ. ಅದೊಂದು ಜವಾಬ್ದಾರಿ. ಗಂಡಸರಿಗಷ್ಟೇ ಜವಾಬ್ದಾರಿ ಇರಬೇಕೇ? ಹೆಣ್ಮಕ್ಕಳಿಗೆ ಜವಾಬ್ದಾರಿ ಇರಬಾರದೇ? ಖಂಡಿತಾ ಇರಬೇಕು. ಹೆಣ್ಮಕ್ಕಳೇ ಸ್ಟ್ರಾಂಗು ಗುರೂ. ಗೀತಾಳಿಗೆ ಶುಭಕೋರುತ್ತೇನೆ' ಎಂದರು.

ಚುನಾವಣೆ ವಿಷಯದಲ್ಲಿ ನನಗೆ ಯಾವ ಭಯವೂ ಇಲ್ಲ. ಧೈರ್ಯವಾಗಿ ಎದುರಿಸುತ್ತೇನೆ. ಮಹಿಳೆಯರು, ಶಿವಮೊಗ್ಗ ಹಾಗೂ ಚಿತ್ರರಂಗಕ್ಕೆ ದನಿಯಾಗಿರುತ್ತೇನೆ

ಗೀತಾ ಶಿವರಾಜ್‌ಕುಮಾರ್
ಶಿವಮೊಗ್ಗ ಕಾಂಗ್ರೆಸ್ ಅಭ್ಯರ್ಥಿ

ನಿಧನ ವಾರ್ತೆ

ವಸಂತಕುಮಾರ್ ಶೆಣೈ ಗಂಗೊಳ್ಳಿ

ಬೆಂಗಳೂರು: ನಗರದ ಹೊಸ ಬಿಇಎಲ್ ರಸ್ತೆ ವೆಂಕಟೇಶ್ವರ ಬಡಾವಣೆ ನಿವಾಸಿ, ಕಾರ್ಮಿಕರ ರಾಜ್ಯ ವಿಮಾ ನಿಗಮದ (ಇಎಸ್‌ಐ) ನಿವೃತ್ತ ಅಧಿಕಾರಿ ಯು. ವಸಂತಕುಮಾರ್ ಶೆಣೈ ಗಂಗೊಳ್ಳಿ (75) ಅವರು ಸೋಮವಾರ ಉಡುಪಿ ಜಿಲ್ಲೆಯ ಕೋಟೇಶ್ವರದಲ್ಲಿ ನಿಧನರಾದರು.



ಮೃತರಿಗೆ ಪುತ್ರ ಹಾಗೂ ಪುತ್ರಿ ಇದ್ದಾರೆ. ಇಲ್ಲಿನ 'ರಂಗಸಂಪದ' ಸೇರಿದಂತೆ ಹವ್ಯಾಸಿ ನಾಟಕ ಸಂಸ್ಥೆಗಳಲ್ಲಿ ಕಲಾವಿದ, ಮೇಕಪ್ ತಜ್ಞ ಹಾಗೂ 'ಮೈಮ್' ಕಲಾವಿದರಾಗಿದ್ದ ಅವರು, ಸ್ವತಃ ಹಲವು ನಾಟಕಗಳನ್ನು ರಚಿಸಿದ್ದರು. ಉಡುಪಿಯ 'ರಂಗಭೂಮಿ' ಪದಾಧಿಕಾರಿಯಾಗಿಯೂ ಸೇವೆ ಸಲ್ಲಿಸಿದ್ದ ಅವರು, ರೇಡಿಯೊ-ನಾಟಕಗಳಲ್ಲೂ ವಿಶಿಷ್ಟ ಪಾತ್ರ ನಿರ್ವಹಿಸಿದ್ದರು. ಮೃತರ ಅಂತ್ಯಕ್ರಿಯೆ ಸೋಮವಾರ ಸಂಜೆ ಗಂಗೊಳ್ಳಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ನಗರ್ತಪೇಟೆಯಲ್ಲಿ ಘಟನೆ • ಧ್ವನಿವರ್ಧಕ ಶಬ್ದದ ವಿಚಾರಕ್ಕೆ ಗಲಾಟೆ • ಮೂವರು ಆರೋಪಿಗಳ ಬಂಧನ

ಮೊಬೈಲ್ ಮಳಿಗೆ ಮಾಲೀಕನ ಕೊಲೆ ಯತ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಧ್ವನಿವರ್ಧಕದ ಶಬ್ದ ಹೆಚ್ಚಿಸಿದರೆಂಬ ಕಾರಣಕ್ಕೆ ಮೊಬೈಲ್ ಮಳಿಗೆ ಮಾಲೀಕ ಮುಖೇಶ್ (26) ಎಂಬುವವರ ಮೇಲೆ ಹಲ್ಲೆ ಮಾಡಿ ಕೊಲೆಗೆ ಯತ್ನಿಸಲಾಗಿದ್ದು, ಕೃತ್ಯ ಎಸಗಿದ್ದ ಮೂವರು ಆರೋಪಿಗಳನ್ನು ಹಲಸೂರು ಗೇಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ನಗರ್ತಪೇಟೆ ಸಿದ್ದಣ್ಣ ಗಲ್ಲಿಯ ಜುಮ್ಮಾ ಮಸೀದಿ ರಸ್ತೆಯಲ್ಲಿ ಭಾನುವಾರ (ಮಾರ್ಚ್ 17) ಸಂಜೆ ನಡೆದಿರುವ ಘಟನೆ ಸಂಬಂಧ ಮುಖೇಶ್ ಅವರು ದೂರು ನೀಡಿದ್ದಾರೆ. ಆರೋಪಿಗಳಾದ ಸುಲೇಮಾನ್, ಶಹನವಾಜ್, ರೋಹಿತ್, ಡ್ಯಾನಿಶ್, ತರುಣ್ ಹಾಗೂ ಇತರರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಮಳಿಗೆಯ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಘಟನೆ ದೃಶ್ಯಗಳು ಸೆರೆಯಾಗಿವೆ. ವಿಡಿಯೊ ಪರಿಶೀಲಿಸಿ, ಆರೋಪಿಗಳನ್ನು ಗುರುತಿಸಲಾಗಿದೆ. ಸದ್ಯ ಮೂವರು ಆರೋಪಿಗಳನ್ನು ಬಂಧಿಸಲಾಗಿದೆ. ಉಳಿದವರು ತಲೆಮರೆಸಿಕೊಂಡಿದ್ದಾರೆ' ಎಂದು ತಿಳಿಸಿವೆ.

'ಆರೋಪಿಗಳು, ಮಳಿಗೆಯ ಅಕ್ಕ–ಪಕ್ಕದ ಪ್ರದೇಶಗಳ ನಿವಾಸಿಗಳು. ಆಗಾಗ ಮಳಿಗೆ ಬಳಿ ಓಡಾಡುತ್ತಿದ್ದರು. ಆರೋಪಿಗಳ ಹಿನ್ನೆಲೆ ಹಾಗೂ ಯಾವುದಾದರೂ ಅಪರಾಧಗಳಲ್ಲಿ ಭಾಗಿಯಾಗಿದ್ದಾರೆಯೇ ಎಂಬ ಮಾಹಿತಿ ಕಲೆಹಾಕಲಾಗುತ್ತಿದೆ' ಎಂದು ಮೂಲಗಳು ಹೇಳಿವೆ.

ಘಟನೆ ವಿವರ: 'ಕಬ್ಬನ್ ಪೇಟೆಯ ನಿವಾಸಿ ಮುಖೇಶ್, ಜುಮ್ಮಾ ಮಸೀದಿ ರಸ್ತೆಯಲ್ಲಿ ಕೃಷ್ಣ ಟೆಲಿಕಾಂ ಮಳಿಗೆ ಇಟ್ಟುಕೊಂಡಿದ್ದಾರೆ. ಮೊಬೈಲ್ ಬಿಡಿ ಭಾಗ, ಧ್ವನಿವರ್ಧಕ ಹಾಗೂ ಇತರೆ ವಸ್ತುಗಳನ್ನು ಮಾರುತ್ತಿದ್ದಾರೆ. ದಿನವೂ ಧ್ವನಿವರ್ಧಕದಲ್ಲಿ ಭಕ್ತಿಗೀತೆ ಹಾಗೂ ಇತರೆ ಗೀತೆಗಳನ್ನು ಹಾಕುತ್ತಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

ಅಪರಾಧ ಸುದ್ದಿ

'ಭಾನುವಾರವೂ ಧ್ವನಿವರ್ಧಕದಲ್ಲಿ ಗೀತೆಗಳನ್ನು ಹಾಕಿದ್ದರು. ಸಂಜೆ 6.25ರ ಸುಮಾರಿಗೆ ಮಳಿಗೆಗೆ ಬಂದಿದ್ದ ಆರೋಪಿಗಳು, 'ಧ್ವನಿವರ್ಧಕದ ಶಬ್ದವನ್ನು ಏಕೆ ಹೆಚ್ಚು ಮಾಡಿದ್ದೀಯಾ, ನಮಗೆ ತೊಂದರೆಯಾಗುತ್ತಿದೆ' ಎಂದು ಪ್ರಶ್ನಿಸಿದ್ದರು. ಇದೇ ವಿಚಾರವಾಗಿ ಮಾತಿನ ಚಕಮಕಿ ನಡೆದಿತ್ತು. ಆರೋಪಿಯೊಬ್ಬ, ಮುಖೇಶ್ ಮೇಲೆ ಹಲ್ಲೆ ಮಾಡಿದ್ದ. ನಂತರ, ಎಲ್ಲ ಆರೋಪಿಗಳು ಸೇರಿ ಮುಖೇಶ್ ಅವರನ್ನು ಮಳಿಗೆಯಿಂದ ಹೊರಗೆ ಎಳೆದು ರಸ್ತೆಯಲ್ಲಿ ಥಳಿಸಿದ್ದರು.'

'ಮುಖೇಶ್ ಅವರ ಮುಖ, ಹೊಟ್ಟೆ ಹಾಗೂ ದೇಹದ ಹಲವು ಭಾಗಗಳಿಗೆ ಪೆಟ್ಟಾಗಿತ್ತು. ರಕ್ತ ಸಹ ಬರುತ್ತಿತ್ತು. ಕೃತ್ಯ ಎಸಗಿದ ನಂತರ ಆರೋಪಿಗಳು ಸ್ಥಳದಿಂದ ಪರಾರಿಯಾಗಿದ್ದರು. ಮುಖೇಶ್ ಅವರನ್ನು ರಕ್ಷಿಸಲು ಹೋಗಿದ್ದವರಿಗೂ ಆರೋಪಿಗಳು ಜೀವ ಬೆದರಿಕೆಯೊಡ್ಡಿದ್ದರು' ಎಂದು ಮೂಲಗಳು ತಿಳಿಸಿವೆ.

ಬಿಗಿ ಭದ್ರತೆ: ಘಟನೆ ನಡೆದಿರುವ ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮವಾಗಿ ನಗರ್ತಪೇಟೆ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿ ಪೊಲೀಸರು ಬಿಗಿ ಭದ್ರತೆ ಕೈಗೊಂಡಿದ್ದಾರೆ.

'ನಗರ್ತಪೇಟೆ ಬಂದ್ ವ್ಯಾಪಾರಿಗಳ ಎಚ್ಚರಿಕೆ'

'ಸ್ಥಳೀಯ ಯುವಕರ ಗುಂಪು ವ್ಯಾಪಾರಿಗಳ ಮೇಲೆ ಪದೇ ಪದೇ ಹಲ್ಲೆ ಮಾಡುತ್ತಿದೆ. ಇದೀಗ, ಮುಖೇಶ್ ಅವರ ಕೊಲೆಗೆ ಯತ್ನಿಸಿದೆ. ಈ ಪ್ರಕರಣದ ಆರೋಪಿಗಳನ್ನು ತ್ವರಿತವಾಗಿ ಬಂಧಿಸಬೇಕು. ಇಲ್ಲದಿದ್ದರೆ, ನಗರ್ತಪೇಟೆ ಬಂದ್ ಮಾಡಲಾಗುವುದು' ಎಂದು ವ್ಯಾಪಾರಿಗಳು ಎಚ್ಚರಿಸಿದ್ದಾರೆ.

ಮುಖೇಶ್ ಅವರನ್ನು ಸೋಮವಾರ ಭೇಟಿಯಾಗಿದ್ದ ವ್ಯಾಪಾರಿಗಳು, ಘಟನೆ ಬಗ್ಗೆ ಮಾಹಿತಿ ಪಡೆದುಕೊಂಡರು.

'ಹಲವರು ನಗರ್ತಪೇಟೆಯಲ್ಲಿ ಮಳಿಗೆ ಇಟ್ಟುಕೊಂಡು ಜೀವನ ಸಾಗಿಸುತ್ತಿದ್ದಾರೆ. ಕೆಲ ಯುವಕರು, ಹಣಕ್ಕಾಗಿ ಪೀಡಿಸುತ್ತಿದ್ದಾರೆ. ಹಣ ನೀಡದಿದ್ದಾಗ, ಮಳಿಗೆಗೆ ನುಗ್ಗಿ ಗಲಾಟೆ ಮಾಡುತ್ತಿದ್ದಾರೆ. ಇವರ ವಿರುದ್ಧ ಪೊಲೀಸರು ಕ್ರಮ ಕೈಗೊಳ್ಳುತ್ತಿಲ್ಲ' ಎಂದು ವ್ಯಾಪಾರಿಗಳು ದೂರಿದರು.

ಬಿಜೆಪಿ ಮುಖಂಡರ ಭೇಟಿ

ವ್ಯಾಪಾರಿ ಮುಖೇಶ್ ಅವರ ಮೇಲಾಗಿರುವ ಹಲ್ಲೆಯನ್ನು ಖಂಡಿಸಿರುವ ಬಿಜೆಪಿ ಮುಖಂಡರು, ಮಳಿಗೆಗೆ ಭೇಟಿ ನೀಡಿ ಘಟನೆ ಬಗ್ಗೆ ಮಾಹಿತಿ ಪಡೆದುಕೊಂಡರು. ಸಂಸದರಾದ ತೇಜಸ್ವಿ ಸೂರ್ಯ, ಪಿ.ಸಿ.ಮೋಹನ್, ಶಾಸಕ ಉದಯ ಗರುಡಾಚಾರ್ ಇದ್ದರು.

'ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ, ಸಮಾಜದಲ್ಲಿ ಅಶಾಂತಿ ಉಂಟು ಮಾಡುವವರಿಗೆ ಶಕ್ತಿ ಬಂದಿದೆ. ವ್ಯಾಪಾರಿ ಮುಖೇಶ್ ಮೇಲಾಗಿರುವ ಹಲ್ಲೆಯೇ ಇದಕ್ಕೆ ಸಾಕ್ಷಿ. ಪ್ರಕರಣದ ಆರೋಪಿಗಳನ್ನು ಕೂಡಲೇ ಬಂಧಿಸಬೇಕು. ಇಲ್ಲದಿದ್ದರೆ, ಗಂಭೀರ ಸ್ವರೂಪದ ಹೋರಾಟ ನಡೆಸಲಾಗುವುದು' ಎಂದು ಬಿಜೆಪಿ ಮುಖಂಡರು ಎಚ್ಚರಿಸಿದ್ದಾರೆ.

ವ್ಹೀಲೆ: ನಾಲ್ವರ ವಿರುದ್ಧ ಕ್ರಿಮಿನಲ್ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಂಗೇರಿ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ವ್ಹೀಲೆ ಮಾಡುತ್ತಿದ್ದ ನಾಲ್ವರು ಯುವಕರ ವಿರುದ್ಧ ಪೊಲೀಸರು ಕ್ರಿಮಿನಲ್ ಪ್ರಕರಣ ದಾಖಲಿಸಿಕೊಂಡಿದ್ದಾರೆ.

'ವ್ಹೀಲೆ ಮಾಡುವವರ ಪತ್ತೆಗೆ ಕಾರ್ಯಾಚರಣೆ ನಡೆಯುತ್ತಿದೆ. ಕೆಂಗೇರಿ ಪೊಲೀಸರು ನಾಲ್ವರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದಾರೆ' ಎಂದು ಸಂಚಾರ ವಿಭಾಗದ (ಪಶ್ಚಿಮ) ಡಿಸಿಪಿ ಅನಿತಾ ಹದ್ದಣ್ಣವರ್ ತಿಳಿಸಿದರು.

'ಸಾರ್ವಜನಿಕ ರಸ್ತೆಯಲ್ಲಿ ವ್ಹೀಲೆಯಿಂದ ಜನರ ಜೀವಕ್ಕೆ ಆಪತ್ತು ಹೆಚ್ಚು. ಯುವಕರ ವಿರುದ್ಧ ಐಪಿಸಿ 279 (ಅತಿ ವೇಗದ ಚಾಲನೆ) ಅಡಿ ಎಫ್‌ಐಆರ್ ದಾಖಲಿಸಿದೆ' ಎಂದರು.

'ವ್ಹೀಲೆ ವಿರುದ್ಧದ ಕಾರ್ಯಾಚರಣೆ ನಿರಂತರವಾಗಿ ನಡೆಯಲಿದೆ. ಸಾರ್ವಜನಿಕರೂ ಪೊಲೀಸರಿಗೆ ಮಾಹಿತಿ ನೀಡಬಹುದು' ಎಂದು ಕೋರಿದರು.

'ನಗರದ ನಾಲ್ಕೂ ದಿಕ್ಕುಗಳಲ್ಲಿ ತ್ಯಾಜ್ಯ ಸಂಸ್ಕರಣ ಘಟಕ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಬಿಬಿಎಂಪಿ) ನಾಲ್ಕೂ ದಿಕ್ಕುಗಳಲ್ಲಿ ಬೃಹತ್ ತ್ಯಾಜ್ಯ ಸಂಸ್ಕರಣಾ ಘಟಕ ಸ್ಥಾಪನೆಗೆ ಕ್ರಮ ಕೈಗೊಳ್ಳಲಾಗುವುದು' ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ತಿಳಿಸಿದೆ.

'ಮಹಾನಗರದ ವ್ಯಾಪ್ತಿಯಲ್ಲಿ ತ್ಯಾಜ್ಯ ನಿರ್ವಹಣೆ ಹಾಗೂ ವಿಲೇವಾರಿ ಅಸಮರ್ಪಕವಾಗಿದೆ' ಎಂದು ಆಕ್ಷೇಪಿಸಿ ಇಂದಿರಾ ನಗರದ ಕವಿತಾ ಶಂಕರ್ 2012ರಲ್ಲಿ ಸಲ್ಲಿಸಿರುವ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, 'ನಗರದಲ್ಲಿ ಎಲ್ಲೆಂದರಲ್ಲಿ ತ್ಯಾಜ್ಯವನ್ನು ಬಿಸಾಡಲಾಗಿರುತ್ತದೆ. ಇದರಿಂದ ಪರಿಸರ ಹಾಳು ಮಾಡಲಾಗುತ್ತಿದೆ' ಎಂದು ಬಲವಾಗಿ ಆಕ್ಷೇಪಿಸಿದರು.

ಇದಕ್ಕೆ ಸರ್ಕಾರದ ಪರ ವಕೀಲರು, 'ಮಹಾನಗರದ ನಾಲ್ಕೂ ದಿಕ್ಕುಗಳಲ್ಲಿ ತ್ಯಾಜ್ಯ ಸಂಸ್ಕರಣಾ ಘಟಕ ಸ್ಥಾಪನೆ ಮಾಡಲಾಗುವುದು. ಈ ಘಟಕಗಳ ಸ್ಥಾಪನೆಗೆ ನೂರಾರು ಎಕರೆ ಜಮೀನಿನ ಅವಶ್ಯವಿದೆ. ಈ ಬಗ್ಗೆ ಕ್ರಮ ಕೈಗೊಳ್ಳಲು ಕಾಲಾವಕಾಶ ನೀಡಬೇಕು' ಎಂದು ನ್ಯಾಯಪೀಠಕ್ಕೆ ಮನವಿ ಮಾಡಿದರು. ಇದನ್ನು ಪರಿಗಣಿಸಿದ ನ್ಯಾಯಪೀಠ ವಿಚಾರಣೆಯನ್ನು ಜೂನ್ ಮೊದಲ ವಾರಕ್ಕೆ ಮುಂದೂಡಿದೆ.

ಐಪಿಎಲ್: ಹೆಚ್ಚುವರಿ ಬಸ್ ವ್ಯವಸ್ಥೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ 'ಆರ್‌ಸಿಬಿ ಅನ್‌ಬಾಕ್ಸ್ ಕಾರ್ಯಕ್ರಮ' ಮತ್ತು ಮೂರು ಐಪಿಎಲ್ ಪಂದ್ಯಗಳು ನಡೆಯುವ ದಿನಗಳಲ್ಲಿ ಪ್ರಯಾಣಿಕರ ಅನುಕೂಲಕ್ಕೆ ಹೆಚ್ಚುವರಿ ಬಸ್‌ಗಳ ವ್ಯವಸ್ಥೆ ಮಾಡಲು ಬಿಎಂಟಿಸಿ ನಿರ್ಧರಿಸಿದೆ.

ಮಾರ್ಚ್ 19ರಂದು 'ಆರ್‌ಸಿಬಿ ಅನ್‌ಬಾಕ್ಸ್ ಕಾರ್ಯಕ್ರಮ', ಮಾರ್ಚ್ 25, 29 ಮತ್ತು ಏಪ್ರಿಲ್ 2ರಂದು ಕ್ರಿಕೆಟ್ ಪಂದ್ಯ ಆಯೋಜಿಸಲಾಗಿದೆ.

ಎಂ. ಚಿನ್ನಸ್ವಾಮಿ ಕ್ರೀಡಾಂಗಣದಿಂದ ಎಚ್‌ಎಎಲ್ ರಸ್ತೆ ಮೂಲಕ ಕಾಡುಗೋಡಿ ಬಸ್ ನಿಲ್ದಾಣಕ್ಕೆ, ಹೂಡಿ ರಸ್ತೆ ಮೂಲಕ ಕಾಡುಗೋಡಿ ಬಸ್ ನಿಲ್ದಾಣಕ್ಕೆ, ಹೊಸೂರು ರಸ್ತೆ ಮೂಲಕ ಎಲೆಕ್ಟ್ರಾನಿಕ್ ಸಿಟಿಗೆ, ಎಂಟಿಸಿಟಿ–ನಾಯಂಡಹಳ್ಳಿ ಮೂಲಕ ಕೆಂಗೇರಿ ಕೆಎಚ್‌ಬಿ ಕ್ವಾರ್ಟರ್ಸ್‌ಗೆ, ಮಾಗಡಿ ರಸ್ತೆ ಮೂಲಕ ಜನಪ್ರಿಯ ಟೌನ್‌ಶಿಪ್‌ಗೆ, ನಾಗವಾರ–ಟ್ಯಾನರಿ ರಸ್ತೆ ಮೂಲಕ ಆರ್.ಕೆ. ಹೆಗಡೆ ನಗರಕ್ಕೆ, ಹೆಣ್ಣೂರು ರಸ್ತೆ ಮೂಲಕ ಬಾಗಲೂರಿಗೆ ಹೆಚ್ಚುವರಿ ಬಸ್‌ಗಳು ಸಂಚರಿಸಲಿವೆ.

ಸರ್ಜಾಪುರ, ಬನ್ನೇರುಘಟ್ಟ ಮೃಗಾಲಯ, ನೆಲಮಂಗಲ, ಯಲಹಂಕ 5ನೇ ಹಂತ, ಹೊಸಕೋಟೆಗಳಿಗೂ ಹೆಚ್ಚುವರಿ ಬಸ್ ವ್ಯವಸ್ಥೆ ಇರಲಿದೆ ಎಂದು ಬಿಎಂಟಿಸಿ ಸಾರ್ವಜನಿಕ ಅಧಿಕಾರಿ ತಿಳಿಸಿದ್ದಾರೆ.

ಕಸಾಪ ದಾಸರಹಳ್ಳಿ: 4ನೇ ಕನ್ನಡ ಸಾಹಿತ್ಯ ಸಮ್ಮೇಳನ

'ಬದುಕು ಹಸನಾಗಿಸುವ ಕಥೆ, ತತ್ವಗಳು ಅಗತ್ಯ'

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: 'ಬದುಕನ್ನು ಹಸನು ಮಾಡುವಂತಹ ಪುರಾಣ ಕಥೆಗಳು, ತತ್ವಗಳು ನಮಗೆ ಬೇಕಾಗಿವೆ. ಸತ್ತ ಮೇಲೆ ಸ್ವರ್ಗ ತೋರಿಸುವಂತಹ ಕಥೆಗಳು ಬೇಕಿಲ್ಲ' ಎಂದು ಜನಪದ ತಜ್ಞ ಟಿ. ಗೋವಿಂದರಾಜು ತಿಳಿಸಿದರು.

ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ದಾಸರಹಳ್ಳಿ ವಿಧಾನಸಭೆ ಕ್ಷೇತ್ರ ಘಟಕವು ಭಾನುವಾರ ಹಮ್ಮಿಕೊಂಡ ನಾಲ್ಕನೇ ಕನ್ನಡ ಸಾಹಿತ್ಯ ಸಮ್ಮೇಳನದ ಸಮ್ಮೇಳನಾಧ್ಯಕ್ಷತೆ ವಹಿಸಿ ಮಾತನಾಡಿದ ಅವರು, 'ದೇವರ ದರ್ಶನಕ್ಕೆ ಮತ್ತು ಪುಣ್ಯ ಸಂಪಾದನೆಗೆ ತೀರ್ಥಯಾತ್ರೆ ಮಾಡಲಾಗುತ್ತದೆ. ಜನಸಾಮಾನ್ಯರಿಗೆ ನೆರವಾಗುವ ಮೂಲಕವೂ ಪುಣ್ಯ ಸಂಪಾದನೆ ಸಾಧ್ಯ. ಇಂತಹ ಸರಳವಾದ ಸೂತ್ರಗಳನ್ನು ಜಗತ್ತಿಗೆ ಮಾರ್ಗದರ್ಶನ ಮಾಡುವ ಕಥೆಗಳು ನಮ್ಮ ಜನಪದದಲ್ಲಿವೆ' ಎಂದರು.

'ಜಾತಿ, ಧರ್ಮ, ಭಾಷೆ, ಗಡಿ ರಾಜಕೀಯದಂತಹ ಸಂಘರ್ಷಗಳು ಆಗಾಗ ಕಾಣಿಸಿಕೊಳ್ಳುವ ಸಾಂಕ್ರಾಮಿಕ ಪಿಡುಗುಗಳಾಗಿವೆ. ಇಂತಹ ಸಂಘರ್ಷಗಳಿಗೆ 'ಮದ್ದು' ಕಂಡುಕೊಳ್ಳಲು ಸಮ್ಮೇಳನಗಳು ಸಹಕಾರಿ. ನಿತ್ಯ ಸಂವಿಧಾನವನ್ನು ಸ್ಮರಣೆ ಮಾಡುವ ಮೂಲಕ ಅದರ ಆಶಯಗಳ ಜಾರಿಗೆ ಶ್ರಮಿಸಬೇಕು' ಎಂ ದರು.

ಸಮ್ಮೇಳನದಲ್ಲಿ ಟಿ.ಗೋವಿಂದರಾಜು ಅವರಿಗೆ ಕನ್ನಡ ಬಾವುಟ ಹಸ್ತಾಂತರಿಸಲಾಯಿತು. ಕಥೆಗಾರ ಕಂನಾಡಿಗಾ ನಾರಾಯಣ, ಎಂ. ಪ್ರಕಾಶ್ ಮೂರ್ತಿ, ಕನ್ನಡ ಜಾನಪದ ಪರಿಷತ್ತಿನ ದಾಸರಹಳ್ಳಿ ಕ್ಷೇತ್ರ ಘಟಕದ ಅಧ್ಯಕ್ಷ ವೈ.ಬಿ. ಎಚ್ ಜಯದೇವ್, ಅಸೆಂಟ್ ಕಾಲೇಜಿನ ಪ್ರಾಂಶುಪಾಲ ಬಿ.ಎಂ.ವೆಂಕಟೇಶ್ ಹಾಗೂ ನಿವೃತ್ತ ಪ್ರಾಂಶುಪಾಲ ಬೋಗಣ್ಣ ಪಾಲ್ಗೊಂಡಿದ್ದರು.

ಕಸಾಪ ಬೆಂಗಳೂರು ನಗರ ಜಿಲ್ಲೆ ಘಟಕದ ಅಧ್ಯಕ್ಷ ಎಂ. ಪ್ರಕಾಶ್ ಮೂರ್ತಿ, 'ರಾಜಧಾನಿಯಲ್ಲಿ ಕನ್ನಡ ಉಳಿದರೆ ಇಡೀ ರಾಜ್ಯದಲ್ಲಿ ಕನ್ನಡ ಉಳಿದಂತೆ. ಬೆಂಗಳೂರು ಮಹಾನಗರದ ಜೊತೆಗೆ ಮಾಯಾನಗರಿಯು ಹೌದು. ಇಲ್ಲಿಗೆ ದೇಶ ವಿದೇಶದಿಂದಲೂ ಜನರು ಬಂದು ನೆಲೆಸಿದ್ದಾರೆ. ಕನ್ನಡಿಗರು ಬಹುಸಂಖ್ಯಾತರಾದರೂ ಅಲ್ಪಸಂಖ್ಯಾತರಂತೆ ಇದ್ದಾರೆ. ಹಾಗಾಗಿ, ಹೆಚ್ಚು ಹೆಚ್ಚು ಕನ್ನಡ ಕಾರ್ಯಕ್ರಮಗಳನ್ನು ಮಾಡುವ ಮುಖಾಂತರ ಕನ್ನಡ ಉಳಿಸೋಣ' ಎಂದರು.

'ಸರ್ಕಾರ ಕೂಡ ಪ್ರಾಮಾಣಿಕವಾಗಿ ಕನ್ನಡದ ಬಗ್ಗೆ ಒತ್ತು ನೀಡಿದರೆ ಕನ್ನಡಿಗರು ಬೀದಿಗಿಳಿದು ಹೋರಾಡುವ ಅವಶ್ಯಕತೆ ಇರುವುದಿಲ್ಲ. ಉದ್ಯೋಗ, ನಾಮಫಲಕ, ನೆಲ, ಜಲಕ್ಕೆ ಸಂಬಂಧಿತ ಕನ್ನಡ ಮತ್ತು ಕನ್ನಡಿಗರ ಹಿತಕಾಯಬೇಕು' ಎಂದು ಆಗ್ರಹಿಸಿದರು.

ಸಭಾ ಕಾರ್ಯಕ್ರಮಕ್ಕೂ ಮುನ್ನ, ಸಮ್ಮೇಳನಾಧ್ಯಕ್ಷರನ್ನು ಎಂಟನೇ ಮೈಲಿಯಿಂದ ಸಾರೋಟಿನಲ್ಲಿ ಕಲಾ ತಂಡಗಳೊಂದಿಗೆ ಮೆರವಣಿಗೆ ಮೂಲಕ ವೇದಿಕೆಗೆ ಕರೆತರಲಾಯಿತು.

ಬೆಳ್ಳಿ ಕೊಳಗ ಕಾಣಿಕೆ

ಮಹದೇಶ್ವರ ಬೆಟ್ಟ: ಮಲೆ ಮಹದೇಶ್ವರ ಸ್ವಾಮಿ ಬೆಳ್ಳಿ ರಥಕ್ಕೆ ಮೈಸೂರಿನ ಸತ್ಯಾನಂದ, ಅಶೋಕ ಮತ್ತು ಕುಟುಂಬವು 22.290 ಕೆಜಿ ತೂಕದ ಬೆಳ್ಳಿ ಕೊಳಗ (ಮುಖವಾಡ) ಅರ್ಪಿಸಿದೆ.

ನಗದು ವಹಿವಾಟು: ಬ್ಯಾಂಕ್ ಅಧಿಕಾರಿಗಳಿಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಸಭಾ ಚುನಾವಣಾ ಪ್ರಚಾರದ ಸಂದರ್ಭದಲ್ಲಿ ಅನುಮಾನಾಸ್ಪದ ವಹಿವಾಟುಗಳು ನಡೆಯುತ್ತಿರುವುದು ಕಂಡುಬಂದಲ್ಲಿ ಕೂಡಲೇ ಚುನಾವಣಾ ವಿಭಾಗದ ಗಮನಕ್ಕೆ ತರಬೇಕೆಂದು ಚುನಾವಣಾ ವಿಭಾಗದ ವಿಶೇಷ ಆಯುಕ್ತ ಸೆಲ್ವಮಣಿ ಅವರು ಬ್ಯಾಂಕ್ ನೋಡಲ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

'ಒಂದೇ ಖಾತೆಯಿಂದ ಹಲವು ಖಾತೆಗಳಿಗೆ ಹಣ ವರ್ಗಾವಣೆಯಾದರೆ ಅದರ ಮಾಹಿತಿಯನ್ನು ನಮಗೆ ಕೊಡಬೇಕು. ಮಾಹಿತಿ ಕೊಡದಿದ್ದರೆ ಮುಂದಿನ ದಿನಗಳಲ್ಲಿ ನೀವೇ ಜವಾಬ್ದಾರರಾಗುತ್ತೀರಿ. ಅಲ್ಲದೇ ಚುನಾವಣಾ ಆಯೋಗದಿಂದ ಕಾನೂನು ಕ್ರಮ ಜರುಗಿಸಲಾಗುತ್ತದೆ' ಎಂದು ಎಚ್ಚರಿಕೆ ನೀಡಿದರು.

ಯಾವುದೇ ಪೂರ್ವ ನಿರ್ದೇಶನವಿಲ್ಲದೆ ಚುನಾವಣಾ ಪ್ರಕ್ರಿಯೆಯ ಸಮಯದಲ್ಲಿ ಹಲವಾರು ವ್ಯಕ್ತಿಗಳ ಖಾತೆಗಳಿಗೆ ಒಂದು ಬ್ಯಾಂಕ್ ಖಾತೆಯಿಂದ ಆರ್.ಟಿ.ಜಿ.ಎಸ್/ನೆಫ್ಟ್ ಮೂಲಕ ಹೆಚ್ಚು ಹಣ ವರ್ಗಾವಣೆ ಮಾಡುವುದು, ನಗದು ಠೇವಣಿ ಅಥವಾ ₹1 ಲಕ್ಷಕ್ಕಿಂತ ಹೆಚ್ಚಿನ ನಗದು ಹಿಂಪಡೆಯುವಿಕೆ, ಮತದಾರರಿಗೆ ಹಣ ನೀಡಲು ಬಳಸಬಹುದಾದ ಯಾವುದೇ ಅನುಮಾನಾಸ್ಪದ ನಗದು ವಹಿವಾಟುಗಳ ಬಗ್ಗೆ ಮಾಹಿತಿ ಇದ್ದಲ್ಲಿ ಚುನಾವಣಾ ವಿಭಾಗಕ್ಕೆ ತಕ್ಷಣ ನೀಡಬೇಕೆಂದು ಸೂಚಿಸಿದರು.

ನಗದು ಠೇವಣಿ ಅಥವಾ ಹಿಂಪಡೆಯುವಿಕೆ ಮೊತ್ತ ₹10 ಲಕ್ಷಕ್ಕಿಂತ ಹೆಚ್ಚಿದ್ದರೆ, ಅಂತಹ ಮಾಹಿತಿಯನ್ನು ಆದಾಯ ತೆರಿಗೆ ಕಾನೂನುಗಳ ಅಡಿಯಲ್ಲಿ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲು ಆದಾಯ ತೆರಿಗೆ ಇಲಾಖೆಯ ನೋಡಲ್ ಅಧಿಕಾರಿಗೆ ಮಾಹಿತಿ ರವಾನಿಸಲಾಗುವುದು ಎಂದರು.

ಚುನಾವಣಾ ವಿಭಾಗದ ಸಹಾಯಕ ಆಯುಕ್ತ ರಾಮಚಂದ್ರ ನಾಯ್ಕ್, ಮುಖ್ಯ ಲೆಕ್ಕಾಧಿಕಾರಿ ಬೀನಾ, ವಿವಿಧ ಬ್ಯಾಂಕ್‌ಗಳ ನೋಡಲ್ ಅಧಿಕಾರಿಗಳು ಉಪಸ್ಥಿತರಿದ್ದರು.

'ಲೋಕಸಭಾ ಚುನಾವಣೆ ಎನ್‌ಡಿಎ ಸೋಲಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಅಸಾಂವಿಧಾನಿಕ ಮಾರ್ಗದಲ್ಲಿ ನಡೆದಿದೆ. ರೈತ ಹಾಗೂ ಜನವಿರೋಧಿ ನೀತಿ ಅನುಸರಿಸುತ್ತಿದೆ. ಚುನಾವಣೆಯಲ್ಲಿ ಎನ್‌ಡಿಎ ಸೋಲಿಸಬೇಕು. ಎಡ, ಪ್ರಜಾಸತ್ತಾತ್ಮಕ, ಸಮಾಜಮುಖಿ ಪಕ್ಷ, ಸಂಘಟನೆಗಳನ್ನು ಬೆಂಬಲಿಸಬೇಕು' ಎಂದು ಜನಾಂದೋಲನಗಳ ಮಹಾಮೈತ್ರಿ (ಜೆಜೆಎಂ) ಒತ್ತಾಯಿಸಿದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಕೇಂದ್ರ ಸರ್ಕಾರದ ವಿರುದ್ಧ ಜನತಾ ಆರೋಪ ಪಟ್ಟಿ ಬಿಡುಗಡೆಗೊಳಿಸಿದ ಜೆಜೆಎಂ ಅಧ್ಯಕ್ಷ ಎಸ್.ಆರ್. ಹಿರೇಮಠ, 'ಕೇಂದ್ರ ಸರ್ಕಾರ ಜನತಂತ್ರದ ಆಧಾರ ಸ್ತಂಭಗಳಾದ ಕಾರ್ಯಾಂಗ, ಶಾಸಕಾಂಗ ಮತ್ತು ನ್ಯಾಯಾಂಗ ವ್ಯವಸ್ಥೆಯನ್ನು ಸಂಪೂರ್ಣವಾಗಿ ನಿರ್ನಾಮಗೊಳಿಸಿದೆ. ಸಾಂವಿಧಾನಿಕ ಸ್ವತಂತ್ರ ಸಂಸ್ಥೆಗಳನ್ನು ತಮ್ಮ ಕೀಳು ರಾಜಕೀಯ ಉದ್ದೇಶಗಳಿಗೆ ಬಳಸಿಕೊಳ್ಳುತ್ತಿದೆ. ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆಯನ್ನು ಬುಡಮೇಲು ಮಾಡಿ ಭಾವನಾತ್ಮಕ ವಿಷಯಗಳನ್ನು ಮುನ್ನೆಲೆಗೆ ತಂದು ರಾಜಕೀಯ ಲಾಭ ಪಡೆದುಕೊಳ್ಳುತ್ತಿದೆ' ಎಂದು ಅವರು ದೂರಿದರು.

'ಸಿಬಿಐ, ಜಾರಿ ನಿರ್ದೇಶನಾಲಯ (ಇಡಿ), ಆದಾಯ ತೆರಿಗೆ ಇಲಾಖೆ (ಐಟಿ), ಹಣಕಾಸು ಆಯೋಗ, ಗುಪ್ತದಳ, ಚುನಾವಣಾ ಆಯೋಗ, ವಿಶ್ವವಿದ್ಯಾಲಯಗಳು, ರಾಷ್ಟ್ರೀಕೃತ ಬ್ಯಾಂಕುಗಳು ಮುಂತಾದ ಸಾಂವಿಧಾನಿಕ ಸಂಸ್ಥೆಗಳನ್ನು ದುರ್ಬಲಗೊಳಿಸಲಾಗುತ್ತಿದೆ. ಈ ಸಂಸ್ಥೆಗಳು ಆಡಳಿತ ಪಕ್ಷದ ಕೈಗೊಂಬೆಗಳಂತೆ ಕೆಲಸ ಮಾಡುತ್ತಿವೆ' ಎಂದು ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ, ಕಾರ್ಮಿಕ ನಾಯಕ ಮೈಕಲ್ ಫರ್ನಾಂಡಿಸ್, ಅಕ್ಬರ್ ಅಲಿ ಉಡುಪಿ, ಉಗ್ರನರಸಿಂಹ, ಕೆ.ವಿ. ಭಟ್, ಗೋಪಾಲ್, ಟಿ.ಆರ್. ಚಂದ್ರಶೇಖರ್ ಭಾಗವಹಿಸಿದ್ದರು.

ಬೈದ್ಯನಾಥ್
ಅಸಲಿ ಆಯುರ್ವೇದ
ಮಲಬದ್ಧತೆ ಹಾಗೂ ಮೂಲವ್ಯಾಧಿ ನಿವಾರಣೆಗೆ ಸಹಕಾರಿಯಾಗಿದೆ
ಸಿಡ್‌ಪೈಲ್ಸ್
ಟ್ಯಾಬ್ಲೆಟ್
ಪೈಲ್ಸ್ ಮತ್ತು ಪಿಸ್ತೂಲಾಗೆ ಸಂಬಂಧಿತ ಮಲಬದ್ದತೆ, ಗುದದ್ವಾರದಲ್ಲಿ ಊತ, ನೋವು, ಉರಿಯೂತ, ತುರಿಕೆ ಮತ್ತು ನವೆಯಂತಹ ಸಮಸ್ಯೆಗಳ ನಿವಾರಣೆಗೆ ಸಹಕಾರಿಯಾಗಿದೆ.

ಅಭಯಾಮೃತ
ದೀರ್ಘಕಾಲೀನ ಮಲಬದ್ಧತೆ ನಿವಾರಿಸಲು ಹಾಗೂ ಜೀರ್ಣಕ್ರಿಯೆ ಹೆಚ್ಚಿಸಲು ನೆರವಾಗುತ್ತದೆ

I. NO. MP/25E/08/040/137
Customer Care: 8448444935
www.baidyanath.co

ಅವಕಾಶ ಕೊನೆಗೊಳ್ಳುವ ಮೊದಲೇ ಲಾಭ ಪಡೆಯಿರಿ!
ನಿಮ್ಮ ಅಪ್‌ಡೇಟೆಡ್ ರಿಟರ್ನ್ ಇಂದೇ ಸಲ್ಲಿಸಿರಿ!

ಹ.ವ. 2021-22ನೇ ಸಾಲಿನ ಅಪ್‌ಡೇಟೆಡ್ ರಿಟರ್ನ್ ಸಲ್ಲಿಸುವ ಕೊನೆಯ ದಿನಾಂಕ: 31ನೇ ಮಾರ್ಚ್ 2024

ಹ.ವ. 2022-23 ಮತ್ತು ಹ.ವ. 2023-24ನೇ ಸಾಲಿನ ಅಪ್‌ಡೇಟೆಡ್ ರಿಟರ್ನ್ ಕೂಡ ಸಲ್ಲಿಸಬಹುದು

ಈ ಕೆಳಗಿನ ಸಂದರ್ಭಗಳಲ್ಲಿ ಅಪ್‌ಡೇಟೆಡ್ ರಿಟರ್ನ್ ಸಲ್ಲಿಸಬಹುದು:

- ಒಂದು ವೇಳೆ ಒರಿಜಿನಲ್ ರಿಟರ್ನ್ ಸಲ್ಲಿಸಿರದಿದ್ದರೆ
- ಒಂದು ವೇಳೆ ಅವಧಿ ಮೀರಿದ ನಂತರ ರಿಟರ್ನ್ ಸಲ್ಲಿಸಿದ್ದರೆ
- ಒಂದು ವೇಳೆ ಆದಾಯ ಸರಿಯಾಗಿ ಘೋಷಣೆಯಾಗದಿದ್ದ ಪಕ್ಷದಲ್ಲಿ, ಒರಿಜಿನಲ್ ರಿಟರ್ನ್ ಮಾರ್ಪಾಡಿಗೆ
- ಒಂದು ವೇಳೆ ಆದಾಯದ ಮುಖ್ಯಸ್ಥರ ಆಯ್ಕೆ ತಪ್ಪಾಗಿದ್ದಲ್ಲಿ ಅಥವಾ ತಪ್ಪಾದ ದರದಲ್ಲಿ ಪಾವತಿಸಿದ್ದಲ್ಲಿ
- ಒಂದು ವೇಳೆ ಕ್ಯಾರೀಡ್ ಫಾರ್ವರ್ಡ್ ನಷ್ಟದಲ್ಲಿ ಅಥವಾ ಅನ್‌ಅಬ್ಸಾರ್ಬ್ಡ್ ಡಿಪ್ರಿಸಿಯೇಶನ್ ಬೇಕಾಗಿದ್ದಲ್ಲಿ
- ಎಂಎಟಿ/ಎಎಂಟಿ ಕ್ರೆಡಿಟ್ ಕಡಿತ ಬೇಕಾಗಿದ್ದಲ್ಲಿ
- ಒಂದು ವೇಳೆ, ನಿಮ್ಮ ಬಳಿ ಸೂಕ್ತವಾದ ವಿವರಣೆ/ಪುರಾವೆಗಳು ನಿಮ್ಮೊಂದಿಗೆ ಇಲ್ಲದಿರುವ ಕಡಿತಗಳ/ವಿನಾಯತಿಗಳ ಕ್ಲೇಮ್‌ಗೆ ಸಂಬಂಧಿತ ಮಾಹಿತಿಗೆ ಸಂಬಂಧಿಸಿದಂತೆ, ಆದಾಯ ತೆರಿಗೆ ಕಾಯ್ದೆ, 1961ರ ಸೆಕ್ಷನ್ 133(6) ಅಡಿಯಲ್ಲಿ ನಿಮಗೆ ನೋಟಿಸ್ ಜಾರಿಯಾಗಿದ್ದರೆ
- ಒಂದು ವೇಳೆ ನೀವು ತಪ್ಪಾಗಿ ಕಡಿತಗಳನ್ನು/ವಿನಾಯಿತಿಗಳನ್ನು ಕ್ಲೇಮ್ ಮಾಡಿದ್ದರೆ

31.03.2024 ರೊಳಗೆ ನಿಮ್ಮ ಐಟಿಆರ್-ಯು ಸಲ್ಲಿಸಿದರೆ	ಪಾವತಿಸಬೇಕಾದ ಹೆಚ್ಚುವರಿ ತೆರಿಗೆ ಮೊತ್ತ
ಹ.ವ. 2021–22ನೇ ಸಾಲಿಗೆ	ಪಾವತಿಸಬೇಕಾದ ತೆರಿಗೆ ಮತ್ತು ಬಡ್ಡಿಯ ಸರಾಸರಿ 50% ಮೊತ್ತ
ಹ.ವ. 2022–23 ಮತ್ತು 2023–24ನೇ ಸಾಲಿಗೆ	ಪಾವತಿಸಬೇಕಾದ ತೆರಿಗೆ ಮತ್ತು ಬಡ್ಡಿಯ ಸರಾಸರಿ 25% ಮೊತ್ತ

ದಯವಿಟ್ಟು, ಹೆಚ್ಚಿನ ಮಾಹಿತಿಗಾಗಿ
ಆದಾಯ ತೆರಿಗೆ ಕಾಯ್ದೆ, 1961ರ ಸೆಕ್ಷನ್ 139(8ಎ) & 140ಬಿ(3) ಪರಿಶೀಲಿಸಿರಿ
ವಿಳಂಬ ಮಾಡದಿರಿ, ಇಂದೇ ಫೈಲ್ ಮಾಡಿರಿ.

ಇ–ಬ್ರೋಷರ್‌ಗಳಿಗಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿರಿ
INCOME TAX DEPARTMENT
ಆದಾಯ ತೆರಿಗೆ ಇಲಾಖೆ
ಕೇಂದ್ರೀಯ ನೇರ ತೆರಿಗೆಗಳ ಮಂಡಳಿ
ಹೆಚ್ಚಿನ ಮಾಹಿತಿಗಾಗಿ ದಯವಿಟ್ಟು ಭೇಟಿ ಕೊಡಿ www.incometax.gov.in
cbc 15401/13/0024/2324
@IncomeTaxIndia @IncomeTaxIndiaOfficial @IncomeTaxIndiaOfficial @Income Tax India @Income Tax India Official

ಜಲಮಂಡಳಿ ಸೂಚನೆಗೂ ಇಲ್ಲ ಕಿಮ್ಮತ್ತು; ಖಾಸಗಿ ಟ್ಯಾಂಕರ್ ಮಾಲೀಕರು ಹೇಳಿದ್ದೇ 'ಬೆಲೆ'

ಸರ್ಕಾರಿ ದರಕ್ಕೆ ಸಿಗದ ಟ್ಯಾಂಕರ್ ನೀರು

• ಆರ್. ಮಂಜುನಾಥ್

ಬೆಂಗಳೂರು: 'ನಿಮ್ಮ ಏರಿಯಾಗೆ ನಮ್ಮ ಸೇವೆ ಇಲ್ಲ', 'ನಾವು ಅಲ್ಲಿಗೆ ಬರೋಲ್ಲ', 'ಅವರನ್ನೇ ಪ್ರಕಟಿಸಿದ್ದಾರೆ ಅಂತ ನಾವು ಬರೋಕಾಗಲ್ಲ', 'ನಮ್ಮ ರೇಟ್ ಕೊಟ್ಟರೆ ಈಗಲೇ ಬರುತ್ತೇವೆ...'

ಸರ್ಕಾರ ನಿಗದಿಪಡಿಸಿರುವ ದರ ನೀಡಿ ನೀರು ಖರೀದಿಸಲು ನಾಗರಿಕರು ನೋಂದಾಯಿತ ಟ್ಯಾಂಕರ್‌ನವರಿಗೆ ಕರೆ ಮಾಡಿದಾಗ ಸಿಗುತ್ತಿರುವ ಉತ್ತರಗಳು ಇವು.

ಇಲ್ಲಿವರೆಗೂ ಜಲಮಂಡಳಿಯಲ್ಲಿ 1,732 ಖಾಸಗಿ ನೀರಿನ ಟ್ಯಾಂಕರ್‌ಗಳು ನೋಂದಣಿಯಾಗಿವೆ. ಜಿಲ್ಲಾಡಳಿತ ನಿಗದಿಪಡಿಸಿರುವ ದರದ ಪ್ರಕಾರವೇ ಇವರಿಂದ ನೀರು ಪಡೆಯಬಹುದು ಎಂದು ಟ್ಯಾಂಕರ್ ಮಾಲೀಕರ ಹೆಸರು, ಮೊಬೈಲ್ ಸಂಖ್ಯೆ, ನೀರು ಸರಬರಾಜು ಮಾಡುವ ಪ್ರದೇಶದ ವಿವರಗಳಿರುವ 'ಮಾಹಿತಿ ಪಟ್ಟಿ'ಯನ್ನು ಬಿಬಿಎಂಪಿ–ಜಲಮಂಡಳಿ ಸಾರ್ವಜನಿಕ ಪ್ರಕಟಣೆ ಹೊರಡಿಸಿವೆ. ಇವರ ಪ್ರಕಟಣೆಗೆ ಖಾಸಗಿ ಟ್ಯಾಂಕರ್ ಮಾಲೀಕರು 'ಬೆಲೆ' ನೀಡುತ್ತಿಲ್ಲ. ಆದರೆ, ಏರಿಯಾನಿಗೆ ಒಂದುವರೆ ಎರಡುವರೆ ಸಾವಿರ 'ಬೆಲೆ' ನೀಡಿದರೆ ಒಂದು ಗಂಟೆಯಲ್ಲೇ ನೀರಿನ ಟ್ಯಾಂಕರ್ ನಾಗರಿಕರ ಮನೆ ಬಾಗಿಲಲ್ಲಿರುತ್ತದೆ..!

'ರಾಜರಾಜೇಶ್ವರಿ ನಗರ, ಮೈಲಸಂದ್ರ, ಕೆಂಚೇನಹಳ್ಳಿ, ಹಲಗೆವಡೇರಹಳ್ಳಿ (ಎಚ್.ವಿ. ಹಳ್ಳಿ) ಪ್ರದೇಶಗಳಿಗೆ ನೀರು ಸರಬರಾಜು ಮಾಡುವ ಟ್ಯಾಂಕರ್‌ಗಳ ಮಾಹಿತಿಯನ್ನು ಬಿಬಿಎಂಪಿ ನೀಡಿದೆ. ಅವರಿಗೆ ಕರೆ ಮಾಡಿದರೆ, 'ನಾವು ನಿಮ್ಮ ಪ್ರದೇಶದವರಲ್ಲ, ಬನಶಂಕರಿ ಕಡೆಯವರು' ಎಂದು ಹೇಳಿದರು. ಸಮಸ್ಯೆ ಇದ್ದರೆ ಜಲಮಂಡಳಿಯ ಕಾಲ್‌ಸೆಂಟರ್ 1916ಗೆ ಕರೆ ಮಾಡಿ ಎಂದಿದ್ದಾರೆ. ಕಾಲ್‌ಸೆಂಟರ್‌ಗೆ ಕರೆ ಮಾಡಿದರೆ, ಅಲ್ಲಿ, ಎಂಜಿನಿಯರ್ ಒಬ್ಬರ ಮೊಬೈಲ್ ಸಂಖ್ಯೆ ನೀಡಿದರು. ಅವರಿಗೆ ಕರೆ ಮಾಡಿದರೆ ಮೊಬೈಲ್ ಸ್ವಿಚ್ ಆಫ್ ಅಂತ ಬಂತು. ಮತ್ತೆ ಕಾಲ್ ಸೆಂಟರ್‌ಗೆ ಕರೆ ಮಾಡಿದರೆ, 'ಎಂಜಿನಿಯರ್ ಅವರೇ ಕ್ರಮ ಕೈಗೊಳ್ಳಬೇಕು, ನಮಗೆ ಗೊತ್ತಿಲ್ಲ' ಎಂದು ಉತ್ತರ ಬಂದಿತು. ನಾವು ಇನ್ಯಾರನ್ನು ಕೇಳಬೇಕು, ನಮ್ಮ ಬಗ್ಗೆ ಯಾರು ಕಾಳಜಿ ವಹಿಸುತ್ತಾರೆ?' ಎಂದು ರಾಜರಾಜೇಶ್ವರಿ ನಗರದ ಎಂ. ಪ್ರಸಾದ್ ಪ್ರಶ್ನಿಸಿದರು.

ದಾಸರಹಳ್ಳಿ, ಬೊಮ್ಮನಹಳ್ಳಿ, ಮಹದೇವಪುರ, ವಿಜಯನಗರ, ರಾಜಾಜಿನಗರ, ಯಲಹಂಕ ಸೇರಿದಂತೆ ಬಹುತೇಕ ಪ್ರದೇಶಗಳಲ್ಲೂ ಖಾಸಗಿ ಟ್ಯಾಂಕರ್‌ಗಳ ಮಾಲೀಕರು ನಿಗದಿತ ದರಕ್ಕೆ ನೀರು ಪೂರೈಸಲು ಆಸಕ್ತಿ ತೋರುತ್ತಿಲ್ಲ. 'ನಮ್ಮ ದರ ಕೊಟ್ಟರೆ ಈಗಲೇ ಬರುತ್ತೇವೆ, ಆದರೆ ಯಾರಿಗೂ ಹೇಳಬಾರದು ನೋಡಿ.. ಇಲ್ಲದಿದ್ದರೆ ನಿಮ್ಮ ಇಷ್ಟ' ಎಂದು ಬಿಬಿಎಂಪಿ– ಜಲಮಂಡಳಿಯ 'ಮಾಹಿತಿ ಪಟ್ಟಿ'ಯಲ್ಲಿರುವ ಟ್ಯಾಂಕರ್‌ಗಳ ಮಾಲೀಕರೋ ಅಥವಾ ಚಾಲಕರೋ ಹೇಳುತ್ತಾರೆ. ಹೀಗಿದ್ದಾಗ ನಾವೇನು ಮಾಡೋದು' ಎಂದು ಹಲವು ನಾಗರಿಕರು ಅಳಲು ತೋಡಿಕೊಂಡರು.

ಟ್ಯಾಂಕರ್‌ಗಳ ಮಾಹಿತಿ

ವಲಯ	ನೋಂದಣಿ ಆಗಿರುವುದು	ಮಾಹಿತಿ ಪಟ್ಟಿಯಲ್ಲಿರುವುದು
ದಕ್ಷಿಣ	456	348
ಪೂರ್ವ	406	298
ಮಹದೇವಪುರ	341	241
ಯಲಹಂಕ	141	103
ಬೊಮ್ಮನಹಳ್ಳಿ	117	94
ದಾಸರಹಳ್ಳಿ	98	42
ಆರ್.ಆರ್. ನಗರ	86	66
ಪಶ್ಚಿಮ	87	58
ಒಟ್ಟು	1,732	1250

ಸರ್ಕಾರ ನಿಗದಿಪಡಿಸಿರುವ ಖಾಸಗಿ ಟ್ಯಾಂಕರ್‌ನ ನೀರಿನ ದರ

ವಿವರ	6,000 ಲೀಟರ್ ನೀರು (ಜಿಎಸ್‌ಟಿ ಸೇರಿ)	8,000 ಲೀಟರ್ ನೀರು (ಜಿಎಸ್‌ಟಿ ಸೇರಿ)	12,000 ಲೀಟರ್ ನೀರು (ಜಿಎಸ್‌ಟಿ ಸೇರಿ)
5 ಕಿ.ಮೀ ವರೆಗೆ	₹600	₹700	₹1,000
5ರಿಂದ 10 ಕಿ.ಮೀ ವರೆಗೆ	₹750	₹850	₹1,200

ಜಲ ಜಂಜಾಟ

ನೀರಿನ ಬವಣೆ

ಬೆಂಗಳೂರಿನಲ್ಲಿ ನೀರಿಗೆ ಹಾಹಾಕಾರ ಉಂಟಾಗಿದೆ. ನಿಮ್ಮ ಪ್ರದೇಶದಲ್ಲಿಯೂ ನೀರಿನ ಬವಣೆ ಇದ್ದರೆ ಬರೆದು ಕಳುಹಿಸಿ

ವಾಟ್ಸ್‌ಆ್ಯಪ್ ನಂಬರ್:

9606038256

ರಾಜಕಾರಣಿಗಳ ಛಾಯೆ!

ನಗರದಲ್ಲಿರುವ ಬಹುತೇಕ ಖಾಸಗಿ ಟ್ಯಾಂಕರ್‌ಗಳ ಮಾಲೀಕತ್ವ ರಾಜಕಾರಣಿಗಳದ್ದು ಅಥವಾ ಅವರ ಹಿಂಬಾಲಕರದ್ದು. ಹೀಗಾಗಿಯೇ, ಜಿಲ್ಲಾಡಳಿತ, ಬಿಬಿಎಂಪಿ, ಜಲಮಂಡಳಿ ಆದೇಶಗಳಿಗೆ 'ಬೆಲೆ' ಇಲ್ಲ. ಅವರು ನಿಗದಿ ಮಾಡಿದ್ದೇ 'ಬೆಲೆ'. ಅದನ್ನು ಕೇಳುವವರಿಲ್ಲ ಎಂಬ ಪರಿಸ್ಥಿತಿ ನಗರದಲ್ಲಿದೆ.

'ಖಾಸಗಿ ಟ್ಯಾಂಕರ್‌ಗಳ ನೋಂದಣಿ ಕಡ್ಡಾಯ ಎಂದು ಹೇಳಲಾಗಿದ್ದರೂ, ನೋಂದಣಿ ಮಾಡಿಕೊಳ್ಳದವರ ಮೇಲೆ ಏನೂ ಕ್ರಮವಾಗಿಲ್ಲ. ಶಾಸಕ, ಸಚಿವ, ಪ್ರಭಾವಿ ನಾಯಕರೇ ನಮ್ಮ ಮಾಲೀಕರು. ಅವರನ್ನೇನು ಮಾಡಲು ಸಾಧ್ಯ ಎಂಬುದು ಟ್ಯಾಂಕರ್ ಡ್ರೈವರ್‌ಗಳ ಮಾತು. ಅದು ನಿಜವೇ ಆಗಿದ್ದು, ಅವರ ಹೇಳುವ ದರವನ್ನೇ ನೀಡಿ ನಾವು ನೀರು ಖರೀದಿಸಬೇಕಾಗಿದೆ. ಇಲ್ಲದಿದ್ದರೆ ನಮಗೆ ನೀರು 'ಇರುವುದಿಲ್ಲ'' ಎಂದು ಲಗ್ಗೆರೆಯ ಅಪಾರ್ಟ್‌ಮೆಂಟ್ ನಿವಾಸಿಯೊಬ್ಬರು ತಮ್ಮ ಸಂಕಷ್ಟ ಹೇಳಿಕೊಂಡರು.

ಹೇಳಿದ್ದೊಂದು, ಇರುವುದೊಂದು!

'ಬೆಂಗಳೂರು ನಗರದಲ್ಲಿ ಖಾಸಗಿಯ ಸುಮಾರು 3,500 ಟ್ಯಾಂಕರ್‌ಗಳಿದ್ದು ಅವುಗಳೆಲ್ಲವೂ ನೋಂದಣಿಯಾಗಬೇಕು. ಇಲ್ಲದಿದ್ದರೆ ಅವರ ಮೇಲೆ ಕ್ರಮ ಕೈಗೊಳ್ಳಲಾಗುತ್ತದೆ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹಾಗೂ ಜಲಮಂಡಳಿ ಅಧ್ಯಕ್ಷ ರಾಮ್‌ಪ್ರಸಾತ್ ಮನೋಹರ್ ಹೇಳಿದ್ದರು.

ಗಡುವು ಮುಗಿದಿದ್ದರೂ 1,732 ಟ್ಯಾಂಕರ್‌ಗಳು ಮಾತ್ರ ನೋಂದಣಿಯಾಗಿವೆ. ಆ ಪೈಕಿ ಎಲ್ಲರೂ ಜಿಲ್ಲಾಡಳಿತ ನಿಗದಿಪಡಿಸಿರುವ ದರಕ್ಕೆ ನೀರನ್ನು ನೀಡಲು ಒಪ್ಪಿಲ್ಲ. ಇಷ್ಟಾದರೂ ಅವರೆಲ್ಲರ ಮೊಬೈಲ್ ಸಂಖ್ಯೆ, ಪ್ರದೇಶವನ್ನು ನಿಗದಿಪಡಿಸಿ ಅವರಿಂದ ನೀರು ಪಡೆಯಿರಿ ಎಂದು ಬಿಬಿಎಂಪಿ– ಜಲಮಂಡಳಿ ಮಾಹಿತಿ ಪಟ್ಟಿ ಪ್ರಕಟಿಸಿವೆ. ಬಿಬಿಎಂಪಿಯೇ ನೀಡಿರುವ 'ಮಾಹಿತಿ ಪಟ್ಟಿ'ಯಲ್ಲಿ 1,250 ಟ್ಯಾಂಕರ್‌ಗಳಷ್ಟೇ ಇವೆ. 482 ಟ್ಯಾಂಕರ್‌ಗಳ ಮಾಹಿತಿಯೇ ಇಲ್ಲ. ಹೀಗಾಗಿ ಇವರು ಹೇಳುತ್ತಿರುವುದು ಒಂದು, ವಾಸ್ತವದಲ್ಲಿ ಇರುವುದೇ ಒಂದು ಎಂಬಂತಾಗಿದೆ.

'ಟ್ಯಾಂಕರ್ ಜಪ್ತಿ ಮಾಡುತ್ತೇವೆ'

'ನಿಗದಿಪಡಿಸಿರುವ ದರಕ್ಕಿಂತ ಹೆಚ್ಚಿನ ಹಣ ಕೇಳುವಂತಿಲ್ಲ. ಕರೆ ಮಾಡಿದಾಗ, 'ಆ ಪ್ರದೇಶ ನಮ್ಮದಲ್ಲ' ಎಂದೆಲ್ಲ ಹೇಳುವಂತಿಲ್ಲ. ಬಿಬಿಎಂಪಿ ಎಲ್ಲವನ್ನೂ ಪರಿಶೀಲಿಸಿಯೇ ಆಯಾ ಪ್ರದೇಶಕ್ಕೆ ಟ್ಯಾಂಕರ್‌ಗಳನ್ನು ನಿಗದಿಪಡಿಸಿ, 'ಮಾಹಿತಿ ಪಟ್ಟಿ'ಯನ್ನು ಪ್ರಕಟಿಸಿದೆ. ಅದರಂತೆಯೇ ನಾಗರಿಕರು ಅವರಿಗೆ ಕರೆ ಮಾಡಿ ನೀರು ಪಡೆಯಬಹುದು. ಟ್ಯಾಂಕರ್ ಮಾಲೀಕರು ನೀರು ಪೂರೈಕೆ ಮಾಡದಿದ್ದರೆ ಕ್ರಮ ಕೈಗೊಳ್ಳಲಾಗುತ್ತದೆ. ಟ್ಯಾಂಕರ್‌ಗಳನ್ನೇ ಜಪ್ತಿ ಮಾಡುತ್ತೇವೆ' ಎಂದು ಬಿಬಿಎಂಪಿ ಆರೋಗ್ಯ ವಿಭಾಗದ ವಿಶೇಷ ಆಯುಕ್ತ ಸುರೋಳ್ಕರ್ ವಿಕಾಸ್ ಕಿಶೋರ್ ಹೇಳಿದರು.

'ಟ್ಯಾಂಕರ್ ಮಾಲೀಕರು ಕರೆ ಮಾಡಿದಾಗ ನೀರು ಸರಬರಾಜಿಗೆ ಒಪ್ಪದಿದ್ದರೆ ಬಿಬಿಎಂಪಿಯ 1533 ಸಂಖ್ಯೆಗೆ ಕರೆ ಮಾಡಬಹುದು. ನಮ್ಮ ವಲಯ ಆಯುಕ್ತರು ಸಂಬಂಧಿಸಿದವರ ಮೇಲೆ ಕ್ರಮ ಕೈಗೊಳ್ಳುತ್ತಾರೆ. ಇನ್ನು ಎರಡು ದಿನಗಳಲ್ಲಿ 'ಮಾಹಿತಿ ಪಟ್ಟಿ'ಯನ್ನು ವೆಬ್‌ಸೈಟ್‌ನಲ್ಲಿಯೂ ಪ್ರಕಟಿಸಲಾಗುವುದು' ಎಂದು ಹೇಳಿದರು.

500 ಎಂಎಲ್‌ಡಿ ನೀರು ಕೊರತೆ

ಉನ್ನತ ಮಟ್ಟದ ಸಭೆ ಬಳಿಕ ಮುಖ್ಯಮಂತ್ರಿ ಹೇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನಗರದ ವ್ಯಾಪ್ತಿಯಲ್ಲಿ ನಿತ್ಯವೂ 50 ಕೋಟಿ ಲೀಟರ್ (500 ಎಂಎಲ್‌ಡಿ) ನೀರಿನ ಕೊರತೆ ಇದೆ. ನೀರಿನ ಕೊರತೆ ನೀಗಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ರಾಜಧಾನಿಯಲ್ಲಿನ ನೀರಿನ ಕೊರತೆಗೆ ಪರಿಹಾರ ಕಂಡುಕೊಳ್ಳುವ ಕುರಿತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಜತೆಗೂಡಿ ಬಿಬಿಎಂಪಿ ಹಾಗೂ ಬೆಂಗಳೂರು ಜಲಮಂಡಳಿ ಅಧಿಕಾರಿಗಳ ಜತೆ ಸೋಮವಾರ ಸಭೆ ನಡೆಸಿದ ಬಳಿಕ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು.

ನಗರಕ್ಕೆ ಕುಡಿಯಲು ಮತ್ತು ಕೈಗಾರಿಕಾ ಉದ್ದೇಶಕ್ಕೆ ನಿತ್ಯವೂ 260 ಕೋಟಿ ಲೀಟರ್ ನೀರಿನ ಅಗತ್ಯವಿದೆ. ಕಾವೇರಿ ಮೂಲದಿಂದ 145 ಕೋಟಿ ಲೀಟರ್ ನೀರು ಪೂರೈಕೆಯಾಗುತ್ತಿದೆ. ಕೊಳವೆಬಾವಿಗಳಿಂದ 65 ಕೋಟಿ ಲೀಟರ್ ನೀರು ದೊರೆಯುತ್ತಿದೆ ಎಂದು ವಿವರ ನೀಡಿದರು.

ಬೆಂಗಳೂರು ನಗರದ ವ್ಯಾಪ್ತಿಯಲ್ಲಿ ಸರ್ಕಾರದಿಂದ ಕೊರೆದಿರುವ 14,000 ಕೊಳವೆಬಾವಿಗಳ ಪೈಕಿ 6,900 ಬತ್ತಿಹೋಗಿವೆ. ಬಿಬಿಎಂಪಿ ವ್ಯಾಪ್ತಿಗೆ ಹೊಸದಾಗಿ ಸೇರಿಸಿರುವ 110 ಹಳ್ಳಿಗಳ ಪೈಕಿ 55 ಹಳ್ಳಿಗಳಲ್ಲಿ ನೀರಿನ ಸಮಸ್ಯೆ ಉಂಟಾಗಿದೆ. ಸಮಸ್ಯೆ ಉಲ್ಬಣಿಸದಂತೆ ಪರಿಹಾರ ಕ್ರಮಗಳನ್ನು ಕೈಗೊಳ್ಳಲು ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ತಿಳಿಸಿದರು.

ಕೊಳೆಗೇರಿಗಳು, ಎತ್ತರದ ಪ್ರದೇಶಗಳು ಮತ್ತು ಬಿಬಿಎಂಪಿಗೆ ಹೊಸದಾಗಿ ಸೇರಿರುವ 110 ಹಳ್ಳಿಗಳಲ್ಲಿ ನೀರಿನ ಕೊರತೆ ಉಂಟಾಗದಂತೆ ಕ್ರಮ ಕೈಗೊಳ್ಳಲು ನಿರ್ದೇಶನ ನೀಡಲಾಗಿದೆ. ಕೊಳವೆಬಾವಿಗಳನ್ನು ಅವಲಂಬಿಸಿರುವ ಪ್ರದೇಶಗಳಲ್ಲಿ ಟ್ಯಾಂಕರ್ ಮೂಲಕ ನೀರು ಪೂರೈಕೆಗೆ ಸೂಚಿಸಲಾಗಿದೆ. ಕರ್ನಾಟಕ ಹಾಲು ಮಹಾಮಂಡಳದ (ಕೆಎಂಎಫ್) ಟ್ಯಾಂಕರ್‌ಗಳು ಮತ್ತು ಖಾಸಗಿ ಟ್ಯಾಂಕರ್‌ಗಳನ್ನು ಬಾಡಿಗೆಗೆ ಪಡೆದು ಬಳಸಿಕೊಳ್ಳಲು ಸೂಚನೆ ನೀಡಲಾಗಿದೆ ಎಂದರು.

333 ಹೊಸ ಕೊಳವೆಬಾವಿಗಳನ್ನು ಕೊರೆಸಲಾಗುತ್ತಿದೆ. ನಿಷ್ಕ್ರಿಯಗೊಂಡಿದ್ದ 1,200 ಕೊಳವೆಬಾವಿಗಳಿಗೆ ಮರುಜೀವ ನೀಡಲಾಗುವುದು. ಕೆ.ಸಿ. ವ್ಯಾಲಿ ಮಾದರಿಯಲ್ಲಿ ಸಂಸ್ಕರಿತ ತ್ಯಾಜ್ಯ ನೀರನ್ನು ಬಳಸಿಕೊಂಡು ನಗರದ 14 ಕೆರೆಗಳನ್ನು ಭರ್ತಿ ಮಾಡಲು ಸೂಚಿಸಲಾಗಿದೆ. ಇದರಿಂದ ನಗರದಲ್ಲಿ ಕೊಳವೆ ಅಂತರ್ಜಲ ಮಟ್ಟದಲ್ಲಿ ಏರಿಕೆಯಾಗಲಿದೆ ಎಂದು ಸಿದ್ದರಾಮಯ್ಯ ತಿಳಿಸಿದರು.

ಪ್ರತಿ ದಿನ ಸಭೆ: ಕುಡಿಯುವ ನೀರಿನ ಸಮಸ್ಯೆ ಕುರಿತು ಬಿಬಿಎಂಪಿ ಮತ್ತು ಜಲಮಂಡಳಿ ಅಧಿಕಾರಿಗಳು ನಿತ್ಯವೂ ಸಭೆ ನಡೆಸುತ್ತಿದ್ದಾರೆ. ಪರಿಸ್ಥಿತಿ ಅವಲೋಕಿಸಿ ವಾರಕ್ಕೊಮ್ಮೆ ಕ್ರಿಯಾಯೋಜನೆ ರೂಪಿಸುತ್ತಿದ್ದಾರೆ. ಕುಡಿಯುವ ನೀರಿನ ಪೂರೈಕೆಗೆ ಹಣದ ಕೊರತೆ ಇಲ್ಲ. ರಾಜ್ಯ ಸರ್ಕಾರ ಮತ್ತು ಬಿಬಿಎಂಪಿ ಅಗತ್ಯವಿರುವಷ್ಟು ಹಣ ಒದಗಿಸಲಿವೆ ಎಂದು ಹೇಳಿದರು.

ಭವಿಷ್ಯದಲ್ಲಿ ನೀರಿನ ಕೊರತೆ ಉದ್ಭವಿಸದಂತೆ ತಡೆಯಲು ತಜ್ಞರ ಸಮಿತಿ ರಚಿಸಲಾವುದು. ಖಾಸಗಿಯಾಗಿ ನೀರು ಪೂರೈಸುವ 1,700 ಟ್ಯಾಂಕರ್‌ಗಳು ಈವರೆಗೆ ನೋಂದಣಿಯಾಗಿವೆ. ನೀರಿನ ಸಮಸ್ಯೆ ನಿರ್ವಹಣೆಗೆ 143 ಕಾರ್ಯಪಡೆಗಳನ್ನು ರಚಿಸಲಾಗಿದೆ. ನೀರಿನ ಕೊರತೆ ಕುರಿತು ಕೇಂದ್ರೀಯ ಸಹಾಯವಾಣಿ ಸಂಖ್ಯೆ 1916 ಮತ್ತು ವಾಟ್ಸ್ ಆ್ಯಪ್ ಮೂಲಕವೂ ಅಹವಾಲು ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ ಎಂದರು.

20.04 ಟಿಎಂಸಿ ಅಡಿ ನೀರಿನ ಸಂಗ್ರಹ

'ಕಾವೇರಿ ಕಣಿವೆಯ ಜಲಾಶಯಗಳಲ್ಲಿ 20.04 ಟಿಎಂಸಿ ಅಡಿ ನೀರಿನ ಸಂಗ್ರಹವಿದೆ. ಕೃಷ್ಣರಾಜ ಸಾಗರದಲ್ಲಿ 11.02 ಟಿಎಂಸಿ ಅಡಿ ನೀರು ಸಂಗ್ರಹವಿದ್ದರೆ, ಕಬಿನಿ ಜಲಾಶಯದಲ್ಲಿ 9.02 ಅಡಿ ನೀರು ಇದೆ. ಬೆಂಗಳೂರು ನಗರಕ್ಕೆ ಜೂನ್ ತಿಂಗಳವರೆಗೂ ಸಾಕಾಗುವಷ್ಟು ನೀರಿನ ಸಂಗ್ರಹವಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಜೂನ್ ಅಂತ್ಯಕ್ಕೆ ಕಾವೇರಿ ಐದನೇ ಹಂತದ ಕಾಮಗಾರಿ ಪೂರ್ಣಗೊಳ್ಳಲಿದೆ. ಆ ಬಳಿಕ ನಗರಕ್ಕೆ ನಿತ್ಯವೂ 77.5 ಕೋಟಿ ನೀರನ್ನು ಹೆಚ್ಚುವರಿಯಾಗಿ ಪೂರೈಸಬಹುದು. ಆ ನೀರನ್ನು ಹೊಸದಾಗಿ ಬಿಬಿಎಂಪಿಗೆ ಸೇರಿರುವ 110 ಹಳ್ಳಿಗಳಿಗೆ ಪೂರೈಕೆ ಮಾಡಲಾಗುವುದು ಎಂದರು.

1,700 ನೀರು ಪೂರೈಸಲು ನೋಂದಣಿ ಆದ ಟ್ಯಾಂಕರ್‌ಗಳು

143 ನೀರಿನ ಸಮಸ್ಯೆ ನಿರ್ವಹಣೆಗೆ ಕಾರ್ಯಪಡೆ ರಚನೆ

333 ಹೊಸ ಕೊಳವೆ ಬಾವಿಗಳನ್ನು ಕೊರೆಸಲು ಸೂಚನೆ

'ಕೊಳವೆಬಾವಿಗಳ ನಿರ್ವಹಣೆಗೆ ರೊಬೊಟಿಕ್ ತಂತ್ರಜ್ಞಾನ ಅಳವಡಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಲಮಂಡಳಿಯ ಕೊಳವೆಬಾವಿಗಳ ಸಮರ್ಪಕ ನಿರ್ವಹಣೆಗಾಗಿ ರೊಬೊಟಿಕ್ ತಂತ್ರಜ್ಞಾನ ಅಳವಡಿಸಿಕೊಳ್ಳುವಂತೆ ಅಧಿಕಾರಿಗಳಿಗೆ ಬೆಂಗಳೂರು ಜಲಮಂಡಳಿ ಅಧ್ಯಕ್ಷ ಡಾ.ವಿ.ರಾಮ್‌ಪ್ರಸಾತ್ ಮನೋಹರ್ ಸೂಚಿಸಿದರು.

ಬೆಂಗಳೂರು ಕೊಳವೆಬಾವಿ ಗುತ್ತಿಗೆದಾರರ ಸಂಘದ ಪದಾಧಿಕಾರಿಗಳೊಂದಿಗೆ ಸೋಮವಾರ ಸಭೆ ನಡೆಸಿ ಅವರು ಮಾತನಾಡಿದರು.

'ಜಲಮಂಡಳಿಯ 11 ಸಾವಿರಕ್ಕೂ ಹೆಚ್ಚು ಕೊಳವೆಬಾವಿಗಳ ಪೈಕಿ ಸಮರ್ಪಕ ನಿರ್ವಹಣೆ ಇಲ್ಲದೆ ಹಲವು ಬತ್ತಿಹೋಗಿವೆ. ನೀರು ಇಲ್ಲದೇ ಮೋಟರ್ ಓಡಿಸುವುದರಿಂದ ಬಹಳಷ್ಟು ತಾಂತ್ರಿಕ ಸಮಸ್ಯೆ ಆಗುತ್ತಿದೆ. ಇವುಗಳನ್ನು ಸರಿಯಾದ ಸಮಯಕ್ಕೆ ರಿಪೇರಿ ಮಾಡುವುದು ಸಾಧ್ಯವಾಗುತ್ತಿಲ್ಲ. ಇದನ್ನು ತಡೆಗಟ್ಟುವ ನಿಟ್ಟಿನಲ್ಲಿ ಆಧುನಿಕ ರೊಬೊಟಿಕ್ ತಂತ್ರಜ್ಞಾನ ಬಳಸಬೇಕು' ಎಂದು ಸೂಚನೆ ನೀಡಿದರು.

ಈ ತಂತ್ರಜ್ಞಾನದಿಂದ ಪಂಪ್ ಸೆಟ್‌ಗಳ ಮಾಹಿತಿ, ನೀರಿನ ಹರಿವು ದುರಸ್ತಿ ಸೇರಿದಂತೆ ಆಟೊಮ್ಯಾಟಿಕ್ ಸ್ವಿಚ್ ಆನ್–ಆಫ್ ಮಾಡುವುದಕ್ಕೂ ಸಾಧ್ಯವಾಗುತ್ತದೆ ಎಂದರು.

ಪರವಾನಗಿ ಹೊಂದಿರುವ ಬೆಂಗಳೂರು ಕೊಳವೆಬಾವಿ ಗುತ್ತಿಗೆದಾರ ಸಂಘದವರು ಜಲಮಂಡಳಿ ಅಧಿಕಾರಿಗಳೊಂದಿಗೆ ಜಂಟಿಯಾಗಿ ಜಲಮಂಡಳಿಯ ಕೊಳವೆಬಾವಿಗಳ ಸಮೀಕ್ಷೆ ನಡೆಸಿ ವರದಿ ನೀಡಲು ಸೂಚಿಸಿದರು.

ಮೋಟಾರ್ ರಿವೈಂಡಿಗ್ ಸೇರಿದಂತೆ ಸಣ್ಣ ಪುಟ್ಟ ತಾಂತ್ರಿಕ ಸಮಸ್ಯೆಯಿಂದ ಸ್ತಬ್ಧವಾಗಿರುವ ಕೊಳವೆಬಾವಿಗಳನ್ನು ತುರ್ತಾಗಿ ರಿಪೇರಿ ಮಾಡಲು ಹೇಳಿದರು.

ಮನೆಗಳಿಂದ ಮಳೆ ನೀರು ಮರುಪೂರಣ

ನಗರದಲ್ಲಿ ಬೀಳುವ ಮಳೆಯನ್ನು ಸರಿಯಾದ ರೀತಿಯಲ್ಲಿ ಮರುಪೂರಣ ಆಗುವಂತೆ ಮಾಡುವ ನಿಟ್ಟಿನಲ್ಲಿ ಬತ್ತಿಹೋಗಿರುವ ಕೊಳವೆ ಬಾವಿಗಳನ್ನು ಉಪಯೋಗಿಸಬಹುದಾಗಿದೆ. ಬತ್ತಿಹೋಗಿರುವ ಹಾಗೂ ಮತ್ತೆ ಸರಿಪಡಿಸಲು ಸಾಧ್ಯವಾಗದ ಕೊಳವೆಬಾವಿಗಳನ್ನು ಮಳೆ ನೀರು ಇಂಗಿಸುವುದಕ್ಕೆ ಬಳಸಬೇಕು. ಅದಕ್ಕೆ ಅಕ್ಕಪಕ್ಕದ ಮನೆಗಳಿಂದ ಮಳೆ ನೀರು ಸಂಗ್ರಹ ವ್ಯವಸ್ಥೆ ಅಳವಡಿಸಲು ಯೋಜನೆ ರೂಪಿಸಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಪೂರ್ವ ಮುಂಗಾರು: ಮುಂಜಾಗ್ರತಾ ಕ್ರಮಕ್ಕೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕುಡಿಯುವ ನೀರು ಸರಬರಾಜು, ಪೂರ್ವ ಮುಂಗಾರು ಮಳೆಗೆ ಮೊದಲು ಕೈಗೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳ ಅನುಷ್ಠಾನದತ್ತ ಗಮನಹರಿಸಬೇಕು ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸೂಚಿಸಿದರು.

ಅಧಿಕಾರಿಗಳೊಂದಿಗೆ ಸೋಮವಾರ ಸಭೆ ನಡೆಸಿದ ಅವರು, 'ಕುಡಿಯುವ ನೀರಿನ ಸಮಸ್ಯೆ ಕುರಿತು ಆಯಾ ವಲಯ ವ್ಯಾಪ್ತಿಯಲ್ಲಿ ಜಲಮಂಡಳಿ ಅಧಿಕಾರಿಗಳ ಜೊತೆ ಸಮನ್ವಯ ಸಾಧಿಸಿ ನೀರಿನ ಸಮಸ್ಯೆಯನ್ನು ಬಗೆಹರಿಸಬೇಕು. ನೋಂದಣಿಯಾಗಿರುವ ಟ್ಯಾಂಕರ್‌ಗಳನ್ನು ಈಗಾಗಲೇ ವಲಯವಾರು ನಿಯೋಜನೆ ಮಾಡಲಾಗಿದ್ದು, ಸಮಸ್ಯೆಯಿರುವ ಪ್ರದೇಶಗಳಿಗೆ ನೀರಿನ ಪೂರೈಕೆಗೆ ಕ್ರಮ ಕೈಗೊಳ್ಳಬೇಕು' ಎಂದು ತಿಳಿಸಿದರು.

ಪಾಲಿಕೆ ವ್ಯಾಪ್ತಿಯಲ್ಲಿನ 110 ಹಳ್ಳಿಗಳಿಗೆ ಸಂಬಂಧಿಸಿದಂತೆ ನೀರಿನ ವ್ಯವಸ್ಥೆ ಕಲ್ಪಿಸಬೇಕು. ಜಲಮಂಡಳಿ ಹಾಗೂ ಪಾಲಿಕೆಯ ಸಹಾಯವಾಣಿಗೆ ನೀರಿನ ಸಂಬಂಧ ಬರುವ ದೂರುಗಳನ್ನು ಕಾಲಮಿತಿಯೊಳಗಾಗಿ ಇತ್ಯರ್ಥಪಡಿಸಲು ಕ್ರಮ ವಹಿಸಬೇಕೆಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಆಯಾ ವಲಯ ವ್ಯಾಪ್ತಿಯಲ್ಲಿ ಈಗಾಗಲೇ ಪ್ರವಾಹ ಪೀಡಿತ ಪ್ರದೇಶಗಳನ್ನು ಗುರುತಿಸಲಾಗಿದೆ. ಅಲ್ಲಿ ಪ್ರವಾಹ ಉಂಟಾಗದಂತೆ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು. ರಾಜಕಾಲುವೆಗಳಲ್ಲಿ ಹೂಳೆತ್ತಿ ಸರಾಗವಾಗಿ ನೀರು ಹರಿದುಹೋಗುವಂತೆ ಮಾಡಬೇಕು ಎಂದರು.

ಬಿಸಿ ಬೇಳೆಬಾತ್ ಬಿದ್ದು ಬಿಸಿಯೂಟ ಕಾರ್ಯಕರ್ತೆ ಸಾವು

ಪ್ರಜಾವಾಣಿ ವಾರ್ತೆ

ಗೌರಮ್ಮ

ಕನಕಪುರ: ಇಲ್ಲಿನ ಆರ್.ಇ.ಎಸ್ ಸಂಸ್ಥೆ ಆರ್.ಎಂ.ಪಿ.ಎಚ್.ಎಸ್ ಗ್ರಾಮಾಂತರ ಬಾಲಕರ ಪ್ರೌಢ ಶಾಲೆಯಲ್ಲಿ ಒಲೆಯಿಂದ ಬಿಸಿ ಬೇಳೆ ಬಾತ್ ಕೆಳಗಿಡುವಾಗ ಸಂಭವಿಸಿದ ಅವಘಡದಲ್ಲಿ ಗಾಯಗೊಂಡಿದ್ದ ಬಿಸಿಯೂಟ ಕಾರ್ಯಕರ್ತೆ ಸೋಮವಾರ ಮೃತಪಟ್ಟಿದ್ದಾರೆ.

ಶಾಲೆಯಲ್ಲಿ ಕೆಲವು ವರ್ಷಗಳಿಂದ ಬಿಸಿಯೂಟ ತಯಾರಿಸುತ್ತಿದ್ದ ಹಲಸಿನಮರದೊಡ್ಡಿ ಗೌರಮ್ಮ (55) ಮಾರ್ಚ್ 15ರಂದು ಪಾತ್ರೆ ಕೈ ಜಾರಿ ಬಿಸಿ ಬೇಳೆ ಬಾತ್ ಮೈ ಮೇಲೆ ಚೆಲ್ಲಿ ತೀವ್ರವಾಗಿ ಗಾಯಗೊಂಡಿದ್ದರು. ಅವರನ್ನು ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ಸೇರಿಸಲಾಗಿತ್ತು. ಇವರೊಂದಿಗೆ ಮತ್ತಿಬ್ಬರು ಸಹಾಯಕರಿಗೂ ಸಣ್ಣಪುಟ್ಟ ಗಾಯಗಳಾಗಿದ್ದವು. ಕನಕಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪ್ರಬಲ ಸಾಕ್ಷ್ಯ ಅಗತ್ಯ: ಹೈಕೋರ್ಟ್

ಪತ್ನಿಯ ಮನಃಸ್ಥಿತಿಗೆ ಆಕ್ಷೇಪ: ಅರ್ಜಿ ಸಲ್ಲಿಸಿದ್ದ ಪತಿಗೆ ₹ 50 ಸಾವಿರ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೌಟುಂಬಿಕ ವ್ಯಾಜ್ಯಗಳಲ್ಲಿ ಸಲ್ಲಿಸಲಾಗುವ; ಪತ್ನಿಯ ಮನಃಸ್ಥಿತಿ ಸರಿ ಇಲ್ಲ, ಆಕೆಯನ್ನು ಮನಃಶಾಸ್ತ್ರಜ್ಞರಿಂದ ಪರೀಕ್ಷೆಗೆ ಒಳಪಡಿಸಬೇಕು ಎಂಬ ಪತಿಯ ಆರೋಪಗಳನ್ನು ಪರಿಗಣಿಸಬೇಕಾದರೆ ಮೇಲ್ನೋಟಕ್ಕೆ ಅಂತಹ ಆರೋಪಗಳಿಗೆ ಬಲವಾದ ಸಾಕ್ಷ್ಯಗಳು ಇರಬೇಕು' ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

'ನನ್ನ ಪತ್ನಿಯನ್ನು ನಿಮ್ಹಾನ್ಸ್‌ನಲ್ಲಿ (ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆ) ಮನಃಶಾಸ್ತ್ರಜ್ಞರಿಂದ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಬೇಕು ಎಂಬ ಮನವಿಯನ್ನು ಕೌಟುಂಬಿಕ ನ್ಯಾಯಾಲಯ ಪರಿಗಣಿಸಿಲ್ಲ' ಎಂದು ಆಕ್ಷೇಪಿಸಿ ಪತಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗ ಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ. 'ಪತಿ ಅನಗತ್ಯ ದಾವೆ ಹೂಡಿದ್ದಾರೆ' ಎಂದು ಅವರಿಗೆ ₹ 50 ಸಾವಿರ ದಂಡ ವಿಧಿಸಿರುವ ನ್ಯಾಯಪೀಠ, ಈ ಹಣವನ್ನು ಪತ್ನಿಗೆ ನೀಡುವಂತೆ ನಿರ್ದೇಶಿಸಿದೆ.

'ಪತಿ ತನ್ನ ಪತ್ನಿಯನ್ನು ಮಾನಸಿಕ ವೈದ್ಯರಿಂದ ಪರೀಕ್ಷೆಗೆ ಒಳಪಡಿಸಬೇಕು ಎಂದು ಅರ್ಜಿ ಸಲ್ಲಿಸಿದ ತಕ್ಷಣವೇ ಅದನ್ನು ಪರಿಗಣಿಸಲಾಗದು. ಮೇಲ್ನೋಟಕ್ಕೇ ಈ ಆರೋಪವನ್ನು ಪುಷ್ಟೀಕರಿಸುವಂತಹ ಬಲವಾದ ಸಾಕ್ಷ್ಯಗಳು ಮತ್ತು ಆಧಾರಗಳು ಇರಬೇಕಾಗುತ್ತದೆ' ಎಂದು ನ್ಯಾಯಪೀಠ ಹೇಳಿದೆ.

ಪ್ರಕರಣವೇನು?: ಪ್ರಕರಣದ ದಂಪತಿ 2020ರ ನವೆಂಬರ್ 26ರಂದು ಮದುವೆಯಾಗಿದ್ದರು. ಇಬ್ಬರ ಮಧ್ಯೆ ಆರಂಭವಾದ ಮನಸ್ತಾಪ ಪೊಲೀಸ್ ಠಾಣೆ, ಕೋರ್ಟ್ ಮೆಟ್ಟಿಲೇರಿತ್ತು.

'ಪತ್ನಿ 2021ರ ಜನವರಿ 28ರಂದು ತವರಿಗೆ ಹೋದವಳು ವಾಪಸ್ ಬಂದಿಲ್ಲ' ಎಂದು ಪತಿ ಆರೋಪಿಸಿದ್ದರು. ಇದಕ್ಕೆ ಪ್ರತಿಯಾಗಿ ಪತ್ನಿ ಪತಿಯ ವಿರುದ್ಧ ದೌರ್ಜನ್ಯ ಮತ್ತು ವರದಕ್ಷಿಣೆ ನಿಷೇಧ ಕಾಯ್ದೆ-1961ರ ಕಲಂ 3 ಮತ್ತು 4ರಡಿ 2022ರ ಏಪ್ರಿಲ್ 14ರಂದು ಕೆ.ಪಿ. ಅಗ್ರಹಾರ ಪೊಲೀಸ್ ಠಾಣೆಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲಿಸಿದ್ದರು. ತನಿಖೆ ನಡೆಸಿದ್ದ ಪೊಲೀಸರು ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ಇದರ ನಂತರ ಪತಿ, ಮಾನಸಿಕ ಕ್ರೌರ್ಯದ ಆಧಾರದಡಿ ವಿವಾಹ ರದ್ದುಗೊಳಿಸುವಂತೆ ಕೋರಿ ಕೌಟುಂಬಿಕ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದರು. ಈ ಅರ್ಜಿ ಬಾಕಿ ಇರುವಾಗಲೇ 'ನನ್ನ ಹೆಂಡತಿಯ ಮಾನಸಿಕ ಸ್ಥಿತಿ ಸರಿ ಇಲ್ಲ. ಹೀಗಾಗಿ, ಆಕೆಯನ್ನು ನಿಮ್ಹಾನ್ಸ್ ವೈದ್ಯರಿಂದ ಪರೀಕ್ಷೆಗೆ ಒಳಪಡಿಸಲು ನಿರ್ದೇಶಿಸಬೇಕು' ಎಂದು ಕೋರಿ ಮತ್ತೊಂದು ಅರ್ಜಿ ಸಲ್ಲಿಸಿದ್ದರು.

'ಆಕೆಯನ್ನು ವಿಕ್ಟೋರಿಯಾ ಆಸ್ಪತ್ರೆಯ ಹೊರರೋಗಿಗಳ ವಿಭಾಗದಲ್ಲಿ ತೋರಿಸಲಾಗಿತ್ತು. ಆಗ ವೈದ್ಯರು ಆಕೆಯ ಮಾನಸಿಕ ಸ್ಥಿತಿ 11 ವರ್ಷ 8 ತಿಂಗಳ ಬಾಲಕಿಯ ಹಂತದ್ದಿದೆ. ಆಕೆಯ ಮನ:ಸ್ಥಿತಿ ಸರಿ ಇಲ್ಲ ಎಂದು ಹೇಳಿದ್ದಾರೆ. ಹೀಗಾಗಿ ಮದುವೆಯನ್ನು ಅನೂರ್ಜಿತಗೊಳಿಸಬೇಕು' ಎಂದು ಮನವಿ ಮಾಡಿದ್ದರು.

ಇದಕ್ಕೆ ಪ್ರತಿಯಾಗಿ ಪತ್ನಿ, 'ನಾನು ಸಂಗೀತಗಾರ್ತಿ, ಶಿಕ್ಷಕಿ ಮತ್ತು ಸರ್ಕಾರಿ ಮಹಿಳಾ ಕಾಲೇಜಿನಲ್ಲಿ ಶಿಕ್ಷಣ ಮುಂದುವರಿಸುತ್ತಿದ್ದೇನೆ. ನಾನು ಹಲವು ತಾಂತ್ರಿಕ ಪರೀಕ್ಷೆಗಳನ್ನು ಪಾಸು ಮಾಡಿದ್ದೇನೆ' ಎಂದು ದಾಖಲೆಗಳ ಸಹಿತ ನ್ಯಾಯಾಲಯಕ್ಕೆ ವಿವರಣೆ ನೀಡಿದ್ದರು.

ಪತಿಯ ಅರ್ಜಿ ವಿಚಾರಣೆ ನಡೆಸಿದ ನ್ಯಾಯಪೀಠ, 'ವಿಕ್ಟೋರಿಯಾ ಆಸ್ಪತ್ರೆಯ ವೈದ್ಯರ ಹೇಳಿಕೆ ಕೇವಲ ಊಹೆ ಎನಿಸುತ್ತದೆ. ಏಕೆಂದರೆ, ಪತ್ನಿ ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲಿಸಿದರೆ ಆಕೆ ಪ್ರತಿಭಾವಂತೆ ಎಂಬುದು ವೇದ್ಯವಾಗುತ್ತದೆ. ಎಲ್ಲ ಅಂಶಗಳನ್ನು ಪರಿಶೀಲಿಸಿದರೆ ವಿವಾಹವನ್ನು ಅನೂರ್ಜಿತಗೊಳಿಸಲು ನ್ಯಾಯಾಲಯದಲ್ಲಿ ತನ್ನ ಪರ ಸಾಕ್ಷ್ಯ ಹೆಣೆಯಲು ಪತಿಯು ವೇದಿಕೆ ಸಿದ್ಧಪಡಿಸುತ್ತಿರುವುದು ಕಂಡು ಬರುತ್ತದೆ. ಆದ್ದರಿಂದ ಈ ಅರ್ಜಿಯನ್ನು ಪರಿಗಣಿಸಲಾಗದು' ಎಂದು ಆದೇಶದಲ್ಲಿ ವಿವರಿಸಿದೆ.

150 ಟ್ರ್ಯಾಕ್ಟರ್ ಲೋಡುಗಳಷ್ಟು ತ್ಯಾಜ್ಯ ವಿಲೇವಾರಿ

ಮಾದಪ್ಪನ ಕ್ಷೇತ್ರ, ದಾರಿ ಈಗ ಸ್ವಚ್ಛ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಪ್ರಾಧಿಕಾರದ 190 ನೌಕರರು ಭಾಗಿ, ಮೂರು ದಿನಗಳಿಂದ ಕೆಲಸ
- ಭಕ್ತರ ಸಹಕಾರ ಕೋರಿದ ಕಾರ್ಯದರ್ಶಿ
- ಶಿವರಾತ್ರಿ ಜಾತ್ರೆ ಮುಕ್ತಾಯದ ನಂತರ ಸ್ವಚ್ಛತಾ ಕಾರ್ಯ

ಮಹದೇಶ್ವರ ಬೆಟ್ಟ: ಶಿವರಾತ್ರಿ ಜಾತ್ರೆ ಮುಕ್ತಾಯದ ನಂತರ ಮಹದೇಶ್ವರ ಬೆಟ್ಟ ವ್ಯಾಪ್ತಿ ಹಾಗೂ ಬೆಟ್ಟದ ಸಂಪರ್ಕ ರಸ್ತೆಗಳಲ್ಲಿ ಬಿದ್ದಿದ್ದ ಕಸ ತೆರವು ಕಾರ್ಯ ಪೂರ್ಣಗೊಂಡಿದ್ದು, 150 ಟ್ರ್ಯಾಕ್ಟರ್ ಲೋಡು ಕಸವನ್ನು ವಿಲೇವಾರಿ ಮಾಡಲಾಗಿದೆ.

ಮಲೆ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ದಿನಗೂಲಿ ನೌಕರರು ಸೇರಿದಂತೆ 190 ಮಂದಿ ಮೂರು ದಿನಗಳ ಕಾಲ ಸ್ವಚ್ಛತಾ ಕಾರ್ಯ ಕೈಗೊಂಡಿದ್ದಾರೆ. ತಾಳ ಬೆಟ್ಟದಿಂದ ಮಹದೇಶ್ವರ ಬೆಟ್ಟ ರಸ್ತೆ, ಪಾಲಾರ್ ರಸ್ತೆ ಮತ್ತು ಬೆಟ್ಟದಲ್ಲಿ ತ್ಯಾಜ್ಯ ಸಂಗ್ರಹಿಸಿ ವಿಲೇವಾರಿ ಮಾಡಲಾಗಿದೆ.

ಇದೇ 7ರಿಂದ 11ರವರೆಗೆ ನಡೆದಿದ್ದ ಶಿವರಾತ್ರಿ ಜಾತ್ರೆ ಮಹೋತ್ಸವದಲ್ಲಿ ಲಕ್ಷಾಂತರ ಭಕ್ತರು ಪಾಲ್ಗೊಂಡಿದ್ದರು. ಪಾದಯಾತ್ರೆ ಮೂಲಕ ಲಕ್ಷಕ್ಕೂ ಹೆಚ್ಚು ಭಕ್ತರು ಬಂದಿದ್ದರು. ದಾರಿ ಮಧ್ಯೆ ನೀರಿನ ಬಾಟಲಿ, ಆಹಾರ ಪೊಟ್ಟಣ, ಪಾದರಕ್ಷೆ ಸೇರಿದಂತೆ ಇನ್ನಿತರ ತ್ಯಾಜ್ಯ ಎಸೆಯಲಾಗಿತ್ತು. ಜಾತ್ರೆಯ ಸಂದರ್ಭದಲ್ಲೇ ಹಲವೆಡೆ ಪ್ರಾಧಿಕಾರದ ಸಿಬ್ಬಂದಿ ಕಸ ತೆರವುಗೊಳಿಸಿದ್ದರು.

ಜಾತ್ರೆ ಬಳಿಕ ಉಳಿದ ಕಸ ತೆರವುಗೊಳಿಸಲಾಗಿದೆ. ಪ್ರಾಧಿಕಾರದ ಕಾರ್ಯದರ್ಶಿ ರಘು ಅವರು ಖುದ್ದಾಗಿ ಮೇಲ್ವಿಚಾರಣೆ ನಡೆಸಿದ್ದಾರೆ.

ತಾಳ ಬೆಟ್ಟದಿಂದ ಮಹದೇಶ್ವರ ಬೆಟ್ಟದವರೆಗೆ ಸ್ವಚ್ಛತಾ ಕಾರ್ಯದಲ್ಲಿ ಪಾಲ್ಗೊಂಡಿದ್ದ ನೌಕರರಿಗೆ ರಸ್ತೆಯ ಮಧ್ಯೆಯೇ ಅಲ್ಲಲ್ಲಿ ಊಟ ಹಾಗೂ ಚಹಾದ ವ್ಯವಸ್ಥೆ ಮಾಡಲಾಗಿತ್ತು.

ಕಡಿಮೆಯಾದ ಕಾಡು ಹಂದಿಗಳ ಹಾವಳಿ: ಪ್ರತಿದಿನ ಸಾವಿರಾರು ಭಕ್ತರು ಭೇಟಿ ನೀಡುತ್ತಿರುವುದರಿಂದ, ಭಕ್ತರು ಹಾಗೂ ಸ್ಥಳೀಯರು ಬಿಸಾಡುತಿದ್ದ ಕಸ ಕಡ್ಡಿಗಳನ್ನು ಸರಿಯಾಗಿ ವಿಲೇವಾರಿ ಮಾಡದೆ ಕಾಡುಹಂದಿಗಳು ದೇವಾಲಯದ ಆವರಣ ಹಾಗೂ ಸುತ್ತಮುತ್ತಲ ಪ್ರದೇಶಗಳಿಗೆ ಲಗ್ಗೆ ಇಟ್ಟು ತ್ಯಾಜ್ಯದ ರಾಶಿ ಇದ್ದ ಪ್ರದೇಶಗಳನ್ನು ಮತ್ತಷ್ಟು ಹದಗೆಡಿಸುತಿದ್ದವು.

ದೇವಾಲಯದಲ್ಲಿ ರಾತ್ರಿ ವೇಳೆ ತಂದಿದ್ದ ಭಕ್ತರ ಮೇಲೆ ದಾಳಿ ಮಾಡಿದ ನಿದರ್ಶನಗಳೂ ಈ ಹಿಂದೆ ನಡೆದಿದ್ದವು.

'ಬೆಟ್ಟದ ಸುತ್ತಮುತ್ತ ಕೆಲವು ದಿನಗಳಿಂದ ಸ್ವಚ್ಛತೆಗೆ ಒತ್ತು ನೀಡುತ್ತಿರುವುದರಿಂದ ಹಂದಿಗಳ ಹಾವಳಿ ಕಡಿಮೆಯಾಗಿದೆ. ಇದೇ ರೀತಿ ಸ್ವಚ್ಛತೆ ಕಾಪಾಡಿದರೆ ಹಂದಿಗಳ ಹಾವಳಿಯನ್ನು ಸಂಪೂರ್ಣವಾಗಿ ತಪ್ಪಿಸಬಹುದು' ಎಂದು ಸ್ಥಳೀಯ ನಿವಾಸಿ ಮುರುಗೇಶ್ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

ಸ್ವಚ್ಛತಾ ಕಾರ್ಯದ ನಡುವೆ ವಿಶ್ರಾಂತಿ ಪಡೆದ ನೌಕರರನ್ನು ಪ್ರಾಧಿಕಾರದ ಕಾರ್ಯದರ್ಶಿ ರಘು ಅವರು ಮಾತನಾಡಿಸಿದರು

'ಭಕ್ತರ ಸಹಕಾರ ಬೇಕು'

ಈ ಬಗ್ಗೆ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಪ್ರಾಧಿಕಾರದ ಕಾರ್ಯದರ್ಶಿ ರಘು, 'ಕ್ಷೇತ್ರಕ್ಕೆ ಮಹಿಳೆಯರು, ಮಕ್ಕಳು ತಾಯಂದಿರು, ವೃದ್ಧರು ಸೇರಿದಂತೆ ಎಲ್ಲ ವಯೋಮಾನದ ಭಕ್ತರು ಭೇಟಿ ನೀಡುತ್ತಾರೆ. ಕ್ಷೇತ್ರದ ಆವರಣ ಸ್ವಚ್ಛವಾಗಿದ್ದರೆ ದೂರದ ಊರುಗಳಿಂದ ಬರುವ ಭಕ್ತರಿಗೆ ಮುಜುಗರವಾಗುವುದಿಲ್ಲ. ಕಸವನ್ನು ಎಲ್ಲೆಂದರಲ್ಲಿ ಹಾಕಬಾರದು ಎಂಬ ಮನೋಭಾವನೆಯೂ ಬರುತ್ತದೆ. ನೈರ್ಮಲ್ಯ ವಾತಾವರಣದಿಂದ ಕಾಯಿಲೆಗಳು ಬರುವುದನ್ನೂ ತಡೆಯಬಹುದು' ಎಂದರು.

'ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದ್ದು, ಭಕ್ತರು ಕೂಡ ಸಹಕರಿಸಬೇಕು. ಪ್ಲಾಸ್ಟಿಕ್ ವಸ್ತುಗಳನ್ನು ಬಳಸಬಾರದು ಹಾಗೂ ಕಸ ಎಲ್ಲೆಂದರಲ್ಲಿ ಎಸೆಯದೆ ಬುಟ್ಟಿಗಳಲ್ಲಿ ಹಾಕಬೇಕು. ಎಲ್ಲರೂ ಸಹಕರಿಸಿದರೆ, ಬೆಟ್ಟವನ್ನು ಪ್ಲಾಸ್ಟಿಕ್ ಮುಕ್ತ ಸ್ವಚ್ಛ ಧಾರ್ಮಿಕ ಯಾತ್ರಾ ಸ್ಥಳವನ್ನಾಗಿ ಮಾಡಬಹುದು' ಎಂದು ಹೇಳಿದರು.

ಶೆಟ್ಟರ್ ಟಿಕೆಟ್‌ಗೆ ಸಂತೋಷ್ ಅಡ್ಡಿ: ಆರೋಪ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಬೆಳಗಾವಿ ಲೋಕಸಭಾ ಕ್ಷೇತ್ರದಲ್ಲಿ ಬಿಜೆಪಿ ಮುಖಂಡ ಜಗದೀಶ ಶೆಟ್ಟರ್ ಅವರಿಗೆ ಟಿಕೆಟ್ ತಪ್ಪಿಸುವ ಹುನ್ನಾರದ ಹಿಂದೆ ಆರ್‌ಎಸ್‌ಎಸ್ ಮುಖಂಡ ಬಿ.ಎಲ್. ಸಂತೋಷ್ ಅವರ ಕುತಂತ್ರ ಇದೆ' ಎಂದು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಧಾರವಾಡ ಜಿಲ್ಲಾ ಘಟಕದ ಉಪಾಧ್ಯಕ್ಷ ಪ್ರೊ.ವಿ.ಸಿ.ಸವಡಿ ಆರೋಪಿಸಿದರು.

'ಈ ಹಿಂದಿನ ವಿಧಾನಸಭಾ ಚುನಾವಣೆಯಲ್ಲೂ ಶೆಟ್ಟರ್ ಅವರಿಗೆ ಟಿಕೆಟ್ ತಪ್ಪಿಸಿದ್ದ ಸಂತೋಷ್ ಅವರು ಲೋಕಸಭಾ ಚುನಾವಣೆಯಲ್ಲೂ ಅಡ್ಡಿಯಾಗಿದ್ದಾರೆ. ಒಂದು ವೇಳೆ ಟಿಕೆಟ್ ನೀಡದಿದ್ದರೆ, ಅದರ ಪರಿಣಾಮ ಚುನಾವಣೆಯಲ್ಲಿ ಗೊತ್ತಾಗಲಿದೆ. ಧಾರವಾಡ ಲೋಕಸಭಾ ಕ್ಷೇತ್ರದ ಫಲಿತಾಂಶದ ಮೇಲೂ ಪರಿಣಾಮ ಬೀರುತ್ತದೆ' ಎಂದು ಅವರು ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಧಾರವಾಡ, ಹಾವೇರಿ ಕ್ಷೇತ್ರದ ಟಿಕೆಟ್ ಕೇಳಿದರೂ ಶೆಟ್ಟರ್ ಅವರಿಗೆ ನೀಡಲಿಲ್ಲ. ಬೆಳಗಾವಿ ಕ್ಷೇತ್ರವನ್ನೂ ತಪ್ಪಿಸುವ ಷಡ್ಯಂತ್ರ ನಡೆದಿದೆ. ಈ ಹಿಂದೆ ಅವರನ್ನು ಕಡೆಗಣಿಸಿದ್ದರಿಂದ ಏನಾಯಿತು ಎಂಬುದು ಎಲ್ಲರಿಗೂ ಗೊತ್ತಿದೆ' ಎಂದರು.

'ಧಾರವಾಡ ಲೋಕಸಭಾ ಕ್ಷೇತ್ರದಲ್ಲಿ ಲಿಂಗಾಯತರ ಬೆಂಬಲದಿಂದ ಪ್ರಲ್ಹಾದ ಜೋಶಿ ನಾಲ್ಕು ಬಾರಿ ಸಂಸದರಾಗಿ ಆಯ್ಕೆಯಾಗಿದ್ದಾರೆ. ಈಗ ಅವರೇ ಮುಂದೆ ನಿಂತು, ಶೆಟ್ಟರ್‌ಗೆ ಟಿಕೆಟ್ ಕೊಡಿಸಬೇಕು' ಎಂದು ಅವರು ಒತ್ತಾಯಿಸಿದರು.

'ಉತ್ತರ ಕರ್ನಾಟಕ ಭಾಗದಲ್ಲಿ ಬಿಜೆಪಿ ಕಟ್ಟಿ ಬೆಳೆಸುವಲ್ಲಿ ಶೆಟ್ಟರ್ ಅವರು ವಿಶೇಷ ಕೊಡುಗೆ ನೀಡಿದ್ದಾರೆ. ಶೆಟ್ಟರ್‌ಗೆ ಅನ್ಯಾಯವಾಗದಂತೆ ನೋಡಿಕೊಳ್ಳಬೇಕು. ಲಿಂಗಾಯತರು ಬೆನ್ನೆಲುಬಾಗಿ ನಿಂತಿದ್ದರಿಂದ ಬಿಜೆಪಿ ಅಧಿಕಾರಕ್ಕೆ ಬರಲು ಸಾಧ್ಯವಾಗಿದೆ. ಈಗ ಸಮಾಜದವರನ್ನು ಕಡೆಗಣಿಸಬಾರದು. ಒಂದು ವೇಳೆ ಟಿಕೆಟ್ ನೀಡದಿದ್ದರೆ ಸಮಾಜದವರು ಬೀದಿಗಿಳಿದು ಹೋರಾಟ ಮಾಡಬೇಕಾಗುತ್ತದೆ' ಎಂದು ಹೇಳಿದರು.

ರಾಜಶೇಖರ ಉಪ್ಪಿನ, ಶೇಖರ ಕವಳಿ, ಶಿವಕಲ್ಲಪ್ಪ ಉಣಕಲ್ಲ, ಪರಮೇಶ ನಿಗದಿ ಇದ್ದರು.

ಕಟ್ಟಡ ಕುಸಿತ, 9 ಮಂದಿ ಸಾವು

ಕೋಲ್ಕತ್ತ (ಪಿಟಿಐ): ಕೋಲ್ಕತ್ತದ ಗಾರ್ಡನ್ ರೀಚ್ ಪ್ರದೇಶದಲ್ಲಿ ನಿರ್ಮಾಣ ಹಂತದಲ್ಲಿದ್ದ ಐದು ಮಹಡಿಯ ಕಟ್ಟಡವೊಂದು ಕುಸಿದ ಪರಿಣಾಮ ಒಂಬತ್ತು ಮಂದಿ ಸಾವಿಗೀಡಾಗಿದ್ದು, ಹಲವರು ಗಾಯಗೊಂಡಿದ್ದಾರೆ ಎಂದು ಪೊಲೀಸರು ಸೋಮವಾರ ತಿಳಿಸಿದ್ದಾರೆ.

'ಅವಶೇಷಗಳಡಿ ಇನ್ನೂ ಕೆಲವರು ಸಿಕ್ಕಿಹಾಕಿಕೊಂಡಿದ್ದು, ಅವರಲ್ಲಿ ಒಬ್ಬ ಮಾತ್ರ ಜೀವಂತವಾಗಿರುವ ಹಾಗೆ ಕಾಣುತ್ತಿದ್ದು, ಸಾವಿನ ಸಂಖ್ಯೆ ಹೆಚ್ಚಳವಾಗುವ ಸಾಧ್ಯತೆಗಳಿವೆ' ಎಂದು ರಕ್ಷಣಾ ಕಾರ್ಯಾಚರಣೆಯಲ್ಲಿ ಭಾಗಿಯಾಗಿರುವ ಅಗ್ನಿಶಾಮಕದಳದ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

'ಸ್ಥಳದಲ್ಲಿ ರಕ್ಷಣಾ ಕಾರ್ಯಾಚರಣೆಯನ್ನು ಮುಂದುವರಿಸಲಾಗಿದೆ. ಕುಸಿದು ಬಿದ್ದಿರುವ ಕಟ್ಟಡವನ್ನು ಅಕ್ರಮವಾಗಿ ನಿರ್ಮಿಸಲಾಗುತ್ತಿತ್ತು. ಕಟ್ಟಡದ ಪ್ರವರ್ತಕನನ್ನು ಬಂಧಿಸಲಾಗಿದ್ದು, ಕಾನೂನು ಪ್ರಕಾರ ಕ್ರಮ ಕೈಗೊಳ್ಳಲಾಗುವುದು' ಎಂದು ಕೋಲ್ಕತ್ತ ಮೇಯರ್ ಫಿರ್ಹಾದ್ ಹಕೀಮ್ ತಿಳಿಸಿದ್ದಾರೆ.

ಸ್ಥಳಕ್ಕೆ ಭೇಟಿ ನೀಡಿದ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು, 'ಅಕ್ರಮವಾಗಿ ಕಟ್ಟಡ ನಿರ್ಮಿಸುವವರ ಮೇಲೆ ಕ್ರಮ ಕೈಗೊಳ್ಳಲಾಗುವುದು' ಎಂದು ಹೇಳಿದರು..

ಕಟ್ಟಡ ಕುಸಿದುಬಿದ್ದಿರುವ ಸ್ಥಳದಲ್ಲಿ ರಕ್ಷಣಾ ಕಾರ್ಯಾಚರಣೆ ನಡೆಸುತ್ತಿರುವ ಎನ್‌ಡಿಆರ್‌ಎಫ್ ಮತ್ತು ಅಗ್ನಿಶಾಮಕ ಸಿಬ್ಬಂದಿ

ರಾಜ್ಯಮಟ್ಟದ ಭಜನಾ ಸ್ಪರ್ಧೆ ಏ.10ರಿಂದ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಸಿದ್ಧಾರೂಢ ಸ್ವಾಮೀಜಿ ಜಯಂತ್ಯುತ್ಸವದ ಅಂಗವಾಗಿ ಏಪ್ರಿಲ್ 10ರಿಂದ 15ರವರೆಗೆ ರಾಜ್ಯಮಟ್ಟದ 9ನೇ ವರ್ಷದ ಭಜನಾ ಸ್ಪರ್ಧೆ ನಡೆಯಲಿದ್ದು, ಹೆಸರು ನೋಂದಾಯಿಸಲು ಏಪ್ರಿಲ್ 10 ಕೊನೆಯ ದಿನವಾಗಿದೆ' ಎಂದು ಭಜನಾ ಸ್ಪರ್ಧೆಯ ಅಧ್ಯಕ್ಷ ಹಾಗೂ ಮಠದ ಧರ್ಮದರ್ಶಿ ಶಾಮಾನಂದ ಪೂಜೇರಿ ಅವರು ತಿಳಿಸಿದರು.

'ವಿಜೇತರಿಗೆ ಪ್ರಥಮ ಬಹುಮಾನ ₹1 ಲಕ್ಷ, ದ್ವಿತೀಯ ₹80 ಸಾವಿರ, ತೃತೀಯ ₹70 ಸಾವಿರ ಹಾಗೂ ಹತ್ತು ತಂಡಗಳಿಗೆ ₹9 ಸಾವಿರ ಸಮಾಧಾನಕರ ಬಹುಮಾನ ನೀಡಲಾಗುವುದು. 16 ವರ್ಷದ ಒಳಗಿನ ಬಾಲಕ, ಬಾಲಕಿಯರ ತಂಡಕ್ಕೆ ₹10 ಸಾವಿರ, ಪ್ರತಿಭಾ ಪುರಸ್ಕಾರ ಹಾಗೂ ಮಹಿಳಾ ಭಜನಾ ತಂಡಕ್ಕೆ ₹10 ಸಾವಿರ ಬಹುಮಾನ ನೀಡಲಾಗುವುದು' ಎಂದು ಅವರು ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಇಬ್ಬರು ಉತ್ತಮ ಹಾಡುಗಾರರಿಗೆ ತಲಾ ₹3 ಸಾವಿರ, ಉತ್ತಮ ಹಾರ್ಮೋನಿಯಂ ವಾದಕರಿಗೆ ತಲಾ ₹3 ಸಾವಿರ, ಉತ್ತಮ ತಬಲಾ ವಾದಕರಿಗೆ ₹3 ಸಾವಿರ, ಉತ್ತಮ ತಾಳ ಹಾಗೂ ಧಮಡಿ ವಾದಕರಿಗೆ ತಲಾ ₹3 ಸಾವಿರ ಬಹುಮಾನ ನೀಡಲಾಗುವುದು' ಎಂದು ಹೇಳಿದರು. ಹೆಚ್ಚಿನ ಮಾಹಿತಿಗೆ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ: 9880169881, 8095882033.

ಮೆಟ್ರೊ ರೈಲು ಸಂಚಾರ ಪರೀಕ್ಷೆಗೆ ಬೇಕು ಆರು ತಿಂಗಳು • ವರ್ಷಾಂತ್ಯಕ್ಕೆ ಸಂಚಾರದ ನಿರೀಕ್ಷೆ

ಹಳದಿ ಮಾರ್ಗ: ಸಂಚಾರ ಪರೀಕ್ಷೆ ಶುರು

• ಬಾಲಕೃಷ್ಣ ಪಿ.ಎಚ್.

ಹೆಬ್ಬಗೋಡು ಮೆಟ್ರೊ ಡಿಪೊದಲ್ಲಿ ಚಾಲಕ ರಹಿತ ತಂತ್ರಜ್ಞಾನದ ಪ್ರೊಟೋಟೈಪ್ (ಮೂಲ ಮಾದರಿ) ರೈಲು

ಬೆಂಗಳೂರು: ನಮ್ಮ ಮೆಟ್ರೊ ಹಳದಿ ಮಾರ್ಗದಲ್ಲಿ ರೈಲು ಸಂಚಾರಕ್ಕಾಗಿ ವಿವಿಧ ಪರೀಕ್ಷೆಗಳು ಆರಂಭಗೊಂಡಿವೆ. ಈ ಮಾರ್ಗದಲ್ಲಿ 'ಚಾಲಕರಹಿತ ತಂತ್ರಜ್ಞಾನ'ದ ರೈಲು ಸಂಚರಿಸುವುದರಿಂದ ಪರೀಕ್ಷೆಗಳೇ ಸುಮಾರು 6 ತಿಂಗಳು ನಡೆಯಲಿವೆ.

ಎಂಜಿನ್ ಹೊಂದಿರುವ ಎರಡು ಬೋಗಿಗಳು ಸೇರಿದಂತೆ 6 ಬೋಗಿಗಳ ಒಂದು ರೈಲು ಈಗಾಗಲೇ ಹೆಬ್ಬಗೋಡಿ ಡಿಪೊಗೆ ಬಂದಿದ್ದು, ತಂತ್ರಜ್ಞರು, ಎಂಜಿನಿಯರ್‌ಗಳು ಪ್ರಾಥಮಿಕ ಹಂತದ ಪರೀಕ್ಷೆಗಳನ್ನು ನಡೆಸುತ್ತಿದ್ದಾರೆ. ಹೆಬ್ಬಗೋಡಿಯಿಂದ ಬೊಮ್ಮಸಂದ್ರವರೆಗೆ 25 ಕಿ.ಮೀ. ಕಾರ್ಯಾಚರಣೆ ನಡೆಸಿ ತಾಂತ್ರಿಕ ದೋಷಗಳೇನಿವೆ ಎಂದು ಪರಿಶೀಲಿಸಲಾಗುತ್ತಿದೆ.

'ಆರು ಕೋಚ್‌ಗಳನ್ನು ಜೋಡಿಸಿ ಸ್ಟ್ಯಾಟಿಕ್ ಮತ್ತು ಎಲೆಕ್ಟ್ರಿಕಲ್ ಸರ್ಕಿಟ್ ಪರೀಕ್ಷೆ ನಡೆಸಲಾಗಿದೆ. ಈಗ ಹಳಿಗೆ ಇಳಿಸಿ ಪರೀಕ್ಷೆಗಳನ್ನು ನಡೆಸಲಾಗುತ್ತಿದೆ. ಚಾಲಕ ರಹಿತ ತಂತ್ರಜ್ಞಾನದ ರೈಲು ಇದಾದರೂ, ಪರೀಕ್ಷಾ ಅವಧಿಯಲ್ಲಿ ಚಾಲನಾ ಪರಿಣತರು ಜತೆಗಿರುತ್ತಾರೆ' ಎಂದು ಬಿಎಂಆರ್‌ಸಿಎಲ್ ಸಾರ್ವಜನಿಕ ಸಂಪರ್ಕಾಧಿಕಾರಿ ಮಾಹಿತಿ ನೀಡಿದ್ದಾರೆ.

ಸದ್ಯಕ್ಕೆ ಒಂದೇ ರೈಲು ಬಂದಿರುವುದರಿಂದ ಪ್ರಾಥಮಿಕ ಹಂತದ ಕೆಲವು ಪರೀಕ್ಷೆಗಳನ್ನಷ್ಟೇ ಆರಂಭಿಸಲಾಗಿದೆ. ಏಪ್ರಿಲ್‌ನಲ್ಲಿ ಚೀನಾದಿಂದ ಇನ್ನೊಂದು ಸೆಟ್ (6 ಬೋಗಿ) ಬರಲಿದೆ. ಮೂರನೇ ಸೆಟ್ ಪಶ್ಚಿಮ ಬಂಗಾಳದ ಟಿಟಾಗಢ್‌ನಿಂದ ಬರಲಿದೆ. ಮೂರು ಸೆಟ್‌ಗಳಾದ ಮೇಲೆ ಮುಖ್ಯಪರೀಕ್ಷೆಗಳು ಆರಂಭವಾಗುತ್ತವೆ. ನಾಲ್ಕು ತಿಂಗಳು 37 ವಿವಿಧ ರೀತಿಯ ಪರೀಕ್ಷೆಗಳು ನಡೆಯಲಿವೆ. ಈ ಪರೀಕ್ಷೆಗಳು ಯಶಸ್ವಿಯಾದ ಬಳಿಕ ಸಿಗ್ನಲಿಂಗ್, ದೂರಸಂಪರ್ಕ, ವಿದ್ಯುತ್ ಸರಬರಾಜು ವ್ಯವಸ್ಥೆಗಳೊಂದಿಗೆ ಸಿಸ್ಟಂ ಏಕೀಕರಣಕ್ಕೆ ಒಂದೂವರೆ ತಿಂಗಳು ಬೇಕಾಗುತ್ತದೆ ಎಂದು ಬಿಎಂಆರ್‌ಸಿಎಲ್ ರೋಲಿಂಗ್ ಸ್ಟಾಕ್ ಮ್ಯಾನೇಜರ್ ವಿವರ ನೀಡಿದ್ದಾರೆ.

ಈ ಎಲ್ಲ ಪರೀಕ್ಷೆಗಳು ಪೂರ್ಣಗೊಂಡ ಬಳಿಕ ಗುಣಮಟ್ಟ ತಪಾಸಣಾ ಸಂಸ್ಥೆಗಳು ಸುರಕ್ಷತಾ ಪರೀಕ್ಷೆ ನಡೆಸಿ ವರದಿ ನೀಡಲಿವೆ. ಈ ವರದಿ ಸಕಾರಾತ್ಮಕವಾಗಿದ್ದರೆ ರೈಲ್ವೆ ಮಂಡಳಿಯು ಮೆಟ್ರೊ ರೈಲು ಆರಂಭಿಸಲು ಅನುಮತಿ ನೀಡುತ್ತದೆ. ಎಲ್ಲ ಪ್ರಕ್ರಿಯೆ ಮುಗಿದು ವರ್ಷಾಂತ್ಯಕ್ಕೆ ರೈಲು ಸಂಚಾರ ಆರಂಭಗೊಳ್ಳಬಹುದು ಎಂದು ಅಧಿಕಾರಿಗಳು ವಿಶ್ವಾಸ ವ್ಯಕ್ತಪಡಿಸಿದ್ದಾರೆ.


ಸೆಂಟ್ರಲ್ ಸಿಲ್ಕ್ ಬೋರ್ಡ್ ಜಂಕ್ಷನ್‌ನಲ್ಲಿ ನಡೆಯುತ್ತಿರುವ ಡಬಲ್ ಡೆಕ್ಕರ್ ಕಾಮಗಾರಿ

ಡಬಲ್ ಡೆಕ್ಕರ್ ಬಹುತೇಕ ಪೂರ್ಣ: ಆರ್.ವಿ.ರಸ್ತೆಯಿಂದ ಬೊಮ್ಮಸಂದ್ರ ಮಾರ್ಗದ (ಹಳದಿ ಮಾರ್ಗ) ಕಾಮಗಾರಿ 2017ರಲ್ಲಿ ಆರಂಭಗೊಂಡಿತ್ತು. ಮೆಟ್ರೊ ಹಸಿರು, ಗುಲಾಬಿ ಮತ್ತು ನೀಲಿ ಮಾರ್ಗಗಳೊಂದಿಗೆ ಸಂಪರ್ಕಿಸುವ ವಿಶೇಷ ಮಾರ್ಗವಾದ ಇದರಲ್ಲಿ ಡಬಲ್ ಡೆಕ್ಕರ್ ಕೂಡ ಇರುವುದು ಹೆಚ್ಚು ಆಕರ್ಷಣೆಗೆ ಕಾರಣವಾಗಿದೆ.

ರಾಗಿಗುಡ್ಡದಿಂದ ಸೆಂಟ್ರಲ್ ಸಿಲ್ಕ್ ಬೋರ್ಡ್ ಜಂಕ್ಷನ್‌ವರೆಗೆ 3.3 ಕಿ.ಮೀ. ಉದ್ದ ಒಂದೇ ಪಿಲ್ಲರ್‌ಗೆ ರೋಡ್ ಕಂ ರೇಲ್ (ಡಬಲ್ ಡೆಕ್ಕರ್) ಸೇತುವೆ ನಿರ್ಮಿಸಲಾಗಿದೆ. ಅದರ ಕಾಮಗಾರಿ ಬಹುತೇಕ ಪೂರ್ಣಗೊಂಡಿದೆ. ಮೆಟ್ರೊ ರೈಲು ಆರಂಭಗೊಳ್ಳುವ ಹೊತ್ತಿಗೆ ಸೇತುವೆ ವಾಹನಗಳ ಸಂಚಾರಕ್ಕೂ ಮುಕ್ತಗೊಳ್ಳಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನಾಗಸಂದ್ರ–ಮಾದಾವರ ನಿಧಾನ?

ಬೆಂಗಳೂರು-ತುಮಕೂರು ರಸ್ತೆಯ ವಾಹನ ದಟ್ಟಣೆ ಕಡಿಮೆ ಮಾಡಲಿದೆ ಎಂಬ ನಿರೀಕ್ಷೆಯನ್ನು ಇಟ್ಟುಕೊಂಡಿರುವ ನಾಗಸಂದ್ರ-ಮಾದಾವರ ವಿಸ್ತರಿತ ಮಾರ್ಗದಲ್ಲಿ (ಹಸಿರು ಮಾರ್ಗ) ಸಿವಿಲ್ ಕಾಮಗಾರಿ ಪೂರ್ಣಗೊಂಡಿದ್ದರೂ ತಾಂತ್ರಿಕ ಕಾಮಗಾರಿಗಳು ನಿಧಾನಗತಿಯಲ್ಲಿ ಸಾಗುತ್ತಿವೆ.

ಜುಲೈಯಲ್ಲಿ ಈ ಮಾರ್ಗದಲ್ಲಿ ರೈಲು ಸಂಚಾರ ಆರಂಭಿಸುವ ಗುರಿಯನ್ನು ಬಿಎಂಆರ್‌ಸಿಎಲ್ ಇಟ್ಟುಕೊಂಡಿತ್ತು. ಆದರೆ, ಜುಲೈಯಲ್ಲಿ ಆರಂಭಗೊಳ್ಳುವುದು ಅನುಮಾನ ಎಂದು ಸ್ಥಳೀಯರು ಹೇಳುತ್ತಿದ್ದಾರೆ.

'ಹಸಿರು ಮಾರ್ಗದ ರೀಚ್-3 ಕಾಮಗಾರಿ ಇದಾಗಿದ್ದು, ಮಂಜುನಾಥನಗರ, ಚಿಕ್ಕಬಿದರಕಲ್ಲು (ಜಿಂದಾಲ್), ಮಾದವಾರ ಮೆಟ್ರೊ ನಿಲ್ದಾಣವರೆಗೆ 3.7 ಕಿ.ಮೀ. ದೂರ ಹೊಂದಿದೆ. ಸಿವಿಲ್ ಕಾಮಗಾರಿ ಮುಗಿದಿದೆ. ಹಳಿ ಅಳವಡಿಕೆ ಕಾಮಗಾರಿ ಶೇ 77 ಆಗಿದೆ. ನಿಗದಿತ ವೇಗದಲ್ಲಿಯೇ ಕಾಮಗಾರಿಗಳು ಸಾಗುತ್ತಿವೆ. ಆದರೆ, ಈ ಮಾರ್ಗದ ಪರೀಕ್ಷೆಗಳು ಆರ್‌ವಿ ರಸ್ತೆ-ಬೊಮ್ಮಸಂದ್ರ ಮಾರ್ಗದ (ಹಳದಿ ಮಾರ್ಗ) ಪರೀಕ್ಷೆಯ ಸಂದರ್ಭದಲ್ಲಿಯೇ ನಡೆಯುವ ಸಾಧ್ಯತೆ ಇದೆ. ಹಳದಿ ಮಾರ್ಗ ಸಂಚಾರಕ್ಕೆ ಮುಕ್ತಗೊಳ್ಳುವ ಸಮಯದಲ್ಲಿಯೇ ಹಸಿರು ಮಾರ್ಗದ ಈ ವಿಸ್ತರಿತ ಪ್ರದೇಶದಲ್ಲಿಯೂ ಮೆಟ್ರೊ ರೈಲು ಸಂಚಾರ ಆರಂಭಗೊಳ್ಳಲಿದೆ' ಎಂದು ಬಿಎಂಆರ್‌ಸಿಎಲ್ ಸಾರ್ವಜನಿಕ ಸಂಪರ್ಕ ಅಧಿಕಾರಿ ತಿಳಿಸಿದ್ದಾರೆ.

ಉಡುಪಿ– ಚಿಕ್ಕಮಗಳೂರು ಕ್ಷೇತ್ರ: ಸದಾನಂದ ಗೌಡ ಹೆಸರು ಮುನ್ನೆಲೆಗೆ

ಪ್ರಜಾವಾಣಿ ವಾರ್ತೆ

ಸದಾನಂದ ಗೌಡ

ಉಡುಪಿ: ಉಡುಪಿ-ಚಿಕ್ಕಮಗಳೂರು ಲೋಕಸಭಾ ಕ್ಷೇತ್ರಕ್ಕೆ ಕಾಂಗ್ರೆಸ್‌ನಲ್ಲಿ ಟಿಕೆಟ್ ಆಕಾಂಕ್ಷಿಗಳ ಪಟ್ಟಿ ಬೆಳೆಯುತ್ತಿದೆ. ಹಿಂದುಳಿದ ವರ್ಗಗಳ ಆಯೋಗದ ಮಾಜಿ ಅಧ್ಯಕ್ಷ ಜಯಪ್ರಕಾಶ್ ಹೆಗ್ಡೆ, ಚಿಕ್ಕಮಗಳೂರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ. ಅಂಶುಮಂತ್, ಮುಖಂಡ ಸುಧೀರ್ ಕುಮಾರ್ ಮರೋಳಿ ಟಿಕೆಟ್‌ಗೆ ಪೈಪೋಟಿ ನಡೆಸುತ್ತಿರುವ ಮಧ್ಯೆಯೇ ಬೆಂಗಳೂರು ಉತ್ತರ ಕ್ಷೇತ್ರದ ಬಿಜೆಪಿ ಸಂಸದ ಸದಾನಂದ ಗೌಡರ ಹೆಸರು ಸಹ ಸೇರ್ಪಡೆಯಾಗಿದೆ.

ಉಡುಪಿ-ಚಿಕ್ಕಮಗಳೂರು ಅಥವಾ ಮೈಸೂರು-ಕೊಡಗು ಕ್ಷೇತ್ರದಿಂದ ಸದಾನಂದ ಗೌಡರು ಕಾಂಗ್ರೆಸ್ ಅಭ್ಯರ್ಥಿಯಾಗಿ ಕಣಕ್ಕಿಳಿಯುವ ಬಗ್ಗೆ ರಾಜಕೀಯ ವಲಯದಲ್ಲಿ ಚರ್ಚೆ ನಡೆಯುತ್ತಿದೆ.

ಸದಾನಂದ ಗೌಡರು ಉಡುಪಿ-ಚಿಕ್ಕಮಗಳೂರು ಕ್ಷೇತ್ರಕ್ಕೆ ಹೊಸಬರಲ್ಲ. 2009ರ ಲೋಕಸಭಾ ಚುನಾವಣೆ ಯಲ್ಲಿ ಬಿಜೆಪಿಯಿಂದ ಸ್ಪರ್ಧಿಸಿ ಗೆಲುವು ಸಾಧಿಸಿದ್ದರು. ಬಳಿಕ 2011ರಲ್ಲಿ ರಾಜ್ಯದ ಮುಖ್ಯಮಂತ್ರಿ ಹುದ್ದೆಗೇರುವ ಅವಕಾಶ ಬಂದಾಗ ರಾಜೀನಾಮೆ ನೀಡಿದ್ದರು.

ಕೋಟ ಪ್ರಚಾರ ಶುರು: ಬಿಜೆಪಿ ಟಿಕೆಟ್ ಘೋಷಣೆ ಬೆನ್ನಲ್ಲೇ ಕೋಟ ಶ್ರೀನಿವಾಸ ಪೂಜಾರಿ ಚುನಾವಣಾ ಪ್ರಚಾರ ಆರಂಭಿಸಿದ್ದು ಉಡುಪಿ ಹಾಗೂ ಚಿಕ್ಕಮಗಳೂರು ಲೋಕಸಭಾ ಕ್ಷೇತ್ರದ ಹಲವು ಬಿಜೆಪಿ ಮುಖಂಡರನ್ನು ಭೇಟಿಯಾಗಿ ಚರ್ಚೆ ನಡೆಸುತ್ತಿದ್ದಾರೆ.

ಬಿಜೆಪಿಯ ಪ್ರಬಲ ಟಿಕೆಟ್ ಆಕಾಂಕ್ಷಿಯಾಗಿದ್ದ ಪ್ರಮೋದ್ ಮಧ್ವರಾಜ್ ನಿವಾಸಕ್ಕೆ ಭೇಟಿನೀಡಿದ ಕೋಟ ಬೆಂಬಲ ಕೋರಿದರು. ಈ ಸಂದರ್ಭ ಪ್ರಮೋದ್ ಮಧ್ವರಾಜ್ ಕೋಟ ಅವರಿಗೆ ಶಾಲು ಹೊದಿಸಿ ಗೌರವಿಸಿದರು.

ಮಯೂರ ಓದಿ

ಬೈಯಪ್ಪನಹಳ್ಳಿ ಮೆಟ್ರೊ ನಿಲ್ದಾಣ ಪಾರ್ಕಿಂಗ್‌ಗೆ ಬೀಗ

ಬಿಎಂಆರ್‌ಸಿಎಲ್–ಗುತ್ತಿಗೆದಾರರ ನಡುವೆ ತಿಕ್ಕಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಎಂಆರ್‌ಸಿಎಲ್-ಗುತ್ತಿಗೆದಾರರ ನಡುವಿನ ತಿಕ್ಕಾಟದಿಂದ ಬೈಯಪ್ಪನಹಳ್ಳಿ ಮೆಟ್ರೊ ನಿಲ್ದಾಣದಲ್ಲಿರುವ ವಾಹನ ಪಾರ್ಕಿಂಗ್ ತಾಣದ ಗೇಟ್‌ಗೆ ಬೀಗ ಬಿದ್ದಿದೆ. ಎರಡು ವಾರಗಳಿಂದ ಜನರು ವಾಹನ ನಿಲ್ಲಿಸಲು ಸಾಧ್ಯವಾಗದೇ ಪರದಾಡುತ್ತಿದ್ದಾರೆ.

ಈ ಪಾರ್ಕಿಂಗ್ ತಾಣದಲ್ಲಿ 280 ದ್ವಿಚಕ್ರ ವಾಹನಗಳು, 25 ಕಾರು, 10 ಸೈಕಲ್‌ಗಳನ್ನು ನಿಲ್ಲಿಸಬಹುದು. ಪಾರ್ಕಿಂಗ್ ಜಾಗದ ನಿರ್ವಹಣೆ ವಹಿಸಿಕೊಂಡಿದ್ದ ಗುತ್ತಿಗೆದಾರರ ಅವಧಿ ಮುಕ್ತಾಯಗೊಂಡಿದೆ. ನಷ್ಟ ಉಂಟಾಗುತ್ತಿದೆ ಎಂಬ ಕಾರಣಕ್ಕೆ ಅವರು ಗುತ್ತಿಗೆ ನವೀಕರಣಕ್ಕೆ ಕೋರಿಲ್ಲ. ಬಳಿಕ ಕರೆದ ಟೆಂಡರ್‌ನಲ್ಲಿ ಗುತ್ತಿಗೆ ವಹಿಸಿಕೊಂಡವರು ಅರ್ಧದಷ್ಟು ಠೇವಣಿ ತುಂಬಿದ್ದರು. ಉಳಿದ ಪ್ರಕ್ರಿಯೆಗಳು ನಡೆಯದೇ ಇರುವುದರಿಂದ ಮಾರ್ಚ್ 3ರಿಂದ ಪಾರ್ಕಿಂಗ್ ಗೇಟ್‌ಗೆ ಬೀಗ ಹಾಕಲಾಗಿದೆ.

ಬೈಯ್ಯಪ್ಪನಹಳ್ಳಿ–ಕೆ.ಆರ್.ಪುರ ನಡುವೆ ಬಾಕಿ ಉಳಿದಿದ್ದ ಸುಮಾರು 2 ಕಿ.ಮೀ. ಮಾರ್ಗದ ಕಾಮಗಾರಿ ಪೂರ್ಣಗೊಂಡು ಮೆಟ್ರೊ ರೈಲು ಸಂಚಾರ ಆರಂಭವಾದ ಬಳಿಕ ವೈಟ್‌ಫೀಲ್ಡ್ ಕಡೆಗೆ ಸಂಚರಿಸುವವರ ಸಂಖ್ಯೆ ವಿಪರೀತ ಹೆಚ್ಚಾಗಿದೆ. ಬಹುತೇಕ ಪ್ರಯಾಣಿಕರು ಬೈಯಪ್ಪನಹಳ್ಳಿಯಲ್ಲಿ ತಮ್ಮ ವಾಹನಗಳನ್ನು ಪಾರ್ಕಿಂಗ್ ಮಾಡಿ ಮೆಟ್ರೊ ಹತ್ತುತ್ತಿದ್ದಾರೆ. ಈಗ ಪಾರ್ಕಿಂಗ್ ಬಂದ್ ಆಗಿರುವುದರಿಂದ ಪ್ರಯಾಣಿಕರಿಗೆ ತೀವ್ರ ತೊಂದರೆಯಾಗಿದೆ.

ಬೈಯ್ಯಪನಹಳ್ಳಿ ಮೆಟ್ರೊ ನಿಲ್ದಾಣದಲ್ಲಿ ಪಾರ್ಕಿಂಗ್ ಪ್ರದೇಶ ಮುಚ್ಚಿರುವುದು

'ತಾತ್ಕಾಲಿಕವಾಗಿ ಮುಚ್ಚಲಾಗಿದೆ' ಎಂದು ಪಾರ್ಕಿಂಗ್ ಗೇಟ್‌ಗೆ ಫಲಕ ಹಾಕಿದ್ದಾರೆ. ಯಾಕೆ ಮುಚ್ಚಲಾಗಿದೆ, ಯಾವಾಗ ತೆರೆಯುತ್ತದೆ ಎಂಬ ಮಾಹಿತಿ ಇಲ್ಲ. ನಮ್ಮ ವಾಹನಗಳನ್ನು ಯಾರದೋ ಮನೆ, ಕಟ್ಟಡಗಳ ಮುಂದೆ ನಿಲ್ಲಿಸಿ ಹೋಗಬೇಕು. ಅದಕ್ಕಾಗಿ ಅವರಿಂದ ಬೈಗುಳಗಳನ್ನು ಕೇಳುವಂತಾಗಿದೆ' ಎಂದು ಪ್ರಯಾಣಿಕರು ದೂರಿದರು.

'ಬೈಯಪ್ಪನಹಳ್ಳಿ ಮೆಟ್ರೊ ನಿಲ್ದಾಣದಲ್ಲಿ 'ಯು' ಆಕಾರದಲ್ಲಿ ಪಾರ್ಕಿಂಗ್ ವ್ಯವಸ್ಥೆ ಇತ್ತು. ಒಂದು ಕಡೆಯಿಂದ ಪ್ರವೇಶಿಸಿ, ಇನ್ನೊಂದು ಕಡೆಯಿಂದ ಹೊರಹೋಗುತ್ತಿದ್ದ ವ್ಯವಸ್ಥೆ ಅದು. ಅದರಲ್ಲಿ ಒಂದು ತುದಿಯ ಸ್ಥಳವನ್ನು ಬಿಎಂಆರ್‌ಸಿಎಲ್ ಬೇರೆ ಉದ್ದೇಶಕ್ಕೆ ಬಳಸಲು ನಿರ್ಧರಿಸಿದ್ದರಿಂದ ಗುತ್ತಿಗೆದಾರರು ಹಿಂದಕ್ಕೆ ಸರಿದಿದ್ದಾರೆ. ಪ್ರಾಪರ್ಟಿ ಡೆವಲಪ್‌ಮೆಂಟ್ ಎಕ್ಸಿಕ್ಯುಟಿವ್ ಡೈರೆಕ್ಟರ್ (ಪಿಡಿಎಡಿ) ಮತ್ತು ಗುತ್ತಿಗೆದಾರರ ತಿಕ್ಕಾಟದಿಂದಾಗಿ ಈ ಸಮಸ್ಯೆ ಉಂಟಾಗಿದೆ. ಪಾರ್ಕಿಂಗ್ ಗುತ್ತಿಗೆ ವ್ಯವಸ್ಥೆಯಾಗುವವರೆಗೆ ಸಾರ್ವಜನಿಕರಿಗೆ ಉಚಿತವಾಗಿ ಪಾರ್ಕಿಂಗ್ ಮಾಡಲು ಅವಕಾಶ ನೀಡಬೇಕು. ಬೀಗ ಹಾಕಿ ತೊಂದರೆ ಕೊಡುವುದು ಸರಿಯಲ್ಲ' ಎಂದು ಸ್ಥಳೀಯರು ದೂರಿದರು.

ಮೂರು ದಿನಗಳಲ್ಲಿ ಪುನರರಾರಂಭ

'ಹಿಂದೆ ಗುತ್ತಿಗೆ ಪಡೆದವರ ಅವಧಿ ಮುಗಿದಿದೆ. ಈಗ ಬೇರೆಯವರು ಗುತ್ತಿಗೆ ಪಡೆದಿದ್ದಾರೆ. ಹೊಸ ಗುತ್ತಿಗೆಗೆ ಸಂಬಂಧಿಸಿದಂತೆ ಕೆಲವು ಪ್ರಕ್ರಿಯೆಗಳು ಬಾಕಿ ಉಳಿದಿದ್ದರಿಂದ ತಡವಾಗಿತ್ತು. ಇನ್ನು ಎರಡು-ಮೂರು ದಿನಗಳಲ್ಲಿ ಪಾರ್ಕಿಂಗ್ ವ್ಯವಸ್ಥೆ ಸರಿಹೋಗಲಿದೆ' ಎಂದು ಬಿಎಂಆರ್‌ಸಿಎಲ್ ಅಧಿಕಾರಿ ತಿಳಿಸಿದ್ದಾರೆ.

ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್‌ಗೆ ಹೈಕೋರ್ಟ್ ತುರ್ತು ನೋಟಿಸ್

'ಕನಕಪುರಕ್ಕೆ ಕಾಲಿಟ್ಟರೆ ನನ್ನ ಮೇಲೆ ದಾಳಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋರ್ಟ್ ವಿಚಾರಣೆಗಾಗಿ ನಾನು ಕನಕಪುರಕ್ಕೆ ಭೇಟಿ ನೀಡಿದರೆ ನನ್ನ ಮೇಲೆ ದಾಳಿಯಾಗುವ ಸಂಭವವಿದೆ' ಎಂದು ಆತಂಕ ವ್ಯಕ್ತಪಡಿಸಿರುವ ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಅವರು ತಮ್ಮ ವಿರುದ್ಧ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕನಕಪುರದಲ್ಲಿ ಸಲ್ಲಿಸಿರುವ ಅಸಲು ದಾವೆಯೊಂದನ್ನು ಬೆಂಗಳೂರಿಗೆ ವರ್ಗಾಯಿಸುವಂತೆ ಕೋರಿ ಹೈಕೋರ್ಟ್ ಮೆಟ್ಟಿಲೇರಿದ್ದಾರೆ.

ಈ ಸಂಬಂಧ ಯತ್ನಾಳ್ ಸಲ್ಲಿಸಿರುವ ಸಿವಿಲ್ ದಾವೆ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಸ್. ಸುನಿಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ, ಪ್ರತಿವಾದಿ ಡಿ.ಕೆ.ಶಿವಕುಮಾರ್ ಅವರಿಗೆ ತುರ್ತು ನೋಟಿಸ್ ಜಾರಿಗೊಳಿಸಲು ಆದೇಶಿಸಿದೆ.

ವಿಚಾರಣೆ ವೇಳೆ ಯತ್ನಾಳ್ ಪರ ವಕೀಲರು, 'ಕನಕಪುರ ನ್ಯಾಯಾಲಯದ ವ್ಯಾಪ್ತಿಯಲ್ಲಿ ದಾವೆಯ ವಿಚಾರಣೆ ನಡೆಸುವುದಕ್ಕೆ ಸಕಾರಣವಿಲ್ಲ. ಹೀಗಾಗಿ, ಕನಕಪುರ ಹಿರಿಯ ಸಿವಿಲ್ ಕೋರ್ಟ್ ಮತ್ತು ಜೆಎಂಎಫ್‌ಸಿಯಲ್ಲಿ ಹೂಡಲಾಗಿರುವ ಅಸಲು ದಾವೆಯ ವಿಚಾರಣೆಗೆ ತಡೆ ನೀಡಬೇಕು' ಎಂದು ಮಂಡಿಸಿದ ವಾದ ಮನ್ನಿಸಿದ ನ್ಯಾಯಪೀಠ, ತುರ್ತು ನೋಟಿಸ್ ಜಾರಿಗೆ ಆದೇಶಿಸಿ ವಿಚಾರಣೆಯನ್ನು ಇದೇ 20ಕ್ಕೆ ಮುಂದೂಡಿದೆ.

ಪ್ರಕರಣವೇನು?: ಕಾಂಗ್ರೆಸ್-ಜೆಡಿಎಸ್ ಸಮ್ಮಿಶ್ರ ಸರ್ಕಾರವಿದ್ದ ಸಂದರ್ಭದಲ್ಲಿನ 2019ರ ಜೂನ್ 23ರಂದು ಯತ್ನಾಳ್ ಅವರು ವಿಜಯಪುರದಲ್ಲಿ, 'ಡಿ.ಕೆ.ಶಿವಕುಮಾರ್ ನಮ್ಮ (ಬಿಜೆಪಿ) ನಾಯಕರನ್ನು ಭೇಟಿ ಮಾಡಿ ತಮ್ಮ ವಿರುದ್ಧದ ಆದಾಯ ತೆರಿಗೆ ಇಲಾಖೆ ಪ್ರಕರಣಗಳಿಂದ ರಕ್ಷಣೆ ಕೋರಿದ್ದಾರೆ. ಈ ಸಂಬಂಧ ನಮ್ಮ ಕೇಂದ್ರ ಸಚಿವರ ಮೂಲಕ ಲಾಬಿ ಮಾಡಿದ್ದಾರೆ. ತಮ್ಮ ವಿರುದ್ಧದ ಜಾರಿ ನಿರ್ದೇಶನಾಲಯದ ಪ್ರಕರಣಗಳನ್ನು ಮುಕ್ತಾಯಗೊಳಿಸಿದರೆ ಕರ್ನಾಟಕದಲ್ಲಿ ಬಿಜೆಪಿ ಸರ್ಕಾರ ರಚಿಸಲು ತಮ್ಮ ವಿರೋಧ ಇಲ್ಲ ಎಂದು ಶಿವಕುಮಾರ್ ಹೇಳಿದ್ದಾರೆಂಬುದು ನನಗೆ ಗೊತ್ತಿದೆ' ಎಂದು ಹೇಳಿದ್ದರು. ಇದನ್ನು ಮಾಧ್ಯಮಗಳು ಪ್ರಸಾರ ಮಾಡಿದ್ದವು.

'ಈ ಹೇಳಿಕೆಯಿಂದ ನನ್ನ ಘನತೆ ಮತ್ತು ವರ್ಚಸ್ಸಿಗೆ ಹಾನಿಯಾಗಿದ್ದು ₹204 ಕೋಟಿ ಪರಿಹಾರ ತುಂಬಿಕೊಡಲು ಪ್ರತಿವಾದಿ ಯತ್ನಾಳ್ ಅವರಿಗೆ ಆದೇಶಿಸಬೇಕು' ಎಂದು ಕೋರಿ ಶಿವಕುಮಾರ್, ಕನಕಪುರ ನ್ಯಾಯಾಲಯದಲ್ಲಿ ದಾವೆ ಹೂಡಿದ್ದಾರೆ.

ಇದನ್ನು ಆಕ್ಷೇಪಿಸಿರುವ ಯತ್ನಾಳ್, 'ನನಗೆ ಕಿರುಕುಳ ನೀಡುವ ಏಕೈಕ ಉದ್ದೇಶದಿಂದ ಶಿವಕುಮಾರ್ ಈ ದಾವೆಯನ್ನು ಕನಕಪುರದ ನ್ಯಾಯಾಲಯದಲ್ಲಿ ಹೂಡಿದ್ದಾರೆ. ವಿಜಯಪುರದ ಶಾಸಕನಾದ ನಾನು ಅಲ್ಲಿ ಹೇಳಿಕೆ ನೀಡಿದ್ದು, ಇಲ್ಲಿ ದಾವೆ ಹೂಡಲಾಗಿದೆ. ಎರಡು ಪಟ್ಟಣಗಳ ಮಧ್ಯೆ 565 ಕಿ.ಮೀ. ಅಂತರವಿದ್ದು, ಇಷ್ಟೊಂದು ಸುದೀರ್ಘ ಅಂತರವನ್ನು ಕ್ರಮಿಸುವುದು ಕಷ್ಟ. ಶಿವಕುಮಾರ್ ಅತ್ಯಂತ ಬಲಾಢ್ಯರು ಮತ್ತು ಪ್ರಭಾವಿಗಳಿದ್ದಾರೆ. ಪ್ರಕರಣದಲ್ಲಿನ ಸಾಕ್ಷ್ಯ ತಿರುಚುವ ಸಾಧ್ಯತೆ ಇದೆ. ಈ ಎರಡೂ ಕಾರಣದಿಂದ ಪ್ರಕರಣವನ್ನು ಬೆಂಗಳೂರಿಗೆ ವರ್ಗಾಯಿಸಬೇಕು' ಎಂದು ಕೋರಿದ್ದಾರೆ.

'ಬಿಂಬ ಬಿಂಬನ' ಬಿಡುಗಡೆ 24ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಲನಚಿತ್ರ ನಿರ್ದೇಶಕರಾದ ಗಿರೀಶ್ ಕಾಸರವಳ್ಳಿ ಮತ್ತು ಚಿತ್ರಕಥಾ ಬರಹಗಾರರಾದ ಗೋಪಾಲಕೃಷ್ಣ ಪೈ ಅವರ 'ಬಿಂಬ ಬಿಂಬನ' ಕೃತಿ ಮಾರ್ಚ್ 24ರಂದು ಬೆಳಿಗ್ಗೆ 10ಕ್ಕೆ ಕನ್ನಡ ಸಾಹಿತ್ಯ ಪರಿಷತ್ತಿನ ಕೃಷ್ಣರಾಜ ಪರಿಷತ್ ಮಂದಿರದಲ್ಲಿ ಬಿಡುಗಡೆಗೊಳ್ಳಲಿದೆ.

'ವೀರಲೋಕ ಬುಕ್ಸ್' ಪ್ರಕಾಶನ ಸಂಸ್ಥೆ ಹಮ್ಮಿಕೊಂಡಿರುವ ಕಾರ್ಯಕ್ರಮದಲ್ಲಿ ನಟಿ–ನಿರ್ಮಾಪಕಿ ಜಯಮಾಲಾ ಕೃತಿ ಬಿಡುಗಡೆ ಮಾಡುವರು. ನಿರ್ದೇಶಕ ಪಿ. ಶೇಷಾದ್ರಿ ಉದ್ಘಾಟಿಸುವರು. ಕೃತಿ ಕುರಿತು ಸಿನಿಮಾ ಪತ್ರಕರ್ತ ಕೆ. ಪುಟ್ಟಸ್ವಾಮಿ, 'ಸುಧಾ' ಕಾರ್ಯನಿರ್ವಾಹಕ ಸಂಪಾದಕ ರಘುನಾಥ ಚ.ಹ. ಮಾತನಾಡುವರು. ನಿರ್ದೇಶಕ ಬಿ.ಎಸ್. ಲಿಂಗದೇವರು ಅತಿಥಿಯಾಗಿರುವರು. 'ವೀರಲೋಕ ಬುಕ್ಸ್' ಪ್ರಕಾಶಕ ವೀರಕಪುತ್ರ ಶ್ರೀನಿವಾಸ ಆಶಯ ನುಡಿಗಳನ್ನಾಡುವರು.

ಬಿಜೆಪಿ ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧಿಸುವೆ: ಶ್ಯಾಮ್‌ಸುಂದರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಉತ್ತರ ಕನ್ನಡ ಲೋಕಸಭಾ ಕ್ಷೇತ್ರದಿಂದ ಬಿಜೆಪಿಯ ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧಿಸಲಿದ್ದೇನೆ' ಎಂದು ಬಿಜೆಪಿ ರಾಜ್ಯ ಒಬಿಸಿ ಮೋರ್ಚಾದ ಉಪಾಧ್ಯಕ್ಷ ಶಾಮಸುಂದರ್ ಗಾಯಕವಾಡ್ ತಿಳಿಸಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ರಾಜ್ಯದಲ್ಲಿ 50 ಲಕ್ಷ ಜನಸಂಖ್ಯೆಯಿರುವ ಮರಾಠ ಸಮುದಾಯಕ್ಕೆ ಬಿಜೆಪಿ ಸರಿಯಾದ ಪ್ರಾತಿನಿಧ್ಯ ನೀಡುತ್ತಿಲ್ಲ. ರಾಜ್ಯದಲ್ಲಿ ಶೇ 52ರಷ್ಟು ಜನಸಂಖ್ಯೆ ಹೊಂದಿರುವ ಹಿಂದುಳಿದ ವರ್ಗದ ಕುರುಬರು, ನೇಕಾರರು, ಗೊಲ್ಲರು, ಮೀನುಗಾರರು, ತಿಗಳರು, ಗಾಣಿಗರು, ಕುಂಬಾರರು, ಮಡಿವಾಳ, ದೇವಾಡಿಗ ಸಮುದಾಯದವರಿಗೆ ಟಿಕೆಟ್ ನೀಡದೇ ಅನ್ಯಾಯ ಮಾಡಿದೆ. ವೀರಶೈವರು, ಬ್ರಾಹ್ಮಣರಿಗೆ ಮಾತ್ರ ಬಿಜೆಪಿ ಎನ್ನುವ ಪರಿಸ್ಥಿತಿ ಇದೆ' ಎಂದು ದೂರಿದರು.

ರಾಷ್ಟ್ರೀಯ ಮರಾಠ ಪಾರ್ಟಿ ಅಧ್ಯಕ್ಷರಾದ ಮನೋಹರ್ ರಾವ್ ಜಾಧವ್, 'ರಾಜ್ಯದ 10 ಲೋಕಸಭಾ ಕ್ಷೇತ್ರಗಳಿಂದ ರಾಷ್ಟ್ರೀಯ ಮರಾಠ ಪಾರ್ಟಿಯ ಅಭ್ಯರ್ಥಿಗಳು ಸ್ಪರ್ಧಿಸಲಿದ್ದಾರೆ. ಶಾಮಸುಂದರ್ ಗಾಯಕವಾಡ್ (ಉತ್ತರ ಕನ್ನಡ), ಜಿ.ಡಿ. ಘೋರ್ಪಡೆ (ಧಾರವಾಡ), ನಾರಾಯಣ್ ರಾವ್ ಗಾಯಕವಾಡ್ (ಹಾವೇರಿ–ಗದಗ), ಈಶ್ವರ್ ರುದ್ರಪ್ಪ ಗಾಡಿ (ಬೆಳಗಾವಿ), ವಿನೋದ್ ಸಾಳುಂಕೆ (ಚಿಕ್ಕೋಡಿ), ವಿಜಯಕುಮಾರ್ ಪಾಟೀಲ್ (ಬೀದರ್), ಶ್ರೀಕಾಂತ್ ಮುಧೋಳ (ಬಾಗಲಕೋಟೆ), ಎಂ.ಡಿ. ದೇವರಾಜ್ ಸಿಂಧೆ (ಶಿವಮೊಗ್ಗ), ವಿಜಯಪುರ ಮತ್ತು ಕಲಬುರಗಿಯಲ್ಲಿ ಎಸ್.ಸಿ. ಅಭ್ಯರ್ಥಿಗಳು ಸ್ಪರ್ಧಿಸಲಿದ್ದಾರೆ' ಎಂದು ತಿಳಿಸಿದರು.

ನಾರಾಯಣ ಮೂರ್ತಿ ಅವರಿಂದ ಉಡುಗೊರೆ ಮೊಮ್ಮಗನಿಗೆ ₹240 ಕೋಟಿ ಮೌಲ್ಯದ ಷೇರು

ಪ್ರಜಾವಾಣಿ ವಾರ್ತೆ

ನಾರಾಯಣ ಮೂರ್ತಿ

ಬೆಂಗಳೂರು: ಇನ್ಫೊಸಿಸ್ ಸ್ಥಾಪಕರಾದ ಎನ್. ಆರ್.ನಾರಾಯಣ ಮೂರ್ತಿ ಅವರು ತಮ್ಮ ಮೊಮ್ಮಗ, ನಾಲ್ಕು ತಿಂಗಳ ಶಿಶು ಏಕಾಗ್ರ ಮೂರ್ತಿ ಹೆಸರಿಗೆ 15 ಲಕ್ಷ ಷೇರುಗಳನ್ನು ವರ್ಗಾವಣೆ ಮಾಡಿದ್ದಾರೆ. ಈ ಷೇರುಗಳ ಒಟ್ಟು ಮೌಲ್ಯ ₹240 ಕೋಟಿ.

ಬಾಂಬೆ ಷೇರು ವಿನಿಮಯ ಕೇಂದ್ರದ ದಿನದ ವಹಿವಾಟಿನ ಅಂತ್ಯದಲ್ಲಿ ಈ ಷೇರುಗಳನ್ನು ವರ್ಗಾಯಿಸಲಾದ ಅಂಶವು ದಾಖಲಾಗಿದೆ. ದಿನದ ಅಂತ್ಯಕ್ಕೆ ಪ್ರತಿ ಷೇರಿನ ಮೌಲ್ಯ ₹1,602.30 ಇತ್ತು. ಈ ಷೇರು ವರ್ಗಾವಣೆಯೊಂದಿಗೆ ನಾಲ್ಕು ತಿಂಗಳ ಶಿಶು ಭಾರತದ 'ಅತಿ ಕಿರಿಯ ಕೋಟ್ಯಧಿಪತಿ' ಎಂದೂ ಅನಿಸಿಕೊಂಡಿತು.

ಷೇರು ವಿನಿಮಯ ಕೇಂದ್ರದ ವೆಬ್‌ಸೈಟಿನಲ್ಲಿ ಈ ಅಂಶ ಬಿಂಬಿತವಾಗಿದೆ. ತನ್ನ ಪಾಲಿನ 1.66 ಕೋಟಿ ಷೇರುಗಳಲ್ಲಿ 15 ಲಕ್ಷ ಷೇರುಗಳನ್ನು 'ಮಾಸ್ಟರ್ ಏಕಾಗ್ರ ರೋಹನ್ ಮೂರ್ತಿ' ಹೆಸರಿಗೆ ವರ್ಗಾಯಿಸಲಾಗಿದೆ. ಈ ವರ್ಗಾವಣೆ ಬಳಿಕ ಮೂರ್ತಿ ಅವರ ಪಾಲಿನ ಷೇರುಗಳ ಸಂಖ್ಯೆ 1.51 ಕೋಟಿಗೆ ಇಳಿಯಿತು. ಇವುಗಳ ಒಟ್ಟು ಮೌಲ್ಯ ದಿನದ ವಹಿವಾಟು ಅಂತ್ಯಗೊಂಡಾಗ ₹2,426.8 ಕೋಟಿಯಾಗಿತ್ತು.

ವಹಿವಾಟು ರಹಿತ ವರ್ಗಾವಣೆ ಸ್ವರೂಪದಲ್ಲಿ ಈ ಷೇರುಗಳ ವರ್ಗಾವಣೆಯಾಗಿದೆ. ಎನ್.ಆರ್. ನಾರಾಯಣಮೂರ್ತಿ ಮತ್ತು ಸುಧಾಮೂರ್ತಿ ದಂಪತಿಯ ಪುತ್ರ ಪುತ್ರ ರೋಹನ್ ಮೂರ್ತಿ– ಅಪರ್ಣಾ ಕೃಷ್ಣನ್ ದಂಪತಿಗೆ ಕಳೆದ ವರ್ಷದ ನವೆಂಬರ್‌ನಲ್ಲಿ ಗಂಡುಮಗು ಜನಿಸಿತ್ತು. ಎನ್.ಆರ್. ನಾರಾಯಣಮೂರ್ತಿ ಅವರ ಪುತ್ರಿ ಅಕ್ಷತಾ–ಬ್ರಿಟನ್ ಪ್ರಧಾನಿ ರಿಷಿ ಸುನಕ್ ದಂಪತಿಗೆ ಇಬ್ಬರು ಹೆಣ್ಣುಮಕ್ಕಳಿದ್ದಾರೆ.

ರೋಹನ್ ಮೂರ್ತಿ ಅವರು ಹಾರ್ವರ್ಡ್ ಸೊಸೈಟಿ ಆಫ್ ಫೆಲೊದಲ್ಲಿ ಜೂನಿಯರ್ ಫೆಲೊ ಆಗಿದ್ದಾರೆ. ಇವರು ಭಾರತೀಯ ಮೂರ್ತಿ ಶಾಸ್ತ್ರೀಯ ಗ್ರಂಥಾಲಯ ಮತ್ತು ಸೊರೊಕೊ ಹೆಸರಿನ ಸಂಸ್ಥೆಯನ್ನು ಸ್ಥಾಪಿಸಿದ್ದಾರೆ. ಕೃತಕ ಬುದ್ಧಿಮತ್ತೆ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಈ ಕಂಪನಿಯು ಕಾರ್ಯನಿರ್ವಹಿಸಲಿದೆ.

ನಾರಾಯಣಮೂರ್ತಿ ಅವರು ಇನ್ಫೊಸಿಸ್ ಸಂಸ್ಥೆಯ ಸ್ಥಾಪಕರಾಗಿದ್ದು, ಇವರ ಪತ್ನಿ ಸುಧಾಮೂರ್ತಿ ಅವರು ರಾಜ್ಯಸಭೆ ಸದಸ್ಯೆಯಾಗಿ ನಾಮನಿರ್ದೇಶನಗೊಂಡಿದ್ದು, ಇತ್ತೀಚೆಗಷ್ಟೆ ಪ್ರಮಾಣವಚನ ಸ್ವೀಕರಿಸಿದ್ದರು.

ಮೈಮ್ ಶೋ.. ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಹಾಗೂ ಸಂಶೋಧನಾ ಸಂಸ್ಥೆಯ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘ ಆಯೋಜಿಸಿದ್ದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ವಿದ್ಯಾರ್ಥಿಗಳು ಮೂಕಾಭಿನಯ ಪ್ರಸ್ತುತಪಡಿಸಿದರು

-ಪ್ರಜಾವಾಣಿ ಚಿತ್ರ /ಕಿಶೋರ್ ಕುಮಾರ್ ಬೋಳಾರ್

ಜೂನ್ ವೇಳೆಗೆ ಕಾರ್ಯಾರಂಭ; ಹೊಸ ತಂತ್ರಜ್ಞಾನ ಅಳವಡಿಕೆಗೆ ₹6.50 ಕೋಟಿ ವೆಚ್ಚ

ಸ್ವಾತಂತ್ರ್ಯ ಉದ್ಯಾನದಲ್ಲಿ 'ಸ್ಮಾರ್ಟ್ ಪಾರ್ಕಿಂಗ್ ಕಟ್ಟಡ'

• ಆದಿತ್ಯ ಕೆ.ಎ.

ಬೆಂಗಳೂರು: ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ನಿರ್ಮಿಸಿರುವ 'ಬಹುಮಹಡಿ ಪಾರ್ಕಿಂಗ್ ಕಟ್ಟಡ' ಕೊನೆಗೂ ವಾಹನ ಚಾಲಕರ ಬಳಕೆಗೆ ಲಭ್ಯವಾಗುವ ಕಾಲ ಹತ್ತಿರವಾಗಿದೆ.

ಕಟ್ಟಡವನ್ನು ಗುತ್ತಿಗೆ ಪಡೆದಿರುವ 'ಪ್ರಿನ್ಸ್ ರಾಯಲ್ ಪಾರ್ಕಿಂಗ್ ಸಲ್ಯೂಷನ್ ಕಂಪನಿ' ತಂತ್ರಜ್ಞಾನ ಅಳವಡಿಕೆಗೆ ಸಂಬಂಧಿಸಿದ ಕೆಲಸ ಆರಂಭಿಸಿದೆ. ಜೂನ್ ಮೊದಲ ವಾರದಲ್ಲಿ ವಾಹನಗಳ ಪಾರ್ಕಿಂಗ್‌ಗೆ ಸ್ಥಳ ಲಭ್ಯವಾಗಲಿದೆ.

ಕಟ್ಟಡ ಉದ್ಘಾಟನೆಗೊಂಡರೆ ಕಾಳಿದಾಸ ರಸ್ತೆ, ಕನಕದಾಸ ರಸ್ತೆ, ಶೇಷಾದ್ರಿಪುರ ರಸ್ತೆ, ಗಾಂಧಿನಗರ, ಮೆಜೆಸ್ಟಿಕ್, ವಿಧಾನಸೌಧ ಸೇರಿದಂತೆ ಕೇಂದ್ರ ವಲಯದಲ್ಲಿ ವಾಹನಗಳ ಪಾರ್ಕಿಂಗ್ ಸಮಸ್ಯೆಗೆ ಮುಕ್ತಿ ಸಿಗುವ ಸಾಧ್ಯತೆಯಿದೆ.

10 ವರ್ಷಗಳ ಅವಧಿಗೆ ಪ್ರಿನ್ಸ್ ರಾಯಲ್ ಪಾರ್ಕಿಂಗ್ ಸಲ್ಯೂಷನ್ ಕಂಪನಿ ಗುತ್ತಿಗೆ ಪಡೆದಿದೆ. ಪಾರ್ಕಿಂಗ್ ತಾಣದಲ್ಲಿ 'ಅಡ್ವಾನ್ಸ್ಡ್ ಪಾರ್ಕಿಂಗ್ ತಂತ್ರಜ್ಞಾನ' ಅಳವಡಿಸಲಾಗುತ್ತಿದೆ. ಹೀಗಾಗಿ, ಕಟ್ಟಡದಲ್ಲಿ 'ಸ್ಮಾರ್ಟ್ ಪಾರ್ಕಿಂಗ್' ವ್ಯವಸ್ಥೆ ಜಾರಿಗೆ ಬರಲಿದೆ. ಕೇಬಲ್ ಕೆಲಸ ನಡೆಯುತ್ತಿದ್ದು, ಎರಡು ತಿಂಗಳಲ್ಲಿ ಕಾಮಗಾರಿ ಮುಕ್ತಾಯವಾಗಲಿದೆ ಎಂದು ಸಂಸ್ಥೆಯ ಸಿಬ್ಬಂದಿ ಹೇಳುತ್ತಾರೆ.

ನಗರೋತ್ಥಾನ ಯೋಜನೆ ಅಡಿ 2017ರಲ್ಲಿ ಕಟ್ಟಡದ ಕಾಮಗಾರಿಯನ್ನು ಬಿಬಿಎಂಪಿ ಆರಂಭಿಸಿತ್ತು. ₹78 ಕೋಟಿ ಖರ್ಚು ಮಾಡಲಾಗಿತ್ತು. ಎರಡು ವರ್ಷಗಳ ಹಿಂದೆಯೇ ಕಟ್ಟಡದ ಕೆಲಸ ಮುಕ್ತಾಯಗೊಂಡಿದ್ದರೂ ಗುತ್ತಿಗೆದಾರರು ಮುಂದೆ ಬಾರದ ಕಾರಣಕ್ಕೆ ಕಟ್ಟಡವು ಬಳಕೆಗೆ ಲಭ್ಯವಾಗಿರಲಿಲ್ಲ. ಇದನ್ನು ಬಿಬಿಎಂಪಿ, ಗೋದಾಮು ಕೇಂದ್ರವಾಗಿ ಮಾಡಿಕೊಂಡಿತ್ತು.

'ಪ್ರತಿ ವರ್ಷಕ್ಕೆ ₹1.50 ಕೋಟಿಗೆ ಗುತ್ತಿಗೆ ಪಡೆಯಲಾಗಿದೆ. 6ನೇ ವರ್ಷದಿಂದ ಗುತ್ತಿಗೆಯ ಮೊತ್ತ ಹೆಚ್ಚಳವಾಗಲಿದೆ. ದುಬೈನ ಕೆಲವು ಬಹುಮಹಡಿ ಕಟ್ಟಡದಲ್ಲಿ ಅಳವಡಿಕೆ ಮಾಡಿರುವ ತಂತ್ರಜ್ಞಾನವನ್ನೇ ಇಲ್ಲಿ ಅನುಷ್ಠಾನ ಮಾಡಲಾಗುತ್ತಿದೆ. ಇದರಿಂದ ವಾಹನಗಳ ಪಾರ್ಕಿಂಗ್ ಸುಲಭವಾಗಲಿದೆ. ಫ್ಯಾಸ್ಟ್‌ಟ್ಯಾಗ್ ಸೇರಿದಂತೆ ಮೂರು ಮಾದರಿಯಲ್ಲಿ ವಾಹನ ಪ್ರವೇಶಕ್ಕೆ ವ್ಯವಸ್ಥೆ ಮಾಡಲಾಗುವುದು. ಚಾಲಕರ ಭಾವಚಿತ್ರ ಸಹಿತ ರಶೀದಿ ನೀಡಲಾಗುವುದು. ಕಟ್ಟಡದ ಒಳಕ್ಕೆ ವಾಹನ ಪ್ರವೇಶಿಸುತ್ತಿದ್ದಂತೆ ಖಾಲಿ ಇರುವ ಸ್ಥಳವನ್ನು 'ಡಿಜಿಟಲ್ ಸ್ಕ್ರೀನ್'ನಲ್ಲಿ ತೋರಿಸಲಾಗುವುದು. ಆ ಸ್ಥಳದಲ್ಲಿ ವಾಹನ ನಿಲುಗಡೆ ಮಾಡಬಹುದು. ಮತ್ತೊಂದು ಫಲಕದಲ್ಲಿ ಪಾರ್ಕಿಂಗ್ ಮಾಡಿರುವ ವಾಹನಗಳ ಸಂಖ್ಯೆ ಪ್ರದರ್ಶಿಸಲಾಗುವುದು' ಎಂದು ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಕುಮಾರ್ 'ಪ್ರಜಾವಾಣಿ'ಗೆ ತಿಳಿಸಿದರು.

ಸ್ಮಾರ್ಟ್ ಪೋಲ್ ಅಳವಡಿಕೆ: ಕೆ.ಆರ್.ವೃತ್ತ, ಮೆಜೆಸ್ಟಿಕ್, ಪೋತಿಸ್ ಸಿಗ್ನಲ್‌ನಲ್ಲಿ 'ಸ್ಮಾರ್ಟ್ ಪೋಲ್' ಅಳವಡಿಕೆ ಮಾಡಲಾಗುವುದು. ಅಲ್ಲಿ ಪಾರ್ಕಿಂಗ್ ಸ್ಥಳದ ಮಾಹಿತಿ ಹಾಗೂ ಕಟ್ಟಡದಲ್ಲಿ ಪಾರ್ಕಿಂಗ್ ಅವಕಾಶವಿದೆಯೇ ಎಂಬ ಮಾಹಿತಿಯು ದಿನದ 24 ಗಂಟೆಯೂ ಪ್ರದರ್ಶನವಾಗುತ್ತಿರುತ್ತದೆ. ಪ್ರತಿ ಐದು ಸೆಕೆಂಡ್‌ಗಳಿಗೆ ಒಮ್ಮೆ ವಾಹನಗಳ ಮಾಹಿತಿ ಅಪ್‌ಡೇಟ್ ಆಗಲಿದೆ ಎಂದು ವಿವರಿಸಿದರು.

'ಕಟ್ಟಡದ ಐದು ಸ್ಥಳಗಳಲ್ಲಿ ಎಸ್‌ಒಎಸ್(ತುರ್ತು ಸಹಾಯಕ್ಕಾಗಿ) ಬಟನ್ ಅಳವಡಿಕೆ ಮಾಡಲಾಗುತ್ತಿದೆ. ಚಾಲಕಿಯರಿಗೆ ತೊಂದರೆಯಾದರೆ ಆ ಬಟನ್ ಒತ್ತಿದರೆ, ಸಿಬ್ಬಂದಿ ಸ್ಥಳಕ್ಕೆ ಆಗಮಿಸಿ ನೆರವು ನೀಡಲಿದ್ದಾರೆ. ಹತ್ತಿರದ ಪೊಲೀಸ್ ಠಾಣೆಗೂ ಮಾಹಿತಿ ರವಾನೆ ಆಗಲಿದೆ. ಈ ಎಲ್ಲ ವ್ಯವಸ್ಥೆಗೆ ಅಂದಾಜು ₹6.50 ಕೋಟಿ ವೆಚ್ಚವಾಗುತ್ತಿದೆ' ಎಂದು ಹೇಳಿದರು.

'ಕಟ್ಟಡದ ಚಾವಣಿಯಲ್ಲಿ ಸೋಲಾರ್ ಪ್ಯಾನಲ್ ಅಳವಡಿಸಲಾಗಿದ್ದು, ಉತ್ಪಾದನೆಯಾಗುವ ವಿದ್ಯುತ್ ಅನ್ನು ಕಟ್ಟಡಕ್ಕೆ ಬಳಸಿಕೊಂಡು ಹೆಚ್ಚುವರಿ ವಿದ್ಯುತ್ ಅನ್ನು ಬೆಸ್ಕಾಂ ಗ್ರಿಡ್‌ಗೆ ಪೂರೈಸಲಾಗುವುದು. ಇದರ ನಿರ್ವಹಣೆ ಮಾತ್ರ ಬಿಬಿಎಂಪಿ ವ್ಯಾಪ್ತಿಗೆ ಒಳಪಡಲಿದೆ' ಎಂದು ಸಿಬ್ಬಂದಿ ಹೇಳುತ್ತಾರೆ.

ಸ್ವಾತಂತ್ರ್ಯ ಉದ್ಯಾನದಲ್ಲಿ ನಿರ್ಮಿಸಿರುವ ಬಹುಮಹಡಿ ಪಾರ್ಕಿಂಗ್ ಕಟ್ಟಡದಲ್ಲಿ ಕೇಬಲ್ ಅಳವಡಿಸುತ್ತಿರುವ ಕಾರ್ಮಿಕರು

ಪ್ರಜಾವಾಣಿ ಚಿತ್ರ/ ಕಿಶೋರ್‌ಕುಮಾರ್ ಬೊಳಾರ್

ಉಚಿತ ಬಸ್ ವ್ಯವಸ್ಥೆ

ವಾಹನ ನಿಲುಗಡೆ ಮಾಡಿದ ಬಳಿಕ ದೂರದ ಸ್ಥಳಕ್ಕೆ ತೆರಳುವುದಾದರೂ ಹೇಗೆ ಎಂಬ ಚಿಂತೆ ಚಾಲಕರನ್ನು ಕಾಡುವುದು ಸಾಮಾನ್ಯ. ಇದಕ್ಕೆ ಗುತ್ತಿಗೆ ಪಡೆದ ಕಂಪನಿಯೇ ಪರಿಹಾರ ಕಂಡುಕೊಂಡಿದೆ. ಮೂರು ಸ್ಥಳಗಳಿಗೆ ಉಚಿತವಾಗಿ ವಾಹನ ವ್ಯವಸ್ಥೆ ಮಾಡಲು ಮುಂದಾಗಿದೆ. ವಿಧಾನಸೌಧ, ಮೆಜೆಸ್ಟಿಕ್ ಹಾಗೂ ಪೋತಿಸ್‌ಗೆ ಉಚಿತ ವಾಹನ ಸೌಕರ್ಯ ಇರಲಿದೆ ಎಂದು ಸಿಬ್ಬಂದಿ ಹೇಳುತ್ತಾರೆ.

ಪಾರ್ಕಿಂಗ್ ಶುಲ್ಕದ ವಿವರ

ಅವಧಿ (ಗಂಟೆಗಳಲ್ಲಿ)	ದ್ವಿಚಕ್ರ ವಾಹನ	ತ್ರಿಚಕ್ರ ಹಾಗೂ ನಾಲ್ಕು ಚಕ್ರದ ವಾಹನ
0 ಯಿಂದ 1	₹15	₹25
1 ರಿಂದ 2	₹25	₹40
2 ರಿಂದ 4	₹40	₹65
4 ರಿಂದ 6	₹55	₹90
6 ರಿಂದ 8	₹70	₹115
8 ರಿಂದ 10	₹85	₹140
10 ರಿಂದ 12	₹100	₹165
12 ರಿಂದ 24	₹100+	₹165+

(12 ಗಂಟೆಯ ನಂತರ ಬೈಕ್‌ಗೆ ಪ್ರತಿ ಗಂಟೆಗೆ ₹7.50 ಹಾಗೂ ತ್ರಿಚಕ್ರ– ನಾಲ್ಕು ಚಕ್ರದ ವಾಹನಗಳಿಗೆ ₹12.5 ಪಾರ್ಕಿಂಗ್ ಶುಲ್ಕ)

ಕಟ್ಟಡದ ಸಾಮರ್ಥ್ಯ

445 ಬೈಕ್‌ಗಳು | **556** ತ್ರಿಚಕ್ರ, ನಾಲ್ಕು ಚಕ್ರದ ವಾಹನಗಳು

ಯಾವುದೇ ಮಹಾನಗರದ ಸರ್ಕಾರಿ ಪಾರ್ಕಿಂಗ್ ಕಟ್ಟಡಗಳಲ್ಲಿ ಈ ರೀತಿಯ ತಂತ್ರಜ್ಞಾನ ಅಳವಡಿಸಿಲ್ಲ. 'ಬ್ರ್ಯಾಂಡ್ ಬೆಂಗಳೂರು' ಭಾಗವಾಗಿ ಇಲ್ಲಿ ಹೊಸ ತಂತ್ರಜ್ಞಾನ ಅಳವಡಿಸಲಾಗುತ್ತಿದೆ.

ಕುಮಾರ್, ವ್ಯವಸ್ಥಾಪಕ ನಿರ್ದೇಶಕ, ಪ್ರಿನ್ಸ್ ರಾಯಲ್ ಪಾರ್ಕಿಂಗ್ ಸೆಲ್ಯೂಷನ್ ಕಂಪನಿ

ಸಂಕ್ಷಿಪ್ತ ಸುದ್ದಿ

ಬಾಣಂತಿ, ಮಗು ಸಾವು: ನಿರ್ಲಕ್ಷ್ಯ ಆರೋಪ

ಲಕ್ಷ್ಮಿ

ಬೆಳಗಾವಿ: ತಾಲ್ಲೂಕಿನ ಕಿಣಯೇ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಭಾನುವಾರ ಮಧ್ಯರಾತ್ರಿ ಹೆರಿಗೆ ಬಳಿಕ ತೀವ್ರ ರಕ್ತ ಸ್ರಾವದಿಂದ ಬಾಣಂತಿ, ಉಸಿರಾಟ ಸಮಸ್ಯೆಯಿಂದ ಮಗು ಜಿಲ್ಲಾಸ್ಪತ್ರೆಗೆ ಸಾಗಿಸುವ ಮಾರ್ಗಮಧ್ಯೆ ಮೃತಪಟ್ಟಿದ್ದಾರೆ. ಸಂತಿಬಸ್ತವಾಡ ಗ್ರಾಮದ ಲಕ್ಷ್ಮಿ ಲಗಮಣ್ಣ ಹಳ್ಳಿ(28) ಮೃತರು.

'ನನ್ನ ಪತ್ನಿ ಸಾವಿಗೆ ಆರೋಗ್ಯ ಕೇಂದ್ರದ ಸಿಬ್ಬಂದಿ ನಿರ್ಲಕ್ಷ್ಯವೇ ಕಾರಣ. ನಾವು ಆಸ್ಪತ್ರೆಗೆ ಹೋದಾಗ, ವೈದ್ಯರು ಇರಲಿಲ್ಲ. ಶುಶ್ರೂಷಾಧಿಕಾರಿ ಹೆರಿಗೆ ಮಾಡಿಸಿದರು. ಆರೋಗ್ಯ ಸ್ಥಿತಿ ಬಿಗಡಾಯಿಸಿದಾಗ, ಸಕಾಲಕ್ಕೆ ಅಂಬುಲೆನ್ಸ್ ಬಂದಿದ್ದರೆ ಈ ಘಟನೆ ನಡೆಯುತ್ತಿರಲಿಲ್ಲ. ತಪ್ಪಿತಸ್ಥರಿಗೆ ಶಿಕ್ಷೆ ಆಗಬೇಕು' ಎಂದು ಪತಿ ಲಗಮಣ್ಣ ಒತ್ತಾಯಿಸಿದರು.

ನಿರ್ಲಕ್ಷ್ಯ ಆಗಿಲ್ಲ: 'ಮಧ್ಯರಾತ್ರಿ 1.30ಕ್ಕೆ ಲಕ್ಷ್ಮಿ ಹೆರಿಗೆಗೆ ದಾಖಲಾದರು. 2.30ಕ್ಕೆ ಹೆಣ್ಣು ಮಗುವಿಗೆ ಜನ್ಮ ನೀಡಿದರು. ಅವರಿಗೆ ತೀವ್ರ ರಕ್ತಸ್ರಾವವಾಯಿತು. ಮಗು ಅಳಲಿಲ್ಲ. ಇಬ್ಬರನ್ನೂ ಬೇರೆ ಬೇರೆ ವಾಹನಗಳಲ್ಲಿ ಜಿಲ್ಲಾಸ್ಪತ್ರೆಗೆ ಸಾಗಿಸಲು ಸಿಬ್ಬಂದಿ ಯತ್ನಿಸಿದರು. ಇದರಲ್ಲಿ ವೈದ್ಯರು, ಸಿಬ್ಬಂದಿಯ ನಿರ್ಲಕ್ಷ್ಯ ಆಗಿಲ್ಲ. ಆದರೂ, ಕುಟುಂಬಸ್ಥರ ದೂರಿನ ಅನ್ವಯ ಪರಿಶೀಲಿಸುತ್ತೇವೆ' ಎಂದು ತಾಲ್ಲೂಕು ಆರೋಗ್ಯಾಧಿಕಾರಿ ಡಾ.ಸಂಜಯ ಡುಮ್ಮಗೋಳ 'ಪ್ರಜಾವಾಣಿ'ಗೆ ತಿಳಿಸಿದರು.

ಕೇರಳ ದೇಗುಲಕ್ಕೆ ಯಾಂತ್ರಿಕ ಆನೆ

ಕೊಚ್ಚಿ (ಪಿಟಿಐ): ಚಿತ್ರನಟಿ ಪ್ರಿಯಾಮಣಿ ಮತ್ತು ಲಾಭರಹಿತ ಸಂಸ್ಥೆಯಾದ ಪೆಟಾ (ಪೀಪಲ್ ಫಾರ್ ಎಥಿಕಲ್ ಟ್ರೀಟ್‌ಮೆಂಟ್ ಆಫ್ ಅನಿಮಲ್ಸ್ ಇಂಡಿಯಾ) ಕೊಚ್ಚಿಯ ತ್ರಿಕ್ಕಯಿಲ್ ಮಹಾದೇವ ದೇಗುಲಕ್ಕೆ ಆನೆಯಷ್ಟೇ ಗಾತ್ರದ ಯಾಂತ್ರಿಕ ಆನೆಯನ್ನು ದೇಣಿಗೆಯಾಗಿ ನೀಡಿದ್ದಾರೆ.

'ಜೀವಂತ ಆನೆಯನ್ನು ಬಳಸಿಕೊಳ್ಳದಿರಲು ದೇಗುಲವು ನಿರ್ಧರಿಸಿತ್ತು. ಆದ್ದರಿಂದ ಸುರಕ್ಷಿತ ಮತ್ತು ಕ್ರೌರ್ಯ ಮುಕ್ತ ರೀತಿಯಲ್ಲಿ ವಿವಿಧ ಸಮಾರಂಭಗಳಲ್ಲಿ ಬಳಸಿಕೊಳ್ಳಲು ಅನುವಾಗುವಂತೆ ಮಹಾದೇವನ್ ಎಂಬ ಹೆಸರಿನ ಯಾಂತ್ರಿಕ ಆನೆಯನ್ನು ದೇಗುಲಕ್ಕೆ ನೀಡಲಾಗಿದೆ' ಎಂದು ಪೆಟಾ ಪ್ರಕಟಣೆ ಭಾನುವಾರ ತಿಳಿಸಿದೆ.

'ಇಂಥ ಆನೆಯನ್ನು ಕೇರಳದಲ್ಲಿ ಎರಡನೇ ಬಾರಿ ಪರಿಚಯಿಸಲಾಗುತ್ತಿದೆ. 'ಮಹಾದೇವನ್'ನ ಉದ್ಘಾಟನೆಯನ್ನು ದೇಗುಲದಲ್ಲಿ ಭಾನುವಾರ ನೆರವೇರಿಸಲಾಯಿತು. ಈ ಸಂದರ್ಭ ಮಾಸ್ಟರ್ ವೇದರಥ ಹಾಗೂ ತಂಡದವರು ಚಂಡ ಮೇಳವನ್ನು ಪ್ರದರ್ಶಿಸಿದರು. ವೇಣು ಮರರ್ ಮತ್ತು ತಂಡದವರು ಪಂಚವಾದ್ಯಂ ಅನ್ನು ಪ್ರದರ್ಶಿಸಿದರು' ಎಂದು ಹೇಳಿದೆ.

ಕ್ಷೇಮ ಕುಶಲ

ವೆರಿಕೋಸ್ ಉಬ್ಬಿದ ರಕ್ತನಾಳಗಳು

ಡಾ. ಕಿರಣ್ ವಿ. ಎಸ್.

ಜೀವವಿಕಾಸದ ಆದ್ಯತೆಯಲ್ಲಿ ಯಾವುದೋ ಸ್ಥಾನದಲ್ಲಿದ್ದ ಮನುಷ್ಯಪ್ರಾಣಿ ಉತ್ತುಂಗಕ್ಕೆ ಏರಿದ್ದು ಹಲವಾರು ಬದಲಾವಣೆಗಳ ದೆಸೆಯಿಂದ. ಇಂತಹ ಒಂದು ಬದಲಾವಣೆ ಎರಡು ಕಾಲುಗಳ ಮೇಲೆ ಬಹುಕಾಲ ನಿಲ್ಲಬಲ್ಲ ವೈಶಿಷ್ಟ್ಯ. ಚತುಷ್ಪಾದಿಗಳಿಗೆ ಹೋಲಿಸಿದರೆ ಈ ಸಾಮರ್ಥ್ಯ ಎರಡು ಕೈಗಳನ್ನು ಮುಕ್ತವಾಗಿ ಬಳಸಲು ಅವಕಾಶ ನೀಡಿತು. ಜೀವವಿಕಾಸ ಸಾಗುತ್ತಾ ಹೋದಂತೆ ಈ ಕರ-ಕೌಶಲ ಮನುಷ್ಯಜೀವಿಯ ಏಳಿಗೆಗೆ ಕಾರಣವಾಯಿತು. ಆದರೆ ಕಾಲುಗಳ ಮೇಲೆ ನೇರವಾಗಿ ನಿಲ್ಲುವ ಸಾಮರ್ಥ್ಯಕ್ಕಾಗಿ ಹಲವಾರು ಸಮಸ್ಯೆಗಳನ್ನು ದೇಹ ಎದುರಿಸಬೇಕಿದೆ. ಬೆನ್ನುನೋವು, ಮಂಡಿ-ಸವೆತ, ಹರ್ನಿಯಾ, ಮೂಲವ್ಯಾಧಿ, ತಲೆಸುತ್ತಿ ಬೀಳುವಿಕೆ ಮೊದಲಾದುವುಗಳ ಕಾರಣ ನಾವು ದ್ವಿಪಾದಿಗಳಾಗಿ ಬದಲಾದದ್ದೇ. ಈ ಪಟ್ಟಿಗೆ ಮತ್ತೊಂದು ಸೇರ್ಪಡೆ ಕಾಲುಗಳಲ್ಲಿ ಉಬ್ಬುವ ರಕ್ತನಾಳಗಳು. ಇದನ್ನೇ 'ವೆರಿಕೋಸ್ (ಲ್ಯಾಟಿನ್ ಭಾಷೆಯಲ್ಲಿ ಉಬ್ಬಿದ, ಸೊಟ್ಟಗಾದ) ರಕ್ತನಾಳಗಳು' ಎನ್ನುತ್ತಾರೆ.

ಇಡೀ ಶರೀರದ ರಕ್ತಪರಿಚಲನೆಯನ್ನು ನಿರ್ವಹಿಸುವುದು ಹೃದಯ. ಇದು ಶರೀರದ ಮೇಲ್ಭಾಗದಲ್ಲಿ, ಎದೆಯ ಗೂಡಿನಲ್ಲಿದೆ. ನಮ್ಮ ನೆತ್ತಿಯ ತುದಿ ಮತ್ತು ಸೊಂಟದ ಭಾಗಕ್ಕೆ ಸರಿಸುಮಾರು ನಡುಭಾಗದಲ್ಲಿ ಹೃದಯ ಬರುತ್ತದೆ. ಚತುಷ್ಪಾದಿಗಳ ದೇಹಕ್ಕೆ ಈ ಸ್ಥಾನ ಬಹಳ ಅನುಕೂಲಕಾರಿ. ಆದರೆ, ದ್ವಿಪಾದಿ ಮಾನವನಲ್ಲಿ ಕಾಲಿನ ಉದ್ದವೂ ಸೇರಿ, ಈ ಲೆಕ್ಕಾಚಾರ ಏರುಪೇರಾಗಿದೆ. ಗುರುತ್ವಕ್ಕೆ ವಿರುದ್ಧವಾಗಿ ಹರಿಯಬೇಕಾದ ಆವಶ್ಯಕತೆ ಶರೀರದ ಕೆಳಭಾಗದ ರಕ್ತನಾಳಗಳದ್ದು. ಇದು ಸುಲಭದ ಮಾತಲ್ಲ. ನಾವು ಚಲಿಸುವಾಗ ಕಾಲುಗಳ ಬಲಿಷ್ಠ ಮಾಂಸಖಂಡಗಳು ಸತತವಾಗಿ ಸಂಕೋಚನ-ವಿಕಸನಗೊಳ್ಳುತ್ತಾ ರಕ್ತನಾಳಗಳನ್ನು ಒತ್ತುತ್ತವೆ. ಜೊತೆಗೆ, ಈ ರಕ್ತನಾಳಗಳಲ್ಲಿ ಮುಂದೆ ಹರಿದ ರಕ್ತ ಮತ್ತೆ ಹಿಂದೆ ಹರಿಯದಂತೆ ತಡೆಯುವ ಏಕಮುಖ ಕವಾಟಗಳಿವೆ. ಈ ಮೂಲಕ ರಕ್ತ ಸರಾಗವಾಗಿ ಮೇಲೆ ಮೇಲೆ ಹರಿಯುತ್ತಾ ಹೃದಯವನ್ನು ಸೇರುತ್ತದೆ. ಇದು ಜೀವನದುದ್ದಕ್ಕೂ ಸಾಗುತ್ತಲೇ ಇರಬೇಕಾದ ನಿರಂತರ ಪ್ರಕ್ರಿಯೆ.

ಕಾಲಿನ ಮಾಂಸಖಂಡಗಳಿಗೆ ಸರಿಯಾದ ಕೆಲಸ ನೀಡದಿದ್ದರೆ ರಕ್ತಸಂಚಾರ ಅಸಮಂಜಸವಾಗುತ್ತದೆ. ಒಂದೆಡೆ ಕುಳಿತು ಕೆಲಸ ಮಾಡುವ ವೃತ್ತಿ; ಹೆಚ್ಚು ಕಾಲ ನಿಂತು ಕೆಲಸ ಮಾಡಬೇಕಾದ ನೌಕರಿ; ವ್ಯಾಯಾಮ ಇಲ್ಲದ ಜೀವನಶೈಲಿ; ಬೊಜ್ಜು, ಧೂಮಪಾನ, ಅಪಘಾತ ಮೊದಲಾದ ಸಂದರ್ಭಗಳಲ್ಲಿ ಬಹಳ ಕಾಲ ಚಲನೆಯಿಲ್ಲದ ಸ್ಥಿತಿ ಮೊದಲಾದ ಸಂದರ್ಭಗಳು ಇದಕ್ಕೆ ಉದಾಹರಣೆ. ಆಗ ಕಾಲುಗಳ ರಕ್ತವು ಮೇಲೆ ಹರಿಯಲಾಗದೇ ರಕ್ತನಾಳಗಳಲ್ಲೇ ಉಳಿದುಬಿಡುತ್ತದೆ. ಇದು ನಾಳಗಳ ಒಳಗಿನ ಏಕಮುಖ ಕವಾಟಗಳನ್ನು ಘಾಸಿ ಮಾಡುತ್ತದೆ. ಇದರಿಂದ ನಾಳಗಳ ಗೋಡೆಗಳು ಹಿಗ್ಗುತ್ತಾ, ಅದರ ರಚನೆಯನ್ನು ದುರ್ಬಲವಾಗಿಸುತ್ತದೆ. ಇಂತಹ ರಕ್ತನಾಳಗಳು ದಪ್ಪನಾಗಿ, ಸೊಟ್ಟಗಾಗಿ, ಚರ್ಮದ ಮೇಲೆ ಉಬ್ಬಿದಂತೆ ಕಾಣುತ್ತದೆ. ಇಂತಹವುಗಳನ್ನು 'ವೆರಿಕೋಸ್ ರಕ್ತನಾಳ' ಎನ್ನಬಹುದು. ಗರ್ಭಿಣಿಯರಲ್ಲಿ ಗರ್ಭಕೋಶದ ಒತ್ತಡದಿಂದ, ಹೃದಯದತ್ತ ಸಾಗುವ ದೊಡ್ಡ ಗಾತ್ರದ ಅಪಧಮನಿಗಳಲ್ಲಿನ ರಕ್ತಸಂಚಾರಕ್ಕೆ ತಡೆಯಾಗುತ್ತದೆ. ಇದರಿಂದ ದೊಡ್ಡ ಗಾತ್ರದ ಅಪಧಮನಿಗಳ ಸಂಪರ್ಕವಿರುವ ಕಾಲುಗಳ ರಕ್ತನಾಳಗಳಲ್ಲಿನ ರಕ್ತಸಂಚಾರವೂ ನಿಧಾನವಾಗುತ್ತದೆ. ಇದು ಕೂಡ ವೆರಿಕೋಸ್ ಸಮಸ್ಯೆ ಉಂಟುಮಾಡಬಹುದು.

ವೆರಿಕೋಸ್ ರಕ್ತನಾಳಗಳು ಚರ್ಮದ ಮೇಲೆ ಉಬ್ಬಿರುವ ನೀಲಿ, ನೇರಳೆಬಣ್ಣದ ಸೊಟ್ಟ ಗೆರೆಗಳಂತೆ, ಗಂಟುಗಳಂತೆ ವಿಕಾರವಾಗಿ ಎದ್ದುಕಾಣುತ್ತವೆ. ಇವುಗಳಿಗೆ ಪೆಟ್ಟಾದರೆ ಅಧಿಕ ರಕ್ತಸ್ರಾವ ಉಂಟಾಗಬಹುದು. ಕಾಲಿನ ಮಾಂಸಖಂಡಗಳ ನೋವು, ಜೋಮು ಹಿಡಿಯುವಿಕೆ, ಪಾದಗಳ ಊತ, ಚರ್ಮ ತೆಳುವಾಗಿ ಬೇಗನೆ ಗಾಯವಾಗುವುದು, ತುರಿಕೆ, ಶೀಘ್ರವಾಗಿ ಗುಣವಾಗದ ಹುಣ್ಣುಗಳು, ಕಾಲಿನ ಸ್ನಾಯು ಸೆಳೆತ, ಮೀನಖಂಡಗಳ ಬಿಗುವು, ಉರಿ, ಕಾಲಿನ ಚರ್ಮ ಕಪ್ಪುಗಟ್ಟುವಿಕೆ ಮೊದಲಾದ ಲಕ್ಷಣಗಳು ವೆರಿಕೋಸ್ ರಕ್ತನಾಳಗಳ ಸಮಸ್ಯೆಯ ಪರಿಣಾಮಗಳು. ಈ ರಕ್ತನಾಳಗಳಲ್ಲಿ ರಕ್ತಸಂಚಾರ ತಗ್ಗುವ ಕಾರಣ ಅಲ್ಲಿ ರಕ್ತ ಹೆಪ್ಪುಗಟ್ಟಿ, ಹೆಪ್ಪಿನ ಭಾಗ ಕಳಚಿಕೊಂಡು ನಿಧಾನವಾಗಿ ಏರುತ್ತಾ ಹೃದಯವನ್ನು ಸೇರಿ ಶ್ವಾಸಕೋಶಗಳನ್ನು ಹಾಳು ಮಾಡಬಹುದು. ಇದು ತೀವ್ರವಾದ ಸಮಸ್ಯೆ.

ನಿಯಮಿತ ವ್ಯಾಯಾಮ ವೆರಿಕೋಸ್ ಸಮಸ್ಯೆಯನ್ನು ತಡೆಯಬಲ್ಲ ಉತ್ತಮ ವಿಧಾನ. ಚುರುಕು ನಡಿಗೆ, ಈಜು, ಸೈಕಲ್ ಸವಾರಿ, ಯೋಗಾಸನಗಳು, ದೀರ್ಘಶ್ವಾಸ ಪ್ರಾಣಾಯಾಮ, ಒಳ್ಳೆಯ ಪ್ರೊಟೀನ್‌ಯುಕ್ತ ಆಹಾರ, ಸಾಕಷ್ಟು ನೀರಿನ ಸೇವನೆ ಮೊದಲಾದುವು ವೆರಿಕೋಸ್ ಸಮಸ್ಯೆ ಆಗದಂತೆ ತಡೆಯಬಲ್ಲವು. ಹೆಚ್ಚುಕಾಲ ಕುಳಿತು ಕೆಲಸ ಮಾಡಬೇಕಾದವರು ಆಗಾಗ ಎದ್ದು ಕೆಲವು ಹೆಜ್ಜೆ ನಡೆಯುವುದು ಸೂಕ್ತ. ಇದರ ಜೊತೆಗೆ ಗಂಟೆಗೆ ಒಂದು ಸಾರಿ ಕುರ್ಚಿಯನ್ನು ಬಿಟ್ಟು ಒಂದು ಸುತ್ತು ಓಡಾಡಿ ಬರುವುದು ಒಳ್ಳೆಯ ಪದ್ಧತಿ. ಅಂತೆಯೇ ಶರೀರ ತೂಕದ ನಿರ್ವಹಣೆ, ಧೂಮಪಾನ ಮಾಡದಿರುವಿಕೆ, ಚಲನೆ ಇಲ್ಲದಿರುವ ಪರಿಸ್ಥಿತಿಯಲ್ಲಿ ಕಾಲುಗಳ ಮಾಲೀಸು, ಅನುಭವಿ ಭೌತಚಿಕಿತ್ಸಕರಿಂದ ಮಾಡಿಸಿಕೊಳ್ಳುವ ಪರೋಕ್ಷ ವ್ಯಾಯಾಮ ಮೊದಲಾದ ಜೀವನಶೈಲಿಯ ಬದಲಾವಣೆಗಳು ಪ್ರಯೋಜನಕಾರಿ.

ವೆರಿಕೋಸ್ ರಕ್ತನಾಳಗಳನ್ನು ಭೌತಿಕ ತಪಾಸಣೆ ಮತ್ತು ಅಲ್ಟ್ರಾಸೌಂಡ್ ತರಂಗಗಳ ಪರೀಕ್ಷೆಗಳ ನೆರವಿನಿಂದ ಪತ್ತೆ ಮಾಡುತ್ತಾರೆ. ವೆರಿಕೋಸ್ ಸಮಸ್ಯೆಯಿಂದ ಈಗಾಗಲೇ ಆಗಿರುವ ವ್ರಣಗಳಂತಹ ಸಮಸ್ಯೆಗಳ ನಿರ್ವಹಣೆಗೆ ಆದ್ಯತೆ ನೀಡಬೇಕು. ರಕ್ತನಾಳಗಳ ಮೇಲೆ ಬಾಹ್ಯವಾಗಿ ಒತ್ತಡ ಹಾಕಿ, ಅವುಗಳಲ್ಲಿನ ಸಂಚಾರವನ್ನು ಪ್ರಚೋದಿಸುವ ಸ್ಟಾಕಿಂಗ್‌ಗಳನ್ನು ಬಳಸಬಹುದು. ತೀವ್ರವಾದ ಸಮಸ್ಯೆ ಇರುವಾಗ ಶಸ್ತ್ರಚಿಕಿತ್ಸೆ, ರಾಸಾಯನಿಕಗಳ ಚುಚ್ಚುಮದ್ದು, ವಿಶೇಷ ರೀತಿಯ ಅಂಟಿನ ಬಳಕೆ, ಲೇಸರ್ ಚಿಕಿತ್ಸೆ, ರೇಡಿಯೋತರಂಗಗಳ ಆನ್ವಯಿಕ ಚಿಕಿತ್ಸೆ ಲಭ್ಯವಿವೆ. ಇದರಲ್ಲಿ ಸೂಕ್ತವಾದದ್ದನ್ನು ತಜ್ಞರು ಸೂಚಿಸುತ್ತಾರೆ.

ವೆರಿಕೋಸ್ ರಕ್ತನಾಳಗಳನ್ನು ನಿರ್ಲಕ್ಷಿಸುವುದು ಸೂಕ್ತವಲ್ಲ. ಆರಂಭಿಕ ಹಂತದಲ್ಲೇ ವೈದ್ಯರನ್ನು ಕಂಡು ಚಿಕಿತ್ಸೆ ಪಡೆಯುವುದು ಅತ್ಯಂತ ಪರಿಣಾಮಕಾರಿ. ❖

ಗ್ಲಾಕೋಮಾ ಅಂಧತ್ವಕ್ಕೆ ನಾಂದಿ

ಡಾ. ಮುರಲೀ ಮೋಹನ್ ಚೂಂತಾರು

'ಗ್ಲಾಕೋಮಾ' ಕಣ್ಣುಗಳ ದೃಷ್ಟಿನರ(Optic Nerve)ಕ್ಕೆ ಸಂಬಂಧಿಸಿದ ರೋಗ. ಸಾಮಾನ್ಯವಾಗಿ ಗ್ಲಾಕೋಮಾ ರೋಗದ ಆರಂಭದಲ್ಲಿ ಹೊರಭಾಗದ ದೃಷ್ಟಿ ಕುಂಠಿತವಾಗುತ್ತದೆ. ಯಾವುದೇ ಚಿಕಿತ್ಸೆ ನೀಡದಿದ್ದಲ್ಲಿ ಮಧ್ಯಭಾಗದ ದೃಷ್ಟಿಶಕ್ತಿ ಕೂಡ ಕುಂಠಿತವಾಗಿ ಕುರುಡುತನ ಉಂಟಾಗಬಹುದು. ಜಗತ್ತಿನಲ್ಲಿ ಕುರುಡುತನಕ್ಕೆ ಎರಡನೇ ಅತಿ ದೊಡ್ಡ ಕಾರಣವೇ ಗ್ಲಾಕೊಮಾ.

ಸಾಮಾನ್ಯವಾಗಿ ಹೆಚ್ಚಿನ ಗ್ಲಾಕೋಮಾ ರೋಗಿಗಳಲ್ಲಿ ಕಣ್ಣಿನೊಳಗೆ ದ್ರವ್ಯದ ಒತ್ತಡ ಹೆಚ್ಚಾಗಿರುತ್ತದೆ. ಈ ಹೆಚ್ಚಿದ ಒತ್ತಡದಿಂದಾಗಿ ದೃಷ್ಟಿನರದ ಮೇಲೆ ಹೆಚ್ಚಿನ ಹಾನಿ ಆಗುತ್ತದೆ. ಕೆಲವೊಮ್ಮೆ ಸಹಜ ಕಣ್ಣಿನ ಒತ್ತಡದಲ್ಲಿಯೂ, ಗ್ಲಾಕೋಮಾ ಕಾಣಿಸಿಕೊಳ್ಳುವ ಸಾಧ್ಯತೆ ಇಲ್ಲವೆಂದಿಲ್ಲ. ಗ್ಲಾಕೋಮಾದಲ್ಲಿ ಎರಡು ವಿಧಗಳಿವೆ. ತೆರೆದ ಕೋನದ ಗ್ಲಾಕೋಮಾ (Open Angle Glaucoma) ಮತ್ತು ಮುಚ್ಚಿದ ಕೋನದ ಗ್ಲಾಕೋಮಾ (Closed Angle Glaucoma). ತೆರೆದ ಕೋನದ ಗ್ಲಾಕೋಮಾ ದೀರ್ಘಕಾಲದ ಕಾರಣಗಳಿಂದ ಕಾಣಿಸಿಕೊಳ್ಳುತ್ತದೆ.

ಹೇಗೆ ಪತ್ತೆ ಹಚ್ಚುವುದು?

ತೆರೆದ ಕೋನದ ಗ್ಲಾಕೋಮಾ: ಈ ಸಮಸ್ಯೆಯಿರುವವರಲ್ಲಿ ಹೆಚ್ಚಾಗಿ ನೋವಿರುವುದಿಲ್ಲ. ನಿಧಾನವಾಗಿ ಕಣ್ಣಿನೊಳಗಿನ ಒತ್ತಡ ಜಾಸ್ತಿಯಾದಂತೆ ರೋಗಲಕ್ಷಣಗಳು ಒಂದೊಂದಾಗಿ ಕಾಣಿಸಿಕೊಳ್ಳಬಹುದು. ಈ ಕಾಯಿಲೆ ಇರುವವರು ನಡೆಯುವಾಗ ನೇರವಾಗಿ ನಡೆಯುತ್ತಾರೆ. ಆದರೆ, ಆಚೆ ಈಚೆ ಇರುವ ವಸ್ತುಗಳು ಗೋಚರಿಸುವುದಿಲ್ಲ. ಓದುವಾಗ ಮತ್ತು ಬರೆಯುವಾಗ ಒಂದು ಬದಿಯಲ್ಲಿನ ಅಕ್ಷರ ಗೋಚರಿಸುವುದಿಲ್ಲ. ಕ್ರಮೇಣ ಸುತ್ತ ಮುತ್ತಲಿನ ದೃಷ್ಟಿ ಮಾಯವಾಗಿ ಕೇವಲ ಶೇ, 5ರಿಂದ 10ರಷ್ಟು ನೇರದೃಷ್ಟಿ ಉಳಿಯುತ್ತದೆ. ಇದಕ್ಕೆ 'ಸುರಂಗ ದೃಷ್ಟಿ' (Tunnel Vision) ಎನ್ನುತ್ತಾರೆ. ಪೂರ್ಣ ಅಂಧತ್ವವೂ ಉಂಟಾಗಬಹುದು. ಅದೇ ರೀತಿ ಕತ್ತಲಿನ ಕೋಣೆಗೆ ಹೊಕ್ಕಾಗ ಕಣ್ಣುಗಳನ್ನು ಹೊಂದಿಸಿಕೊಳ್ಳಲು ಕಷ್ಟವಾಗಬಹುದು. ಬೆಳಕಿನ ದೀಪದ ಸುತ್ತ ಕಾಮನಬಿಲ್ಲಿನಂತೆ ಬಗೆಬಗೆಯ ಬಣ್ಣದ ಗೋಲಗಳು ಗೋಚರಿಸಬಹುದು. ಈ ರೀತಿಯ ಗ್ಲಾಕೋಮಾವನ್ನು ಔಷಧಗಳ ಮುಖಾಂತರ ಕಣ್ಣಿನೊಳಗಿನ ಒತ್ತಡ ಕಡಿಮೆ ಮಾಡಿ ಗುಣಪಡಿಸಲಾಗುತ್ತದೆ. ಕೆಲವೊಮ್ಮೆ ಶಸ್ತ್ರಚಿಕಿತ್ಸೆಯ ಮುಖಾಂತರ ಕಣ್ಣಿನೊಳಗಿನ ಒತ್ತಡವನ್ನು ಕಡಿಮೆ ಮಾಡಿ ಗುಣಪಡಿಸಲಾಗುತ್ತದೆ.

ಮುಚ್ಚಿದ ಕೋನದ ಗ್ಲಾಕೋಮಾ: ಒಂದು ವೈದ್ಯಕೀಯ ತುರ್ತು ಚಿಕಿತ್ಸೆಯ ಅಗತ್ಯವಿರುವ ರೋಗವಾಗಿದ್ದು, ತಕ್ಷಣ ಶಸ್ತ್ರಚಿಕಿತ್ಸೆಯ ಅಗತ್ಯವಿರುತ್ತದೆ. ಅತಿಯಾದ ಕಣ್ಣು ನೋವು, ತಲೆಸುತ್ತು, ಕಣ್ಣಿನ ಸುತ್ತ ನೋವು, ವಾಕರಿಕೆ, ವಾಂತಿ ಇತ್ಯಾದಿ ಇರಬಹುದು. ಕಣ್ಣು ಕೆಂಪಾಗುವುದು, ಊದಿಕೊಳ್ಳುವುದು ಇರಬಹುದು. ಕಣ್ಣಿನ ಒತ್ತಡ ತೀವ್ರವಾಗಿ ಏರಿಕೆಯಾಗಿರುತ್ತದೆ. ತಕ್ಷಣಕ್ಕೆ ಶಸ್ತ್ರಚಿಕಿತ್ಸೆ ಮಾಡದಿದ್ದಲ್ಲಿ ದೃಷ್ಟಿನರಕ್ಕೆ ಹಾನಿಯಾಗಿ, ಶಾಶ್ವತ ಅಂಧತ್ವ ಬರುವ ಸಾಧ್ಯತೆ ಇರುತ್ತದೆ.

ಯಾವಾಗ ವೈದ್ಯರಲ್ಲಿಗೆ ಹೋಗಬೇಕು?

- ಹತ್ತಿರದ ಮತ್ತು ದೂರದ ವಸ್ತುಗಳನ್ನು ನೋಡಲು ಕಷ್ಟವಾಗುವುದು.
- ಕತ್ತಲೆ ಕೋಣೆಗೆ ಹೋದಾಗ ದೃಷ್ಟಿಯ ಹೊಂದಾಣಿಕೆ ಕಷ್ಟವಾಗುವುದು.
- ಕಣ್ಣಿನ ಸುತ್ತ ಪದೇ ಪದೇ ನೋವು.
- ಎಲ್ಲವೂ ಎರಡೆರಡಾಗಿ ಗೋಚರಿಸುವುದು.
- ಪದೇ ಪದೇ ಕಣ್ಣು ಒದ್ದೆಯಾಗಿ, ಹೆಚ್ಚು ಕಣ್ಣೀರು ಕಾರಣವಿಲ್ಲದೆ ಒಸರುವುದು.
- ವಸ್ತುಗಳಲ್ಲಿ ಮಂದತ್ವ ಮತ್ತು ಭೂತಾಕಾರದ ಪ್ರತಿಬಿಂಬ ಗೋಚರಿಸುವುದು.
- ಕಣ್ಣಿನ ತುರಿಕೆ, ಕಣ್ಣುಗಳು ಉರಿಯುವುದು, ಶುಷ್ಕ ಕಣ್ಣು.
- ತನ್ನಿಂತಾನೇ ವಸ್ತುಗಳು ಅಸ್ಪಷ್ಟವಾಗಿ ಗೋಚರಿಸುವುದು.
- ವಸ್ತುವಿನ ಅಥವಾ ಬೆಳಕಿನ ಸುತ್ತ ಗೋಲಾಕಾರ ಅಥವಾ ಕಾಮನಬಿಲ್ಲಿನ ರೀತಿ ಬಣ್ಣಗಳು ಕಾಣಿಸಿಕೊಳ್ಳುವುದು.
- ಎಲ್ಲವೂ ಸರಿಯಾಗಿದ್ದು, ಕಾರಣವಿಲ್ಲದೆ ದೃಷ್ಟಿ ನಾಶವಾದಂತಾಗುವುದು.

ಯಾರಿಗೆ ಗ್ಲಾಕೋಮಾ ಸಾಧ್ಯತೆ ?

- ನೀವು 40 ವರ್ಷಗಳಿಗಿಂತ ಮೇಲ್ಪಟ್ಟವರಾಗಿದ್ದು, ಯಾವುದಾದರೂ ಜೀವನಶೈಲಿಗೆ ಸಂಬಂಧಪಟ್ಟ ರೋಗಗಳಾದ ರಕ್ತದೊತ್ತಡ, ಮಧುಮೇಹ ರೋಗದಿಂದ ಬಳಲುತ್ತಿದ್ದಲ್ಲಿ,
- ನೀವು ರಸದೂತಗಳ ವೈಪರೀತ್ಯದ ರೋಗಗಳಿಂದ (ಉದಾ: ಥೈರಾಯ್ಡ್ ಸಮಸ್ಯೆ) ಬಳಲುತ್ತಿದ್ದಲ್ಲಿ,
- ನಿಮ್ಮ ಕುಟುಂಬದಲ್ಲಿ ಯಾರಾದರೂ ಗ್ಲಾಕೋಮಾ ರೋಗದಿಂದ ಬಳಲುತ್ತಿದ್ದಲ್ಲಿ,
- ನೀವು ಅತಿಯಾದ ಸ್ಟಿರಾಯ್ಡ್, ಧೂಮಪಾನ ಮತ್ತು ಮದ್ಯಪಾನಕ್ಕೆ ದಾಸರಾಗಿದ್ದಲ್ಲಿ,
- ನೀವು ಅತಿಯಾದ ರಕ್ತಹೀನತೆಯಿಂದ ಬಳಲುತ್ತಿದ್ದಲ್ಲಿ, ನಿಮ್ಮ ಕಣ್ಣಿಗೆ ರಾಸಾಯನಿಕಗಳಿಂದ ಗಾಯವಾಗಿದ್ದಲ್ಲಿ, ಅಪಘಾತಗಳಿಂದ ಶಾಶ್ವತ ಗಾಯವಾಗಿದ್ದಲ್ಲಿ,
- ನಿಮಗೆ ಹತ್ತಿರದ ದೃಷ್ಟಿಮಾಂದ್ಯತೆ ಮತ್ತು ತೆಳ್ಳಗಿನ ಕಾರ್ನಿಯಾ ಇದ್ದಲ್ಲಿ,

– ಇಂಥ ಸಮಸ್ಯೆಗಳಿದ್ದವರಲ್ಲಿ ಗ್ಲಾಕೋಮಾ ಸಾಧ್ಯತೆ ಹೆಚ್ಚು. ಮೇಲಿನ ಲಕ್ಷಣಗಳು ನಿಮಗೆ ಕಾಣಿಸಿಕೊಂಡಲ್ಲಿ, ತಕ್ಷಣ ಕಣ್ಣಿನ ತಜ್ಞರಲ್ಲಿಗೆ ಹೋಗಿ, ಸೂಕ್ತ ಸಲಹೆ, ಮಾರ್ಗದರ್ಶನ ಮತ್ತು ಚಿಕಿತ್ಸೆಯನ್ನು ಪಡೆದುಕೊಳ್ಳಿ.

ಚಿಕಿತ್ಸೆ ಹೇಗೆ?

ತೆರೆದ ಕೋನದ ಗ್ಲಾಕೋಮಾವನ್ನು ಹೆಚ್ಚಾಗಿ ಔಷಧಗಳಿಂದ ಚಿಕಿತ್ಸೆ ನೀಡಿ ಗುಣಪಡಿಸಲಾಗುತ್ತದೆ. ಲೇಸರ್ ಚಿಕಿತ್ಸೆಯ ಮುಖಾಂತರ ಒತ್ತಡವನ್ನು ಕಡಿಮೆಗೊಳಿಸಬಹುದು. ಮುಚ್ಚಿದ ಕೋನದ ಗ್ಲಾಕೋಮಾ ರೋಗವನ್ನು ಶಸ್ತ್ರಚಿಕಿತ್ಸೆ ಮುಖಾಂತರ ಗುಣಪಡಿಸಲಾಗುತ್ತದೆ. ನಿಮ್ಮ ದೇಹಸ್ಥಿತಿ, ರೋಗದ ಲಕ್ಷಣ ಮತ್ತು ತೀವ್ರತೆಯನ್ನು ಕೂಲಂಕಷವಾಗಿ ವೈದ್ಯರು ಅಭ್ಯಸಿಸಿ ನಿಮಗೆ ನೀಡಬೇಕಾದ ಔಷಧ ಮತ್ತು ಶಸ್ತ್ರಚಿಕಿತ್ಸೆಯ ನಿರ್ಧಾರವನ್ನು ವೈದ್ಯರೇ ತೆಗೆದುಕೊಳ್ಳುತ್ತಾರೆ. ಆರಂಭಿಕ ಹಂತದಲ್ಲಿ ಗುರುತಿಸಿ ಪರಿಣಾಮಕಾರಿ ಚಿಕಿತ್ಸೆ ನೀಡಿದ್ದಲ್ಲಿ ಗ್ಲಾಕೋಮಾ ರೋಗವನ್ನು ಖಂಡಿತವಾಗಿಯೂ ಗುಣಪಡಿಸಬಹುದು. ಆದರೆ ಒಮ್ಮೆ ಗ್ಲಾಕೋಮಾ ರೋಗದಿಂದ ದೃಷ್ಟಿನರ ಹಾನಿಯಾಗಿ, ಅಂಧತ್ವ ಬಂದ ಬಳಿಕ ಯಾವುದೇ ಚಿಕಿತ್ಸೆಯೂ ಫಲಿಸಲಾರದು. ❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಗಣಿತ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

33) ಕೊಟ್ಟಿರುವ ಚಿತ್ರದಲ್ಲಿ cos θ ಮತ್ತು tan θ ಬೆಲೆಗಳನ್ನು ಕಂಡುಹಿಡಿಯಿರಿ.

ಉತ್ತರ:



$$BC^2 = AC^2 - AB^2$$
$$= 13^2 - 5^2 = 169 - 25 = 144$$
$$\boxed{BC = 12}$$
$$\cos\theta = \frac{\text{ಪಾರ್ಶ್ವಬಾಹು}}{\text{ವಿಕರ್ಣ}} = \frac{BC}{AC} = \frac{12}{13}$$
$$\tan\theta = \frac{\text{ಅಭಿಮುಖ ಬಾಹು}}{\text{ಪಾರ್ಶ್ವಬಾಹು}} = \frac{AB}{BC} = \frac{5}{12}$$

34) ಎರಡು ದಾಳಗಳನ್ನು ಜೊತೆಯಾಗಿ ಎಸೆಯಲಾಗಿದೆ. ಈ ಕೆಳಗಿನ ಘಟನೆಗಳನ್ನು ಪಡೆಯುವ ಸಂಭವನೀಯತೆಯನ್ನು ಕಂಡುಹಿಡಿಯಿರಿ.

(A) ಎರಡೂ ಮುಖಗಳಲ್ಲಿ ಒಂದೇ ಸಂಖ್ಯೆ

(B) ಎರಡೂ ಮುಖಗಳಲ್ಲಿ 5ರ ಗುಣಕಗಳು

ಉತ್ತರ:

S = {(1,1), (1,2),........(1,6) (6,1) (6,2)............(6,6)}

n(S) = 36.

(A) A = {(1,1), (2,2), (3,3), (4,4) (5,5), (6,6)}

n(A) = 6

$\therefore P(A) = \frac{n(A)}{n(S)} = \frac{6}{36}$

(B) B = (5, 5)

n(B) = 1

$P(B) = \frac{n(B)}{n(S)} = \frac{1}{36}$

35) $x^2 - 4x + 2 = 0$ನ್ನು ಸೂತ್ರದ ಸಹಾಯದಿಂದ ಬಿಡಿಸಿ.

ಉತ್ತರ: $ax^2 + bx + c = 0$

ಇಲ್ಲಿ, a = 1, b = -4, c = 2

$$x = \frac{-b \pm \sqrt{b^2 - 4ac}}{2a}$$
$$x = \frac{-(-4) \pm \sqrt{(-4)^2 - 4\times1\times2}}{2\times1}$$
$$= \frac{4 \pm \sqrt{16-8}}{2} = \frac{2(2 \pm \sqrt{2})}{2}$$
$$= 2 \pm \sqrt{2}$$

If $x = 2 + \sqrt{2}, x = 2 - \sqrt{2}$

$\therefore$ ಮೂಲಗಳು $(2 + \sqrt{2})$ ಅಥವಾ $(2 - \sqrt{2})$

36) ಸಮಾಂತರ ಶ್ರೇಢಿಯ ಮೊದಲ ಮೂರು ಪದಗಳ ಮೊತ್ತವು 6 ಮತ್ತು ಅವುಗಳ ಗುಣಲಬ್ಧವು 120 ಆದರೆ ಆ ಮೂರು ಪದಗಳನ್ನು ಕಂಡುಹಿಡಿಯಿರಿ.

ಉತ್ತರ: ಸಮಾಂತರ ಶ್ರೇಢಿಯ ಮೂರು ಅನುಕ್ರಮ ಪದಗಳು **(a – d), (a), (a + d)** ಆಗಿರಲಿ.

ಪದಗಳ ಮೊತ್ತ = 6

$$a - \not{d} + a + a + \not{d} = 6$$
$$3a = 6 \quad a = \frac{6}{3} = 2 \quad \boxed{\therefore a = 2}$$
$$(a - d)(a)(a + d) = -120$$
$$(a - d)(a + d) = \frac{-120}{a}$$

$a^2 - d^2 = \frac{-120}{a}$	if d = + 8 then
$2^2 - d^2 = \frac{-120}{2}$	$a - d = 2 - 8 = -6$
$4 - d^2 = -60$	$a = 2$
$4 + 60 = d^2$	$a + d = 2 + 8 = 10$
$64 = d^2$	If d = –8
$d = \sqrt{64}$	$a - d = 2 - (-8) = 10$
$d = \pm 8$	$a = 2$
	$a + d = 2 + (-8) = -6$

a = 2, d = 8 ಆದಾಗ, ಮೂರು ಸಂಖ್ಯೆಗಳು –6, 2, 10

a = 2, d = -8 ಆದಾಗ, ಮೂರು ಸಂಖ್ಯೆಗಳು 10, 2, –6.

37) 3 ಸೆಂ.ಮೀ. ತ್ರಿಜ್ಯವುಳ್ಳ ವೃತ್ತಕ್ಕೆ, ವೃತ್ತ ಕೇಂದ್ರದಿಂದ 8 ಸೆಂ.ಮೀ. ದೂರದಲ್ಲಿನ ಬಾಹ್ಯ ಬಿಂದುವಿನಿಂದ ಒಂದು ಜೊತೆ ಸ್ಪರ್ಶಕಗಳನ್ನು ರಚಿಸಿರಿ.

ಉತ್ತರ: r = 3 ಸೆಂ.ಮೀ., d = 8 ಸೆಂ.ಮೀ.



38) $3 + \sqrt{5}$ ಒಂದು ಅಭಾಗಲಬ್ಧ ಎಂದು ಸಾಧಿಸಿ.

ಸಾಧನೆ:– $3 + \sqrt{5}$ ಒಂದು ಭಾಗಲಬ್ಧ ಸಂಖ್ಯೆ ಎಂದು ಭಾವಿಸಿ.

$\Rightarrow 3 + \sqrt{5} = a$ ಆಗಿರಲಿ,

ಇಲ್ಲಿ 'a' ಯು ಭಾಗಲಬ್ಧ ಸಂಖ್ಯೆ

$3 = a - \sqrt{5}$ ಎರಡೂ ಕಡೆಯೂ ವರ್ಗ ಮಾಡಿದಾಗ

$$(3)^2 = (a - \sqrt{5})^2$$
$$9 = a^2 + (\sqrt{5})^2 - 2(a)(\sqrt{5})$$
$$9 = a^2 + 5 - 2a\sqrt{5}$$
$$2a\sqrt{5} = a^2 + 5 - 9$$
$$\sqrt{5} = \frac{a^2 - 4}{2a}$$

ಇಲ್ಲಿ $\frac{a^2 - 4}{2a}$ ಎಂಬುದು ಭಾಗಲಬ್ಧ ಸಂಖ್ಯೆ ಎಂಬುದು ಅಸತ್ಯ ಆದ್ದರಿಂದ $\sqrt{5}$ ಒಂದು ಅಭಾಗಲಬ್ಧ ಸಂಖ್ಯೆ.

$\therefore 3 + \sqrt{5}$ ಒಂದು ಭಾಗಲಬ್ಧ ಸಂಖ್ಯೆಯಲ್ಲ ಅಂದರೆ $3 + \sqrt{5}$ ಒಂದು ಅಭಾಗಲಬ್ಧ ಸಂಖ್ಯೆ.

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

II PUC CET CHEMISTRY

22) With regard to the photoelectric effect, identify the correct statement among the following (KCET-2020)

a) Number of electrons ejected increases with the increase in work function

b) Number of electrons ejected increases with the increase in the intensity of incident light

c) Energy of ejected electrons increases with the increase in the intensity of incident light

d) Numbers of electrons ejected increases with the increase in the frequency of the incident light

Ans: (b)

Expln:- Photoelectric effect is the emission of electrons from a certain metal surface when it is irradiated with photons or light. The minimum frequency required to eject an electron from a metal surface is called threshold frequency. (υ_o)

The equation for the photoelectric effect is: $H\upsilon = h\upsilon_o + KE$, where υ = frequency of the incident radiation

Here $h\upsilon_o$ is the work function. The number of electrons ejected does not depend on work function.

The number of electrons ejected increases with the increase in the intensity of incident light, an increase in the intensity of incident light means that the number of photons incident per unit surface area of the metal increases. (Provided the incident photons has its frequency more than the threshold frequency)

The energy of the ejected electrons increases with an increase in the frequency of incident light.

23) In $H_2 - O_2$ fuel cell the reaction occurring at cathode is

a) $O_2(g) + 2H_2O(l) + 4e^- \rightarrow 4\overline{O}H(aq)$

b) $H^+(aq) + \overline{O}H(aq) \rightarrow H_2O(l)$

c) $2H_2(g) + O_2(g) \rightarrow 2H_2O(l)$

d) $H^+ + e^- \rightarrow \frac{1}{2}H_2$

Ans:- a

24) Which one of the following statements is true?

a) Drying of oil involves hydrolysis

b) Saponification of oil yields a diol

c) Refining of oil involves hydrogenation

d) Addition of antioxidant to oil minimizes rancidity

Ans:- d

25) The distinguishing test between methanoic acid and ethanoic acid is

a) Tollen's test b) Sodium bicarbonate test

c) Litmus test d) Esterification test

Ans:- a {Expln:- Methanoic acid is an example for bifunctional compound containing –CHO group,

$$H-\overset{\overset{O}{\|}}{C}-O-H.$$

hence it reduces Tollen's reagent to shining silver mirror.}

26) Which one of the following is an example for homogeneous catalysis?

a) Manufacture of ammonia by Haber's process

b) Manufacture of sulphuric acid by contact process

c) Hydrogenation of oil

d) Hydrolysis of sucrose in the presence of dil. HCl

Ans:- d

27) The equilibrium constant of the reaction: $A_{(s)} + 2B^+_{(aq)} \rightleftharpoons A^{2+}_{(aq)} + 2B_{(s)}$. $E^0_{cell} = 0.0295\,V$ is $\left[\frac{2.303RT}{F} = 0.059\right]$

a) 10 b) 2×10^2

c) 3×10^2 d) 2×10^5

Ans:- a

28) Mercury is a liquid metal because..........

a) it has a completely filled s – orbital

b) it has a small atomic size

c) it has a completely filled d – orbital that prevents d-d overlapping of orbitals

d) it has a completely filled d – orbital that causes d-d overlapping

Ans:- c

29)



Y is ....



Ans:- a



(Contd.....)

ಕೊಡಗು– ದಕ್ಷಿಣ ಕನ್ನಡ ಗಡಿಯ ಕೂಜಿಮಲೆಯ ಅಂಗಡಿಯಿಂದ ದಿನಬಳಕೆ ಸಾಮಗ್ರಿ ಖರೀದಿಸಿದ್ದ ನಕ್ಸಲರು?

ಎಎನ್‌ಎಫ್‌ನಿಂದ ತೀವ್ರ ಶೋಧ

ಪ್ರಜಾವಾಣಿ ವಾರ್ತೆ

ಮಡಿಕೇರಿ/ಸುಬ್ರಹ್ಮಣ್ಯ: ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಗಡಿಭಾಗ ಪುಷ್ಪಗಿರಿ ತಪ್ಪಲಿನ ಸುಬ್ರಹ್ಮಣ್ಯ ಸಮೀಪದ ಕೂಜಿಮಲೆ ಎಸ್ಟೇಟ್‌ಗೆ ಶನಿವಾರ ಸಂಜೆ ಭೇಟಿ ನೀಡಿದ್ದ ತಂಡ ದಲ್ಲಿದ್ದವರು ನಕ್ಸಲರು ಇರಬಹುದು ಎಂಬ ಮಾಹಿತಿ ಆಧಾರದಲ್ಲಿ ಆ ಪ್ರದೇಶದ ಮೂರು ಕಡೆಗಳಲ್ಲಿ ನಕ್ಸಲ್ ನಿಗ್ರಹ ದಳ (ಎಎನ್‌ಎಫ್) ಸೋಮವಾರ ಶೋಧ ಕಾರ್ಯಾಚರಣೆ ನಡೆಸಿತು.

ಕೂಜಿಮಲೆ ಎಸ್ಟೇಟ್ ಪ್ರದೇಶದ ರಾಮಲಿಂಗ ಎಂಬುವವರ ಅಂಗಡಿಗೆ ಇಬ್ಬರು ಪುರುಷರು ಮತ್ತು ಇಬ್ಬರು ಮಹಿಳೆಯರಿದ್ದ ತಂಡ ಶನಿವಾರ ಭೇಟಿ ನೀಡಿತ್ತು. 25 ಕೆ.ಜಿ.ಅಕ್ಕಿ, ಬಟಾಣಿ, ಸಕ್ಕರೆ, ಬೇಳೆ, ಕಡಲೆ, ರವೆ, ಬೇಕರಿ ತಿಂಡಿ ಸೇರಿ ₹3500 ಮೊತ್ತದ ಸಾಮಗ್ರಿ ಖರೀದಿಸಿ ಅಲ್ಲಿಂದ ತೆರಳಿತ್ತು. ಅರಣ್ಯ ಇಲಾಖೆ ಸಿಬ್ಬಂದಿ ಎಂದು ಪರಿಚಯಿಸಿ ಕೊಂಡಿದ್ದ ಈ ನಾಲ್ವರ ಬಳಿಯೂ ಕೋವಿಗಳಿದ್ದವು. ಆ ನಾಲ್ವರೂ ಅರಣ್ಯ ಇಲಾಖೆಯ ಸಿಬ್ಬಂದಿ ಧರಿಸುವಂತಹದ್ದೇ ವಸ್ತ್ರ ಧರಿಸಿದ್ದರು. ಹಾಗಾಗಿ ಅಂಗಡಿಗೆ ಬಂದವರು ಅರಣ್ಯ ಇಲಾಖೆಯ ಸಿಬ್ಬಂದಿ ಎಂದೇ ಸ್ಥಳೀಯರು ನಂಬಿದ್ದರು.

ಭಾನುವಾರ ಸಂಜೆ ಅರಣ್ಯ ಇಲಾಖೆಯ ಸಿಬ್ಬಂದಿ ಅಂಗಡಿಗೆ ಬಂದಾಗ 'ನಿನ್ನೆ ಸಂಜೆ ನಿಮ್ಮವರು ತುಂಬಾ ಸಾಮಗ್ರಿ ಖರೀದಿಸಿದ್ದರಲ್ಲ' ಎಂದು ವರ್ತಕ ವಿಚಾರಿಸಿದ್ದಾರೆ. ಆಗ ಶನಿವಾರ ಬಂದಿದ್ದ ತಂಡದ ಬಗ್ಗೆ ಅನುಮಾನ ಮೂಡಿತ್ತು. ಅರಣ್ಯ ಇಲಾಖೆ ಸಿಬ್ಬಂದಿ ಈ ಬಗ್ಗೆ ಮೇಲಧಿಕಾರಿಗಳಿಗೆ ಮಾಹಿತಿ ನೀಡಿದ್ದರು.

ಕೂಜಿಮಲೆಗೆ ಸೋಮವಾರ ಭೇಟಿ ನೀಡಿದ್ದ ಕಾರ್ಕಳ ನಕ್ಸಲ್ ನಿಗ್ರಹ ದಳದ ತಂಡ

ಈಗ ಹರಿದಾಡುತ್ತಿರುವ ಸುದ್ದಿಗಳಿಂದ ನಕ್ಸಲ್ ನಿಗ್ರಹ ಪಡೆ ಶೋಧ ಆರಂಭಿಸಿದೆ. ಆದರೆ, ಇದುವರೆಗೂ ನಕ್ಸಲರ ಕುರಿತ ಖಚಿತ ಮಾಹಿತಿ ದೊರಕಿಲ್ಲ
ಎಸ್.ಪಿ.ಜಿತೇಂದ್ರ ಕುಮಾರ್ ದಯಾಂ
ನಕ್ಸಲ್ ನಿಗ್ರಹ ಪಡೆಯ ಅಧಿಕಾರಿ

'ಶನಿವಾರ ಅಂಗಡಿಗೆ ಬಂದ ತಂಡದಲ್ಲಿದ್ದವರು, 'ನಮ್ಮ ಇನ್ನೂ ನಾಲ್ವರು ಇಲಾಖೆಯ ಕೊಡಯಿಲ್ಲಿದ್ದಾರೆ' ಎಂದು ಹೇಳಿ ಹೆಚ್ಚು ಸಾಮಗ್ರಿ ಖರೀದಿಸಿದ್ದರು. ತಂಡದ ಸದಸ್ಯರು, ಕನ್ನಡದ ಜೊತೆಗೆ ಮಲಯಾಳ ಮತ್ತು ಹಿಂದಿಯಲ್ಲೂ ಮಾತನಾಡಿದ್ದರು' ಎಂದು ಸ್ಥಳೀಯರು ತಿಳಿಸಿದ್ದಾರೆ.

ಕಾರ್ಕಳದ ಎಎನ್‌ಎಫ್‌ನ 60 ಸಿಬ್ಬಂದಿ ಕೂಜಿಮಲೆಯಲ್ಲಿ ಬೀಡು ಬಿಟ್ಟಿದ್ದಾರೆ. ಕೂಜಿಮಲೆ ಎಸ್ಟೇಟ್ ಭಾಗದಿಂದ ನಕ್ಸಲರು ತೆರಳಿರುವ ಕಡೆಯಿಂದ ಶೋಧ ಆರಂಭಿಸಿದ್ದು, ಕೂಜಿಮಲೆ, ಕಡಮಕಲ್ಲು, ಬಾಳುಗೋಡಿನ ಉಪ್ಪುಕಳ ಪ್ರದೇಶಗಳಲ್ಲಿ ಕಾರ್ಯಾಚರಣೆ ನಡೆಸಿದ್ದಾರೆ. ಶ್ವಾನ ದಳವೂ ಜತೆಯಲ್ಲಿದೆ.

ನಕ್ಸಲ್ ನಿಗ್ರಹ ದಳದ ಡಿವೈಎಸ್‌ಪಿ ರಾಘವೇಂದ್ರ, ಕೊಡಗು ಎಸ್‌ಪಿ ರಾಮರಾಜನ್, ಮಡಿಕೇರಿ ವೃತ್ತ ನಿರೀಕ್ಷಕ ಉಮೇಶ್ ಉಪ್ಪಳಿಕೆ, ಸುಬ್ರಹ್ಮಣ್ಯ ಎಸ್‌ಐ ಕಾರ್ತಿಕ್, ಎಎನ್‌ಎಫ್ ಅಧಿಕಾರಿಗಳು, ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

'ಕೂಜಿಮಲೆಗೆ ಬಂದಿದ್ದ ನಕ್ಸಲರು ಎನ್ನುವುದು ಬಹುತೇಕ ಖಚಿತಗೊಂಡಿದೆ. ವಿಕ್ರಂ ಗೌಡ ನೇತೃತ್ವದ ನಕ್ಸಲ್ ತಂಡ ಇದಾಗಿರಬಹುದು ಎಂಬ ಶಂಕೆಯಲ್ಲಿ ಕಾರ್ಯಾಚರಣೆ ನಡೆಸಲಾಗುತ್ತಿದೆ. ಇವರಲ್ಲಿ ಜಿಷಾ, ಲತಾ ಮುಂಡಗಾರು ಇದ್ದಿರುವುದು ಖಚಿತವಾಗಿದ್ದು, ಇನ್ನುಳಿದ ಇಬ್ಬರು ಪುರುಷರು ಯಾರು ಎಂಬುದು ಖಚಿತಗೊಂಡಿಲ್ಲ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಅಂಗಡಿಗೆ ಬಂದ ನಾಲ್ವರ ಹೊರತು ಪಡಿಸಿ ಉಳಿದ ನಾಲ್ವರನ್ನು ಯಾರೂ ನೋಡಿಲ್ಲ. ಬಂದ ನಾಲ್ವರು ಎಲ್ಲಿಂದ ಬಂದರು ಎನ್ನುವುದೂ ಖಚಿತಗೊಂಡಿಲ್ಲ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಇತ್ತೀಚಿನ ವರ್ಷಗಳಲ್ಲಿ ಮಡಿಕೇರಿ ತಾಲ್ಲೂಕು ವ್ಯಾಪ್ತಿಯಲ್ಲಿ ನಕ್ಸಲರು ಕಾಣಿಸಿಕೊಂಡಿರಲಿಲ್ಲ. ಲೋಕಸಭಾ ಚುನಾವಣೆ ಸಮೀಪಿಸುತ್ತಿರುವುದರಿಂದ ನಕ್ಸಲರು ಬಂದಿರಬಹುದೆಂಬ ಶಂಕೆಯೂ ಇದೆ. ಇದು, ವಿಕ್ರಂಗೌಡ ನೇತೃತ್ವದ ತಂಡವಾಗಿರಬಹುದೆಂಬ ಅನುಮಾನವಿದೆ. ಹೀಗಾಗಿ, ಕಡಮಕಲ್, ಭಾಗಮಂಡಲ, ಸೇರಿದಂತೆ ಸುತ್ತಮುತ್ತಲ ಪ್ರದೇಶಗಳಲ್ಲಿ ಹೆಚ್ಚಿನ ನಿಗಾ ಇರಿಸಲಾಗಿದೆ' ಎಂದು ಮೂಲಗಳು ಹೇಳಿವೆ.

ಮತ್ತೊಂದೆಡೆ, ಕೇರಳ ಗಡಿ ಭಾಗ ಶ್ರೀಮಂಗಲ, ಕುಟ್ಟ, ಮಾಕುಟ್ಟ ಭಾಗಗಳಲ್ಲೂ ನಕ್ಸಲ್ ನಿಗ್ರಹ ಪಡೆಯ ಯೋಧರು ನಿರಂತರವಾಗಿ ಶೋಧ ನಡೆಸುತ್ತಿದ್ದಾರೆ.

ಬೋರ್ಡ್ ಪರೀಕ್ಷೆ: ತೀರ್ಪು ಕಾಯ್ದಿರಿಸಿದ ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯ ಪಠ್ಯಕ್ರಮ ಅನುಸರಿಸುತ್ತಿರುವ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಶಿಕ್ಷಣ ಸಂಸ್ಥೆಗಳಲ್ಲಿ 5, 8 ಮತ್ತು 9ನೇ ತರಗತಿಗಳಿಗೆ ಬೋರ್ಡ್ ಮಟ್ಟದ ಮೌಲ್ಯಾಂಕನ ಪರೀಕ್ಷೆ ನಡೆಸುವ ವಿಷಯಕ್ಕೆ ಸಂಬಂಧಿಸಿದಂತೆ ಸಲ್ಲಿಸಿರುವ ಮೇಲ್ಮನವಿಯ ವಿಚಾರಣೆಯನ್ನು ಹೈಕೋರ್ಟ್ ವಿಭಾಗೀಯ ನ್ಯಾಯಪೀಠ ಮುಕ್ತಾಯಗೊಳಿಸಿದ್ದು ಅಂತಿಮ ತೀರ್ಪು ಕಾಯ್ದಿರಿಸಿದೆ.

ಈ ಕುರಿತ ಮೇಲ್ಮನವಿ ವಿಚಾರಣೆ ಆಲಿಕೆಯನ್ನು ನ್ಯಾಯಮೂರ್ತಿ ಕೆ.ಸೋಮಶೇಖರ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ಮುಕ್ತಾಯಗೊಳಿಸಿತು.

ಈ ಮೊದಲು ಬೋರ್ಡ್ ಪರೀಕ್ಷೆಯನ್ನು ಪ್ರಶ್ನಿಸಲಾದ ರಿಟ್ ಅರ್ಜಿ ವಿಚಾರಣೆ ನಡೆಸಿದ್ದ ಏಕಸದಸ್ಯ ನ್ಯಾಯಪೀಠ ಸರ್ಕಾರದ ಎರಡು ಪ್ರತ್ಯೇಕ ಅಧಿಸೂಚನೆಗಳಿಗೆ ತಡೆ ನೀಡಿತ್ತು. ಇದನ್ನು ಪ್ರಶ್ನಿಸಿ ರಾಜ್ಯ ಸರ್ಕಾರ ಮೇಲ್ಮನವಿ ಸಲ್ಲಿಸಿತ್ತು. ಈ ಮೇಲ್ಮನವಿ ವಿಚಾರಣೆ ನಡೆಸಿದ್ದ ಹೈಕೋರ್ಟ್ ವಿಭಾಗೀಯ ನ್ಯಾಯಪೀಠ ಏಕಸದಸ್ಯ ನ್ಯಾಯಪೀಠದ ಆದೇಶವನ್ನು ರದ್ದುಗೊಳಿಸಿತ್ತು. ಇದನ್ನು ಪ್ರಶ್ನಿಸಿ ಮೂಲ ಅರ್ಜಿದಾರರು ಸುಪ್ರೀಂ ಕೋರ್ಟ್‌ನಲ್ಲಿ ವಿಶೇಷ ಮೇಲ್ಮನವಿ ಸಲ್ಲಿಸಿದ್ದರು. ಇದರ ವಿಚಾರಣೆ ನಡೆಸಿದ್ದ ಸುಪ್ರೀಂ ಕೋರ್ಟ್, ವಿಭಾಗೀಯ ನ್ಯಾಯಪೀಠದ ಆದೇಶಕ್ಕೆ ತಡೆ ನೀಡಿ, ಹೈಕೋರ್ಟ್‌ನಲ್ಲೇ ವಿಚಾರಣೆ ಪೂರ್ಣಗೊಳಿಸಲು ನಿರ್ದೇಶಿಸಿತ್ತು.

ಹುಬ್ಬಳ್ಳಿಯಲ್ಲಿ ಹರಡಿದ ಮೋದಿ ಗ್ಯಾರಂಟಿ ಕಾರ್ಡ್ ವದಂತಿ

ಅಂಚೆ ಕಚೇರಿ: ಮುಗಿಬಿದ್ದ ಮಹಿಳೆಯರು

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಕೇಂದ್ರ ಸರ್ಕಾರದ ಮೋದಿ ಗ್ಯಾರಂಟಿ ಯೋಜನೆಯಡಿ ಅಂಚೆ ಇಲಾಖೆಯಲ್ಲಿ ಉಳಿತಾಯ ಖಾತೆ ತೆರೆದ ಬಿಪಿಎಲ್ ಕಾರ್ಡ್ ಕುಟುಂಬದ ಮಹಿಳೆಯರಿಗೆ ₹3 ಸಾವಿರ ಜಮಾ ಆಗಲಿದೆ' ಎಂಬ ವದಂತಿ ಹರಡಿ ಸೋಮವಾರ ನಗರದ ಅಂಚೆ ಕಚೇರಿಗಳಿಗೆ ಮಹಿಳೆಯರು ಮುಗಿಬಿದ್ದರು.

ಬೆಳಿಗ್ಗೆ 8ರಿಂದ ನಗರದ ವಿವಿಧ ಅಂಚೆಕಚೇರಿಗಳ ಎದುರು ಮಹಿಳೆಯರು ಸಾಲುಗಟ್ಟಿ ನಿಂತರು. ಸ್ಟೇಷನ್ ರಸ್ತೆಯಲ್ಲಿರುವ ಮುಖ್ಯ ಅಂಚೆಕಚೇರಿ ಎದುರು ರಾತ್ರಿ 8ರವರೆಗೆ ಸಾಲು ಇತ್ತು. ಹಳೇಹುಬ್ಬಳ್ಳಿ, ಗಿರಣಿಚಾಳ, ಉದ್ಯಮನಗರ, ನವನಗರ, ಟ್ರಾಫಿಕ್ ಐಲ್ಯಾಂಡ್ ಉಪ ಅಂಚೆ ಕಚೇರಿಗಳ ಎದುರು ಸಹ ಇದೇ ವಾತಾವರಣ ಇತ್ತು.

'ಮೋದಿ ಕಾರ್ಡ್, ಮೋದಿ ಖಾತೆ ಎಂಬ ಯಾವುದೇ ಯೋಜನೆ ಅಂಚೆ ಕಚೇರಿಯಲ್ಲಿ ಇಲ್ಲ' ಎಂದು ಅಂಚೆ ಕಚೇರಿ ಸಿಬ್ಬಂದಿ ಪದೇ ಪದೇ ಹೇಳಿದರೂ, 'ನೀವು ಸುಳ್ಳು ಹೇಳುತ್ತೀರಿ. ನಾವು ಉಳಿತಾಯ ಖಾತೆ ತೆರೆಯಲೇಬೇಕು' ಎಂದರು.

ಹುಬ್ಬಳ್ಳಿಯ ಸ್ಟೇಷನ್ ರಸ್ತೆ ಬಳಿ ಇರುವ ಮುಖ್ಯ ಅಂಚೆಕಚೇರಿ ಆವರಣದಲ್ಲಿ ಸೋಮವಾರ ಮಹಿಳೆಯರು ಉಳಿತಾಯ ಖಾತೆ ತೆರೆಯಲು ಜಮಾಯಿಸಿದ್ದರು
– ಪ್ರಜಾವಾಣಿ ಚಿತ್ರ: ಗೋವಿಂದರಾಜ ಜವಳಿ

'ಮೋದಿ ಗ್ಯಾರಂಟಿ ಯೋಜನೆ ಘೋಷಿಸಿದ್ದಾರಂತೆ. ಉಳಿತಾಯ ಖಾತೆ ಮಾಡಿಸಿದರೆ, ಮೂರು ತಿಂಗಳಿಗೊಮ್ಮೆ ₹3 ಸಾವಿರ ಹಾಕುತ್ತಾರಂತೆ. ಅದಕ್ಕೆ ಬೆಳಿಗ್ಗೇನೆ ಬಂದು ನಿಂತಿರುವೆ' ಎಂದು ಗಂಗಾಧರ ನಗರದ ಲಕ್ಷ್ಮವ್ವ ಸಣ್ಣಕ್ಕಿ ಹೇಳಿದರು.

'ಮೋದಿ ಕಾರ್ಡ್ ಮಾಡಿಸಿದರಷ್ಟೇ ₹3 ಸಾವಿರ ಹಾಕುತ್ತಾರಂತೆ. ನಮ್ಮ ಮನೆ ಅಕ್ಕಪಕ್ಕದವರು ಕಾರ್ಡ್ ಮಾಡಿಸಿದ್ದಾರೆ. ಶನಿವಾರದ ಒಳಗ ಕಾರ್ಡ್ ಮಾಡಿಸಿದರಷ್ಟೇ ಹಣ ಬರುತ್ತಂತೆ' ಎಂದು ಕೆ.ಕೆ.ನಗರದ ಶಿವರುದ್ರಮ್ಮ ಹೇಳಿದರು.

'ಅಂಚೆ ಕಚೇರಿಯಲ್ಲಿ ಮಹಿಳೆಯರು ಮೋದಿ ಖಾತೆ ತೆರೆದರೆ, ಮೂರು ತಿಂಗಳಿಗೊಮ್ಮೆ ₹3 ಸಾವಿರ ಖಾತೆಗೆ ಜಮಾ ಆಗುವುದು ಎಂದು ಯಾರೋ ಕಿಡಿಗೇಡಿಗಳು ಸುಳ್ಳು ಸುದ್ದಿ ಹಬ್ಬಿಸಿದ್ದಾರೆ. ಅದನ್ನು ನಂಬಿದ ಮಹಿಳೆಯರು ಬೆಳಿಗ್ಗೆಯಿಂದ ಅಂಚೆ ಕಚೇರಿಗಳ ಎದುರು ಜಮಾಯಿಸಿದ್ದಾರೆ. ಅಂಚೆ ಕಚೇರಿಗಳ ಎದುರು ನೋಟಿಸ್ ಅಂಟಿಸಿ, ಸುಳ್ಳು ಸುದ್ದಿ ನಂಬಬೇಡಿ ಎಂದಿದ್ದೇವೆ. ಆದರೂ ಮಹಿಳೆಯರು ನಮ್ಮ ಮಾತು ಒಪ್ಪುತ್ತಿಲ್ಲ' ಎಂದು ಪ್ರಧಾನ ಅಂಚೆ ಕಚೇರಿಯ ಹಿರಿಯ ಪೋಸ್ಟ್‌ಮಾಸ್ಟರ್ ಎಂ.ಕುಮಾರಸ್ವಾಮಿ ತಿಳಿಸಿದರು.

'ಎರಡು ವರ್ಷದ ಹಿಂದೆಯೇ ಇಂಡಿಯಾ ಪೋಸ್ಟ್ ಪೇಮೆಂಟ್ ಬ್ಯಾಂಕ್ ಯೋಜನೆ ಪರಿಚಯಿಸಿದ್ದೇವೆ. ಅದು ಉಳಿತಾಯ ಖಾತೆಯಾಗಿದ್ದು, ಯಾರು ಬೇಕಾದರೂ ₹200 ನೀಡಿ ಖಾತೆ ತೆರೆಯಬಹುದು. ವದಂತಿ ನಂಬಿ ಅಂಚೆ ಕಚೇರಿ ಎದುರು ದಿನಕ್ಕೆ ಹುಬ್ಬಳ್ಳಿ ನಗರದ ವಿವಿಧ ಬಡಾವಣೆಯ ಒಂದು ಸಾವಿರ ಮಹಿಳೆಯರು ಖಾತೆ ತೆರೆಯಲು ಬರುತ್ತಿದ್ದಾರೆ. ಗರಿಷ್ಠ 400 ಖಾತೆ ತೆರೆಯಬಹುದು. ವಿವಿಧ ವಿಭಾಗಗಳ ಸಿಬ್ಬಂದಿಯನ್ನು ಬಳಸಿಕೊಂಡು ರಾತ್ರಿ 11ರವರೆಗೂ ಕೆಲಸ ಮಾಡುತ್ತಿದ್ದೇವೆ' ಎಂದು ಅವರು ತಿಳಿಸಿದರು.

ನಾಮಫಲಕ: ಬಲವಂತದ ಕ್ರಮ ಬೇಡ– ಹೈಕೋರ್ಟ್

ಒಂದನೇ ಪುಟದಿಂದ

ಇದಕ್ಕೆ ಅರ್ಜಿದಾರರ ಪರ ವಕೀಲರು, 'ಎಲ್ಲಾ ಬಗೆಯ ನಾಮಫಲಕಗಳಲ್ಲಿ ಶೇ 60ರಷ್ಟು ಕನ್ನಡ ಕಡ್ಡಾಯಗೊಳಿಸುವ ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಕಾಯ್ದೆ-2022ರ ಜಾರಿ ಸಮರ್ಪಕವಾಗಿಲ್ಲ. ಜಾರಿ ದಿನಾಂಕದ ಬಗ್ಗೆ ಗೆಜೆಟ್ ಅಧಿಸೂಚನೆಯನ್ನೇ ಹೊರಡಿಸಿಲ್ಲ. ಅಂತೆಯೇ, ಡಿಜಿಟಲ್ ನಾಮಫಲಕಗಳನ್ನು ಬದಲಿಸಲು ಕಾಲಾವಕಾಶ ಬೇಕಾಗುತ್ತದೆ' ಎಂದು ಸ್ಪಷ್ಟಪಡಿಸಿದರು.

'ಸರ್ಕಾರ ಮತ್ತು ಬಿಬಿಎಂಪಿ ಸ್ವಲ್ಪ ಸಮಯಾವಕಾಶ ನೀಡಿದೆಯಾದರೂ ಅದು ಸಾಕಾಗುತ್ತಿಲ್ಲ. ಒಂದೇ ಬಾರಿಗೆ ಎಲ್ಲಾ ವಾಣಿಜ್ಯ ಸಂಸ್ಥೆಗಳು ಫಲಕ ಬದಲಾವಣೆಗೆ ಮುಂದಾಗಿರುವುದರಿಂದ ನಾಮಫಲಕಗಳು ಸಕಾಲದಲ್ಲಿ ಲಭ್ಯವಾಗುತ್ತಿಲ್ಲ. ಆದರೆ, ಸರ್ಕಾರ ಮತ್ತು ಬಿಬಿಎಂಪಿ ನಾಮಫಲಕಗಳಲ್ಲಿ ಶೇ 60ರಷ್ಟು ಕನ್ನಡ ಇಲ್ಲದಿದ್ದರೆ ವಾಣಿಜ್ಯ ಸಂಸ್ಥೆಗಳನ್ನು ಮುಚ್ಚಲು ಮುಂದಾಗುತ್ತಿವೆ. ವ್ಯಾಪಾರಿಗಳ ವಿರುದ್ಧ ಇದೊಂದು ಉಗ್ರ ಕ್ರಮವಾಗಿದೆ. ಇದರಿಂದ ವಾಣಿಜ್ಯ ಸಂಸ್ಥೆಗಳ ವ್ಯಾಪಾರ, ವಹಿವಾಟಿಗೆ ತೊಂದರೆಯಾಗುತ್ತಿದೆ' ಎಂದು ನ್ಯಾಯಪೀಠಕ್ಕೆ ವಿವರಿಸಿದರು.

ಭಂಡಾರದ ಓಕುಳಿ

ಚಿಕ್ಕೋಡಿ ತಾಲ್ಲೂಕಿನ ಕೇರೂರಿನಲ್ಲಿ ಅರಣ್ಯ ಸಿದ್ಧೇಶ್ವರ ಹಾಗೂ ಮಲಕಾರಿ ಸಿದ್ಧೇಶ್ವರ ಜಾತ್ರೆ ಕೊನೆಯ ದಿನದ ಪ್ರಯುಕ್ತ ಸೋಮವಾರ ನಡೆದ ನಿವ್ವಾಳಕಿಯಲ್ಲಿ ಭಕ್ತರು ಭಂಡಾರದ ಓಕುಳಿಯಲ್ಲಿ ಮಿಂದೆದ್ದರು – ಪ್ರಜಾವಾಣಿ ಚಿತ್ರ: ಚಂದ್ರಶೇಖರ ಎಸ್.ಚಿನಕೇಕರ

ಜಿಮ್ಸ್: ಐಸಿಯು ವಾರ್ಡ್‌ನಲ್ಲಿ ಕೆಟ್ಟ ಎಸಿ; ರೋಗಿಗಳ ಪರದಾಟ

ಪ್ರಜಾವಾಣಿ ವಾರ್ತೆ

ಕಲಬುರಗಿ: ನಗರದ ಜಿಮ್ಸ್ ಆಸ್ಪತ್ರೆಯ ಐಸಿಯು ವಾರ್ಡ್‌ನಲ್ಲಿ ಒಂದು ತಿಂಗಳಿಂದ ಏರ್ ಕೂಲರ್‌ಗಳು ಕೆಟ್ಟಿರುವುದರಿಂದ ಸಮರ್ಪಕವಾಗಿ ಗಾಳಿಯ ವ್ಯವಸ್ಥೆ ಇಲ್ಲದೇ ರೋಗಿಗಳು ಕಷ್ಟ ಪಡುತ್ತಿದ್ದಾರೆ. ಐಸಿಯು ವಾರ್ಡ್‌ನಲ್ಲಿ ಸುಮಾರು 14 ರೋಗಿಗಳು ಚಿಕಿತ್ಸೆ ಪಡೆಯುತ್ತಿದ್ದು, ಯಾವುದೇ ಗಾಳಿಯ ವ್ಯವಸ್ಥೆ ಇರದ ಕಾರಣ ಐಸಿಯು ಕೋಣೆಯ ಕಿಟಕಿಗಳನ್ನು ತೆಗೆಯಲಾಗಿದೆ.

ಐಸಿಯುನಲ್ಲಿ ಎಸಿ ಇಲ್ಲದೆ ಹಗಲು–ರಾತ್ರಿ ರೋಗಿಗಳು ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಜಿಲ್ಲೆಯಲ್ಲಿ ರಣ ಬಿಸಿಲಿಗೆ ಜನ ಕಂಗೆಟ್ಟು ಹೋಗಿದ್ದು, ಐಸಿಯು ವಿಭಾಗದಲ್ಲಿ ಜಿಮ್ಸ್ ಆಡಳಿತ ಮಂಡಳಿ ಕನಿಷ್ಠ ಫ್ಯಾನ್‌ಗಳ ವ್ಯವಸ್ಥೆ ಮಾಡದೇ ಇರುವುದರಿಂದ ರೋಗಿಗಳು ಹೈರಾಣಾಗಿದ್ದಾರೆ. ಕೆಲ ರೋಗಿಯ ಸಂಬಂಧಿಕರು ಮನೆಯಿಂದಲೇ ಫ್ಯಾನ್‌ಗಳನ್ನು ತಂದು ಹಚ್ಚಿದ್ದಾರೆ ಎಂದು ಗೊತ್ತಾಗಿದೆ.

ಜಿಮ್ಸ್ ಆಸ್ಪತ್ರೆ ಆಡಳಿತ ಮಂಡಳಿ ಹಾಗೂ ಸರ್ಕಾರ ರೋಗಿಗಳ ಜತೆಗೆ ಚೆಲ್ಲಾಟ ಆಡುತ್ತಿದೆ ಎಂದು ರೋಗಿಗಳ ಸಂಬಂಧಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ಕುರಿತು ಪ್ರತಿಕ್ರಿಯೆ ನೀಡಿದ ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ ಪಾಟೀಲ, 'ಐಸಿಯುನಲ್ಲಿ ಎ.ಸಿ.ಗಳು ಕೆಟ್ಟು ಹೋಗಿರುವ ಬಗ್ಗೆ ಮಾಹಿತಿ ಸಿಕ್ಕಿದ್ದು, ತಕ್ಷಣ ದುರಸ್ತಿ ಮಾಡುವಂತೆ ಅಧಿಕಾರಿಗಳಿಗೆ ಸೂಚಿಸಿದ್ದೇನೆ. ಅಲ್ಲದೇ, 500 ಎಸಿಗಳನ್ನು ಖರೀದಿಸುವ ಪ್ರಕ್ರಿಯೆ ಪ್ರಗತಿಯಲ್ಲಿದೆ' ಎಂದರು.

'ಧರ್ಮಧ್ವಜ ಸಮಾಜದ ಗುರಿಯ ಪ್ರತೀಕ'

ಪ್ರಜಾವಾಣಿ ವಾರ್ತೆ

ನಾಗಮಂಗಲ (ಮಂಡ್ಯ ಜಿಲ್ಲೆ): 'ಧ್ವಜ ಎಂಬುದು ಸಮಾಜದ ಗುರಿ, ಅಸ್ಮಿತೆಯ ಪ್ರತೀಕ. ವಿಶಾಲಾರ್ಥದಲ್ಲಿ ನಮ್ಮ ಧರ್ಮ, ಅಧ್ಯಾತ್ಮ, ಸಂಸ್ಕೃತಿ, ಭಾವನೆ, ಧ್ಯೇಯೋದ್ದೇಶಗಳ ಪ್ರತಿಬಿಂಬ. ಅದನ್ನು ಯಾರೂ ಅವಮಾನಿಸಬಾರದು' ಎಂದು ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಹೇಳಿದರು.

ಆದಿಚುಂಚನಗಿರಿ ಮಠದಲ್ಲಿ ಸೋಮವಾರ ಅವರು ನಾಂದಿ ಪೂಜೆ ಮತ್ತು ಧರ್ಮಧ್ವಜ ಸ್ಥಾಪಿಸಿ ಆದಿಚುಂಚನಗಿರಿ ಜಾತ್ರೆಗೆ ಚಾಲನೆ ನೀಡಿ ಮಾತನಾಡಿದರು.

'ಎಲ್ಲಾ ದೇಶಕ್ಕೂ ಸಂಸ್ಕೃತಿ ಮತ್ತು ನಾಗರಿಕತೆ ಇದೆ. ಯಾವ ದೇಶದ ನಾಗರಿಕತೆ ಶ್ರೇಷ್ಠವೆಂದು ಕೇಳಿದರೆ, ನಮ್ಮದೇ ಎನ್ನುತ್ತೇವೆ. ಏನೇ ಆದರೂ, ಮಕ್ಕಳಿಗೆ ತಂದೆತಾಯಿಯೇ ಶ್ರೇಷ್ಠ. ಜಗತ್ತಿನಲ್ಲಿ ಹಲವು ಸಂಸ್ಕೃತಿಗಳು ಇವತ್ತಿನ ಪರಿಸ್ಥಿತಿಗೆ ತಮ್ಮದೇ ಆದ ಕೊಡುಗೆ ನೀಡಿವೆ' ಎಂದರು.

'ಮನುಷ್ಯ ಹುಟ್ಟಿದ ನಂತರ ಎಷ್ಟೋ ನಾಗರಿಕತೆಗಳು ಶಿಖರಪ್ರಾಯವಾಗಿ ಬೆಳೆದು ಅಧಃಪತನಗೊಂಡಿವೆ. ಎತ್ತರಕ್ಕೆ ಬೆಳೆದು ಹಲವು ದಬ್ಬಾಳಿಕೆಗಳ ನಡುವೆಯೂ ಜತನವಾಗಿ ಉಳಿಸಿ ಬೆಳೆಸಿಕೊಂಡು ಬಂದಿರುವ ನಮ್ಮ ನಾಗರಿಕತೆಯು ಸಹಜವಾಗಿ ನಮಗೆ ಇಷ್ಟವಾಗುತ್ತದೆ' ಎಂದರು.

ಆದಿಚುಂಚನಗಿರಿ ಮಠದ ಪೀಠಾಧಿಕಾರಿ ನಿರ್ಮಲಾನಂದನಾಥ ಸ್ವಾಮೀಜಿ ಅವರು ಧರ್ಮಧ್ವಜ ಸ್ಥಾಪನೆ ಮತ್ತು ನಾಂದಿ ಪೂಜೆ ನೆರವೇರಿಸಿ ಜಾತ್ರೆಗೆ ಚಾಲನೆ ನೀಡಿದರು

'9 ದಿನಗಳ ಜಾತ್ರೆಯ ಅಂಗವಾಗಿ ಧರ್ಮ ಧ್ವಜವನ್ನು ನೆಟ್ಟಿದ್ದು, ಸಂಕಲ್ಪದ ಧ್ವಜವನ್ನು ಮನಸ್ಸಿನಲ್ಲಿ ನೆಡಬೇಕಾಗಿದೆ. ನಂತರ ಅದರ ಸಿದ್ಧಿಗಾಗಿ ಸಾಧನೆಯನ್ನು ಆರಂಭಿಸಬೇಕು. ಮುಕ್ತಿಯ ಸಲುವಾಗಿ ಹಿರಿಯರು ಬದುಕಿ ತೋರಿಸಿರುವ ಆಚರಣೆ ಗಳನ್ನು ಚಾಚೂ ತಪ್ಪದೇ ಪಾಲಿಸಬೇಕು' ಎಂದರು.

ಆದಿಚುಂಚನಗಿರಿ ಮಠದ ಪ್ರಧಾನ ಕಾರ್ಯದರ್ಶಿ ಪ್ರಸನ್ನನಾಥ ಸ್ವಾಮೀಜಿ, ಚೈತನ್ಯನಾಥ ಸ್ವಾಮೀಜಿ, ಆದಿಚುಂಚನಗಿರಿ ವಿಶ್ವವಿದ್ಯಾಲಯದ ಕುಲಪತಿ ಡಾ.ಎಂ.ಎ. ಶೇಖರ್, ಮುನಿಯಪ್ಪಾಜೀ ಮನೋಹರ್ ಮಠದ, ಪುಟ್ಟರಂಗಪ್ಪ ಪಾಲ್ಗೊಂಡಿದ್ದರು.

ಬತ್ತಿದ ನದಿಗೆ ನೀರು ಹರಿಸುವ ರೈತ

ಒಂದನೇ ಪುಟದಿಂದ

'ಕಾಡುಕೋಣ, ಜಿಂಕೆ, ಕಡವೆ, ಮೊಲ, ನರಿ, ಕಾಡುಹಂದಿ ಮತ್ತಿತರ ಪ್ರಾಣಿಗಳು, ವಲಸೆ ಹಕ್ಕಿಗಳು ಸೇತುವೆ ಬಳಿ ಸಂಗ್ರಹವಾಗಿರುವ ನದಿ ನೀರು ಕುಡಿಯಲು ನಿತ್ಯ ಬರುತ್ತವೆ. ಸ್ಥಳೀಯರು ಸಾಕಿಕೊಂಡಿರುವ ಜಾನುವಾರುಗಳೂ ಮೇಯಲು ಬಂದಾಗ ಇದೇ ನೀರನ್ನು ಅವಲಂಬಿಸಿವೆ' ಎಂದೂ ಅವರು ವಿವರಿಸಿದರು.

ಪರಿಸರ ಕಾಳಜಿ: ನದಿಗೆ ನೀರು ಹರಿಸುವ ಕೆಲಸವನ್ನು ಮಾತ್ರವಲ್ಲದೇ ನದಿ ಪಾತ್ರವನ್ನೂ ಸ್ವಚ್ಛಗೊಳಿಸುವ ಕಾಯಕದಲ್ಲೂ ಮಂಜುನಾಥ ಭಟ್ ತೊಡಗಿದ್ದಾರೆ.

ವಾರಾಂತ್ಯಕ್ಕೆ ನದಿ ಪಾತ್ರದತ್ತ ಬಂದು ಕುಡಿದು, ಕುಪ್ಪಳಿಸಿ ಪ್ಲಾಸ್ಟಿಕ್ ಡಬ್ಬ, ಗಾಜಿನ ಬಿಯರ್ ಬಾಟಲು, ಮದ್ಯದ ಬಾಟಲು ಎಸೆದು ಹೋಗುವವರ ಸಂಖ್ಯೆ ಅಧಿಕವಾಗಿದೆ. ಪ್ರತಿ ಸೋಮವಾರ ಅರ್ಧ ದಿನ ಶ್ರಮದಾನದ ಮೂಲಕ ಈ ಪ್ರದೇಶವನ್ನು ಸ್ವಚ್ಛಗೊಳಿಸುತ್ತ ಪರಿಸರ ಸಂರಕ್ಷಣೆಯಲ್ಲಿ ತೊಡಗಿದ್ದಾರೆ.

ನಿತ್ಯ ಬೆಳಿಗ್ಗೆ 5ರಿಂದ ರಾತ್ರಿ 7ರವರೆಗೆ ತೋಟದ ಕೆಲಸದಲ್ಲಿ ತೊಡಗುವ ಇವರು, ಅಡಿಕೆ, ಬಾಳೆ, ನಿಂಬೆ, ಕುಂಬಳ, ಪೇರಲ, ಕಂಚಿ, ತೆಂಗು, ಸಪೋಟ ಹಾಗೂ ವಿವಿಧ ತಳಿಯ ಹಲಸಿನ ಮರ, ಮಾವಿನ ಮರ ಬೆಳೆದಿದ್ದಾರೆ.

ಕೆಲವು ಹಣ್ಣುಗಳು, ಕುಂಬಳ ಕಾಯಿಯನ್ನು ಕಾಡುಪ್ರಾಣಿಗಳ ಆಹಾರಕ್ಕಾಗಿ ಮೀಸಲಿಡುವ ಮೂಲಕ ನೈಸರ್ಗಿಕ ಸಂಪತ್ತಿನಲ್ಲಿ ಅವುಗಳ ಪಾಲೂ ಇದೆ ಎಂದು ಒತ್ತಿ ಹೇಳುತ್ತಾರೆ.

ವನ್ಯಜೀವಿ ಸಂರಕ್ಷಣೆಗಾಗಿ ಇವರ ಶ್ರಮವು ಇತರರಿಗೆ ಸ್ಫೂರ್ತಿಯಾಗಿದೆ. ಸಾಮಾನ್ಯವಾಗಿ ರೈತರು ನದಿ, ಕಾಲುವೆಯಿಂದ ತಮ್ಮ ಜಮೀನಿಗೆ ಪೈಪ್‌ಲೈನ್ ಮೂಲಕ ನೀರು ಹರಿಸಿಕೊಂಡರೆ ಇವರು ಕೊಳವೆಬಾವಿ ನೀರನ್ನೇ ನದಿಗೆ ಹರಿಸುತ್ತ ಭಿನ್ನವಾಗಿ ಕಾಣುತ್ತಾರೆ ಎಂದು ಸ್ಥಳೀಯರು ಶ್ಲಾಘಿಸುತ್ತಾರೆ.

ಕೊಡಗು: ತಂಪೆರೆದ ಮಳೆರಾಯ

ಪ್ರಜಾವಾಣಿ ವಾರ್ತೆ

ನಾಪೋಕ್ಲು (ಕೊಡಗು ಜಿಲ್ಲೆ): ಇಲ್ಲಿಗೆ ಸಮೀಪದ ಕುಂಜಿಲಗೇರಿ, ಬೊಳ್ಳುಮಾಡು, ಕರಡ ಹಾಗೂ ಅರಪಟ್ಟು ಗ್ರಾಮದಲ್ಲಿ ಸೋಮವಾರ ಮಧ್ಯಾಹ್ನ ಅರ್ಧ ಗಂಟೆ ಕಾಲ ಬಿರುಸಿನ ಮಳೆ ಸುರಿಯಿತು.

ಬಿಸಿಲಿನಿಂದ ಬಸವಳಿದಿದ್ದ ಜನ ಮತ್ತು ಬೆಳೆಗಾರರು, ವರ್ಷದ ಮೊದಲ ಮಳೆಯಿಂದ ಸಂತಸಗೊಂಡರು. ಚೆಯ್ಯಂಡಾಣೆ, ಕಡಂಗ, ಪಾಲಂಗಾಲ ಗ್ರಾಮ ವ್ಯಾಪ್ತಿಯಲ್ಲೂ ಉತ್ತಮ ಮಳೆಯಾಗಿದೆ. ಕುಶಾಲನಗರ ತಾಲ್ಲೂಕಿನ ದುಬಾರೆಯಲ್ಲಿ ತುಂತುರು ಮಳೆಯಾಗಿದೆ. ಜಿಲ್ಲೆಯ ಹಲವೆಡೆ ಮೋಡ ಕವಿದ ವಾತಾವರಣವಿತ್ತು.

ಒಳನಾಡು ಭಾಗದಲ್ಲಿ ಮಳೆ ಸಾಧ್ಯತೆ

ಬೆಂಗಳೂರು: ರಾಜ್ಯದ ಒಳನಾಡು ಭಾಗದಲ್ಲಿ ಮಂಗಳವಾರ ಮತ್ತು ಬುಧವಾರ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಕರಾವಳಿ ಭಾಗದ ಜಿಲ್ಲೆಗಳು ಹಾಗೂ ಬಾಗಲಕೋಟೆ, ಹಾವೇರಿ, ಕೊಪ್ಪಳ, ದಾವಣಗೆರೆ, ಮಂಡ್ಯ ಹಾಗೂ ಮೈಸೂರು ಜಿಲ್ಲೆಗಳಲ್ಲಿ ಗರಿಷ್ಠ ತಾಪಮಾನ ಸಾಮಾನ್ಯಕ್ಕಿಂತ 2 ಡಿಗ್ರಿ ಸೆಲ್ಸಿಯಸ್ ಹೆಚ್ಚಳವಾಗುವ ಸಾಧ್ಯತೆಯಿದೆ. ಬೆಂಗಳೂರಿನಲ್ಲಿ ಭಾಗಶಃ ಮೋಡ ಕವಿದ ವಾತಾವರಣ ಇರಲಿದ್ದು, ಗರಿಷ್ಠ ಉಷ್ಣಾಂಶ 35 ಡಿಗ್ರಿ ಸೆಲ್ಸಿಯಸ್ ಹಾಗೂ ಕನಿಷ್ಠ ಉಷ್ಣಾಂಶ 21 ಡಿಗ್ರಿ ಸೆಲ್ಸಿಯಸ್ ಇರುವ ಸಾಧ್ಯತೆಯಿದೆ ಎಂದು ಸೂಚನೆ ನೀಡಿದೆ.

ರಾಜ್ಯದಲ್ಲೇ ತುಮಕೂರು ಜಿಲ್ಲೆಯ ಚಿಕ್ಕನಹಳ್ಳಿಯಲ್ಲಿ ಸೋಮವಾರ 38.7 ಡಿಗ್ರಿ ಸೆಲ್ಸಿಯಸ್ ಗರಿಷ್ಠ ಉಷ್ಣಾಂಶ ದಾಖಲಾಗಿತ್ತು. ಬೀದರ್‌ನಲ್ಲಿ ಭಾನುವಾರ 4 ಸೆಂ.ಮೀ ಮಳೆ ಸುರಿದು ತಂಪೆರೆದಿತ್ತು.

ಸಿಇಟಿ ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

ಬೆಂಗಳೂರು: ವೃತ್ತಿಪರ ಕೋರ್ಸ್‌ಗಳಿಗೆ ನಡೆಸುವ ಸಾಮಾನ್ಯ ಪ್ರವೇಶ ಪರೀಕ್ಷೆಗೆ (ಸಿಇಟಿ) ಅರ್ಜಿ ಸಲ್ಲಿಸಲು ಮಾರ್ಚ್ 20ರ ರಾತ್ರಿ 12 ಗಂಟೆಯವರೆಗೆ ಅವಧಿ ವಿಸ್ತರಿಸಲಾಗಿದೆ. ಶುಲ್ಕ ಪಾವತಿಸಲು ಮಾರ್ಚ್ 21ರ ಸಂಜೆ 5.30ರವರೆಗೆ ಕಾಲಾವಕಾಶ ನೀಡಲಾಗಿದೆ.

'ಈಗ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳಿಗೆ ಬೆಂಗಳೂರಿನ ಕೇಂದ್ರಗಳಲ್ಲಿ ಮಾತ್ರ ಪರೀಕ್ಷೆ ಬರೆಯಲು ಅವಕಾಶ ಕೊಡಲಾಗುವುದು. ಏಪ್ರಿಲ್ 18 ಮತ್ತು 19ರಂದು ಸಿಇಟಿ ನಡೆಯಲಿದೆ' ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕಿ ಎಸ್. ರಮ್ಯಾ ತಿಳಿಸಿದರು.

21 ದಿನ ಬಸ್ ಯಾತ್ರೆ ನಡೆಸಲಿರುವ ಸಿ.ಎಂ ಜಗನ್

ಅಮರಾವತಿ (ಪಿಟಿಐ): ವೈಎಸ್‌ಆರ್‌ಪಿ ಮುಖ್ಯಸ್ಥ ಮತ್ತು ಆಂಧ್ರಪ್ರದೇಶದ ಮುಖ್ಯಮಂತ್ರಿ ವೈ.ಎಸ್. ಜಗನ್ ಮೋಹನ್ ರೆಡ್ಡಿ ಅವರು ಲೋಕಸಭೆ ಮತ್ತು ವಿಧಾನಸಭೆ ಚುನಾವಣೆಗಳ ಪ್ರಚಾರಕ್ಕಾಗಿ ರಾಜ್ಯಾದ್ಯಂತ 21 ದಿನಗಳ ಕಾಲ ಬಸ್ ಯಾತ್ರೆ ಕೈಗೊಳ್ಳಲಿದ್ದಾರೆ.

'ಇದೇ 26 ಅಥವಾ 27ರಂದು ಈ ಯಾತ್ರೆ ಆರಂಭವಾಗಲಿದೆ. ರಾಜ್ಯದ ಎಲ್ಲ ಲೋಕಸಭಾ ಕ್ಷೇತ್ರಗಳಲ್ಲಿ ಈ ಯಾತ್ರೆ ನಡೆಯಲಿದೆ' ಎಂದು ಮುಖ್ಯಮಂತ್ರಿ ಕಚೇರಿಯು ಸೋಮವಾರ ಪ್ರಕಟಣೆಯಲ್ಲಿ ತಿಳಿಸಿದೆ.

₹47 ಕೋಟಿ ಅಕ್ರಮ: ಸಿಐಡಿ ತನಿಖೆ

ಒಂದನೇ ಪುಟದಿಂದ

ನಡಾವಳಿ ತಿರುಚಿ ಅಕ್ರಮ: '2021ರ ಅಕ್ಟೋಬರ್ 25ರಂದು 194ನೇ ನಿರ್ದೇಶಕ ಮಂಡಳಿ ಸಭೆ ನಡೆಸಲಾಗಿತ್ತು. ಅಂದಿನ ಅಧ್ಯಕ್ಷ, ವ್ಯವಸ್ಥಾಪಕ ನಿರ್ದೇಶಕ ಸೇರಿ ಒಟ್ಟು 10 ನಿರ್ದೇಶಕರು ಸಭೆಯಲ್ಲಿ ಪಾಲ್ಗೊಂಡಿದ್ದರು. ಟ್ರಕ್ ಟರ್ಮಿನಲ್‌ಗಳ ದುರಸ್ತಿ ಹಾಗೂ ನಿರ್ವಹಣೆ ಕಾಮಗಾರಿಗಳನ್ನು ತುರ್ತಾಗಿ ತುಂಡು ಗುತ್ತಿಗೆ ನೀಡುವ ಬಗ್ಗೆ ಸಭೆಯಲ್ಲಿ ಚರ್ಚೆ ನಡೆದಿತ್ತು' ಎಂದು ಶಿವಪ್ರಕಾಶ್ ಅವರು ದೂರಿನಲ್ಲಿ ತಿಳಿಸಿದ್ದರು. 'ಚಾಲ್ತಿಯಲ್ಲಿರುವ ಕಾಯ್ದೆಗೆ ವಿರುದ್ಧವಾಗಿ, ₹10 ಕೋಟಿವರೆಗೆ ತುಂಡು ಗುತ್ತಿಗೆ ನೀಡಲು ಅನುಮೋದನಾ ನಿರ್ಣಯ ಕೈಗೊಳ್ಳಲಾಗಿತ್ತು. ಆದರೆ, ಇದಕ್ಕೆ ಕಾನೂನಿನಡಿ ಒಪ್ಪಿಗೆ ಇರಲಿಲ್ಲ. ಯಾವುದೇ ತುಂಡು ಗುತ್ತಿಗೆ ನೀಡದೇ ನಕಲಿ ದಾಖಲೆ ಸೃಷ್ಟಿಸಿ ಹಣ ಪಡೆದು ಅಕ್ರಮ ಎಸಗಿರುವ ಮಾಹಿತಿ ಇದೆ' ಎಂದು ದೂರಿನಲ್ಲಿ ಹೇಳಲಾಗಿದೆ.

'ಸಭೆಯ ನಿರ್ಣಯವನ್ನು ತಿರುಚಿ, ನಕಲಿ ದಾಖಲೆ ಸೃಷ್ಟಿಸಿ ₹47.10 ಕೋಟಿ ಅಕ್ರಮ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ. ಅಕ್ರಮದಲ್ಲಿ ಭಾಗಿಯಾಗಿರುವವರನ್ನು ಪತ್ತೆ ಮಾಡಿ, ಕಾನೂನು ಕ್ರಮ ಕೈಗೊಳ್ಳಿ' ಎಂದು ದೂರಿನಲ್ಲಿ ಒತ್ತಾಯಿಸಿದ್ದಾರೆ.



ಕರ್ನಾಟಕ ಸರ್ಕಾರ – ಹಿಂದೂ ಧಾರ್ಮಿಕ ದತ್ತಿ ಇಲಾಖೆ
ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಾಲಯ, ನಂಜನಗೂಡು
ದೊಡ್ಡಜಾತ್ರಾ ಮಹೋತ್ಸವ–2024

ಸ್ವಸ್ತಿ ಶ್ರೀ ವಿಜಾಯಾಭ್ಯುದಯ ಶಾಲಿವಾಹನ ಶಕ ವರ್ಷಂಗಳು 1945ಕ್ಕೆ ಸಲ್ಲುವ ಶ್ರೀಶೋಭಕೃತ್‌ನಾಮ ಸಂವತ್ಸರದ 2024ನೇ ಸಾಲಿನ ಶ್ರೀ ಗೌತಮ ಪಂಚಮಹಾ ರಥೋತ್ಸವ ಮತ್ತು ತೆಪ್ಪೋತ್ಸವ ವಿವರ

1.	ದಿ: 19–03–2024 ಮಂಗಳವಾರ	ಸಂಜೆ : 7.00 ಗಂಟೆಗೆ	"ಶ್ರೀ ಶ್ರೀಕಂಠಮುಡಿ ಉತ್ಸವ"
2.	ದಿ: 22–03–2024 ಶುಕ್ರವಾರ	ಬೆಳಗ್ಗೆ 6–30 ರಿಂದ 6–50 ಗಂಟೆಯೊಳಗೆ	"ಶ್ರೀ ಮನ್ಮಹಾಗೌತಮ ರಥಾರೋಹಣ"
3.	ದಿ: 24–03–2024 ಭಾನುವಾರ	ಸಂಜೆ : 7.00 ಗಂಟೆಗೆ	"ಕಪಿಲಾ ನದಿಯಲ್ಲಿ ತೆಪ್ಪೋತ್ಸವ"

ಭಕ್ತ ಮಹಾಶಯರುಗಳಾದ ತಾವುಗಳು ಸಪರಿವಾರ ಸಮೇತ ಸದರಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಶ್ರೀ ಶ್ರೀಪಾರ್ವತೀ ಸಮೇತ ಶ್ರೀ ಶ್ರೀಕಂಠೇಶ್ವರಸ್ವಾಮಿಯವರ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿಸಿದೆ.

ರಥೋತ್ಸವದ ಆಚಾರ್ಯತ್ವ ಶ್ರೀ ಜೆ. ನಾಗಚಂದ್ರ ದೀಕ್ಷಿತ್, ಆಗಮಿಕರು
ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಾಲಯ, ನಂಜನಗೂಡು

ಸರ್ವರಿಗೂ ಆದರದ ಸುಸ್ವಾಗತ

ಜಗದೀಶ್ ಕುಮಾರ್ ಎಂ. ಕಾರ್ಯನಿರ್ವಾಹಕ ಅಧಿಕಾರಿ, ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಾಲಯ, ನಂಜನಗೂಡು
ಪಿ. ಶಿವರಾಜು, ಕ.ಆ.ಸೇ.(ಆಯ್ಕೆ ಶ್ರೇಣಿ), ಆಡಳಿತಾಧಿಕಾರಿ ಹಾಗೂ ಅಪರ ಜಿಲ್ಲಾಧಿಕಾರಿ, ಮೈಸೂರು ಜಿಲ್ಲೆ, ಮೈಸೂರು
ಡಾ: ರಾಜೇಂದ್ರ, ಕೆ.ವಿ., ಭಾ.ಆ.ಸೇ., ಜಿಲ್ಲಾಧಿಕಾರಿ, ಮೈಸೂರು ಜಿಲ್ಲೆ, ಮೈಸೂರು
ಬಸವರಾಜೇಂದ್ರ ಹೆಚ್. ಭಾ.ಆ.ಸೇ., ಆಯುಕ್ತರು, ಹಿಂದೂ ಧಾರ್ಮಿಕ ಸಂಸ್ಥೆಗಳು, ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ, ಬೆಂಗಳೂರು

Infosys®
Navigate your next

Infosys Limited
Corporate Identity Number (CIN): L85110KA1981PLC013115
Regd. Office: Electronics City, Hosur Road, Bengaluru - 560 100.
Phone: 91 80 2852 0261, Fax: 91 80 2852 0362
investors@infosys.com, www.infosys.com

NOTICE

Notice is hereby given that a meeting of the Board of Directors of the Company will be held on Wednesday and Thursday, April 17 and 18, 2024 inter alia to:

1. Approve and take on record the audited consolidated financial results of the Company and its subsidiaries as per Indian Accounting Standards (INDAS) for the quarter and financial year ending March 31, 2024;
2. Approve and take on record the audited standalone financial results of the Company as per INDAS for the quarter and financial year ending March 31, 2024;
3. Approve and take on record the audited financial statements of the Company and its subsidiaries as per INDAS and IFRS for the quarter and financial year ending March 31, 2024;
4. Approve and take on record the audited financial statements of the Company and its subsidiaries as per INDAS for the financial year ending March 31, 2024;
5. Approve and take on record the audited financial statements of the Company as per INDAS for the financial year ending March 31, 2024;
6. Recommend a final dividend for the financial year ending March 31, 2024.

The financial results will be presented to the Board of Directors on April 18, 2024 for their approval.

The details will be made available on the website of the Company- www.infosys.com.

For **Infosys Limited**
Sd/-
A.G.S. Manikantha
Company Secretary

March 18, 2024
Bengaluru, India

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರು, ಕೆಳಗಿನ ಷೆಡ್ಯೂಲ್‌ನಲ್ಲಿ ಸಂಪೂರ್ಣವಾಗಿ ಮತ್ತು ಹೆಚ್ಚು ಸ್ಪಷ್ಟವಾಗಿ ವಿವರಿಸಲಾಗಿರುವ ಸ್ವತ್ತುಗಳಿಗೆ (**"ಷೆಡ್ಯೂಲ್ ಪ್ರಾಪರ್ಟೀಸ್"**) ಸಂಬಂಧಿಸಿದಂತೆ, ಸದರಿ ಷೆಡ್ಯೂಲ್ ಪ್ರಾಪರ್ಟಿಯ ಸಂಪೂರ್ಣ ಮಾಲೀಕರಾಗಿರುವ ಮೆ. ಸಿಎಂಇಎಸ್ ಜುಪಿಟರ್ ಪ್ರೈವೇಟ್ ಲಿಮಿಟೆಡ್ ಇವರೊಂದಿಗೆ ವ್ಯವಹರಿಸಲು ಉದ್ದೇಶಿಸಿರುತ್ತಾರೆ.

ಉಲ್ಲೇಖಿತ ಷೆಡ್ಯೂಲ್ ಪ್ರಾಪರ್ಟಿಗಳಿಗೆ ಅಥವಾ ಅವುಗಳ ಯಾವುದೇ ಭಾಗಕ್ಕೆ ಸಂಬಂಧಿಸಿದಂತೆ ಸ್ವಾಧೀನತೆ, ಮಾರಾಟ, ವಿನಿಮಯ, ಅಸೈನ್‌ಮೆಂಟ್, ಭೋಗ್ಯ, ಉಪ–ಭೋಗ್ಯ, ಲೈಸನ್ಸ್, ಟೆನೆನ್ಸಿ ಕ್ಲೇಮ್, ಅಡಮಾನ, ಚಾರ್ಜ್, ಲೀನ್, ಅಕುಪೇಶನ್, ಟ್ರಸ್ಟ್, ಈಸ್‌ಮೆಂಟ್ ಅಥವಾ ಇನ್ನಿತರೆ ಯಾವುದೇ ಸ್ವರೂಪದ ಹಕ್ಕು, ಅಧಿಕಾರ, ಫಲಾನುಭ, ಕ್ಲೇಮ್, ಚಾರ್ಜ್, ಹಿತಾಸಕ್ತಿ ಅಥವಾ ಋಣಭಾರ ಹೊಂದಿರುವ ಎಲ್ಲಾ ವ್ಯಕ್ತಿಗಳು, ಈ ಪ್ರಕಟಣೆಯು ಪ್ರಕಟಗೊಂಡ ದಿನಾಂಕದಿಂದ 10 (ಹತ್ತು) ದಿನಗಳೊಳಗೆ, ಇಲ್ಲಿ ಕೆಳಗೆ ಸಹಿ ಹಾಕಿರುವವರಿಗೆ ತಮ್ಮ ಕ್ಲೇಮ್ ಅಥವಾ ಆಕ್ಷೇಪಣೆಗಳನ್ನು, ಅಗತ್ಯ ಪೂರಕ ದಾಖಲಾತಿಗಳ ಸಮೇತ, ಲಿಖಿತ ರೂಪದಲ್ಲಿ ತಿಳಿಸತಕ್ಕದ್ದು. ಮೇಲೆ ತಿಳಿಸಲಾಗಿರುವ ನಿರ್ದಿಷ್ಟ ಕಾಲಾವಧಿಯೊಳಗೆ ಯಾವುದೇ ಕ್ಲೇಮ್‌ಗಳಾಗಲಿ ಅಥವಾ ಆಕ್ಷೇಪಣೆಗಳಾಗಲಿ ಸಲ್ಲಿಕೆಯಾಗದಿದ್ದಲ್ಲಿ, ಉಲ್ಲೇಖಿತ ಷೆಡ್ಯೂಲ್ ಪ್ರಾಪರ್ಟಿಗಳಿಗೆ ಸಂಬಂಧಿಸಿದಂತೆ ಇನ್ನಿತರ ಯಾವುದೇ ವ್ಯಕ್ತಿಯ ಯಾವುದೇ ಹಕ್ಕು, ಅಧಿಕಾರ, ಹಿತಾಸಕ್ತಿ, ಕ್ಲೇಮ್, ಚಾರ್ಜ್ ಅಥವಾ ಋಣಗಳು ಇರುವುದಿಲ್ಲ ಎಂಬುದಾಗಿ ಪರಿಗಣಿಸಲಾಗುತ್ತದೆ ಮತ್ತು ಇತ್ಯರ್ಥವಾಗುತ್ತದೆ ಹಾಗೂ ನಮ್ಮ ಕಕ್ಷಿದಾರರು ಉಲ್ಲೇಖಿತ ಷೆಡ್ಯೂಲ್ ಪ್ರಾಪರ್ಟಿಗಳಿಗೆ ಸಂಬಂಧಿತ ವ್ಯವಹಾರವನ್ನು ಪೂರ್ಣಗೊಳಿಸಿಕೊಳ್ಳಲು ಮುಂದುವರಿಯಲು ಹಕ್ಕುದಾರರಾಗುತ್ತಾರೆ..

ಷೆಡ್ಯೂಲ್ ಸ್ವತ್ತುಗಳು

ಮಾರುತಿನಗರ ಗ್ರಾಮ, ಕಸಬಾ ಹೋಬಳಿ, ಜಗಳೂರು ತಾಲ್ಲೂಕು, ದಾವಣಗೆರೆ ಜಿಲ್ಲೆ ವಿಳಾಸದಲ್ಲಿ ಸ್ಥಿತಗೊಂಡಿರುವ ಮತ್ತು ಕೆಳಗಿನ ಕೋಷ್ಟಕದಲ್ಲಿ ಸಂಪರ್ಣವಾಗಿ ವಿವರಿಸಲಾಗಿರುವ ಜಮೀನುಗಳ ಎಲ್ಲಾ ಭೂಭಾಗಗಳು ಸೇರಿರುತ್ತವೆ:

ಕ್ರ. ಸಂ.	ಸರ್ವೆ ನಂ.	ವಿಸ್ತೀರ್ಣ	ಚಕ್ಕುಬಂದಿ			
			ಪೂರ್ವಕ್ಕೆ	ಪಶ್ಚಿಮಕ್ಕೆ	ಉತ್ತರಕ್ಕೆ	ದಕ್ಷಿಣಕ್ಕೆ
1.	26/1 (ಹಳೆಯ ಸರ್ವೆ ನಂ. 39/1)	4 ಎಕರೆ 20 ಗುಂಟಾಗಳು (ಖರಾಬ್ ಭೂಮಿ ಇಲ್ಲ)	ಯರೇ ಹಳ್ಳಿಯಲ್ಲಿನ ಸರ್ವೆ ನಂ. 28	ಸರ್ವೆ ನಂ. 27/2	ಸರ್ವೆ ನಂ. 25	ಸರ್ವೆ ನಂ. 26/3
2.	26/4 (ಹಳೆಯ ಸರ್ವೆ ನಂ. 39/4)	4 ಎಕರೆ 26 ಗುಂಟಾಗಳು (ಖರಾಬ್ ಭೂಮಿ ಇಲ್ಲ)	ಯರೇ ಹಳ್ಳಿಯಲ್ಲಿನ ಸರ್ವೆ ನಂ. 28	ಸರ್ವೆ ನಂ. 27/2	ಸರ್ವೆ ನಂ. 26/3	ಸರ್ವೆ ನಂ. 26/5
3.	26/3 (ಹಳೆಯ ಸರ್ವೆ ನಂ. 39/3)	4 ಎಕರೆ 23 ಗುಂಟಾಗಳು (ಖರಾಬ್ ಭೂಮಿ ಇಲ್ಲ)	ಯರೇ ಹಳ್ಳಿಯಲ್ಲಿನ ಸರ್ವೆ ನಂ. 28	ಸರ್ವೆ ನಂ. 27/2	ಸರ್ವೆ ನಂ. 26/1	ಸರ್ವೆ ನಂ. 26/4
4.	ಸರ್ವೆ ನಂ. 26/5 (ಹಳೆಯ ಸರ್ವೆ ನಂ.39/3)	4 ಎಕರೆ 223 ಗುಂಟಾಗಳು (ಖರಾಬ್ ಭೂಮಿ ಇಲ್ಲ)	ಯರೇ ಹಳ್ಳಿಯಲ್ಲಿನ ಸರ್ವೆ ನಂ. 28	ಸರ್ವೆ ನಂ. 27/2	ಸರ್ವೆ ನಂ. 26/4	ಸರ್ವೆ ನಂ. 26/2
5.	ಸರ್ವೆ ನಂ. 27/2 (ಹಳೆಯ ಸರ್ವೆ ನಂ. 59/2)	8 ಎಕರೆ 2 ಗುಂಟಾಗಳು (ಖರಾಬ್ ಭೂಮಿ ಇಲ್ಲ)	ಬಿ.ಟಿ.ಸುಮಾಗೆ ಸೇರಿದ ಆಸ್ತಿ	ಸರ್ವೆ ನಂ. 60	ಸರ್ವೆ ನಂ. 38	ಸರ್ವೆ ನಂ. 59/1

ದಿನಾಂಕ: 19/03/2024
ಸ್ಥಳ: ಬೆಂಗಳೂರು

ವೀಣಾ ಕೃಷ್ಣನ್
ಪಾಲುದಾರರು
ಸಂವಾದ್ ಪಾರ್ಟ್‌ನರ್ಸ್
62/1 ಅರಮನೆ ರಸ್ತೆ, ವಸಂತನಗರ, ಬೆಂಗಳೂರು – 560 001
ಫೋನ್: +91 (80) 4268 6000

ಗುಸುಗುಸು

ಅರಳಿದ 'ಸದಾ'ನಂದ!

ಎಪ್ಪತ್ತೊಂದು ವರ್ಷಕ್ಕೆ ಕಾಲಿಟ್ಟಿರುವ ಮಾಜಿ ಮುಖ್ಯಮಂತ್ರಿ, ಮಾಜಿ ಕೇಂದ್ರ ಸಚಿವ, ಮಾಜಿ ವಿರೋಧ ಪಕ್ಷದ ನಾಯಕ, ಮಾಜಿ ಶಾಸಕ ಹೀಗೆ ಹಲವು 'ಮಾ..ಜಿ'ಗಳನ್ನು ಬೆನ್ನಿಗಿಟ್ಟುಕೊಂಡಿರುವ ಬೆಂಗಳೂರು ಉತ್ತರ ಕ್ಷೇತ್ರದ ಹಾಲಿ ಬಿಜೆಪಿ ಸಂಸದ ಡಿ.ವಿ. ಸದಾನಂದ ಗೌಡರಿಗೆ ಮತ್ತೆ ಚುನಾವಣೆಗೆ ಸ್ಪರ್ಧಿಸುವ ಆಸೆ ಗರಿಗೆದರಿದೆಯಂತೆ...

ತಮ್ಮ ಹುಟ್ಟುಹಬ್ಬದ ಸಡಗರದ ವೇಳೆ ಅಭಿಮಾನಿಗಳ ಉಮೇದು, ಉತ್ಸಾಹ ಕಂಡ ಗೌಡರಿಗೆ ಮತ್ತೊಮ್ಮೆ ಲೋಕಸಭೆಗೆ ಯಾಕೆ ಸ್ಪರ್ಧಿಸಬಾರದು ಎಂಬ ಕನಸು ಶುರುವಾಗಿದೆ. ತಮ್ಮ ಅತ್ಯಾಪ್ತರ ಅಭಿಮಾನ ಕಂಡು ಮನಸೂರೆಗೊಂಡ ಅವರು ಮತ್ತೊಮ್ಮೆ ಅರಳಲು ಅಣಿಯಾಗಿದ್ದಾರಂತೆ... ಹೀಗೆ ಶುರುವಾದ ಗೌಡರ ಕನಸು ಬಿಜೆಪಿ ಕಚೇರಿ ಜಗನ್ನಾಥ ಭವನ ತೊರೆದು, ಕ್ವೀನ್ಸ್ ರಸ್ತೆಯಲ್ಲಿರುವ 'ಭಾರತ್ ಜೋಡೊ ಭವನ'ದ ಮೇಲೆಲ್ಲ ಸುಳಿದಾಡುತ್ತಿದೆ ಎಂಬುದು ಅವರ 'ಬೆಂಬಲಿಗರ' ಸಿಹಿನುಡಿ.

'ನಾನು ಚುನಾವಣಾ ರಾಜಕೀಯದಿಂದ ಸ್ವಯಂ ನಿವೃತ್ತಿ ಘೋಷಿಸಿದ್ದೆ. ಶೋಭಾ ಕರಂದ್ಲಾಜೆ, ಸಿ.ಟಿ. ರವಿ ಬೆಂಗಳೂರಿಗೆ ಕಾಲಿಡಬಾರದು ಎಂದು ಹಟಕ್ಕೆ ಬಿದ್ದು ಈ ಭಾಗದ ಪಕ್ಷದ ಒಕ್ಕಲಿಗ ಸಮುದಾಯದ ಶಾಸಕರು, ಮಾಜಿ ಮುಖ್ಯಮಂತ್ರಿಗಳು ಮನೆಗೆ ಬಂದು ನೀವೇ ನಿಲ್ಲಬೇಕು ಎಂದು ಏಣಿ ಹತ್ತಿಸಿದರು. ಏಣಿ ಹಿಡಿಯುವುದೇ ಕಷ್ಟ ಎಂದಿರುವಾಗ, ಅವರ ಮಾತು ಕೇಳಿ ಏಣಿ ಹತ್ತಿದೆ. ಈಗ ಏಣಿಯೂ ಇಲ್ಲ; ದೋಣಿಯೂ ಇಲ್ಲ' ಎಂದು ಸಿಟ್ಟಿಗೆದ್ದ ಗೌಡರು, ಆಗಿದ್ದಾಗಲಿ ಎಂದು ಒಂದು ಹೆಜ್ಜೆ ಹೊರಗಿಟ್ಟಿದ್ದಾರಂತೆ.

ಮುಖ್ಯಮಂತ್ರಿಯಾಗಿ ಎರಡು ವರ್ಷ ಮುಂದುವರಿಯಲು ಬಿಡಲಿಲ್ಲ. ಈಗ ತಮ್ಮ ಕ್ಷೇತ್ರದಲ್ಲಿ ಶೋಭಾ ಅವರನ್ನು ಕಣಕ್ಕೆ ಇಳಿಸಿದ್ದಾರೆ. ಇದಕ್ಕೆ ಸಡ್ಡು ಹೊಡೆಯಲು ಶೋಭಾ ಎದುರೇ ಕಣಕ್ಕೆ ಇಳಿದರೆ ಹೇಗೆ ಎಂಬುದು ಗೌಡರ ಲೆಕ್ಕಾಚಾರವಂತೆ. ತಾವು ಎಷ್ಟೇ ಹಟಕ್ಕೆ ಬಿದ್ದರೂ ತಮಗೆ ಅನುಕೂಲಕಾರಿ ಕ್ಷೇತ್ರ ಸಿಗದು. ದಕ್ಷಿಣ ಕನ್ನಡ, ಉಡುಪಿ, ಉತ್ತರಗಳನ್ನು ಯಾರಿಗೋ ಧಾರೆ ಎರೆದಾಗಿದೆ. ಆದರೆ, ಈ ಮೂರರಲ್ಲಿ ಎದುರಾಳಿ ಪಕ್ಷ ಟಿಕೆಟ್ ಘೋಷಿಸಿಲ್ಲ. ಮೈಸೂರು–ಕೊಡಗು ಕೂಡ ಬಾಕಿ ಉಂಟು. ಈ ನಾಲ್ಕರಲ್ಲಿ ಎಲ್ಲೇ ಕೊಟ್ಟರೂ ತಾವು ಸಿದ್ಧ ಎಂದು ಸಂದೇಶ ಕೊಟ್ಟಿರುವ ಗೌಡರು, ಅದಕ್ಕೆ ಪೂರಕ ಎಂಬಂತೆ 'ಕಾಂಗ್ರೆಸ್‌ನವರು ಸಂಪರ್ಕಿಸಿರುವುದು ಹೌದು' ಎಂಬ ಬಾಂಬ್ ಅನ್ನು ತಮ್ಮ ನೆಚ್ಚಿನ ಪ್ರಧಾನಿ ಮೋದಿಯವರು ಕರ್ನಾಟಕದಲ್ಲಿದ್ದಾಗಲೇ ಸಿಡಿಸಿದ್ದಾರಂತೆ. 'ಉತ್ತರ'ದಲ್ಲಿ ಯಾರ ಹೂವು ಯಾರ ಮುಡಿಗೋ ಎಂದು ಕಾಂಗ್ರೆಸ್ ಕಡೆಗೆ ಈಗಲೇ ಹೊರಟಿರುವ ಬಿಜೆಪಿ ಶಾಸಕರು ಹಾಡತೊಡಗಿದ್ದಾರಂತೆ...

ಎಂಥಾ ಮಾತು



ನರೇಂದ್ರ ಮೋದಿ ಅವರು ಮೂರನೇ ಬಾರಿ ಪ್ರಧಾನಿಯಾಗಿ ಪ್ರಮಾಣವಚನ ಸ್ವೀಕರಿಸಿದ ಮೂರೇ ತಿಂಗಳಲ್ಲಿ ಅಖಿಲ ಭಾರತ ಮಟ್ಟದಲ್ಲಿ ಕಾಂಗ್ರೆಸ್ ವಿಭಜನೆಯಾಗುವುದು. ರಾಜ್ಯದಲ್ಲೂ ಪಕ್ಷ ಹೋಳಾಗಲಿದ್ದು, ಈಗಿನ ಸರ್ಕಾರ ಪೂರ್ಣಾವಧಿ ಆಡಳಿತ ನಡೆಸಲ್ಲ

ಬಸವರಾಜ ಬೊಮ್ಮಾಯಿ, ಹಾವೇರಿ–ಗದಗ ಬಿಜೆಪಿ ಅಭ್ಯರ್ಥಿ



ನಾನಿನ್ನೂ ಜೆಡಿಎಸ್‌ನಲ್ಲಿ ಇದ್ದೇನೆ. ಬಿಜೆಪಿಯನ್ನು ಬೆಂಬಲಿಸುತ್ತೇನಾದರೂ ಅ ಪಕ್ಷದ ಎಲ್ಲ ಸಿದ್ಧಾಂತಗಳನ್ನು ಒಪ್ಪುವುದಿಲ್ಲ. ಸಿಎಎ ಮತ್ತು ಹಿಜಾಬ್ ವಿಷಯದಲ್ಲಿ ಬಿಜೆಪಿಯನ್ನು ವಿರೋಧಿಸುತ್ತೇನೆ

ಮೊಹಿಯುದ್ದೀನ್ ಬಾವಾ, ಮಾಜಿ ಶಾಸಕ

ನಿಮ್ಮ ಆತ್ಮಸಾಕ್ಷಿ ಒಪ್ಪುವುದೇ: ಸಿ.ಎಂ ಪ್ರಶ್ನೆ

ಬೆಂಗಳೂರು: 'ನೀರಾವರಿ ಯೋಜನೆಗಳಲ್ಲಿ ಅನ್ಯಾಯ, ಬಿಡುಗಡೆಯಾಗದ ಬರ ಪರಿಹಾರ, ನರೇಗಾ ಕೆಲಸದ ದಿನಗಳ ಹೆಚ್ಚಳಕ್ಕೆ ಸಿಗದ ಅನುಮತಿ ಹೀಗೆ ರಾಜ್ಯದ ರೈತರಿಗೆ ಬಿಜೆಪಿಯಿಂದ ಸಾಲು ಸಾಲು ಅನ್ಯಾಯವಾಗಿದೆ. ಹೀಗಿರುವಾಗ ರೈತರು ಬಿಜೆಪಿಯನ್ನು ಯಾಕೆ ಬೆಂಬಲಿಸಬೇಕು' ಎಂದು ಪ್ರಧಾನಿ ನರೇಂದ್ರ ಮೋದಿ ಅವರನ್ನುಸಿದ್ದರಾಮಯ್ಯ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನಿಸಿದ್ದಾರೆ.

ಶಿವಮೊಗ್ಗದಲ್ಲಿ ಮೋದಿ ಸೋಮವಾರ ಚುನಾವಣಾ ಪ್ರಚಾರ ಕೈಗೊಂಡ ಹಿನ್ನೆಲೆಯಲ್ಲಿ ಪತ್ರಿಕಾ ಹೇಳಿಕೆ ನೀಡಿರುವ ಸಿದ್ದರಾಮಯ್ಯ, 'ರಸಗೊಬ್ಬರ ಕೇಳಿದ ರೈತರ ಮೇಲೆ ಗೋಲಿಬಾರ್ ಮಾಡಿಸಿ ಅಮಾಯಕ ರೈತರನ್ನು ಬಲಿ ಪಡೆದಿದ್ದ ಯಡಿಯೂರಪ್ಪನವರ ಮಗನಿಗೆ ಮತ ನೀಡಿ ಎನ್ನಲು ನಿಮ್ಮ ಆತ್ಮಸಾಕ್ಷಿ ಒಪ್ಪುವುದೇ' ಎಂದು ಕೆಣಕಿದ್ದಾರೆ.

'ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ನಂತರ ಮೊದಲ ಸಂಪುಟ ಸಭೆಯಲ್ಲಿಯೇ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿನ 1 ಲಕ್ಷವರೆಗಿನ ರೈತರ ಸಾಲ ಮನ್ನಾ ಮಾಡುವ ಭರವಸೆಯನ್ನು 2018ರ ವಿಧಾನಸಭಾ ಚುನಾವಣಾ ಪ್ರಣಾಳಿಕೆಯಲ್ಲಿ ಯಡಿಯೂರಪ್ಪ ನೀಡಿದ್ದರು. ಅಧಿಕಾರ ಸಿಕ್ಕ ಮೇಲೆ ಕೊಟ್ಟ ಮಾತನ್ನು ಈಡೇರಿಸಿಲ್ಲ. ಹೀಗೆ ದ್ರೋಹ ಬಗೆದವರನ್ನು ರೈತರು ಯಾಕೆ ಬೆಂಬಲಿಸಬೇಕು' ಎಂದು ಕೇಳಿದ್ದಾರೆ.

ಇನ್ಫೋ ಪಾಯಿಂಟ್

ಲೋಕಸಭೆ: ಬದಲಾಗುತ್ತಲೇ ಇರುವ ರಾಜ್ಯದ ಮತದಾರನ ಒಲವು

ರಾಜ್ಯದ ಮತದಾರರು ವಿಧಾನಸಭಾ ಚುನಾವಣೆ ಮತ್ತು ಲೋಕಸಭಾ ಚುನಾವಣೆಗಳಲ್ಲಿ ಭಿನ್ನವಾಗಿಯೇ ಮತದಾನ ಮಾಡುತ್ತಾ ಬಂದಿದ್ದಾರೆ. ಆದರೆ ಪ್ರತಿ ಲೋಕಸಭಾ ಚುನಾವಣೆಯಲ್ಲೂ ಮತದಾರರ ಒಲವು ಬದಲಾಗುತ್ತಲೇ ಇದೆ. ಈ ಹಿಂದಿನ ಐದು ಲೋಕಸಭಾ ಚುನಾವಣೆಗಳನ್ನು ಗಮನಿಸಿದರೆ, ಈ ಬದಲಾವಣೆ ಎದ್ದು ಕಾಣುತ್ತದೆ



ಆಧಾರ: ಚುನಾವಣಾ ಆಯೋಗದ ಫಲಿತಾಂಶ ವರದಿಗಳು

ಬಿಜೆಪಿಗೆ ಒಳ ಏಟಿನ ಭೀತಿ • ಶಿವಮೊಗ್ಗ, ದಾವಣಗೆರೆ, ಕೊಪ್ಪಳ, ಬೆಂಗಳೂರು ಉತ್ತರ ಕ್ಷೇತ್ರಗಳಲ್ಲಿ ಬಿಸಿ

'ಕುಟುಂಬ'ದ ವಿರುದ್ಧ 'ಸಂಘಟಿತ' ಹೋರಾಟ

ಪ್ರಜಾವಾಣಿ ವಾರ್ತೆ

ಯಡಿಯೂರಪ್ಪ

ಈಶ್ವರಪ್ಪ

ಕರಡಿ ಸಂಗಣ್ಣ

ಯತ್ನಾಳ

ಬೆಂಗಳೂರು: ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಮತ್ತು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ವಿರುದ್ಧ ಬಂಡೆದ್ದಿರುವ ಪಕ್ಷದ ಹಲವು ಹಿರಿಯ ನಾಯಕರು 'ಬಿಎಸ್‌ವೈ ಕುಟುಂಬ'ದ ಹಿಡಿತ ವಿರೋಧಿಸಿ 'ಸಂಘಟಿತ' ಹೋರಾಟಕ್ಕೆ ಸಜ್ಜಾಗುತ್ತಿದ್ದಾರೆ. ಇದರಿಂದ ಲೋಕಸಭಾ ಚುನಾವಣೆಯಲ್ಲಿ ಕಮಲ ಪಡೆಯ ಅಭ್ಯರ್ಥಿಗಳಿಗೆ 'ಒಳ ಏಟು' ಬೀಳುವ ಭೀತಿ ಎದುರಾಗಿದೆ.

ಕೆ.ಎಸ್.ಈಶ್ವರಪ್ಪ ಈಗಾಗಲೇ ಬಂಡಾಯ ಅಭ್ಯರ್ಥಿಯಾಗಿ ಶಿವಮೊಗ್ಗದಲ್ಲಿ ಕಣಕ್ಕೆ ಇಳಿಯುವುದಾಗಿ ಘೋಷಿಸಿ, ಪ್ರಚಾರದಲ್ಲೂ ತೊಡಗಿದ್ದಾರೆ. ಬೆಂಗಳೂರು ಉತ್ತರ ಕ್ಷೇತ್ರದಿಂದ ಟಿಕೆಟ್ ಸಿಗದೇ ಮುನಿಸಿಕೊಂಡಿರುವ ಡಿ.ವಿ.ಸದಾನಂದಗೌಡ ಅವರೂ ಈಶ್ವರಪ್ಪ ಅವರಂತೆ ಯಡಿಯೂರಪ್ಪ ಮತ್ತು ವಿಜಯೇಂದ್ರ ವಿರುದ್ಧ ಟೀಕಾ ಪ್ರಹಾರ ಆರಂಭಿಸಿದ್ದಾರೆ. ಸದಾನಂದಗೌಡರಿಗೆ ಕಾಂಗ್ರೆಸ್‌ನತ್ತ ವಾಲುವ ಲಕ್ಷಣ ಗೋಚರಿಸಿದೆ.

ಕೆಲವು ಸಮಯದಿಂದ ಸುಮ್ಮನೇ ಇದ್ದ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರೂ ಯಡಿಯೂರಪ್ಪ ಕುಟುಂಬದ ಮೇಲೆ ಹರಿಹಾಯಲು ಪ್ರಾರಂಭಿಸಿದ್ದಾರೆ. ದಾವಣಗೆರೆಯಲ್ಲಿ ಸಿದ್ದೇಶ್ವರ ಕುಟುಂಬಕ್ಕೆ ಮತ್ತೆ ಟಿಕೆಟ್ ನೀಡಿರುವುದಕ್ಕೆ ಅಲ್ಲಿನ ಮಾಜಿ ಶಾಸಕರು ಯಡಿಯೂರಪ್ಪ ಮೇಲೆ ಮುನಿಸಿಕೊಂಡಿದ್ದಾರೆ. ಸೋಮವಾರ ಶಿವಮೊಗ್ಗದಲ್ಲಿ ನಡೆದ ಪ್ರಧಾನಿ ಮೋದಿ ಅವರ ಕಾರ್ಯಕ್ರಮಕ್ಕೂ ದಾವಣಗೆರೆ ಜಿಲ್ಲಾ ಬಿಜೆಪಿ ನಾಯಕರು ಗೈರಾಗಿದ್ದಾರೆ. ಬೀದರ್‌ನಲ್ಲಿ ಭಗವಂತ ಖೂಬಾ ಅವರಿಗೆ ಟಿಕೆಟ್ ನೀಡಿರುವುದಕ್ಕೆ ಜಿಲ್ಲೆಯ ಹಾಲಿ ಮತ್ತು ಮಾಜಿ ಶಾಸಕರು ಸಿಟ್ಟಿಗೆದ್ದಿದ್ದು, ತಾವು ಅಭ್ಯರ್ಥಿ ಪರ ಕೆಲಸ ಮಾಡುವುದಿಲ್ಲ ಎಂದು ಕಡ್ಡಿ ಮುರಿದಂತೆ ಹೇಳಿದ್ದಾರೆ.

ಈ ಮಧ್ಯೆ ಕೆಲವು ನಾಯಕರು ದೆಹಲಿಗೆ ದೂರು ಒಯ್ಯುವ ಬಗ್ಗೆಯೂ ಮಾತುಕತೆ ನಡೆಸಿದ್ದು, ವರಿಷ್ಠರು ಚುನಾವಣೆ ಸಿದ್ಧತೆಯಲ್ಲಿ ತೊಡಗಿರುವುದರಿಂದ ಈ ಹಂತದಲ್ಲಿ ದೂರುಗಳಿಗೆ ಮನ್ನಣೆ ನೀಡುವ ಸಾಧ್ಯತೆ ಇಲ್ಲ ಎಂಬ ಸೂಚನೆ ಸಿಕ್ಕ ಬಳಿಕ ಪ್ರಸ್ತಾವವನ್ನು ಕೈಬಿಟ್ಟಿದ್ದಾರೆ. ಆದರೆ, ಪಕ್ಷವನ್ನು ಒಂದು ಕುಟುಂಬದ ಹಿಡಿತದಿಂದ ಮುಕ್ತಗೊಳಿಸುವ ಸಂಬಂಧ ಸಂಘಟಿತ ಪ್ರಯತ್ನ ಮುಂದುವರಿಯಬೇಕು ಎಂಬ ಮಾತುಕತೆಯೂ ನಡೆದಿದೆ. ಇದಕ್ಕೆ ಹಲವು ನಾಯಕರು 'ನೈತಿಕ' ಬೆಂಬಲ ವ್ಯಕ್ತಪಡಿಸಿದ್ದಾರೆ ಎಂದು ಮೂಲಗಳು ಹೇಳಿವೆ.

'ಈ ಹಿಂದಿನ ಎಲ್ಲ ಲೋಕಸಭಾ ಚುನಾವಣೆಗಳ ಸಂದರ್ಭದಲ್ಲಿ ಪಕ್ಷದಲ್ಲಿ ಒಗ್ಗಟ್ಟಿನ ಹೋರಾಟ ನಡೆಯುತ್ತಿತ್ತು. ಆದರೆ, ಇದೇ ಮೊದಲ ಬಾರಿಗೆ ಪಕ್ಷ ಒಡೆದ ಮನೆಯಾಗಿದೆ. ಕಳೆದ ವಿಧಾನಸಭೆಯಲ್ಲೂ ಇಂತಹದ್ದೇ ಗಂಭೀರ ಸಮಸ್ಯೆಯಿಂದ ಪಕ್ಷ ಹೀನಾಯ ಸೋಲು ಅನುಭವಿಸಿತ್ತು. ಪರಸ್ಪರ ಒಳ ಏಟುಗಳಿಂದ ಸಾಕಷ್ಟು ಅಭ್ಯರ್ಥಿಗಳು ಸೋತು ಹೋದರು. ಒಂದು ವೇಳೆ ಈ ಚುನಾವಣೆಯಲ್ಲಿ ಒಳ ಏಟುಗಳು ಬಿದ್ದರೆ ಪಕ್ಷಕ್ಕೆ ಸಾಕಷ್ಟು ನಷ್ಟ ಆಗುವ ಸಾಧ್ಯತೆ ಇದೆ' ಎಂದು ಬಿಜೆಪಿ ಮುಖಂಡರೊಬ್ಬರು ಹೇಳಿದರು.

'ಈಶ್ವರಪ್ಪ ಅವರು ಶಿವಮೊಗ್ಗದಲ್ಲಿ ಗೆಲ್ಲದೇ ಇರಬಹುದು ಆದರೆ, ಕುರುಬ ಸಮುದಾಯಕ್ಕೆ ಅನ್ಯಾಯವಾಗಿದೆ ಎಂಬುದಾಗಿ ಆಡಿರುವ ಮಾತು ನಿಶ್ಚಿತವಾಗಿ ಪರಿಣಾಮ ಬೀರುತ್ತದೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಜಗದೀಶ ಶೆಟ್ಟರ್ ಅವರು ಪಕ್ಷ ತೊರೆದು ಲಿಂಗಾಯತರಿಗೆ ಅನ್ಯಾಯ ಆಗಿದೆ ಎಂದು ಹೇಳಿದ್ದು, ಕೆಲವು ಕ್ಷೇತ್ರಗಳಲ್ಲಿ ಬಿಜೆಪಿಯು ಹಿನ್ನಡೆ ಅನುಭವಿಸಬೇಕಾಯಿತು. ಈಶ್ವರಪ್ಪ ಅವರ ಆಕ್ರೋಶ ಕುರುಬ ಸಮುದಾಯದಲ್ಲಿ ಬೇರೆಯ ಸಂದೇಶ ರವಾನೆ ಮಾಡಬಹುದು ಎಂಬ ಆತಂಕವಿದೆ' ಎಂದೂ ಅವರು ತಿಳಿಸಿದರು.

ಕೊಪ್ಪಳದಲ್ಲಿ ಕರಡಿ ಸಂಗಣ್ಣ ಪಕ್ಷದ ನಾಯಕರ ವಿರುದ್ಧ ಗರಂ ಆಗಿ ಟೀಕಾ ಪ್ರಹಾರ ನಡೆಸಿದ್ದಾರೆ. ಸಂಗಣ್ಣ ಅವರನ್ನು ಸೆಳೆಯಲು ಕಾಂಗ್ರೆಸ್ ಮುಂದಾಗಿದ್ದು, ಜಗದೀಶ ಶೆಟ್ಟರ್ ರಾಜೀನಾಮೆಯಿಂದ ತೆರವಾಗಿರುವ ವಿಧಾನಪರಿಷತ್ತಿನ ಸ್ಥಾನದ ಆಮಿಷವನ್ನೂ ಒಡ್ಡಿದೆ. ಏತನ್ಮಧ್ಯೆ, ಸಂಗಣ್ಣ ಅವರು ಮಂಗಳವಾರ ಸುದ್ದಿಗೋಷ್ಠಿ ನಡೆಸಿ, ತಮ್ಮ ನಿರ್ಧಾರ ಪ್ರಕಟಿಸುವುದಾಗಿ ಹೇಳಿರುವುದು ಕುತೂಹಲಕ್ಕೆ ಕಾರಣವಾಗಿದೆ.

ಡಿವಿಎಸ್ ಮುಂದಿನ ನಡೆ ಇಂದು ಪ್ರಕಟ

ಬೆಂಗಳೂರು: ಲೋಕಸಭೆ ಟಿಕೆಟ್ ಕೈತಪ್ಪಿದ್ದರಿಂದ ಮುನಿಸಿಕೊಂಡಿರುವ ಬೆಂಗಳೂರು ಉತ್ತರದ ಸಂಸದ ಡಿ.ವಿ.ಸದಾನಂದಗೌಡ ಅವರನ್ನು ಕಾಂಗ್ರೆಸ್ ನಾಯಕರು ಸಂಪರ್ಕಿಸಿದ್ದು, ತಮ್ಮ ಮುಂದಿನ ರಾಜಕೀಯ ನಡೆಯನ್ನು ಮಂಗಳವಾರ ಪ್ರಕಟಿಸುವುದಾಗಿ ಗೌಡರು ಹೇಳಿದರು.

ತಮ್ಮ ಹುಟ್ಟು ಹಬ್ಬದ ಆಚರಣೆ ಸಂದರ್ಭದಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು ಬಿ.ಎಸ್.ಯಡಿಯೂರಪ್ಪ ಅವರ ವಿರುದ್ಧವೂ ಅಸಮಾಧಾನ ಹೊರ ಹಾಕಿದರು.

'ಕುಟುಂಬದ ಸದಸ್ಯರ ಜತೆ ಚರ್ಚೆ ಮಾಡಿ ಮುಂದಿನ ತೀರ್ಮಾನವನ್ನು ಸುದ್ದಿಗೋಷ್ಠಿಯಲ್ಲಿ ತಿಳಿಸುತ್ತೇನೆ. ಕೆಲವು ಪಕ್ಷಗಳ ನಾಯಕರು ನನ್ನನ್ನು ಸಂಪರ್ಕ ಮಾಡಿರುವುದು ನಿಜ. ಬೇರೆ ಬೇರೆ ವಿದ್ಯಮಾನಗಳು ನಡೆಯುತ್ತಿವೆ' ಎಂದರು.

'ಭಾನುವಾರ ನಮ್ಮ ಪಕ್ಷದ ನಾಯಕರೊಬ್ಬರು ಬಂದು ಸಾಂತ್ವನ ಹೇಳಿದರು. ನನಗೆ ಟಿಕೆಟ್ ನೀಡುವುದಾಗಿ ಹೇಳಿದವರು ಕೊನೆಯ ಕ್ಷಣದಲ್ಲಿ ನನ್ನ ರಕ್ಷಣೆಗೆ ಬರಲಿಲ್ಲ. ಮನದಾಳದ ಒಂದಷ್ಟು ವಿಚಾರವನ್ನು ಹಂಚಿಕೊಳ್ಳಬೇಕಾಗಿದೆ. ಇವತ್ತು ನನ್ನ ಜನ್ಮದಿನವಾದ ಕಾರಣ ಕುಟುಂಬದ ಜತೆ ಕಳೆಯುತ್ತೇನೆ. ಅವರೆಲ್ಲರ ಜತೆ ಚರ್ಚಿಸುತ್ತೇನೆ. ಮಂಗಳವಾರ ನಿಮ್ಮೊಂದಿಗೆ ಮಾತನಾಡುತ್ತೇನೆ' ಎಂದರು.

'ರಾಜಕೀಯದಲ್ಲಿ ಏರುಪೇರು, ಮುಜುಗರ ಸಹಜ. ಆದರೆ, ತಿಳಿದು ತಿಳಿದು ಹೀಗೆ ಮಾಡಿರುವುದು ಬೇಜಾರು ಮೂಡಿಸಿದೆ. ಬಿ.ವೈ.ರಾಘವೇಂದ್ರ ವಿರುದ್ಧ ಈಶ್ವರಪ್ಪ ಅವರು ಕಣಕ್ಕೆ ಇಳಿದಿದ್ದಾರೆ. ಈಶ್ವರಪ್ಪ ಜತೆ ಮಾತನಾಡಿದ್ದೇನೆ. ಪಕ್ಷದಲ್ಲಿ ಯಾರ ಮನಸ್ಸಿಗೆ ನೋವಾಗಿದೆಯೋ, ಎಲ್ಲರೂ ಒಟ್ಟಿಗೆ ಹೋಗಿ ವರಿಷ್ಠರನ್ನು ಭೇಟಿ ಮಾಡಲು ತೀರ್ಮಾನಿಸೋಣ ಎಂದಿದ್ದೆ. ಈಶ್ವರಪ್ಪ ಅವರದ್ದೇ ಆದ ತೀರ್ಮಾನ ತೆಗೆದುಕೊಂಡಿದ್ದಾರೆ' ಎಂದು ಸದಾನಂದಗೌಡ ಹೇಳಿದರು. ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಶೋಭಾ ಕರಂದ್ಲಾಜೆ ಅವರು ಸದಾನಂದ ಗೌಡರನ್ನು ಭೇಟಿ ಮಾಡಿ ಹುಟ್ಟು ಹಬ್ಬದ ಶುಭಾಶಯ ಕೋರಿದರು.

ಟಿಕೆಟ್.. ಟಿಕೆಟ್..ಯಾರಿಗೆ ಟಿಕೆಟ್?

ದೆಹಲಿಯಲ್ಲಿ ನಂಜುಂಡಸ್ವಾಮಿ ಲಾಬಿ

• ಸೂರ್ಯನಾರಾಯಣ ವಿ.

ಚಾಮರಾಜನಗರ ಲೋಕಸಭಾ ಕ್ಷೇತ್ರದಿಂದ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿ ಜಿ.ಎನ್. ನಂಜುಂಡಸ್ವಾಮಿ ಅವರು ದೆಹಲಿಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡಿದ ಸಂದರ್ಭ

ಚಾಮರಾಜನಗರ: ಚಾಮರಾಜನಗರ ಮೀಸಲು ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿಯ ಹೆಸರು, ಮಂಗಳವಾರ ದೆಹಲಿಯಲ್ಲಿ ನಡೆಯಲಿರುವ ಕೇಂದ್ರ ಚುನಾವಣಾ ಸಮಿತಿ ಸಭೆಯಲ್ಲಿ ಅಂತಿಮಗೊಳ್ಳುವ ಸಾಧ್ಯತೆ ಇದೆ.

ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ.ಮಹದೇವಪ್ಪ ಮಗ ಸುನೀಲ್ ಬೋಸ್ ಹಾಗೂ ಮಾಜಿ ಶಾಸಕ ಜಿ.ಎನ್. ನಂಜುಂಡಸ್ವಾಮಿ ಅವರು ಟಿಕೆಟ್‌ಗಾಗಿ ಪ್ರಬಲ ಪೈಪೋಟಿ ನಡೆಸಿದ್ದಾರೆ ಎನ್ನಲಾಗುತ್ತಿದೆ.

ತಾವು ಸ್ಪರ್ಧಿಸುವುದಿಲ್ಲವೆಂದು ಸ್ಪಷ್ಟಪಡಿಸಿದ ನಂತರ ಎಚ್.ಸಿ.ಮಹದೇವಪ್ಪ ಅವರು, ಮಗನಿಗೆ ಟಿಕೆಟ್ ಕೊಡಿಸಲು ಇನ್ನಿಲ್ಲದ ಪ್ರಯತ್ನ ನಡೆಸುತ್ತಿದ್ದು, ಅಭ್ಯರ್ಥಿಯನ್ನಾಗಿ ಮಾಡಿದರೆ, ಗೆಲ್ಲಿಸಿಕೊಂಡು ಬರುವ ವಾಗ್ದಾನವನ್ನು ವರಿಷ್ಠರಿಗೆ ನೀಡಿದ್ದಾರೆ ಎಂದು ಗೊತ್ತಾಗಿದೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರ ಆಪ್ತರಾಗಿರುವ, ಕೊಳ್ಳೇಗಾಲದ ಮಾಜಿ ಶಾಸಕ ಜಿ.ಎನ್.ನಂಜುಂಡಸ್ವಾಮಿ ಅವರು ದೆಹಲಿಯಲ್ಲಿ ಬೀಡು ಬಿಟ್ಟಿದ್ದು, ಟಿಕೆಟ್‌ಗಾಗಿ ಇನ್ನಿಲ್ಲದ ಪ್ರಯತ್ನ ನಡೆಸುತ್ತಿದ್ದಾರೆ. ಖರ್ಗೆ ಸೇರಿದಂತೆ ಹಲವು ಮುಖಂಡರನ್ನು ಭೇಟಿ ಮಾಡಿ ಕೊನೆ ಹಂತದ ಪ್ರಯತ್ನ ನಡೆಸಿದ್ದಾರೆ. ವಾರದ ಹಿಂದೆಯೇ ಅವರು ಖರ್ಗೆಯವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದ್ದರು. ಆ ಸಂದರ್ಭದಲ್ಲಿ, 'ಕರ್ನಾಟಕದ ಅಭ್ಯರ್ಥಿಗಳ ಆಯ್ಕೆ ವಿಚಾರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಅವರ ಒಪ್ಪಿಗೆ ಬೇಕು. ಚಾಮರಾಜನಗರ ಕ್ಷೇತ್ರವು ಸಿದ್ದರಾಮಯ್ಯ ಅವರ ಕ್ಷೇತ್ರ ವ್ಯಾಪ್ತಿಯಲ್ಲಿರುವುದರಿಂದ, ಅವರ ಮಾತಿಗೆ ಮನ್ನಣೆ ಕೊಡಬೇಕಾಗುತ್ತದೆ. ಇಬ್ಬರೊಂದಿಗೂ ಮಾತನಾಡುವಂತೆ ಸಲಹೆ ನೀಡಿದ್ದರು' ಎಂದು ಗೊತ್ತಾಗಿದೆ.

'ಬಳಿಕ ನಂಜುಂಡಸ್ವಾಮಿಯವರು ಕೆಪಿಸಿಸಿ ಅಧ್ಯಕ್ಷ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದ್ದರು' ಎಂದು ಅವರ ಆಪ್ತರು ಹೇಳಿದ್ದಾರೆ.

ಮಂಗಳವಾರ ಸಂಜೆ ಸಿಇಸಿ ಸಭೆ ನಡೆಯಲಿರುವುದರಿಂದ ಮತ್ತೆ ದೆಹಲಿಗೆ ತೆರಳಿರುವ ನಂಜುಂಡಸ್ವಾಮಿ, ಮುಖಂಡರನ್ನು ಭೇಟಿ ಮಾಡುತ್ತಿದ್ದಾರೆ.

ಪ್ರತಿಕ್ರಿಯೆಗೆ ಸುನೀಲ್ ಬೋಸ್ ಅವರು ಸಂಪರ್ಕಕ್ಕೆ ಸಿಗಲಿಲ್ಲ.

ಸಿ.ಎಂ ತೀರ್ಮಾನಕ್ಕೆ ಮನ್ನಣೆ

'ಚಾಮರಾಜನಗರ ಮತ್ತು ಮೈಸೂರು ಕ್ಷೇತ್ರಗಳ ಅಭ್ಯರ್ಥಿಯ ಆಯ್ಕೆ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯನವರೇ ನಿರ್ಧರಿಸಲಿದ್ದಾರೆ' ಎಂದು ಪಕ್ಷದ ಮುಖಂಡರು ಹೇಳುತ್ತಿದ್ದಾರೆ.

'ಮಹದೇವಪ್ಪ, ಸುನೀಲ್ ಬೋಸ್ ಮತ್ತು ನಂಜುಂಡಸ್ವಾಮಿಯವರ ಹೆಸರುಗಳನ್ನು ಶಿಫಾರಸು ಮಾಡಲಾಗಿತ್ತು. ಮಹದೇವಪ್ಪ ಆಸಕ್ತಿ ತೋರದಿರುವುದರಿಂದ, ಉಳಿದ ಇಬ್ಬರಲ್ಲಿ ಒಬ್ಬರ ಹೆಸರು ಅಂತಿಮಗೊಳ್ಳಬಹುದು. ಬಿಜೆಪಿ ಟಿಕೆಟ್ ತಪ್ಪಿದ ಬಳಿಕ ಸಂಸದ ಶ್ರೀನಿವಾಸ ಪ್ರಸಾದ್ ಅಳಿಯ ಡಾ.ಮೋಹನ್ ಪ್ರಯತ್ನಿಸಿದ್ದು ನಿಜ. ಆದರೆ, ವರಿಷ್ಠರು ಅವರ ಪರ ನಿರ್ಧರಿಸಿದ್ದಂತೆ ಕಾಣುತ್ತಿಲ್ಲ' ಎಂದು ಮುಖಂಡರೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ವೀಣಾಗೆ ಅವಕಾಶ ಬೆಂಬಲಿಗರ ಒತ್ತಡ

ಪ್ರಜಾವಾಣಿ ವಾರ್ತೆ

ವೀಣಾ ಕಾಶಪ್ಪನವರ್

ಬೆಂಗಳೂರು: ಬಾಗಲಕೋಟೆ ಲೋಕಸಭಾ ಕ್ಷೇತ್ರದಿಂದ ವೀಣಾ ಕಾಶಪ್ಪನವರ್‌ಗೆ ಟಿಕೆಟ್ ನೀಡುವಂತೆ ಆಗ್ರಹಿಸಿ ಅವರ ಬೆಂಬಲಿಗರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕಾವೇರಿ ನಿವಾಸದ ಬಳಿ ಸೋಮವಾರ ಪ್ರತಿಭಟನೆ ನಡೆಸಿದರು.

ಬಾಗಲಕೋಟೆ ಕ್ಷೇತ್ರಕ್ಕೆ ಅಭ್ಯರ್ಥಿ ಹೆಸರು ಇನ್ನೂ ಘೋಷಣೆ ಆಗಿಲ್ಲ. ಆದರೆ, ಸಚಿವ ಶಿವಾನಂದ ಪಾಟೀಲ ಅವರ ಮಗಳು ಸಂಯುಕ್ತಾ ಪಾಟೀಲ ಹೆಸರಿದೆ. ಯಾವುದೇ ಕಾರಣಕ್ಕೂ ಸಂಯುಕ್ತಾಗೆ ಟಿಕೆಟ್ ನೀಡಬಾರದು. ಲಿಂಗಾಯತ ಪಂಚಮಸಾಲಿ ಸಮುದಾಯದ ವೀಣಾ ಕಾಶಪ್ಪನವರ್‌ಗೆ ಟಿಕೆಟ್ ನೀಡಬೇಕು ಎಂದು ಬೆಂಬಲಿಗರು ಒತ್ತಾಯಿಸಿದರು. ಟಿಕೆಟ್ ನೀಡದಿದ್ದರೆ ಮತದಾನ ಬಹಿಷ್ಕರಿಸಲು ನಿರ್ಣಯ ಕೈಗೊಂಡಿದ್ದೇವೆ ಎಂದೂ ಹೇಳಿದರು.

'ಬಾಗಲಕೋಟೆ ಕ್ಷೇತ್ರಕ್ಕೆ ಈ ಬಾರಿ ವೀಣಾ ಸೂಕ್ತ ಅಭ್ಯರ್ಥಿಯಾಗಿದ್ದಾರೆ. ಅವರಿಗೆ ಟಿಕೆಟ್ ಕೊಟ್ಟರೆ ನಾವು ಕಾರ್ಯಕರ್ತರು ಗೆಲ್ಲಿಸಿಕೊಂಡು ಬರುತ್ತೇವೆ. ಕಾರ್ಯಕರ್ತರ ಮಾತು ಕೇಳದೆ, ನಾಯಕರ ಮಾತು ಕೇಳಿ ಬೇರೆಯವರಿಗೆ ಟಿಕೆಟ್ ಕೊಟ್ಟರೆ ಪರಿಣಾಮ ಎದುರಿಸಬೇಕಾಗುತ್ತದೆ' ಎಂದು ಎಚ್ಚರಿಕೆ ನೀಡಿದರು.

ಮುಖ್ಯಮಂತ್ರಿ ನಿವಾಸ ಬಳಿ ಸುದ್ದಿಗಾರರ ಜೊತೆ ಮಾತನಾಡಿದ ವೀಣಾ ಕಾಶಪ್ಪನವರ್, 'ಕಳೆದ ಬಾರಿ ಲೋಕಸಭಾ ಚುನಾವಣೆಗೆ ನನಗೆ ಟಿಕೆಟ್ ನೀಡಿದ್ದರು. ಸೋತರೂ ಕ್ಷೇತ್ರದಲ್ಲಿ ಕೆಲಸ ಮಾಡಿಕೊಂಡು ಬಂದಿದ್ದೇನೆ. ಜಿಲ್ಲೆಯ ಜನರ ಕಷ್ಟ ಸುಖಕ್ಕೆ ಸ್ಪಂದಿಸಿದ್ದೇನೆ. ಈ ಬಾರಿಯೂ ನಮ್ಮ ಜಿಲ್ಲೆಯವರಿಗೆ ಅವಕಾಶ ನೀಡಬೇಕು. ಅನ್ಯ ಜಿಲ್ಲೆಯವರಾದ ಸಂಯುಕ್ತಾ ಪಾಟೀಲ್ ಅವರಿಗೆ ಟಿಕೆಟ್ ನೀಡಬಾರದು. ನನ್ನ ಬೆಂಬಲಿಗರು ಮುಖ್ಯಮಂತ್ರಿಗೆ ಮನವಿ ಮಾಡಲು ಬಂದಿದ್ದಾರೆ. ಹೈಕಮಾಂಡ್ ಮೇಲೆ ನನಗೆ ವಿಶ್ವಾಸ ಇದೆ. ಇನ್ನೂ ಟಿಕೆಟ್ ಅಂತಿಮ ಆಗಿಲ್ಲ' ಎಂದರು.

₹15.37 ಕೋಟಿ ಮೌಲ್ಯದ ಮದ್ಯ ಜಪ್ತಿ

ಬೆಂಗಳೂರು: ಚುನಾವಣಾ ನೀತಿ ಸಂಹಿತೆ ಉಲ್ಲಂಘಿಸಿ ಸಾಗಿಸುತ್ತಿದ್ದ ಆರೋಪದ ಮೇಲೆ ರಾಜ್ಯದ ವಿವಿಧೆಡೆ ₹15.37 ಕೋಟಿ ಮೌಲ್ಯದ ಮದ್ಯವನ್ನು ವಶಪಡಿಸಿಕೊಳ್ಳಲಾಗಿದೆ. ಚಾಮರಾಜನಗರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲೇ ₹14.07 ಕೋಟಿ ಮೌಲ್ಯದ ಮದ್ಯ ವಶಕ್ಕೆ ಪಡೆಯಲಾಗಿದೆ.

ಭಾನುವಾರದವರೆಗೆ ₹15.34 ಕೋಟಿ ಮೌಲ್ಯದ 4.93 ಲಕ್ಷ ಲೀಟರ್ ಮದ್ಯ ವಶಕ್ಕೆ ಪಡೆಯಲಾಗಿತ್ತು. ಭಾನುವಾರದಿಂದ ಸೋಮವಾರದವರೆಗೆ ₹15.37 ಕೋಟಿ ಮೌಲ್ಯದ 4.94 ಲಕ್ಷ ಲೀಟರ್ ಮದ್ಯ ವಶಪಡಿಸಿಕೊಳ್ಳಲಾಗಿದೆ ಎಂದು ರಾಜ್ಯದ ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ ತಿಳಿಸಿದ್ದಾರೆ.

ಚಾಮರಾಜನಗರ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಸೇರುವ ಮೈಸೂರು ಜಿಲ್ಲೆಯ ಆನೆಹೊಸೂರ್ ಬುಷ್ ಇನ್‌ಬೆವ್ ಇಂಡಿಯಾ ಲಿಮಿಟೆಡ್‌ನಿಂದ ಅಬಕಾರಿ ಅಧಿಕಾರಿಗಳ ಅನುಪಸ್ಥಿತಿಯಲ್ಲಿ ಉಗ್ರಾಣಗಳಿಗೆ ಸಾಗಿಸುತ್ತಿದ್ದ ₹7.84 ಕೋಟಿ ಮೌಲ್ಯದ 3.35 ಲಕ್ಷ ಲೀಟರ್ ಬಿಯರ್ ಅನ್ನು ಅಬಕಾರಿ ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ.

ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ವ್ಯಾಪ್ತಿಯ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಯುನೈಟೆಡ್ ಸ್ಪಿರಿಟ್ಸ್‌ನ ಉಪ ಗುತ್ತಿಗೆ ಹೊಂದಿರುವ ಕೆಬಿಡಿ ಶುಗರ್ಸ್‌ನ ಬಾಟ್ಲಿಂಗ್ ಘಟಕದಲ್ಲಿ ದಾಸ್ತಾನು ಮಾಡಿದ್ದ ₹6.23 ಕೋಟಿ ಮೌಲ್ಯದ 1.26 ಲಕ್ಷ ಲೀಟರ್ ಮದ್ಯವನ್ನೂ ಅಬಕಾರಿ ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ ಎಂದು ಮುಖ್ಯ ಚುನಾವಣಾಧಿಕಾರಿ ಮಾಹಿತಿ ನೀಡಿದ್ದಾರೆ.

24 ಗಂಟೆಗಳ ಅವಧಿಯಲ್ಲಿ ಪೊಲೀಸರು, ಚುನಾವಣಾ ಕಾರ್ಯಪಡೆಗಳು ಮತ್ತು ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ರಾಜ್ಯದ ವಿವಿಧೆಡೆ ₹45.76 ಲಕ್ಷ ನಗದು ವಶಪಡಿಸಿಕೊಂಡಿದ್ದಾರೆ. ₹5.66 ಲಕ್ಷ ಮೌಲ್ಯದ 7.3 ಕೆ.ಜಿ. ಮಾದಕವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ತಿಳಿಸಿದ್ದಾರೆ. ರಾಜ್ಯದಾದ್ಯಂತ 87,212 ಬ್ಯಾನರ್, ಪೋಸ್ಟರ್ ಮತ್ತು ಗೋಡೆ ಬರಹಗಳನ್ನು ತೆರವುಗೊಳಿಸಲಾಗಿದೆ. ಇದರೊಂದಿಗೆ ತೆರವುಗೊಳಿಸಲಾದ ಬ್ಯಾನರ್, ಪೋಸ್ಟರ್ ಮತ್ತು ಗೋಡೆ ಬರಹಗಳ ಸಂಖ್ಯೆ 1.34 ಲಕ್ಷ ತಲುಪಿದೆ ಎಂದಿದ್ದಾರೆ.

ಸೀರೆ, ದೋತಿ, ನಗದು ವಶ

ಚಿಕ್ಕಮಗಳೂರು/ಮಂಗಳೂರು/ಮೈಸೂರು: ದಾಖಲೆ ಇಲ್ಲದೆ ರಾಜ್ಯದ ವಿವಿಧೆಡೆ ಸಾಗಿಸುತ್ತಿದ್ದ ಲಕ್ಷಾಂತರ ರೂಪಾಯಿ ನಗದು, ₹7.83 ಕೋಟಿ ಮೌಲ್ಯದ ಮದ್ಯ, ಲಕ್ಷಾಂತರ ರೂಪಾಯಿ ಮೌಲ್ಯದ ಸೀರೆಗಳನ್ನು ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ.

ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ಪೊಲೀಸ್ ಠಾಣೆ ವ್ಯಾಪ್ತಿಯ ಗಡಿಕಲ್ ಚೆಕ್‌ಪೋಸ್ಟ್‌ನಲ್ಲಿ ₹1.25 ಲಕ್ಷ ಮೌಲ್ಯದ ಸೀರೆಗಳು ಮತ್ತು ದೋತಿಗಳನ್ನು ವಶಕ್ಕೆ ಪಡೆಯಲಾಗಿದೆ.

ಇನ್ನೊಂದೆಡೆ ತರೀಕೆರೆಯ ಲಕ್ಕವಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯ ಎಂ.ಎನ್.ಕ್ಯಾಂಪ್ ಚೆಕ್‌ಪೋಸ್ಟ್‌ನಲ್ಲಿ ದಾಖಲೆ ಇಲ್ಲದೆ ಸಾಗಿಸುತ್ತಿದ್ದ ₹95 ಸಾವಿರ ವಶಕ್ಕೆ ಪಡೆಯಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಕ್ರಮ ಅಮಟೆ ತಿಳಿಸಿದ್ದಾರೆ.

₹ 1.32 ಲಕ್ಷ ನಗದು ವಶ: 'ಕಾರಿನಲ್ಲಿ ದಾಖಲೆಗಳಿಲ್ಲದೇ ಸಾಗಿಸುತ್ತಿದ್ದ ₹1.32 ಲಕ್ಷ ನಗದನ್ನು ಚುನಾವಣಾ ಅಧಿಕಾರಿಗಳ ತಂಡವು ಎಡಪದವು ಚೆಕ್‌ಪೋಸ್ಟ್‌ನಲ್ಲಿ ಭಾನುವಾರ ರಾತ್ರಿ ವಶಪಡಿಸಿಕೊಂಡಿದೆ' ಎಂದು ಮಂಗಳೂರು ನಗರ ಉತ್ತರ ವಿಧಾನಸಭಾ ಕ್ಷೇತ್ರದ ಸಹಾಯಕ ಚುನಾವಣಾಧಿಕಾರಿ ಕೆ.ಜಾನ್ಸನ್ ತಿಳಿಸಿದ್ದಾರೆ.

'ಈ ಹಣವನ್ನು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ನೇತೃತ್ವದ ಪರಿಶೀಲನಾ ಸಮಿತಿಗೆ ಒಪ್ಪಿಸಿದ್ದೇವೆ. ವಾರಸುದಾರರು ಸೂಕ್ತ ದಾಖಲೆಗಳನ್ನು ಸಮಿತಿಗೆ ಒಪ್ಪಿಸಿ ಹಣವನ್ನು ಮರಳಿ ಪಡೆಯಬಹುದು' ಎಂದು ಅವರು ಹೇಳಿದ್ದಾರೆ.

ದಾಖಲೆ ಇಲ್ಲದ ₹ 99 ಲಕ್ಷ ಹಣ ಜಪ್ತಿ

ಕೊಂಗಬೋರನದೊಡ್ಡಿ ಚೆಕ್‌ಪೋಸ್ಟ್‌ನಲ್ಲಿ ಜಪ್ತಿ ಮಾಡಲಾದ ನಗದು

ಮದ್ದೂರು (ಮಂಡ್ಯ ಜಿಲ್ಲೆ): ಬೆಂಗಳೂರು– ಮೈಸೂರು ರಾಷ್ಟ್ರೀಯ ಹೆದ್ದಾರಿ, ತಾಲ್ಲೂಕಿನ ಕೊಂಗಬೋರನದೊಡ್ಡಿ ಬಳಿಯ ಚೆಕ್‌ಪೋಸ್ಟ್ ಮೂಲಕ ದಾಖಲೆ ಇಲ್ಲದೆ ಕಾರಿನಲ್ಲಿ ಸಾಗಿಸುತ್ತಿದ್ದ ₹ 99.20 ಲಕ್ಷವನ್ನು ಚುನಾವಣಾಧಿಕಾರಿಗಳು ಸೋಮವಾರ ಜಪ್ತಿ ಮಾಡಿದ್ದಾರೆ.

ಗಿರೀಶ್ ಎಂಬುವವರು ಬೆಂಗಳೂರಿನಿಂದ ಹ್ಯೂಂಡಯ್ ಕ್ರೆಟಾ ಕಾರ್‌ನಲ್ಲಿ ಕೆ.ಆರ್.ಪೇಟೆ ಕಡೆಗೆ ಪ್ರಯಾಣಿಸುತ್ತಿದ್ದಾಗ ಚುನಾವಣಾ ಚೆಕ್‌ಪೋಸ್ಟ್ ಸಿಬ್ಬಂದಿ ತಡೆದು ತಪಾಸಣೆ ನಡೆಸಿದರು. ಆಗ ಚೀಲದಲ್ಲಿ ತುಂಬಿಟ್ಟಿದ್ದ ನಗದು ಪತ್ತೆಯಾಯಿತು.

ಹಣದ ಬಗ್ಗೆ ಗಿರೀಶ್ ಅವರು ಸೂಕ್ತ ದಾಖಲೆ ನೀಡದ ಪರಿಣಾಮ ಅಧಿಕಾರಿಗಳು ಹಣವನ್ನು ಜಪ್ತಿ ಮಾಡಿದ್ದಾರೆ. ಮದ್ದೂರು ಪಟ್ಟಣ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಮಳವಳ್ಳಿ ಡಿವೈಎಸ್‌ಪಿ ಕೃಷ್ಣಪ್ಪ, ತಹಶೀಲ್ದಾರ್ ಕೆ.ಎಸ್.ಸೋಮಶೇಖರ್, ಮದ್ದೂರು ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ಕೆ.ಆರ್.ಪ್ರಸಾದ್, ಚುನಾವಣಾಧಿಕಾರಿ ಲೋಕನಾಥ್ ಸ್ಥಳದಲ್ಲಿ ಹಾಜರಿದ್ದರು.

ಮಂಡ್ಯದಿಂದ ಸ್ಪರ್ಧೆ: ಎಚ್‌ಡಿಕೆ ಮೇಲೆ ಹೆಚ್ಚಿದ ಒತ್ತಡ

• ಎಂ.ಎನ್.ಯೋಗೇಶ್

ಎಚ್.ಡಿ.ಕುಮಾರಸ್ವಾಮಿ

ಸಿ.ಎಸ್.ಪುಟ್ಟರಾಜು

ಮಂಡ್ಯ: 'ಕುಮಾರಣ್ಣ ನಾಮಪತ್ರ ಹಾಕಿ ಆಸ್ಪತ್ರೆಯಲ್ಲಿ ವಿಶ್ರಾಂತಿ ಪಡೆಯಲಿ, ಮತ್ತೆ ಮಂಡ್ಯಕ್ಕೆ ಬರದಿದ್ದರೂ ಗೆಲ್ಲಿಸಿಕೊಳ್ಳುವ ಜವಾಬ್ದಾರಿ ನಮ್ಮದು...'

ಶ್ವಾಸಕೋಶ ಶಸ್ತ್ರಚಿಕಿತ್ಸೆಗಾಗಿ ಮಂಗಳವಾರ ಚೆನ್ನೈನ ಖಾಸಗಿ ಆಸ್ಪತ್ರೆಗೆ ದಾಖಲಾಗುತ್ತಿರುವ ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ.ಕುಮಾರಸ್ವಾಮಿ ಅವರಿಗೆ ಜಿಲ್ಲೆಯ ಜೆಡಿಎಸ್ ಕಾರ್ಯಕರ್ತರು ಮಾಡುತ್ತಿರುವ ಒತ್ತಾಯವಿದು.

'ಅಪ್ಪ ಆಸ್ಪತ್ರೆಯಲ್ಲಿದ್ದಾಗ ನಾನೇ ಅವರ ಜವಾಬ್ದಾರಿ ಹೊರಬೇಕು, ಹೀಗಾಗಿ ಸ್ಪರ್ಧಿಸಲಾರೆ' ಎಂದು ಯುವ ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ನಿಖಿಲ್ ಸ್ಪಷ್ಟಪಡಿಸಿದ್ದಾರೆ. 'ಮೈತ್ರಿಗೆ ಲಾಭವಾಗಬೇಕಾದರೆ ಮಂಡ್ಯದಿಂದಲೇ ಕುಮಾರಸ್ವಾಮಿ ಸ್ಪರ್ಧಿಸಬೇಕೆಂದು ಬಿಜೆಪಿ ಹೈಕಮಾಂಡ್ ಸೂಚಿಸಿದೆ. ಅವರು ಅಲ್ಲಿಯೇ ಸ್ಪರ್ಧಿಸುವುದು ಖಚಿತ' ಎಂದು ಮೂಲಗಳು ತಿಳಿಸಿವೆ.

'ಮಾರ್ಚ್ 21ರಂದು ಕುಮಾರಸ್ವಾಮಿ ಅವರಿಗೆ ಅಮೆರಿಕದ ನಾಲ್ವರು ವೈದ್ಯರು ಶ್ವಾಸಕೋಶ ಶಸ್ತ್ರಚಿಕಿತ್ಸೆ ಮಾಡಲಿದ್ದು, 25ಕ್ಕೆ ಆಸ್ಪತ್ರೆಯಿಂದ ಬಂದರೂ ಹಲವು ದಿನ ವಿಶ್ರಾಂತಿ ಅನಿವಾರ್ಯ. ಬಿಸಿಲು, ದೂಳು, ಹೊಗೆಗೆ ಹೆಚ್ಚು ತೆರೆದುಕೊಳ್ಳುವಂತಿಲ್ಲ ಎಂದು ವೈದ್ಯರು ತಿಳಿಸಿದ್ದು, ನಾಮಪತ್ರ ಸಲ್ಲಿಸಿ ಅವರು ವಿಶ್ರಾಂತಿ ಪಡೆಯಲಿ' ಎಂಬ ಒತ್ತಾಯ ಹೆಚ್ಚಿದೆ.

'ಕಳೆದ ಬಾರಿ ನಿಖಿಲ್ ಸೋಲಿಸಿ ಪಶ್ಚಾತ್ತಾಪ ಪಟ್ಟಿರುವ ಜನ, ಈ ಬಾರಿ ಕುಮಾರಸ್ವಾಮಿಯವರನ್ನೇ ಬಯಸುತ್ತಿದ್ದಾರೆ. ಪಕ್ಷದ ಮಾಜಿ ಶಾಸಕರು, ಸಂಸದರು ಒಮ್ಮತದಿಂದ ನಿರ್ಣಯಿಸಿದ್ದಾರೆ' ಎಂದು ಪಕ್ಷದ ಜಿಲ್ಲಾ ಘಟಕದ ಅಧ್ಯಕ್ಷ ಡಿ.ರಮೇಶ್ ಹೇಳಿದರು.

ಸಿಎಸ್‌ಪಿಗೂ ಸೂಚನೆ: 'ಚುನಾವಣೆಗೆ ಸ್ಪರ್ಧಿಸಲು ಕುಮಾರಸ್ವಾಮಿ ಅವರ ಆರೋಗ್ಯ ಸ್ಥಿತಿ ಅನುಮತಿಸದಿದ್ದರೆ ಏನು ಮಾಡಬೇಕು ಎಂಬ ಪ್ರಶ್ನೆ ಎಲ್ಲರಲ್ಲೂ ಇದೆ. ಆಗ ಮೇಲುಕೋಟೆ ಜೆಡಿಎಸ್ ಮುಖಂಡ, ಮಾಜಿ ಸಂಸದ ಸಿ.ಎಸ್.ಪುಟ್ಟರಾಜು ಸ್ಪರ್ಧಿಸುತ್ತಾರೆ. ಅವರಿಗೆ ಈಗಾಗಲೇ ಸೂಚನೆ ನೀಡಲಾಗಿದೆ' ಎಂದು ಜೆಡಿಎಸ್ ಮುಖಂಡರು ಹೇಳುತ್ತಾರೆ.

'ಕುಮಾರಸ್ವಾಮಿಯವರ ಅನಾರೋಗ್ಯ ಹಾಗೂ ಕಳೆದ ಚುನಾವಣೆಯಲ್ಲಿ ನಿಖಿಲ್ ಸೋಲಿನ ಅನುಕಂಪ ಈ ಬಾರಿ ಜೆಡಿಎಸ್‌ಗೆ ಅಸ್ತ್ರವಾಗಿದೆ' ಎಂದು ಮುಖಂಡರೊಬ್ಬರು ಪ್ರತಿಪಾದಿಸಿದರು.

ಹಾಸನ: ಜೆಡಿಎಸ್‌ಗೆ ಪರ್ಯಾಯ ಅಭ್ಯರ್ಥಿ ಚಿಂತೆ

ಹಾಸನ: ಲೋಕಸಭೆ ಕ್ಷೇತ್ರದಲ್ಲಿ ಮೈತ್ರಿ ಅಭ್ಯರ್ಥಿಯಾಗಿರುವ ಪ್ರಜ್ವಲ್ ರೇವಣ್ಣ ಅವರನ್ನು ಬದಲಿಸುವಂತೆ ಎಚ್.ಡಿ.ರೇವಣ್ಣ ಅವರಿಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಸೂಚಿಸಿದ್ದು, ಜೆಡಿಎಸ್ ಪರ್ಯಾಯ ಅಭ್ಯರ್ಥಿಯನ್ನು ಕಣಕ್ಕೆ ಇಳಿಸಲಿದೆಯೇ ಎನ್ನುವ ಚರ್ಚೆ ಶುರುವಾಗಿದೆ.

ಸ್ಥಳೀಯ ಬಿಜೆಪಿ ನಾಯಕರ ವಿರೋಧದ ನಡುವೆಯೂ ಮೈತ್ರಿಕೂಟದಲ್ಲಿ ಹಾಸನ ಕ್ಷೇತ್ರವನ್ನು ಜೆಡಿಎಸ್‌ಗೆ ಬಿಟ್ಟುಕೊಡಲಾಗಿದೆ. ಈಗ ವರಿಷ್ಠರ ಮಾತಿಗೆ ಕಟ್ಟುಬಿದ್ದಿರುವ ಸ್ಥಳೀಯ ಬಿಜೆಪಿ ಮುಖಂಡರು, ಪ್ರಜ್ವಲ್ ಬದಲು ಬೇರೆ ಅಭ್ಯರ್ಥಿಯನ್ನು ಕಣಕ್ಕಿಳಿಸಲು ಜೆಡಿಎಸ್‌ಗೆ ಸೂಚಿಸುವಂತೆ ವರಿಷ್ಠರ ಮೇಲೆ ಒತ್ತಡ ಹಾಕಿದ್ದಾರೆ.

ಜೊತೆಗೆ, 'ಪ್ರಜ್ವಲ್ ಅವರ ಅನರ್ಹತೆ ಪ್ರಕರಣದ ವಿಚಾರಣೆ ಸುಪ್ರೀಂ ಕೋರ್ಟ್‌ನಲ್ಲಿ ನಡೆಯುತ್ತಿದ್ದು, ಚುನಾವಣೆಯ ಹೊತ್ತಿನಲ್ಲಿಯೇ ತೀರ್ಪು ಬಂದರೆ, ಮೈತ್ರಿಕೂಟಕ್ಕೆ ಮುಖಭಂಗವಾಗಲಿದೆ. ಸುರಕ್ಷತೆಗಾಗಿ ಬೇರೆ ಅಭ್ಯರ್ಥಿಯನ್ನು ಕಣಕ್ಕಿಳಿಸುವಂತೆ ಸೂಚಿಸಬೇಕು ಎಂದು ಬಿಜೆಪಿ ಮುಖಂಡರು, ದಾಖಲೆಗಳ ಸಹಿತ ಕೇಂದ್ರ ನಾಯಕರಿಗೆ ಮನವರಿಕೆ ಮಾಡಿದ್ದಾರೆ' ಎನ್ನಲಾಗಿದೆ.

ಪ್ರಜ್ವಲ್ ಸ್ಪರ್ಧೆಗೆ ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಪ್ರೀತಂಗೌಡ, ಮಾಜಿ ಶಾಸಕ ಎ.ಟಿ. ರಾಮಸ್ವಾಮಿ ಪ್ರಬಲ ವಿರೋಧ ವ್ಯಕ್ತಪಡಿಸಿದ್ದು, ಅಮಿತ್ ಶಾ ಮೈಸೂರಿಗೆ ಬಂದಾಗಲೂ ಅದನ್ನೇ ಹೇಳಿದ್ದರು. ಪ್ರಜ್ವಲ್ ವಿರುದ್ಧ ಪ್ರಕರಣ ದಾಖಲಿಸಿರುವ ಬಿಜೆಪಿ ಮುಖಂಡ ದೇವರಾಜೇಗೌಡರ ಮೂಲಕ ದಾಖಲೆಗಳನ್ನು ಅಮಿತ್ ಶಾ ಮುಂದಿಟ್ಟಿದ್ದು, ಮೈತ್ರಿ ಅಭ್ಯರ್ಥಿ ಬದಲಿಸುವಂತೆ ಪಟ್ಟು ಹಿಡಿದಿದ್ದಾರೆ ಎಂದು ತಿಳಿದು ಬಂದಿದೆ.

'ಎಚ್.ಡಿ.ದೇವೇಗೌಡರು ಅಥವಾ ಎಚ್.ಡಿ. ಕುಮಾರಸ್ವಾಮಿ ಸ್ಪರ್ಧಿಸಲಿ. ಇಲ್ಲದಿದ್ದರೆ, ಬಿಜೆಪಿ ಅಭ್ಯರ್ಥಿಗೆ ಟಿಕೆಟ್ ನೀಡುವಂತೆ ಒತ್ತಡ ಹೇರಿದ್ದಾರೆ' ಎನ್ನಲಾಗಿದೆ.

ಎ.ಮಂಜು –ಕುಮಾರಸ್ವಾಮಿ ಭೇಟಿ: ಈ ನಡುವೆ, ಅರಕಲಗೂಡಿನ ಜೆಡಿಎಸ್ ಶಾಸಕ ಎ.ಮಂಜು ಅವರ ಬೆಂಗಳೂರಿನ ನಿವಾಸಕ್ಕೆ ಭೇಟಿ ನೀಡಿದ ಎಚ್.ಡಿ. ಕುಮಾರಸ್ವಾಮಿ ಸುದೀರ್ಘ ಚರ್ಚೆ ನಡೆಸಿದ್ದಾರೆ.

'ದೇವೇಗೌಡರಿಗೆ ಇದು ಕೊನೆಯ ಚುನಾವಣೆಯಾಗಿದ್ದು, ಹಾಸನದಿಂದ ಅವರೇ ಸ್ಪರ್ಧಿಸಲಿ' ಎಂದು ಈ ಹಿಂದೆಯೇ ಎ.ಮಂಜು ಹೇಳಿದ್ದರು. ಅದರ ಬೆನ್ನಲ್ಲೇ, ಭವಾನಿ ರೇವಣ್ಣ ಹಾಗೂ ಪ್ರಜ್ವಲ್ ಕೂಡ ಎ.ಮಂಜು ಅವರನ್ನು ಭೇಟಿ ಮಾಡಿ, ಚರ್ಚೆ ನಡೆಸಿದ್ದರು.

ಇದೀಗ ಮಂಜು–ಕುಮಾರಸ್ವಾಮಿ ಮಾತುಕತೆ ನಡೆಸಿದ್ದು, ಅಂತಿಮ ಅಭ್ಯರ್ಥಿ ಯಾರಾಗಲಿದ್ದಾರೆ ಎಂಬುದು ಕುತೂಹಲ ಕೆರಳಿಸಿದೆ.

ತೆಲಂಗಾಣ: ಮುಖಂಡರನ್ನು ತಮ್ಮತ್ತ ಸೆಳೆಯಲು ಮುಂದಾಗಿರುವ ಉಭಯ ಪಕ್ಷಗಳು

ಬಿಆರ್‌ಎಸ್ ಪಾಲು ಕೀಳಲು ಕೈ– ಕಮಲ ಯತ್ನ

• ಎಸ್.ಎಸ್.ವಿ. ಸುಧೀರ್

ಹೈದರಾಬಾದ್: ತೆಲಂಗಾಣದಲ್ಲಿ ಒಂದು ದಶಕದ ಕಾಲ ಅಧಿಕಾರದಲ್ಲಿ ಇದ್ದ ಬಿಆರ್‌ಎಸ್ (ಹಿಂದಿನ ಟಿಆರ್‌ಎಸ್) ಪಕ್ಷದ ಬಲವನ್ನು ಕುಗ್ಗಿಸಲು ರಾಷ್ಟ್ರೀಯ ಪಕ್ಷಗಳಾದ ಬಿಜೆಪಿ ಮತ್ತು ಕಾಂಗ್ರೆಸ್ ಯತ್ನಿಸುತ್ತಿವೆ.

ಬಿಆರ್‌ಎಸ್ ಮುಖಂಡರನ್ನು ತಮ್ಮತ್ತ ಸೆಳೆಯಲು ಬಿಜೆಪಿ ಹಾಗೂ ಕಾಂಗ್ರೆಸ್ ಮುಂದಾಗಿವೆ. ಆದರೆ, ಮೊದಲ ಹಂತದಲ್ಲಿ ಕಾಂಗ್ರೆಸ್ ಪಕ್ಷವು ಬಿಜೆಪಿಗಿಂತ ಮುಂದೆ ಇರುವಂತೆ ಕಾಣುತ್ತಿದೆ. ಐದು ಮಂದಿ ಸಂಸದರು ಹಾಗೂ ಒಬ್ಬ ಶಾಸಕ ಬಿಆರ್‌ಎಸ್ ಪಕ್ಷವನ್ನು ತೊರೆದಿದ್ದಾರೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಶಾಸಕರು ಪಕ್ಷ ತೊರೆಯಲು ಸಿದ್ಧರಾಗಿದ್ದಾರೆ ಎಂದು ಮೂಲಗಳು ಹೇಳಿವೆ.

ಬಿಆರ್‌ಎಸ್ ಸಂಸದರ ಪೈಕಿ ಇಬ್ಬರನ್ನು ಬಿಜೆಪಿ ತನ್ನತ್ತ ಸೆಳೆದುಕೊಂಡಿದೆ. ಇನ್ನುಳಿದ ಮೂವರು ಕಾಂಗ್ರೆಸ್ ಸೇರಿದ್ದಾರೆ. ಕಳೆದ ವರ್ಷದ ವಿಧಾನಸಭಾ ಚುನಾವಣೆಯಲ್ಲಿ ಪಕ್ಷ ಕಂಡ ಸೋಲಿನ ನಂತರದಲ್ಲಿ ಬಿಆರ್‌ಎಸ್ ಮುಖಂಡರ ನೈತಿಕ ಸ್ಥೈರ್ಯ ಕುಗ್ಗಿದೆ. ಇದನ್ನು ತಮ್ಮ ಹಿತಕ್ಕೆ ಬಳಸಿಕೊಳ್ಳಲು ಮುಂದಾಗಿರುವ ಕಾಂಗ್ರೆಸ್ ಹಾಗೂ ಬಿಜೆಪಿ, ಬಿಆರ್‌ಎಸ್ ಮುಖಂಡರನ್ನು ತಮ್ಮತ್ತ ಸೆಳೆದು ಆ ಪಕ್ಷದ ಬಲವನ್ನು ಇನ್ನಷ್ಟು ಕುಗ್ಗಿಸುವ ಲೆಕ್ಕಾಚಾರದಲ್ಲಿವೆ. ಬಿಆರ್‌ಎಸ್ ಪಕ್ಷದ ನಾಯಕ ಕೆ. ಚಂದ್ರಶೇಖರ ರಾವ್ ಅವರ ಪುತ್ರಿ, ವಿಧಾನ ಪರಿಷತ್ ಸದಸ್ಯೆ ಕೆ. ಕವಿತಾ ಅವರ ಬಂಧನವು ಪಕ್ಷದ ಕಾರ್ಯಕರ್ತರಲ್ಲಿನ ಹುಮ್ಮಸ್ಸನ್ನು ಕಡಿಮೆ ಮಾಡಿದೆ. ಜಿಎಚ್‌ಎಂಸಿ (ಹೈದರಾಬಾದ್ ಮಹಾನಗರ ಪಾಲಿಕೆ ವ್ಯಾಪ್ತಿ) ಮತ್ತು ತೆಲಂಗಾಣದ ಉತ್ತರ ಭಾಗಗಳಲ್ಲಿ ಬಿಆರ್‌ಎಸ್ ಪ್ರಮುಖರನ್ನು ಸೆಳೆಯುವ ಉದ್ದೇಶ ಕಾಂಗ್ರೆಸ್ ಹಾಗೂ ಬಿಜೆಪಿಯಲ್ಲಿ ಇದೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಜಿಎಚ್‌ಎಂಸಿ ಪ್ರದೇಶದಲ್ಲಿ ಯಾವುದೇ ಸ್ಥಾನ ಗೆದ್ದುಕೊಳ್ಳಲು ಬಿಜೆಪಿ ಮತ್ತು ಕಾಂಗ್ರೆಸ್‌ಗೆ ಆಗಿಲ್ಲ.

ತೆಲಂಗಾಣದ ಉತ್ತರ ಭಾಗದಲ್ಲಿ ಏಳು ವಿಧಾನಸಭಾ ಕ್ಷೇತ್ರಗಳನ್ನು ಗೆದ್ದುಕೊಳ್ಳುವ ಮೂಲಕ ಬಿಜೆಪಿ ತನ್ನ ಸಾಧನೆಯನ್ನು ಉತ್ತಮಪಡಿಸಿಕೊಂಡಿದೆ. ಇಲ್ಲಿ ಒಟ್ಟು 19 ವಿಧಾನಸಭಾ ಕ್ಷೇತ್ರಗಳಿವೆ. ಇಲ್ಲಿ ತನ್ನ ಶಕ್ತಿಯನ್ನು ಹೆಚ್ಚು ಮಾಡಿಕೊಳ್ಳುವ ಉದ್ದೇಶದಿಂದ ಬಿಜೆಪಿಯು ಬಿಆರ್‌ಎಸ್ ಮುಖಂಡರನ್ನು ಸೆಳೆಯುವ ಯತ್ನವನ್ನು ಈಗಾಗಲೇ ಆರಂಭಿಸಿದೆ.

'ಒಂದು ಪಕ್ಷವು ಇನ್ನೊಂದು ಪಕ್ಷದಿಂದ ಮುಖಂಡರನ್ನು ಸೆಳೆಯುವುದು ಸಹಜ. ಆದರೆ, ದುರದೃಷ್ಟದ ಸಂಗತಿಯೆಂದರೆ, ಮುಖಂಡರನ್ನು ಸೆಳೆಯುವುದು ಒಂದು ಪಕ್ಷವನ್ನು ಬಲಪಡಿಸುವ ಮಾರ್ಗವಾಗಿಬಿಟ್ಟಿದೆ. ಬಿಆರ್‌ಎಸ್‌ನ ಸ್ಥಾನವನ್ನು ಪಡೆದುಕೊಳ್ಳಲು ಬಿಜೆಪಿ ಯತ್ನಿಸುತ್ತಿದೆ. ರಾಜ್ಯದಲ್ಲಿ ಬಿಜೆಪಿ ಬಲಗೊಳ್ಳುವುದು ಕಾಂಗ್ರೆಸ್‌ಗೆ ಇಷ್ಟವಿಲ್ಲ. ಹೀಗಾಗಿ ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ಸಹಜವಾಗಿಯೇ ಸ್ಪರ್ಧೆ ಇದೆ. ಚುನಾವಣೆ ಹತ್ತಿರವಾದಂತೆಲ್ಲ ಇದು ಇನ್ನಷ್ಟು ಬಿರುಸು ಪಡೆದುಕೊಳ್ಳುತ್ತದೆ' ಎಂದು ರಾಜಕೀಯ ವಿಶ್ಲೇಷಕ ತೆಲಕಪಲ್ಲಿ ರವಿ ಅವರು ಹೇಳಿದರು.

ಉರಿಯುವ ಬೆಂಕಿಗೆ ತುಪ್ಪ ಸುರಿದ ಮಾತು

ಬಿಆರ್‌ಎಸ್ ಪಕ್ಷದ ಕೆಲವು ಶಾಸಕರು ತಾವು ಮುಂದೆ ಬಿಜೆಪಿ ಸೇರಬೇಕೋ ಅಥವಾ ಕಾಂಗ್ರೆಸ್ ಸೇರಬೇಕೋ ಎಂಬುದನ್ನು ಲೋಕಸಭಾ ಚುನಾವಣೆಯ ಫಲಿತಾಂಶದ ಆಧಾರದಲ್ಲಿ ತೀರ್ಮಾನಿಸಲು ನಿರ್ಧರಿಸಿದ್ದಾರೆ ಎಂದು ಹೇಳಲಾಗಿದೆ. ಆದರೆ ತೆಲಂಗಾಣ ಮುಖ್ಯಮಂತ್ರಿ ಎ. ರೇವಂತ್ ರೆಡ್ಡಿ ಅವರು ಈಚೆಗೆ ಆಡಿರುವ ಮಾತೊಂದು ಬಿಆರ್‌ಎಸ್ ಪಾಲಿಗೆ ಉರಿಯುವ ಬೆಂಕಿಗೆ ತುಪ್ಪ ಸುರಿಯುವ ಕೆಲಸ ಮಾಡಿದೆ.

ಬಿಆರ್‌ಎಸ್ ಪಕ್ಷವು ಶೀಘ್ರದಲ್ಲಿಯೇ ಖಾಲಿ ಮನೆಯಾಗಲಿದೆ ಎಂದು ರೆಡ್ಡಿ ಅವರು ಸೂಚ್ಯವಾಗಿ ಹೇಳಿದ್ದಾರೆ. 'ಕಳೆದ 100 ದಿನಗಳಲ್ಲಿ ನಾನು ಮುಖ್ಯಮಂತ್ರಿಯಾಗಿ ಮಾಡಿದ ಸಾಧನೆಗಳನ್ನು ನೀವೆಲ್ಲ ನೋಡಿದ್ದೀರಿ. ಇನ್ನು ಮುಂದೆ ಚುನಾವಣೆಯವರೆಗೆ ನೀವು, ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷನಾಗಿ ನನ್ನ ಸಾಧನೆ ನೋಡಲಿದ್ದೀರಿ. ನಾವು ಬಾಗಿಲನ್ನು ಸ್ವಲ್ಪಮಾತ್ರವೇ ತೆರೆದಿದ್ದೇವೆ. ಬಾಗಿಲನ್ನು ಪೂರ್ತಿಯಾಗಿ ತೆರೆದರೆ ಏನಾಗುತ್ತದೆ ಎಂಬುದನ್ನು ನೀವು ನೋಡುವಿರಿ' ಎಂದು ರೇವಂತ್ ರೆಡ್ಡಿ ಅವರು ಸುದ್ದಿಗಾರರ ಬಳಿ ಈಚೆಗೆ ಹೇಳಿದ್ದರು.

ಮಂಡ್ಯ ಟಿಕೆಟ್: ಕೊನೇ ಪ್ರಯತ್ನದಲ್ಲಿ ಸುಮಲತಾ

ಪ್ರಜಾವಾಣಿ ವಾರ್ತೆ

ನವದೆಹಲಿ: ಮಂಡ್ಯ ಸಂಸದೆ ಸುಮಲತಾ ಅಂಬರೀಶ್ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರನ್ನು ಸೋಮವಾರ ಇಲ್ಲಿ ಭೇಟಿ ಮಾಡಿ ಚರ್ಚಿಸಿದರು. ಮಂಡ್ಯ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಕಣಕ್ಕಿಳಿಸಬೇಕು ಎಂದು ಮತ್ತೊಮ್ಮೆ ಮನವಿ ಮಾಡಿದರು.

ಮಂಡ್ಯವನ್ನು ಜೆಡಿಎಸ್‌ಗೆ ಬಿಟ್ಟುಕೊಡಲು ಬಿಜೆಪಿ ತೀರ್ಮಾನಿಸಿದೆ. ಕ್ಷೇತ್ರ ಉಳಿಸಿಕೊಳ್ಳಲು ಅವರು ಬಿಜೆಪಿ ವರಿಷ್ಠರನ್ನು ಭೇಟಿ ಮಾಡಿ ಕೊನೆಯ ಪ್ರಯತ್ನ ಮಾಡಿದರು. ಮಂಡ್ಯದಲ್ಲಿ ಸುಮಲತಾ ಅವರನ್ನು ಹುರಿಯಾಳು ಮಾಡುವ ಬಗ್ಗೆ ನಡ್ಡಾ ಯಾವುದೇ ಭರವಸೆ ನೀಡಲಿಲ್ಲ. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಸುಮಲತಾ ಮಂಗಳವಾರ ಭೇಟಿ ಮಾಡಲಿದ್ದಾರೆ. ಬಳಿಕ ಮಂಡ್ಯದಲ್ಲಿ ಅಭಿಮಾನಿಗಳು ಹಾಗೂ ಕಾರ್ಯಕರ್ತರ ಸಭೆ ಕರೆದು ಮುಂದಿನ ತೀರ್ಮಾನ ಕೈಗೊಳ್ಳಲಿದ್ದಾರೆ.

ಸುದ್ದಿಗಾರರ ಜತೆ ಮಾತನಾಡಿದ ಸುಮಲತಾ, 'ನಡ್ಡಾ ಕೆಲವು ಸಲಹೆ ನೀಡಿದ್ದಾರೆ. ಜೆಡಿಎಸ್ ಜತೆಗಿನ ಮೈತ್ರಿ ಬಗ್ಗೆ ಅಂತಿಮ ತೀರ್ಮಾನ ಇನ್ನೂ ಆಗಿಲ್ಲ. ಮೈತ್ರಿಯ ಅಂತಿಮ ಸಭೆ ಬಳಿಕ ವಿಷಯ ತಿಳಿಸುವುದಾಗಿ ಭರವಸೆ ನೀಡಿದ್ದಾರೆ' ಎಂದರು.

'ಮಂಡ್ಯ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಸ್ಪರ್ಧಿಸಬೇಕು ಎಂಬುದು ನನ್ನ ಆಶಯ. ಆಗ ಬಿಜೆಪಿಯ ಸಂಘಟನೆ 'ಇನ್ನಷ್ಟು ಬಲಗೊಳ್ಳಲಿದೆ. ನಾನೇ ಅಭ್ಯರ್ಥಿಯಾಗಬಹುದು ಎಂಬ ನಿರೀಕ್ಷೆ ಇದೆ' ಎಂದರು.

ಚಿಕ್ಕಬಳ್ಳಾಪುರ ಕ್ಷೇತ್ರದಿಂದ ಕಣಕ್ಕಿಳಿಯುವ ವದಂತಿ ಬಗ್ಗೆ ಪ್ರತಿಕ್ರಿಯಿಸಿ, 'ಕ್ಷೇತ್ರ ಬದಲಾವಣೆ ಕುರಿತ ಸುದ್ದಿ ನಿಜವಲ್ಲ. ಅಂಬರೀಶ್ ಅಭಿಮಾನಿಗಳ ಒತ್ತಾಯದ ಮೇರೆಗೆ ಕಳೆದ ಬಾರಿ ಚುನಾವಣೆಗೆ ಸ್ಪರ್ಧಿಸಿದ್ದೆ. ಅಭಿಮಾನಿಗಳ ಸಲಹೆ ಮೇರೆಗೆ ಬಿಜೆಪಿಗೆ ಬಾಹ್ಯ ಬೆಂಬಲ ನೀಡಿದ್ದೇನೆ. ಬಿಜೆಪಿ ಸೇರುವ ಬಗ್ಗೆ ಸೂಕ್ತ ಸಮಯದಲ್ಲಿ ನಿರ್ಧರಿಸುವೆ' ಎಂದರು.

ಮೋದಿ ವಿರುದ್ಧ ಕಾಂಗ್ರೆಸ್ ಟೀಕೆ

ಪವನ್ ಖೇರಾ

ನವದೆಹಲಿ (ಪಿಟಿಐ): 'ಶಕ್ತಿ'ಯನ್ನು ಕೊನೆಗೊಳಿಸುವ ಮಾತುಗಳು 'ಇಂಡಿಯಾ' ಮೈತ್ರಿಕೂಟದ ಪ್ರಣಾಳಿಕೆಯಲ್ಲಿ ಇವೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿರುವುದಕ್ಕೆ ತಿರುಗೇಟು ನೀಡಿರುವ ಕಾಂಗ್ರೆಸ್, ದೇಶವನ್ನು ಅಸುರ ಶಕ್ತಿಯು ಮುನ್ನಡೆಸುವುದೋ ಅಥವಾ ದೈವಿಕ ಶಕ್ತಿಯು ಮುನ್ನಡೆಸುವುದೋ ಎಂಬುದು ಚುನಾವಣೆಯಲ್ಲಿ ತೀರ್ಮಾನವಾಗ ಲಿದೆ ಎಂದು ಹೇಳಿದೆ.

ಮುಂಬೈನಲ್ಲಿ ನಡೆದ ರ‍್ಯಾಲಿಯಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು 'ಮೋದಿ ಅವರ ವಿರುದ್ಧದ ಹೋರಾಟವು ವೈಯಕ್ತಿಕ ಮಟ್ಟದಲ್ಲಿ ಆಗುತ್ತಿಲ್ಲ. ಏಕೆಂದರೆ ಮೋದಿ ಅವರು ಮುಖವಾಡ ಮಾತ್ರ, ಅವರು ಒಂದು ಶಕ್ತಿಯ ಪರವಾಗಿ ಕೆಲಸ ಮಾಡುತ್ತಿದ್ದಾರೆ' ಎಂದು ಹೇಳಿದ್ದರು. ಇದಕ್ಕೆ ಪ್ರತಿಯಾಗಿ ಪ್ರಧಾನಿ, 'ಶಕ್ತಿ'ಯನ್ನು ಆರಾಧಿಸುವವರು ಹಾಗೂ ಶಕ್ತಿಯನ್ನು ನಾಶಪಡಿಸಲು ಬಯಸುವವರ ನಡುವಿನ ಹೋರಾಟ ಇದು ಎಂದು ಹೇಳಿದ್ದರು.

'ಅವರು ತಮ್ಮ ಪ್ರಣಾಳಿಕೆಯನ್ನು ಘೋಷಿಸಿದ್ದಾರೆ... ಶಕ್ತಿಯ ವಿರುದ್ಧ ತಮ್ಮ ಹೋರಾಟ ಎಂದಿದ್ದಾರೆ. ನನ್ನ ಪಾಲಿಗೆ ಪ್ರತಿ ತಾಯಿ, ಪ್ರತಿ ಮಗಳು ಒಂದು ಶಕ್ತಿ ಇದ್ದಂತೆ. ತಾಯಂದಿರೇ, ಸಹೋದರಿಯರೇ, ನಾನು ನಿಮ್ಮನ್ನು ಶಕ್ತಿ ರೂಪದಲ್ಲಿ ಪೂಜಿಸುತ್ತೇನೆ. ನಾನು ಭಾರತ ಮಾತೆಯ ಪೂಜಾರಿ' ಎಂದು ಪ್ರಧಾನಿ ಮೋದಿ ಹೇಳಿದ್ದಾರೆ.

ಇದಕ್ಕೆ ತಿರುಗೇಟು ಎಂಬಂತೆ ಕಾಂಗ್ರೆಸ್ ಪಕ್ಷವು ಬಿಜೆಪಿಯನ್ನು ಅಸುರ ಶಕ್ತಿಗೆ ಹೋಲಿಸಿದೆ. ಕಳೆದ ಹತ್ತು ವರ್ಷಗಳಲ್ಲಿ ಮಹಿಳೆಯರ ಮೇಲೆ ಆಗಿರುವ ದೌರ್ಜನ್ಯಗಳನ್ನು ದೇಶವು ಕಂಡಿದೆ ಎಂದು ಹೇಳಿದೆ. 'ಅಸುರ ಶಕ್ತಿಯ ಮೇಲೆ ರಾಹುಲ್ ಅವರು ವಾಗ್ದಾಳಿ ನಡೆಸಿದ ನಂತರದಲ್ಲಿ ಬಿಜೆಪಿಯ ಎಲ್ಲರೂ ಆಧಾರರಹಿತವಾಗಿ ಮಾತನಾಡುತ್ತಿದ್ದಾರೆ' ಎಂದು ಕಾಂಗ್ರೆಸ್ ವಕ್ತಾರ ಪವನ್ ಖೇರಾ ಹೇಳಿದ್ದಾರೆ.

'ಮಹಿಳಾ ಕುಸ್ತಿಪಟುಗಳು ದೌರ್ಜನ್ಯಕ್ಕೆ ಗುರಿಯಾಗಿದ್ದಾಗ ಪ್ರಧಾನಿಯವರ ಶಕ್ತಿ ಪೂಜೆ ಎಲ್ಲಿತ್ತು' ಎಂದು ಖೇರಾ ಪ್ರಶ್ನಿಸಿದ್ದಾರೆ. ಹತ್ತು ವರ್ಷಗಳ ಹಿಂದೆ ಬಿಜೆಪಿಯು ಕಠುವಾ, ಉನ್ನಾವ್, ಹಾಥರಸ್‌ನಲ್ಲಿ ಅತ್ಯಾಚಾರಿಗಳ ಪರವಾಗಿ ಮೋರ್ಚಾಗಳನ್ನು ಸಂಘಟಿಸುತ್ತಿದ್ದಾಗ ಶಕ್ತಿಯ ಪೂಜೆ ನೆನಪಾಗಲಿಲ್ಲವೇ ಎಂದು ಕೂಡ ಪ್ರಶ್ನಿಸಿದ್ದಾರೆ.

'ಮಣಿಪುರದಲ್ಲಿ ಮಹಿಳೆಯರನ್ನು ಬೆತ್ತಲಾಗಿ ಓಡುವಂತೆ ಮಾಡಿದಾಗ ಯಾವ ಶಕ್ತಿಯು ನಿಮ್ಮನ್ನು ಮೌನವಾಗಿರುವಂತೆ ಮಾಡಿತು' ಎಂದು ಖೇರಾ ಕೇಳಿದ್ದಾರೆ.

ಲೋಕಸಭಾ ಚುನಾವಣೆ: ಪ್ರಧಾನಿ ನರೇಂದ್ರ ಮೋದಿ ಬಣ್ಣನೆ

'ಶಕ್ತಿ ಆರಾಧನೆ– ನಾಶದ ನಡುವಿನ ಹೋರಾಟ'

ಪ್ರಜಾವಾಣಿ ವಾರ್ತೆ

ಶಿವಮೊಗ್ಗದಲ್ಲಿ ಸೋಮವಾರ ಬಿಜೆಪಿ–ಜೆಡಿಎಸ್ ಮಹಿಳಾ ಘಟಕದ ಸದಸ್ಯರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಶ್ರೀಕೃಷ್ಣನ ವಿಗ್ರಹ ನೀಡಿ ಗೌರವಿಸಿದರು

ಶಿವಮೊಗ್ಗ: 'ದೇಶದ ಪ್ರತಿ ತಾಯಿ ಮತ್ತು ಮಗಳು ನನ್ನ ದೃಷ್ಟಿಯಲ್ಲಿ 'ಶಕ್ತಿ'ಯ ಸ್ವರೂಪ. ಅಂತಹ 'ಶಕ್ತಿ'ಯನ್ನು ನಾಶಗೊಳಿಸುವುದಾಗಿ ಕಾಂಗ್ರೆಸ್ ನೇತೃತ್ವದ ಇಂಡಿಯಾ ಒಕ್ಕೂಟ ಹೇಳುತ್ತಿದೆ. ಈ ಬಾರಿಯ ಲೋಕಸಭಾ ಚುನಾವಣೆಯು ಹಿಂದೂ ಸಮಾಜದ 'ಶಕ್ತಿ'ಯನ್ನು ನಾಶ ಮಾಡಲು ಹೊರಟವರು ಮತ್ತು 'ಶಕ್ತಿ'ಯ ಆರಾಧಕರ ನಡುವಿನ ಹೋರಾಟ' ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಹೇಳಿದರು.

ಇಲ್ಲಿನ ಅಲ್ಲಮಪ್ರಭು ಉದ್ಯಾನದ (ಫ್ರೀಡಂ ಪಾರ್ಕ್) ಬಯಲಿನಲ್ಲಿ ಶಿವಮೊಗ್ಗ, ದಾವಣಗೆರೆ, ಚಿತ್ರದುರ್ಗ, ಉಡುಪಿ–ಚಿಕ್ಕಮಗಳೂರು ಹಾಗೂ ದಕ್ಷಿಣ ಕನ್ನಡ ಕ್ಷೇತ್ರಗಳ ಬಿಜೆಪಿ ಅಭ್ಯರ್ಥಿಗಳ ಪರ ಅವರು ಸೋಮವಾರ ಚುನಾವಣಾ ಪ್ರಚಾರ ಭಾಷಣ ಮಾಡಿದರು.

'ಈ ದೇಶದ ರಾಜನ (ನರೇಂದ್ರ ಮೋದಿ) ಶಕ್ತಿಯು ಇ.ವಿ.ಎಂ ಯಂತ್ರದಲ್ಲಿದೆ. ವಿರೋಧಿಗಳನ್ನು ಹಣಿಯಲು ಬಳಕೆ ಮಾಡುವ ಇ.ಡಿ, ಸಿಬಿಐ, ಐ.ಟಿ.ಯಂತಹ ತನಿಖಾ ಸಂಸ್ಥೆಗಳ ರೂಪದಲ್ಲಿದೆ. ನಾವು (ಕಾಂಗ್ರೆಸ್) ಆ 'ಶಕ್ತಿ'ಯ ವಿರುದ್ಧ ಹೋರಾಟ ನಡೆಸುತ್ತಿದ್ದೇವೆ' ಎಂದು ಕಾಂಗ್ರೆಸ್ ನಾಯಕ ರಾಹುಲ್‌ಗಾಂಧಿ ಭಾನುವಾರ ಮುಂಬೈನಲ್ಲಿ ಹೇಳಿದ್ದರು. ಅದಕ್ಕೆ ಮೋದಿ ಮೇಲಿನಂತೆ ತಿರುಗೇಟು ನೀಡಿದರು.

'ಕರ್ನಾಟಕದಲ್ಲಿ ರಾಷ್ಟ್ರಕವಿ ಕುವೆಂಪು ಅವರು ಮಂತ್ರ ಕಣ, ಶಕ್ತಿ ಕಣ, ತಾಯಿ ಕಣ, ದೇವಿ ಕಣ ಎಂದು ಹೇಳಿ ಮಹಿಳೆಯರನ್ನು 'ಶಕ್ತಿ'ಯ ರೂಪದಲ್ಲಿ ನೋಡಿದ್ದಾರೆ. ಅದೇ ರೀತಿ ರಾಷ್ಟ್ರವು ಚಂದ್ರಯಾನದ ಯಶಸ್ಸನ್ನು 'ಶಿವಶಕ್ತಿ'ಗೆ ಅರ್ಪಿಸಿದೆ. ಇಂಡಿಯಾ ಒಕ್ಕೂಟವು ಅಂತಹ ಶಕ್ತಿಯನ್ನೇ ನಾಶ ಮಾಡಲು ಹೊರಟಿದೆ. ಅದರಲ್ಲೂ ತುಳಜಾ ಭವಾನಿಯ ನೆಲ ಮುಂಬೈನ ಶಿವಾಜಿ ಪಾರ್ಕ್‌ನಲ್ಲಿ ನಿಂತು ಇಂಡಿಯಾ ಒಕ್ಕೂಟದವರು ಆ ಮಾತು ಹೇಳಿದ್ದಾರೆ. ಅದನ್ನು ಕೇಳಿ ಬಾಳಠಾಕ್ರೆಯವರ ಆತ್ಮ ಎಷ್ಟು ದುಖಿಃಸಿರಬಹುದು ಊಹಿಸಿ' ಎಂದು ವಾಗ್ದಾಳಿ ನಡೆಸಿದರು.

'ಇಂಡಿಯಾ ಒಕ್ಕೂಟದ ಸವಾಲು ಸ್ವೀಕರಿಸುತ್ತೇನೆ. ತಾಯಂದಿರು ಮತ್ತು ಸಹೋದರಿಯರ ಭದ್ರತೆಗೆ ನನ್ನ ಪ್ರಾಣ ತ್ಯಾಗ ಮಾಡುತ್ತೇನೆ' ಎಂದರು.

'ದಿಲ್ಲಿ ಕಲೆಕ್ಷನ್ ಮಿನಿಸ್ಟರ್ ಇಲ್ಲಿದ್ದಾರೆ...'

'ಕರ್ನಾಟಕದಲ್ಲಿ ಸರ್ಕಾರ ನಡೆಸಲೂ ಹಣ ಇಲ್ಲ. ಆದರೂ ಕಾಂಗ್ರೆಸ್, ತನ್ನ ಜೇಬು ತುಂಬಿಸಿಕೊಳ್ಳಲು ರಾಜ್ಯವನ್ನು ಎ.ಟಿ.ಎಂ ರೀತಿ ಬಳಕೆ ಮಾಡಿಕೊಳ್ಳುತ್ತಿದೆ' ಎಂದು ಮೋದಿ ಪುನರುಚ್ಚರಿಸಿದರು.

'ಇಲ್ಲಿ ಹಾಲಿ ಮುಖ್ಯಮಂತ್ರಿ, ಭವಿಷ್ಯದ ಮುಖ್ಯಮಂತ್ರಿ, ಶ್ಯಾಡೋ ಸಿಎಂ, ಮುಂದೆ ಮುಖ್ಯಮಂತ್ರಿ ಗಾದಿಗೆ ಏರುವ ಆಕಾಂಕ್ಷೆ ಹೊತ್ತವರ ಜೊತೆಗೆ ಇಲ್ಲಿಂದ ಹಣ ಸಂಗ್ರಹಿಸಿ ಕೊಂಡೊಯ್ಯಲಿಕ್ಕೆ ದಿಲ್ಲಿಯ ಕಲೆಕ್ಷನ್ ಮಿನಿಸ್ಟರ್ ಕೂಡ ಇದ್ದಾರೆ' ಎಂದು ಲೇವಡಿ ಮಾಡಿದರು.

'ಕಾಂಗ್ರೆಸ್‌ನವರಿಗೆ ಅಭಿವೃದ್ಧಿಯ ಅಜೆಂಡಾ ಇಲ್ಲ. ಬದಲಿಗೆ ಹೋದಲ್ಲೆಲ್ಲಾ ಪದೇಪದೇ ದೊಡ್ಡ ದೊಡ್ಡ ಸುಳ್ಳು ಹೇಳುವುದೇ ಅವರ ಮೊದಲ ಅಜೆಂಡಾ. ಹಳೆಯ ಸುಳ್ಳು ಮರೆ ಮಾಚಲು ಹೊಸ ಸುಳ್ಳು ಹೇಳು, ಸಿಕ್ಕಿಬಿದ್ದಾಗ ತಮ್ಮ ತಪ್ಪನ್ನು ಬೇರೆಯವರ ತಲೆಗೆ ಕಟ್ಟು ಎಂಬುದು ಅವರ 2ನೇ ಅಜೆಂಡಾ. ಅದರ ಭಾಗವಾಗಿ ಕೇಂದ್ರ ಸರ್ಕಾರ ಹಾಗೂ ನನ್ನ ವಿರುದ್ಧ ಸುಳ್ಳು ಆರೋಪಗಳನ್ನು ಮಾಡುತ್ತಿದ್ದಾರೆ' ಎಂದು ದೂರಿದರು.

ಬಿಜೆಪಿ ಜತೆ ಮೈತ್ರಿ: ಎಚ್‌ಡಿಕೆ ಅಪಸ್ವರ

ಒಂದನೇ ಪುಟದಿಂದ...

'ಹಾಸನ, ಮಂಡ್ಯದಲ್ಲಿ ಸ್ವತಂತ್ರವಾಗಿ ನಮ್ಮ ಅಭ್ಯರ್ಥಿಗಳು ಗೆಲ್ಲುತ್ತಾರೆ. ತ್ರಿಕೋನ ಸ್ಪರ್ಧೆಯಾದರೆ ಗೆಲುವು ಸುಲಭ. ಆದರೆ, 18 ಲೋಕಸಭಾ ಕ್ಷೇತ್ರಗಳಲ್ಲಿ ಜೆಡಿಎಸ್‌ನಿಂದ ಬಿಜೆಪಿಗೆ ಅನುಕೂಲವಾಗುತ್ತದೆ. ನಮ್ಮ ಪಕ್ಷದ ಮತಗಳಲ್ಲಿ ಶೇಕಡ 3ರಿಂದ 4ರಷ್ಟು ಬಿಜೆಪಿ ಅಭ್ಯರ್ಥಿಗಳಿಗೆ ವರ್ಗಾವಣೆಯಾದರೂ ಅವರು ಗೆಲುವು ಸಾಧಿಸುತ್ತಾರೆ' ಎಂದರು.

'ಬಿಜೆಪಿ ನಮ್ಮನ್ನು ಸರಿಯಾಗಿ ಬಳಕೆ ಮಾಡಿಕೊಳ್ಳಬೇಕು. ಇಲ್ಲವಾದರೆ ಚುನಾವಣೆಯಲ್ಲಿ ಪೆಟ್ಟುಬಿದ್ದರೆ ಅದರ ಸಾಧಕ– ಬಾಧಕಗಳಿಗೆ ಬಿಜೆಪಿಯೇ ಹೊಣೆಯಾಗುತ್ತದೆ. ನಾವು ಆ ಹೊಣೆಯನ್ನು ಹೊತ್ತುಕೊಳ್ಳಲು ಸಾಧ್ಯವಿಲ್ಲ' ಎಂದು ಮಿತ್ರಪಕ್ಷದ ನಾಯಕರಿಗೆ ಎಚ್ಚರಿಕೆ ನೀಡಿದರು.

ವಿಜಯಪುರ, ಕಲಬುರಗಿ ಸೇರಿದಂತೆ ಉತ್ತರ ಕರ್ನಾಟಕದ ಕೆಲವು ಕ್ಷೇತ್ರಗಳಲ್ಲಿ ಬಿಜೆಪಿಗಿಂತ ಜೆಡಿಎಸ್ ಪ್ರಬಲವಾಗಿದೆ. ಇಂತಹ ಕ್ಷೇತ್ರಗಳಲ್ಲಿ ಜೆಡಿಎಸ್ ನಾಯಕರನ್ನು ಸರಿಯಾಗಿ ಬಳಕೆ ಮಾಡಿಕೊಳ್ಳಬೇಕು. ಈ ಕುರಿತು ಬಿಜೆಪಿ ವರಿಷ್ಠರ ಜತೆ ಚರ್ಚಿಸುವಂತೆ ತಮ್ಮ ಪಕ್ಷದ ಮುಖಂಡರು ಒತ್ತಾಯಿಸಿದ್ದಾರೆ ಎಂದರು.

'ವಿಶ್ವಾಸದ ಕೊರತೆ': 'ನಮ್ಮನ್ನು ಗೌರವಯುತವಾಗಿ ನಡೆಸಿಕೊಳ್ಳಬೇಕು. ಜೆಡಿಎಸ್ ಪಕ್ಷವನ್ನು ಕಡೆಗಣಿಸಿದರೆ ಆಗುವ ಪರಿಣಾಮಗಳ ಕುರಿತು ಸಭೆಯಲ್ಲಿ ಚರ್ಚಿಸಿದ್ದೇವೆ. ಇವೆಲ್ಲವನ್ನೂ ಬಿಜೆಪಿ ವರಿಷ್ಠರ ಜತೆ ಚರ್ಚಿಸಿ ಸೌಹಾರ್ದಯುತವಾಗಿ ಒಟ್ಟಾಗಿ ಕೆಲಸ ಮಾಡುವ ಬಗ್ಗೆ ಮಾತುಕತೆ ನಡೆಸಿದ್ದೇವೆ' ಎಂದು ಹೇಳಿದರು.

'ಕೋರ್ ಕಮಿಟಿ' ಅಧ್ಯಕ್ಷ ಜಿ.ಟಿ. ದೇವೇಗೌಡ, ಮಾಜಿ ಸಚಿವರಾದ ಬಂಡೆಪ್ಪ ಕಾಶೆಂಪುರ, ಶಾಸಕ ಸಮೃದ್ಧಿ ಮಂಜುನಾಥ್, ಮಾಜಿ ಶಾಸಕ ತಿಮ್ಮರಾಯಪ್ಪ ಉಪಸ್ಥಿತರಿದ್ದರು.

ಪ್ರಚಾರ ಮಧ್ಯಪ್ರದೇಶದ ಮಾಜಿ ಮುಖ್ಯಮಂತ್ರಿ ಮತ್ತು ವಿದಿಶಾ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಶಿವರಾಜ್ ಸಿಂಗ್ ಚೌಹಾಣ್ ಸೋಮವಾರ ಸೆಹೋರ್ ಜಿಲ್ಲೆಯ ಇಚ್ಛಾವರ್ ಪಟ್ಟಣದಲ್ಲಿ ಚುನಾವಣಾ ಪ್ರಚಾರ ಮಾಡಿದರು
-ಪಿಟಿಐ ಚಿತ್ರ

ರಾಜ್ಯದಲ್ಲಿ ಪ್ರಧಾನಿ ಮೋದಿ ಪ್ರಚಾರ

ಒಂದನೇ ಪುಟದಿಂದ...

ಆದರೆ ಪ್ರಧಾನಿ ವೇದಿಕೆಗೆ ಬಂದಾಗ ಮಧ್ಯಾಹ್ನ ಮೂರೂವರೆ ಆಗಿತ್ತು. ಚುನಾವಣೆ ನೀತಿ–ಸಂಹಿತೆಯ ಕಾರಣಕ್ಕೆ ಸಂಘಟಕರು ಊಟದ ವ್ಯವಸ್ಥೆ ಮಾಡಿರಲಿಲ್ಲ. ಮೂರೂವರೆ ಗಂಟೆ ಕಾದು ಕುಳಿತಿದ್ದ ಜನರು ಮಜ್ಜಿಗೆ, ನೀರು ಕುಡಿಯುತ್ತಾ ಮೋದಿ ಭಾಷಣ ಆಲಿಸಿದರು.

ಜನರ ಮಧ್ಯದಿಂದ ವೇದಿಕೆಗೆ: ವಿಮಾನ ನಿಲ್ದಾಣದಿಂದ ಅಲ್ಲಮಪ್ರಭು ಮೈದಾನಕ್ಕೆ ಬಂದ ನರೇಂದ್ರ ಮೋದಿ, ಸಭಿಕರ ನಡುವಿನಿಂದಲೇ ತೆರೆದ ವಾಹನದಲ್ಲಿ ವೇದಿಕೆಗೆ ಬಂದು ಗಮನ ಸೆಳೆದರು.

ಶಿವಮೊಗ್ಗ ಸಂಸದ ಬಿ.ವೈ. ರಾಘವೇಂದ್ರ ಹಾಗೂ ದಾವಣಗೆರೆ ಕ್ಷೇತ್ರದ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ತೆರೆದ ವಾಹನದಲ್ಲಿ ನರೇಂದ್ರ ಮೋದಿ ಅಕ್ಕಪಕ್ಕದಲ್ಲಿ ನಿಂತು ಜನರಿಗೆ ಕೈಮುಗಿದರು. ಈ ವೇಳೆ 'ಮೋದಿ', 'ಮೋದಿ' ಘೋಷಣೆ ಜೋರಾಗಿ ಕೇಳಿ ಬಂತು. ಕೇಸರಿ ಶಾಲು, ಟೋಪಿ ಬೀಸಿ ಜನರು ಪ್ರಧಾನಿಯತ್ತ ಅಭಿಮಾನ ತೋರಿದರು.

ಕಾರ್ಯಕ್ರಮದಲ್ಲಿ ಕಾಲೇಜು ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಸಂಘಟಕರು ಅವರಿಗೆ ವಿಐಪಿ ಪಾಸ್ ನೀಡಿದ್ದರು. ನವ ಮತದಾರರು ಪ್ರಧಾನಿಯನ್ನು ಹತ್ತಿರದಿಂದ ನೋಡಿದರು.

ಬೆಂಗಳೂರು ಗ್ರಾಮಾಂತರ ಕ್ಷೇತ್ರದ ಅಭ್ಯರ್ಥಿ ಡಾ.ಸಿ.ಎನ್.ಮಂಜುನಾಥ್ ಮೊದಲ ಬಾರಿಗೆ ನರೇಂದ್ರ ಮೋದಿ ಅವರೊಂದಿಗೆ ವೇದಿಕೆ ಹಂಚಿಕೊಂಡರು. ಮಂಜುನಾಥ್ ಅವರನ್ನು ಗೆಲ್ಲಿಸುವಂತೆ ನರೇಂದ್ರ ಮೋದಿ ಮನವಿ ಮಾಡಿದರು.

ಚಿತ್ರದುರ್ಗ ಕ್ಷೇತ್ರ ಪ್ರತಿನಿಧಿಸುವ ಕೇಂದ್ರ ಸಚಿವ ಎ.ನಾರಾಯಣಸ್ವಾಮಿ ವೇದಿಕೆಯಲ್ಲಿದ್ದರು. ಕ್ಷೇತ್ರದ ಅಭ್ಯರ್ಥಿ ಅಂತಿಮಗೊಳ್ಳದಿದ್ದರೂ ವೇದಿಕೆಯ ಪರದೆಯಲ್ಲಿ ಪ್ರದರ್ಶಿಸಿದ ಐದು ಜಿಲ್ಲೆಗಳ ಬಿಜೆಪಿ ಅಭ್ಯರ್ಥಿಗಳ ಭಾವಚಿತ್ರದಲ್ಲಿ ನಾರಾಯಣಸ್ವಾಮಿ ಚಿತ್ರವೂ ಇತ್ತು. ಆದರೆ ಅಭ್ಯರ್ಥಿಗಳನ್ನು ಪರಿಚಯಿಸುವಾಗ ಮೋದಿ ಅವರು ನಾರಾಯಣಸ್ವಾಮಿ ಅವರ ಹೆಸರು ಹೇಳಲಿಲ್ಲ.


ಹೊನ್ನಾಳಿಯಲ್ಲಿರುವ ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ ಅವರ ನಿವಾಸಕ್ಕೆ ಮಾಜಿ ಸಚಿವ ಮುರುಗೇಶ್ ನಿರಾಣಿ ಸೋಮವಾರ ಭೇಟಿ ನೀಡಿದ್ದರು

ಎಂ.ಪಿ. ರೇಣುಕಾಚಾರ್ಯ ಮನವೊಲಿಕೆ ಯತ್ನ ವಿಫಲ

ಪ್ರಜಾವಾಣಿ ವಾರ್ತೆ

ಹೊನ್ನಾಳಿ (ದಾವಣಗೆರೆ): ದಾವಣಗೆರೆ ಲೋಕಸಭಾ ಕ್ಷೇತ್ರದ ಬಿಜೆಪಿ ಟಿಕೆಟ್ ಅನ್ನು ಸಂಸದ ಜಿ.ಎಂ. ಸಿದ್ದೇಶ್ವರ ಅವರ ಪತ್ನಿ ಗಾಯತ್ರಿ ಅವರಿಗೆ ನೀಡಿರುವುದಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿರುವ ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ ಅವರ ಮನವೊಲಿಕೆಗೆ ಸೋಮವಾರ ಪಟ್ಟಣಕ್ಕೆ ಬಂದಿದ್ದ ಮಾಜಿ ಸಚಿವ ಮುರುಗೇಶ್ ನಿರಾಣಿ ಸಂಧಾನ ಸಾಧ್ಯವಾಗದೆ ಮರಳಿದರು.

ವಿಧಾನಪರಿಷತ್ ಸದಸ್ಯ ಎನ್.ರವಿಕುಮಾರ್ ಹಾಗೂ ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ರಾಜಶೇಖರ್ ಅವರೊಂದಿಗೆ ರೇಣುಕಾಚಾರ್ಯ ನಿವಾಸಕ್ಕೆ ಭೇಟಿ ನೀಡಿದ್ದ ನಿರಾಣಿ, ಕೆಲಹೊತ್ತು ನಡೆಸಿದ ಚರ್ಚೆ ಫಲಪ್ರದ ಆಗಲಿಲ್ಲ.

'ಪಕ್ಷದ ಅಭ್ಯರ್ಥಿಗೆ ಬೆಂಬಲವಾಗಿ ನಿಂತು ಚುನಾವಣೆಯಲ್ಲಿ ಗೆಲ್ಲಿಸುವಂತೆ ರೇಣುಕಾಚಾರ್ಯ ಹಾಗೂ ಅವರ ತಂಡದ ಸದಸ್ಯರಲ್ಲಿ ಮನವಿ ಮಾಡಿದ್ದೇವೆ. ಏನೇ ಸಮಸ್ಯೆಗಳಿದ್ದರೂ ಪಕ್ಷದ ವೇದಿಕೆಯಲ್ಲಿ ಕುಳಿತು ಚರ್ಚಿಸಿ ಪರಿಹರಿಸಿಕೊಳ್ಳೋಣ. ಈ ಬಾರಿ ಗಾಯತ್ರಿ ಅವರ ಪರ ಕೆಲಸ ಮಾಡಿ ಎಂದು ವಿನಂತಿಸಿದ್ದೇವೆ. ಮುಂದೆ ಎಲ್ಲವೂ ಸರಿ ಹೋಗುವ ವಿಶ್ವಾಸ ಇದೆ' ಎಂದು ನಿರಾಣಿ ಅವರು ಸುದ್ದಿಗಾರರಿಗೆ ತಿಳಿಸಿದರು.

'ನಿರಾಣಿ ಅವರು ಮನವೊಲಿಕೆಗೆ ಬಂದಿದ್ದರು. ಗಾಯತ್ರಿ ಅವರಿಗೆ ಬೆಂಬಲ ನೀಡಲು ಸಾಧ್ಯವೇ ಇಲ್ಲ ಎಂದು ಸ್ಪಷ್ಟಪಡಿಸಿದ್ದೇನೆ. ಅಭ್ಯರ್ಥಿ ಬದಲಿಸುವಂತೆ ಕೋರಿದ್ದೇನೆ' ಎಂದು ರೇಣುಕಾಚಾರ್ಯ ನಂತರ ಹೇಳಿದರು.

ಚುನಾವಣಾ ಬಾಂಡ್: ಎಂ.ಬಿ. ಪಾಟೀಲ ಟೀಕೆ

'ಮೋದಿ ಮುಖವಾಡ ಕಳಚಿ ಬಿದ್ದಿದೆ'

ಪ್ರಜಾವಾಣಿ ವಾರ್ತೆ

ಎಂ.ಬಿ. ಪಾಟೀಲ

ಬೆಂಗಳೂರು: 'ಚುನಾವಣಾ ಬಾಂಡ್ ವಿಷಯದಲ್ಲಿ ಸುಪ್ರೀಂ ಕೋರ್ಟ್ ತೆಗೆದುಕೊಂಡ ನಿರ್ಣಯದಿಂದ ಮೋದಿ ಅವರ ನೈತಿಕತೆಯ ಮುಖವಾಡ ಕಳಚಿ ಬಿದ್ದಿದೆ' ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಹೇಳಿದರು.

ಸುದ್ದಿಗಾರರ ಜತೆ ಸೋಮವಾರ ಮಾತನಾಡಿದ ಅವರು, 'ಮೋದಿಯವರು 'ನಾನೂ ತಿನ್ನುವುದಿಲ್ಲ, ತಿನ್ನುವುದಕ್ಕೂ ಬಿಡುವುದಿಲ್ಲ' ಎಂದು ಹೇಳಿಕೊಳ್ಳುತ್ತಾ ಹುಸಿ ವರ್ಚಸ್ಸು ಸೃಷ್ಟಿಸಿಕೊಂಡಿದ್ದರು. ಆ ಹುಸಿ ವರ್ಚಸ್ಸಿಗೆ ಈಗ ಹೊಡೆತ ಬಿದ್ದಿದೆ' ಎಂದರು.

'ಹೆಚ್ಚಿನ ಸಂದರ್ಭಗಳಲ್ಲಿ ಭ್ರಷ್ಟಾಚಾರಕ್ಕೆ ಸಂಬಂಧಿಸಿದ ದಾಳಿಗೆ ಒಳಗಾದ ನಂತರ ಅಥವಾ ಗುತ್ತಿಗೆಗಳನ್ನು ಪಡೆದ ನಂತರ ಬಿಜೆಪಿ ಹೆಸರಲ್ಲಿ ಚುನಾವಣಾ ಬಾಂಡ್ ತೆಗೆದುಕೊಂಡಿರುವುದು ಬಹಿರಂಗಗೊಂಡಿದೆ. ಇದರಿಂದಾಗಿ, ಭ್ರಷ್ಟಾಚಾರ, ನೈತಿಕತೆ ಬಗ್ಗೆ ಪ್ರಸ್ತಾಪಿಸುತ್ತಿದ್ದ ಮೋದಿಯವರ ಬಣ್ಣ ಬಹಿರಂಗವಾಗಿದೆ' ಎಂದು ವಿವರಿಸಿದರು.

'ಚುನಾವಣಾ ಬಾಂಡ್ ರೂಪದಲ್ಲಿ ಕಾಂಗ್ರೆಸ್ ಪಕ್ಷಕ್ಕೂ ಒಂದಷ್ಟು ಹಣ ಬಂದಿದೆ. ಆದರೆ, ಅದು ಸಹಜವಾಗಿ ಬಂದಿರುವಂಥದ್ದು. ಅದು ಯಾವುದೇ ಇ.ಡಿ, ಸಿಬಿಐ ಇನ್ನಿತರ ಸಂಸ್ಥೆಗಳನ್ನು ಬಳಸಿಕೊಂಡು ಬೆದರಿಕೆ ಹಾಕಿ ವಸೂಲಿ ಮಾಡಿರುವಂಥದ್ದಲ್ಲ' ಎಂದು ಪಾಟೀಲ ಸಮರ್ಥಿಸಿಕೊಂಡರು.

ಮೋದಿಗೆ ಕಾಳಜಿ ಇಲ್ಲ: 'ಯಾವುದೇ ನೈಸರ್ಗಿಕ ವಿಪತ್ತು ಉಂಟಾದಾಗ ಕರ್ನಾಟಕ ಸೇರಿದಂತೆ ದೇಶದ ಯಾವುದೇ ಸ್ಥಳಕ್ಕೆ ಖುದ್ದು ಭೇಟಿ ನೀಡುವ ಕಾಳಜಿ ಮೋದಿಗೆ ಇಲ್ಲ. ಹೀಗಾಗಿಯೇ, ರಾಜ್ಯದಲ್ಲಿ ಬರ ಇದ್ದಾಗ ಅವರು ಈ ಕಡೆ ಸುಳಿಯಲಿಲ್ಲ. ಚುನಾವಣೆ ಪ್ರಚಾರಕ್ಕೆ ಎರಡು ಬಾರಿ ರಾಜ್ಯಕ್ಕೆ ಭೇಟಿ ಕೊಟ್ಟಿದ್ದಾರೆ' ಎಂದು ಪಾಟೀಲ ಅವರು ಟೀಕಿಸಿದರು.

ಬಿಹಾರ: ಬಿಜೆಪಿ 17, ಜೆಡಿಯು 16 ಎಲ್‌ಜೆಪಿ 5 ಸ್ಥಾನಗಳಲ್ಲಿ ಸ್ಪರ್ಧೆ

ನವದೆಹಲಿ (ಪಿಟಿಐ): ಲೋಕಸಭೆ ಚುನಾವಣೆಗೆ ಬಿಹಾರದಲ್ಲಿ ಎನ್‌ಡಿಎ ಸೀಟು ಹಂಚಿಕೆ ಸೂತ್ರವನ್ನು ಸೋಮವಾರ ಪ್ರಕಟಿಸಿದೆ. ಬಿಜೆಪಿ 17, ಜೆಡಿಯು 16 ಮತ್ತು ಚಿರಾಗ್ ಪಾಸ್ವಾನ್ ಅವರ ಎಲ್‌ಜೆಪಿ (ರಾಮ್ ವಿಲಾಸ್) ಐದು ಕ್ಷೇತ್ರಗಳಲ್ಲಿ ಸ್ಪರ್ಧಿಸಲಿವೆ.

ಎಲ್‌ಜೆಪಿ ಜತೆ ಬಿಜೆಪಿ ಮೈತ್ರಿ ಮಾಡಿಕೊಂಡ ನಂತರ ಅಸಮಾಧಾನಗೊಂಡಿರುವ ಕೇಂದ್ರ ಸಚಿವ ಪಶುಪತಿ ಪರಾಸ್ ಅವರ ಎಲ್‌ಜೆಪಿ ಬಣವನ್ನು ಸೀಟು ಹಂಚಿಕೆ ಒಪ್ಪಂದದಿಂದ ಕೈಬಿಡಲಾಗಿದೆ.

ಎನ್‌ಡಿಎ ಭಾಗವಾಗಿರುವ ಮತ್ತೆರಡು ಮಿತ್ರಪಕ್ಷಗಳಾದ ಹಿಂದೂಸ್ತಾನಿ ಅವಾಮ್ ಮೋರ್ಚಾ (ಎಚ್‌ಎಎಂ) ಮತ್ತು ಉಪೇಂದ್ರ ಕುಶ್ವಾಹ ನೇತೃತ್ವದ ರಾಷ್ಟ್ರೀಯ ಲೋಕ ಮೋರ್ಚಾ ತಲಾ ಒಂದು ಸ್ಥಾನಕ್ಕೆ ಸ್ಪರ್ಧಿಸಲಿವೆ ಎಂದು ಬಿಹಾರದ ಬಿಜೆಪಿ ಚುನಾವಣಾ ಉಸ್ತುವಾರಿ ವಿನೋದ್ ತಾವ್ಡೆ ಇಲ್ಲಿ ಬಿಜೆಪಿ ಪ್ರಧಾನ ಕಚೇರಿಯಲ್ಲಿ ಸೋಮವಾರ ಮಿತ್ರಪಕ್ಷಗಳ ಜಂಟಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಎನ್‌ಡಿಎ ರಾಜ್ಯದ ಎಲ್ಲಾ 40 ಲೋಕಸಭಾ ಸ್ಥಾನಗಳನ್ನು ಗೆಲ್ಲಲಿದೆ ಎಂದು ತಾವ್ಡೆ ವಿಶ್ವಾಸ ವ್ಯಕ್ತಪಡಿಸಿದರು. ಕಳೆದ ಬಾರಿ 39 ಸ್ಥಾನಗಳನ್ನು ಎನ್‌ಡಿಎ ಗೆದ್ದುಕೊಂಡಿತ್ತು.

ಚಿರಾಗ್ ಪಾಸ್ವಾನ್ ಅವರು ಹಾಜಿಪುರ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಲಿದ್ದಾರೆ ಎಂದು ಬಿಹಾರ ಎಲ್‌ಜೆಪಿ (ರಾಮ್ ವಿಲಾಸ್) ಮುಖ್ಯಸ್ಥ ರಾಜು ತಿವಾರಿ ಹೇಳಿದರು.

ಕೇಂದ್ರ ಸಚಿವ ಪಶುಪತಿ ಪರಾಸ್ ಅವರ ಎಲ್‌ಜೆಪಿ ಬಣದ ಜತೆಗಿನ ಸೀಟು ಹಂಚಿಕೆ ಬಗ್ಗೆ ಯಾವುದೇ ಉಲ್ಲೇಖ ಆಗಲಿಲ್ಲ. 'ಕೆಲವು ದಿನಗಳ ಹಿಂದೆ ಪಾಸ್ವಾನ್ ಅವರೊಂದಿಗೆ ಮೈತ್ರಿ ಮಾಡಿಕೊಂಡ ನಂತರ, ಈಗಾಗಲೇ ಅಸಮಾಧಾನ ವ್ಯಕ್ತಪಡಿಸಿರುವ ಪರಾಸ್ ಅವರೊಂದಿಗೆ ಮಾತುಕತೆ ಮುಂದುವರಿದಿದೆ' ಎಂದು ಬಿಹಾರ ಬಿಜೆಪಿ ಅಧ್ಯಕ್ಷ ಸಾಮ್ರಾಟ್ ಚೌಧರಿ ಹೇಳಿದ್ದಾರೆ.

ಅಭ್ಯರ್ಥಿಗಳ ಹೆಸರನ್ನು ಅಖೈರುಗೊಳಿಸಲು ದೆಹಲಿಯಲ್ಲಿ ಕಸರತ್ತು

ಕಾಂಗ್ರೆಸ್–ಬಿಜೆಪಿ ಮಹತ್ವದ ಸಭೆ ಇಂದು

ಪ್ರಜಾವಾಣಿ ವಾರ್ತೆ

ನವದೆಹಲಿ: ಲೋಕಸಭಾ ಚುನಾವಣೆಗೆ ಅಭ್ಯರ್ಥಿಗಳ ಹೆಸರನ್ನು ಅಖೈರುಗೊಳಿಸಲು ಬಿಜೆಪಿ ಹಾಗೂ ಕಾಂಗ್ರೆಸ್ ಪಕ್ಷಗಳ ಕೇಂದ್ರ ಚುನಾವಣಾ ಸಮಿತಿ ಸಭೆಗಳು ಮಂಗಳವಾರ ನಡೆಯಲಿವೆ.

ಕರ್ನಾಟಕದಿಂದ ಸ್ಪರ್ಧಿಸುವ 20 ಅಭ್ಯರ್ಥಿಗಳ ಪಟ್ಟಿಯನ್ನು ಬಿಜೆಪಿ ಪ್ರಕಟಿಸಿದೆ. ಬಿಜೆಪಿ–ಜೆಡಿಎಸ್ ನಡುವಿನ ಸೀಟು ಹಂಚಿಕೆ ಅಂತಿಮಗೊಂಡಿಲ್ಲ. ಎರಡು ಕ್ಷೇತ್ರಗಳನ್ನಷ್ಟೇ ಜೆಡಿಎಸ್‌ಗೆ ಬಿಟ್ಟುಕೊಡುವುದಾಗಿ ಬಿಜೆಪಿ ನಾಯಕರು ಸ್ಪಷ್ಟಪಡಿಸಿದ್ದಾರೆ. ಮಂಡ್ಯ, ಹಾಸನದ ಜತೆಗೆ ಕೋಲಾರವನ್ನೂ ಬಿಟ್ಟುಕೊಡಬೇಕು ಎಂದು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ.ಕುಮಾರಸ್ವಾಮಿ ಪಟ್ಟು ಹಿಡಿದಿದ್ದಾರೆ. ಹೀಗಾಗಿ, ಸೀಟು ಹಂಚಿಕೆ ಅಂತಿಮವಾಗಿಲ್ಲ. ಜತೆಗೆ, ಉತ್ತರ ಕನ್ನಡ, ರಾಯಚೂರು, ಬೆಳಗಾವಿ ಹಾಗೂ ಚಿತ್ರದುರ್ಗ ಕ್ಷೇತ್ರಗಳಿಗೆ ಅಭ್ಯರ್ಥಿಗಳ ಆಯ್ಕೆ ಪ್ರಕ್ರಿಯೆ ಕಗ್ಗಂಟಾಗಿದೆ.

ರಾಯಚೂರಿನಲ್ಲಿ ಹಾಲಿ ಸಂಸದ ರಾಜಾ ಅಮರೇಶ್ವರ ನಾಯಕ ಬದಲು ಮಾಜಿ ಸಂಸದ ಬಿ.ವಿ.ನಾಯಕ ಅವರಿಗೆ ಟಿಕೆಟ್ ನೀಡುವ ಬಗ್ಗೆ ಚರ್ಚೆಗಳು ನಡೆದಿವೆ. ಬಿ.ವಿ.ನಾಯಕ ಅವರನ್ನು ಕಣಕ್ಕಿಳಿಸಿದರೆ ಅಮರೇಶ್ವರ ನಾಯಕ ಅವರು ಕಾಂಗ್ರೆಸ್‌ಗೆ ಪಕ್ಷಾಂತರ ಮಾಡಬಹುದು. ಅಮರೇಶ್ವರ ನಾಯಕ ಅವರಿಗೆ ಟಿಕೆಟ್ ನೀಡಿದರೆ ಬಿ.ವಿ. ನಾಯಕ ಕಾಂಗ್ರೆಸ್‌ಗೆ ಹೋಗಬಹುದು ಎಂಬ ಆತಂಕ ಬಿಜೆಪಿ ನಾಯಕರನ್ನು ಕಾಡುತ್ತಿದೆ. ಹೀಗಾಗಿ, ಅಭ್ಯರ್ಥಿಯ ಹೆಸರನ್ನು ಅಂತಿಮಗೊಳಿಸಿಲ್ಲ ಎಂದು ಮೂಲಗಳು ತಿಳಿಸಿವೆ.

ಉತ್ತರ ಕನ್ನಡ ಕ್ಷೇತ್ರದಲ್ಲಿ ಅನಂತಕುಮಾರ್ ಹೆಗಡೆ ಅವರಿಗೆ ಟಿಕೆಟ್ ನೀಡುವುದಕ್ಕೆ ವಿರೋಧ ಇದೆ. ಬಿಜೆಪಿ 400 ಸ್ಥಾನಗಳನ್ನು ಗೆದ್ದರೆ ಸಂವಿಧಾನ ತಿದ್ದುಪಡಿ ಮಾಡಲು ಅನುಕೂಲವಾಗಲಿದೆ ಎಂಬ ಹೆಗಡೆ ಹೇಳಿಕೆ ಪಕ್ಷಕ್ಕೆ ಇಕ್ಕಟ್ಟನ್ನು ಉಂಟು ಮಾಡಿದೆ. ಅವರ ಹೇಳಿಕೆ ಬಗ್ಗೆ ವರಿಷ್ಠರು ಅಸಮಾಧಾನಗೊಂಡಿದ್ದಾರೆ. ಅವರಿಗೆ ಈ ಸಲ ಕೊನೆಯ ಅವಕಾಶ ನೀಡುವ ಕುರಿತು ಚರ್ಚೆಗಳು ನಡೆದಿವೆ. ಒಂದು ವೇಳೆ ಅವಕಾಶ ನಿರಾಕರಿಸಿದರೆ ಅನಂತಕುಮಾರ್ ಅವರು ಒಳ ಏಟು ಕೊಡಬಹುದು ಎಂಬ ಭೀತಿಯೂ ಕಾಡುತ್ತಿದೆ. ಕ್ಷೇತ್ರದಲ್ಲಿ ಸಮರ್ಥ ಪರ್ಯಾಯ ಅಭ್ಯರ್ಥಿಗಳ ಕೊರತೆಯೂ ಇದೆ ಎಂದು ಮೂಲಗಳು ತಿಳಿಸಿವೆ.

ಚಿತ್ರದುರ್ಗದ ಸಂಸದರಾಗಿರುವ ಕೇಂದ್ರ ಸಚಿವ ಎ.ನಾರಾಯಣಸ್ವಾಮಿ ಅವರ ಕಾರ್ಯವೈಖರಿ ಬಗ್ಗೆ ಕೇಂದ್ರ ಹಾಗೂ ರಾಜ್ಯ ನಾಯಕರಿಗೆ ಸಮಾಧಾನವಿಲ್ಲ. ಕ್ಷೇತ್ರದಲ್ಲಿ ಆಡಳಿತ ವಿರೋಧಿ ಅಲೆ ವ್ಯಾಪಕವಾಗಿದೆ. ಮಾಜಿ ಸಚಿವ ಗೋವಿಂದ ಕಾರಜೋಳ, ನಿವೃತ್ತ ಐಎಎಸ್ ಅಧಿಕಾರಿ ಲಕ್ಷ್ಮಿನಾರಾಯಣ, ಹೊಳಲ್ಕೆರೆ ಶಾಸಕ ಎಂ. ಚಂದ್ರಪ್ಪ ಪುತ್ರ ರಘುನಂದನ್ ಅವರು ಟಿಕೆಟ್‌ಗಾಗಿ ಪ್ರಯತ್ನ ನಡೆಸಿದ್ದಾರೆ.

ಚಿಕ್ಕಬಳ್ಳಾಪುರದಲ್ಲಿ ಹುರಿಯಾಳುವಾಗಲು ಮಾಜಿ ಸಚಿವ ಡಾ.ಕೆ. ಸುಧಾಕರ್ ಹಾಗೂ ಶಾಸಕ ಎಸ್.ಆರ್. ವಿಶ್ವನಾಥ್ ಪುತ್ರ ಅಲೋಕ್ ನಡುವೆ ಪೈಪೋಟಿ ಜೋರಾಗಿದೆ. ಟಿಕೆಟ್ ಸಿಗದಿದ್ದರೆ ಸುಧಾಕರ್ ಪಕ್ಷಾಂತರ ಮಾಡಬಹುದು ಎಂಬ ಅನುಮಾನ ಬಿಜೆಪಿ ನಾಯಕರಿಗೆ ಇದೆ. ಹೀಗಾಗಿ, ಮೊದಲ ಪಟ್ಟಿಯಲ್ಲಿ ಈ ಕ್ಷೇತ್ರದ ಅಭ್ಯರ್ಥಿ ಹೆಸರು ಘೋಷಣೆ ಮಾಡಿರಲಿಲ್ಲ.

ಮಂಗಳವಾರ ನಡೆಯುವ ಸಭೆಯಲ್ಲಿ ಜೆಡಿಎಸ್ ಜತೆಗಿನ ಸೀಟು ಹಂಚಿಕೆ, ಉಳಿದ ಕ್ಷೇತ್ರಗಳ ಅಭ್ಯರ್ಥಿಗಳ ಹೆಸರನ್ನು ಅಂತಿಮಗೊಳಿಸುವ ಸಂಭವ ಇದೆ. ರಾಜ್ಯದ ಹಿರಿಯ ನಾಯಕರೊಂದಿಗೆ ದೂರವಾಣಿಯಲ್ಲಿ ಮಾತನಾಡಿ ವರಿಷ್ಠರು ತೀರ್ಮಾನ ತೆಗೆದುಕೊಳ್ಳಲಿದ್ದಾರೆ ಎಂದು ಗೊತ್ತಾಗಿದೆ.

15 ಕ್ಷೇತ್ರಗಳಿಗೆ 'ಕೈ' ಅಭ್ಯರ್ಥಿ ಅಂತಿಮ ಸಾಧ್ಯತೆ

ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆ ಮಂಗಳವಾರ ಬೆಳಿಗ್ಗೆ 10 ಗಂಟೆಗೆ ಹಾಗೂ ಕೇಂದ್ರ ಚುನಾವಣಾ ಸಮಿತಿ ಸಭೆ ಸಂಜೆ 4 ಗಂಟೆಗೆ ನಿಗದಿಯಾಗಿದೆ. ಚುನಾವಣಾ ಸಮಿತಿ ಸಭೆಯಲ್ಲಿ ಕರ್ನಾಟಕ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಭಾಗಿಯಾಗಲಿದ್ದಾರೆ. ಪಕ್ಷವು ಏಳು ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರನ್ನು ಪ್ರಕಟಿಸಿದೆ. ಮಂಗಳವಾರದ ಸಭೆಯಲ್ಲಿ ಸುಮಾರು 15 ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರನ್ನು ಅಖೈರುಗೊಳಿಸುವ ಸಂಭವ ಇದೆ. 20 ಅಥವಾ 21ಕ್ಕೆ ಎರಡನೇ ಪಟ್ಟಿ ಬಿಡುಗಡೆಯಾಗಲಿದೆ.

ತೆಲಂಗಾಣ ರಾಜ್ಯಪಾಲರ ರಾಜೀನಾಮೆ

ತಮಿಳ್ ಇಸೈ

ಹೈದರಾಬಾದ್/ ಪುದುಚೇರಿ: ತೆಲಂಗಾಣ ರಾಜ್ಯಪಾಲರಾದ ತಮಿಳ್ ಇಸೈ ಸೌಂದರರಾಜನ್ ಅವರು ತಮ್ಮ ಹುದ್ದೆಗೆ ಸೋಮವಾರ ರಾಜೀನಾಮೆ ನೀಡಿದ್ದಾರೆ. ಪುದುಚೇರಿಯ ಲೆಫ್ಟಿನೆಂಟ್ ಗವರ್ನರ್ ಕೂಡಾ ಆಗಿರುವ ಅವರು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ರಾಜೀನಾಮೆ ಪತ್ರ ಸಲ್ಲಿಸಿದರು.

ಲೋಕಸಭಾ ಚುನಾವಣೆಯಲ್ಲಿ ಅವರು ತಮಿಳುನಾಡಿನಿಂದ ಸ್ಪರ್ಧಿಸಲಿದ್ದಾರೆ ಎಂಬ ಊಹಾಪೋಹಗಳು ಎದ್ದಿದ್ದವು. ಅದರ ಬೆನ್ನಲ್ಲೇ ಈ ಬೆಳವಣಿಗೆ ನಡೆದಿದೆ.

ತಿರುನೆಲ್ವೇಲಿಯಿಂದ ಸ್ಪರ್ಧೆ?: ತಮಿಳುನಾಡಿನ ಆಡಳಿತಾರೂಢ ಡಿಎಂಕೆಯ ಭದ್ರಕೋಟೆಯಾದ ಚೆನ್ನೈ (ದಕ್ಷಿಣ) ಅಥವಾ ತಿರುನೆಲ್ವೇಲಿ ಕ್ಷೇತ್ರದಿಂದ ಅವರನ್ನು ಬಿಜೆಪಿಯು ಕಣಕ್ಕಿಳಿಸುವ ಸಾಧ್ಯತೆ ಇದೆ ಎನ್ನಲಾಗಿದೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

❦ ಸುಭಾಷಿತ ❦

ಮನುಷ್ಯನು ನಿರಾಸೆ ಮತ್ತು ನೋವನ್ನು ಬದುಕಿನ ಒಂದು ಭಾಗವೆಂದು ತಿಳಿದರೆ ಸಂತೋಷದಿಂದ ಇರಬಲ್ಲ.

-ಶಂ.ಬಾ.ಜೋಶಿ

ಆರ್‌ಸಿಬಿಗೆ ಒಲಿದ ಕಪ್ ಮಹಿಳಾ ಕ್ರಿಕೆಟ್‌ಗೆ ಹೊಸ ಮೆರುಗು

ಸ್ಮೃತಿ ಮಂದಾನ ನಾಯಕತ್ವದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಲಕ್ಷಾಂತರ ಅಭಿಮಾನಿಗಳು ಸಂತಸದ ಹೊಳೆಯಲ್ಲಿ ಮಿಂದೇಳುವಂತಹ ಸಾಧನೆ ಮಾಡಿದೆ. ಮಹಿಳಾ ಪ್ರೀಮಿಯರ್ ಲೀಗ್ (ಡಬ್ಲ್ಯುಪಿಎಲ್) ಕ್ರಿಕೆಟ್ ಟೂರ್ನಿಯ ಎರಡನೇ ಆವೃತ್ತಿಯಲ್ಲಿ ಕಪ್ ಗೆದ್ದು ಅಮೋಘ ಸಾಧನೆ ಮಾಡಿದೆ. 16 ವರ್ಷಗಳಿಂದ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ಪುರುಷರ ತಂಡವು ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಟೂರ್ನಿಯಲ್ಲಿ ಮಾಡಲಾಗದ್ದನ್ನು ಮಹಿಳಾ ತಂಡ ಮಾಡಿ ತೋರಿಸಿದೆ. ಪುರುಷರ ಕ್ರಿಕೆಟ್ ವೈಭವಕ್ಕೆ ಸರಿಸಾಟಿಯಾಗಿ ಬೆಳೆಯುವ ವನಿತೆಯರ ಛಲದ ಹೋರಾಟಕ್ಕೆ ಈ ಗೆಲುವು ನೂರಾನೆ ಬಲ ತುಂಬುವುದರಲ್ಲಿ ಅನುಮಾನವಿಲ್ಲ. ನವದೆಹಲಿಯ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ನಡೆದ ಫೈನಲ್‌ನಲ್ಲಿ ಸ್ಮೃತಿ ಮಂದಾನ ದಿಟ್ಟ ನಾಯಕತ್ವ, ಆಸ್ಟ್ರೇಲಿಯಾದ ಸೋಫಿ ಮಾಲಿನೆ ಹಾಗೂ ಕರ್ನಾಟಕದ ಹುಡುಗಿ ಶ್ರೇಯಾಂಕ ಪಾಟೀಲ ಅವರ ಸ್ಪಿನ್ ಮೋಡಿಯಿಂದಾಗಿ ಆರ್‌ಸಿಬಿಗೆ ಜಯ ಒಲಿಯಿತು. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಜರುಗಿದ ಟೂರ್ನಿಯ ಮೊದಲ ಹಾಗೂ ದೆಹಲಿಯಲ್ಲಿ ಜರುಗಿದ ಎರಡನೇ ಹಂತದ ಪಂದ್ಯಗಳಲ್ಲಿ ಏಳುಬೀಳುಗಳನ್ನು ಕಂಡರೂ ಪ್ಲೇ ಆಫ್ ಪ್ರವೇಶಿಸುವಲ್ಲಿ ಆರ್‌ಸಿಬಿ ಯಶಸ್ವಿಯಾಗಿತ್ತು. ಹೋದ ವರ್ಷ ಚಾಂಪಿಯನ್ ಆಗಿದ್ದ ಮುಂಬೈ ಇಂಡಿಯನ್ಸ್ ತಂಡವನ್ನು ಈ ಸಲದ ಎಲಿಮಿನೇಟರ್ ಪಂದ್ಯದಲ್ಲಿ ಆರ್‌ಸಿಬಿಯು ಸೋಲಿಸಿತ್ತು. ಅಂತಿಮ ಪಂದ್ಯದಲ್ಲಿಯೂ ಛಲ ಮತ್ತು ಯೋಜನಾಬದ್ಧ ಆಟದ ಮೂಲಕ ರೋಚಕ ಜಯ ಸಾಧಿಸಿತು. ಆಸ್ಟ್ರೇಲಿಯಾದ ತಾರಾ ಆಟಗಾರ್ತಿ ಎಲಿಸ್ ಪೆರಿ, ಸ್ಪಿನ್ನರ್ ಆಶಾ ಶೋಭನಾ, ವಿಕೆಟ್‌ಕೀಪರ್ ರಿಚಾ ಘೋಷ್, ಬೌಲರ್ ರೇಣುಕಾ ಸಿಂಗ್ ಅವರ ಕಾಣಿಕೆಯೂ ಮಹತ್ವದ್ದು. ಆರಂಭದ ಕೆಲವು ಪಂದ್ಯಗಳಲ್ಲಿ ಹೆಚ್ಚು ವಿಕೆಟ್ ಪಡೆಯದ ಕನ್ನಡತಿ ಶ್ರೇಯಾಂಕ ಅವರ ಮೇಲೆ ನಾಯಕಿ ಇಟ್ಟ ವಿಶ್ವಾಸ ಹುಸಿಯಾಗಲಿಲ್ಲ. ತಮ್ಮ ಕೌಶಲ ಸುಧಾರಿಸಿಕೊಂಡ ಆಫ್‌ಸ್ಪಿನ್ನರ್ ಶ್ರೇಯಾಂಕ ಟೂರ್ನಿಯಲ್ಲಿಯೇ ಅತಿ ಹೆಚ್ಚು ವಿಕೆಟ್ ಗಳಿಸಿದರು. ಅದರಲ್ಲೂ ಎಲಿಮಿನೇಟರ್ ಮತ್ತು ಫೈನಲ್‌ನಲ್ಲಿ ಅವರ ಆಟ ಮಹತ್ವದ್ದಾಗಿತ್ತು. ಕರ್ನಾಟಕದಲ್ಲಿ ಅವರ ಮೂಲಕ ತಂಡದ ಅಭಿಮಾನಿಗಳ ಸಂಖ್ಯೆಯೂ ಹೆಚ್ಚಾಗಿದೆ.

ಆಟಗಾರ್ತಿಯರ ಯಶೋಗಾಥೆ ಮತ್ತಷ್ಟು ಹೆಣ್ಣುಮಕ್ಕಳನ್ನು ಕ್ರಿಕೆಟ್‌ನತ್ತ ಆಕರ್ಷಿಸುವುದರಲ್ಲಿ ಸಂಶಯವಿಲ್ಲ

ಆರ್‌ಸಿಬಿ ಜಯ ಇಡೀ ಟೂರ್ನಿಯನ್ನು ಇನ್ನಷ್ಟು ಉನ್ನತ ಹಂತಕ್ಕೆ ಕೊಂಡೊಯ್ಯುವ ಆಶಾವಾದ ಮೂಡಿಸಿದೆ. ಬೆಂಗಳೂರಿನಲ್ಲಿ ಈ ಸಲ ನಡೆದ ಡಬ್ಲ್ಯುಪಿಎಲ್ ಟೂರ್ನಿಯ ಎಲ್ಲ ಪಂದ್ಯಗಳಿಗೂ ಕ್ರೀಡಾಂಗಣದಲ್ಲಿ ಜನ ಸೇರಿದ್ದರು. ಅದರಲ್ಲೂ ಆರ್‌ಸಿಬಿ ಪಂದ್ಯ ಇದ್ದಾಗಲಂತೂ 28 ಸಾವಿರಕ್ಕೂ ಹೆಚ್ಚು ಜನ ವೀಕ್ಷಿಸಿದರು. ಇದರ ಪ್ರಭಾವದಿಂದಾಗಿ ದೆಹಲಿಯಲ್ಲಿ ನಡೆದ ಪಂದ್ಯಗಳಿಗೂ ಜನ ಸೇರಿದರು. ಇದರಿಂದಾಗಿ ಮುಂದಿನ ವರ್ಷಗಳಲ್ಲಿ ಟೂರ್ನಿಯನ್ನು ಬರೀ ಒಂದು ಅಥವಾ ಎರಡು ನಗರಗಳಲ್ಲಿ ಆಯೋಜಿಸುವ ಬದಲು ಫ್ರ್ಯಾಂಚೈಸಿಗಳ ತವರು ನಗರಿಗಳಿಗೂ ವಿಸ್ತರಿಸುವತ್ತ ಬಿಸಿಸಿಐ ಚಿಂತನೆ ನಡೆಸಿದೆ. ತಂಡಗಳ ಸಂಖ್ಯೆಯನ್ನೂ ಹೆಚ್ಚಿಸಬಹುದು. ಸದ್ಯ ಐದು ತಂಡಗಳು ಟೂರ್ನಿಯಲ್ಲಿವೆ. ಈ ಟೂರ್ನಿಗೆ ಜನಾಕರ್ಷಣೆ ಹೆಚ್ಚಲು ಆಟಗಾರ್ತಿಯರ ಕೌಶಲ ಸುಧಾರಿಸಿದ್ದು ಕೂಡ ಕಾರಣ. ಸಿಕ್ಸರ್‌ಗಳನ್ನು ಹೊಡೆಯುವ ಸಾಮರ್ಥ್ಯ, ಸ್ಪಿನ್ ಮತ್ತು ಸ್ವಿಂಗ್ ಬೌಲಿಂಗ್‌ನಲ್ಲಿ ಪರಿಣತಿ ಹಾಗೂ ಫೀಲ್ಡಿಂಗ್‌ನಲ್ಲಿ ಚಾಕಚಕ್ಯತೆ ಗಮನ ಸೆಳೆದಿವೆ. ವೃತ್ತಿಪರತೆ ಎದ್ದು ಕಂಡಿದೆ. ಇದರಿಂದಾಗಿ, ಮಹಿಳಾ ಕ್ರಿಕೆಟ್ ಎಂದರೆ ಮೂಗು ಮುರಿಯುತ್ತಿದ್ದವರೂ ಈಗ ಮೆಚ್ಚುಗೆಯ ಮಾತುಗಳನ್ನಾಡುತ್ತಿದ್ದಾರೆ. ದಶಕದ ಹಿಂದೆ ಮಹಿಳೆಯರಿಗೂ ಐಪಿಎಲ್ ಮಾದರಿಯ ಟೂರ್ನಿ ಮಾಡಬೇಕು ಎಂಬ ಪ್ರಸ್ತಾಪ ಬಂದಾಗ ಕೆಲವರು, ಇಡೀ ಭಾರತದಲ್ಲಿ ಐದು ತಂಡಗಳಿಗೆ ಆಗುವಷ್ಟು ಆಟಗಾರ್ತಿಯರೇ ಇಲ್ಲ, ಹುಡುಗಿಯರ ಕ್ರಿಕೆಟ್ ಯಾರು ನೋಡುತ್ತಾರೆ ಎಂದು ವ್ಯಂಗ್ಯವಾಡಿದ್ದರು. ಆದರೆ ಮಹಿಳಾ ಕ್ರಿಕೆಟ್‌ಗೆ ಘನತೆ, ವೃತ್ತಿಪರತೆ ಮತ್ತು ಮಾನ್ಯತೆ ತಂದುಕೊಡಲು ಸತತವಾಗಿ ಹೋರಾಟ ಮಾಡಿದ ಶ್ರೇಯ ಭಾರತ ಮಹಿಳಾ ತಂಡದ ಮಾಜಿ ನಾಯಕಿ, ಕರ್ನಾಟಕದ ಶಾಂತಾ ರಂಗಸ್ವಾಮಿ ಅವರಿಗೆ ಸಲ್ಲಬೇಕು. ಅವರೊಂದಿಗೆ ಡಯಾನಾ ಎಡುಲ್ಜಿ, ವಿ.ಕಲ್ಪನಾ, ಮಿಥಾಲಿ ರಾಜ್, ಜೂಲನ್ ಗೋಸ್ವಾಮಿ, ಅಂಜುಮ್ ಚೋಪ್ರಾ ಅವರ ಪ್ರಯತ್ನಗಳೂ ಇಲ್ಲಿ ಸ್ಮರಣಾರ್ಹ. ಕೋವಿಡ್ ಕಾಲಘಟ್ಟಕ್ಕಿಂತ ಮೊದಲು ಐಪಿಎಲ್ ಸಂದರ್ಭದಲ್ಲಿ ಮೂರು ಮಹಿಳಾ ತಂಡಗಳ ಟಿ20 ಚಾಲೆಂಜರ್ಸ್ ಟೂರ್ನಿ ಆರಂಭಿಸಲಾಗಿತ್ತು. ಹೋದ ವರ್ಷವಷ್ಟೇ ಪೂರ್ಣ-ಪ್ರಮಾಣದ ಡಬ್ಲ್ಯುಪಿಎಲ್ ಆರಂಭವಾಗಿತ್ತು. ಫ್ರ್ಯಾಂಚೈಸಿ ಹಾಗೂ ಮಾಧ್ಯಮ ಹಕ್ಕುಗಳ ಹರಾಜಿನಿಂದ ಮಂಡಳಿಗೆ ಉತ್ತಮ ಆದಾಯವೂ ಬಂದಿತ್ತು. ಒಲಿಂಪಿಕ್ ಕೂಟದಲ್ಲಿ ಸೇರ್ಪಡೆಯಾಗಿರುವ ಮಹಿಳಾ ಟಿ20 ಕ್ರಿಕೆಟ್ ಮಾದರಿಯನ್ನು ಭಾರತದಲ್ಲಿ ಬೆಳೆಸಲು ಡಬ್ಲ್ಯುಪಿಎಲ್ ಕೂಡ ನೆರವಾಗಲಿದೆ. ಟೂರ್ನಿಯ ಎರಡೂ ಆವೃತ್ತಿಗಳ ಯಶಸ್ಸು ಮತ್ತು ಆಟಗಾರ್ತಿಯರ ಯಶೋಗಾಥೆಗಳು ಮತ್ತಷ್ಟು ಹೆಣ್ಣುಮಕ್ಕಳನ್ನು ಕ್ರಿಕೆಟ್‌ನತ್ತ ಆಕರ್ಷಿಸುವುದರಲ್ಲಿ ಸಂಶಯವಿಲ್ಲ. ಇದರಿಂದ ಮಹಿಳಾ ಕ್ರಿಕೆಟ್ ಕೂಡ ದೊಡ್ಡಮಟ್ಟದಲ್ಲಿ ಬೆಳೆಯುವ ಸಾಧ್ಯತೆಗಳು ಹೆಚ್ಚಲಿವೆ.

ದಿನದ ಟ್ವೀಟ್

ಉತ್ತಮ ಭವಿಷ್ಯದ ಮುನ್ಸೂಚನೆ

ನಾನೆಂದಿಗೂ ಆರ್‌ಸಿಬಿ ಅಭಿಮಾನಿಯಲ್ಲ, ಆದರೆ ಮಹಿಳಾ ತಂಡದ ಗೆಲುವಿನ ಬಳಿಕ ಬೆಂಗಳೂರು ಸಂಭ್ರಮಿಸುತ್ತಿರುವುದನ್ನು ನೋಡುವುದಕ್ಕೇ ಖುಷಿಯಾಗುತ್ತದೆ- ಪ್ರಚಂಡ ಅಭಿಮಾನಿ ಬಳಗವಿದೆ ಎಂಬುದು ತಿಳಿದಿತ್ತು, ಆದರೆ ಲಿಂಗಭೇದವನ್ನು ಮೀರಿ ಈ ಪರಿ ಬೆಂಬಲ ವ್ಯಕ್ತವಾಗುತ್ತದೆ ಎಂದು ಊಹಿಸಿರಲಿಲ್ಲ! ಮಹಿಳಾ ಕ್ರಿಕೆಟ್‌ಗೆ ಉತ್ತಮ ಭವಿಷ್ಯ ಇರುವುದು ಗೋಚರಿಸುತ್ತಿದೆ...

ಅಜಯ್ ಕಾಮತ್, ನೇತ್ರತಜ್ಞ

ಕಿಡಿನುಡಿ

ಚುನಾವಣಾ ಬಾಂಡ್‌ಗಳು ಇಲ್ಲದಿದ್ದರೆ ಹಣವು ನಗದಿನ ರೂಪದಲ್ಲಿ ಬಟವಾಡೆಯಾಗಿರುತ್ತಿತ್ತು- ಚುನಾವಣಾ ಬಾಂಡ್‌ಗಳ ವಿಷಯದಲ್ಲಿ ನಾವು ಕೊಟ್ಟುಕೊಳ್ಳಬಹುದಾದ ಒಂದೇ ಒಂದು ಸಮರ್ಥನೆ ಇದು. ರಾಜಕೀಯದ ಹೆಸರಿನಲ್ಲಿ ಹರಿಯುವ ಹಣದ ಬಗ್ಗೆ ಹೆಚ್ಚು ಜನರಿಗೆ ಅರಿವೇ ಇಲ್ಲದಿರುವುದು ಆಶ್ಚರ್ಯಕರ. ಚುನಾವಣಾ ಬಾಂಡ್ ರೂಪದಲ್ಲಿ ಇರುವ ರಾಜಕೀಯದ ದೇಣಿಗೆಯ ಪ್ರಮಾಣ ಶೇ 20ಕ್ಕಿಂತಲೂ ಕಡಿಮೆ. ದೇಣಿಗೆಯ ಹೆಚ್ಚಿನ ಪ್ರಮಾಣ ಈಗಲೂ ಕಪ್ಪುಹಣವೇ ಆಗಿದೆ!...

ಶಿವಂ ಶಂಕರ್ ಸಿಂಗ್, ಲೇಖಕ

50 ವರ್ಷಗಳ ಹಿಂದೆ

ಮಂಗಳವಾರ, 19-3-1974

• ಅರ್ಥ ಸಚಿವರಿಂದ ಕೆಲ ವಸ್ತುಗಳ ಮೇಲಿನ ತೆರಿಗೆ ಸಲಹೆ ವಾಪಸ್

ಬೆಂಗಳೂರು, ಮಾರ್ಚ್ 18- ಪಾದರಕ್ಷೆ, ಮೈಸಾಬೂನು, ಸೈಕಲ್ ಹಾಗೂ ಟ್ರೈಸಿಕಲ್, ಸೋಡಾ, ಕನ್‌ಫೆಕ್ಷನರಿ, ಕೇಕ್ ಹಾಗೂ ಬಿಸ್ಕತ್ತಿನ ಮೇಲೆ ತಾವು ವಿಧಿಸಲು ಉದ್ದೇಶಿಸಿದ್ದ ಶೇಕಡ 2ರಷ್ಟು ಮಾರಾಟ ತೆರಿಗೆಯ ಸೂಚನೆಯನ್ನು ವಾಪಸು ತೆಗೆದುಕೊಳ್ಳುವುದಾಗಿ ಅರ್ಥಮಂತ್ರಿ ಎಂ.ವೈ. ಘೋರ್ಪಡೆ ಅವರು ಇಂದು ವಿಧಾನಸಭೆಯಲ್ಲಿ ಪ್ರಕಟಿಸಿದರು.

ಅದೇ ರೀತಿಯಲ್ಲಿ ಕೋಳಿ ಹಾಗೂ ಜಾನುವಾರು ಆಹಾರ ಮತ್ತು ತೊಗಲಿನ ಮೇಲೆ ಉದ್ದೇಶಿತ ಶೇಕಡ ಒಂದರಷ್ಟು ತೆರಿಗೆಯನ್ನು ಹೇರಲು ತಾವು ಬಯಸುವುದಿಲ್ಲ ಎಂದು ಅವರು ಬಜೆಟ್ ಮೇಲಿನ ಆರು ದಿನಗಳ ಸಾಮಾನ್ಯ ಚರ್ಚೆಗೆ ಉತ್ತರ ನೀಡಿದಾಗ ತಿಳಿಸಿದರು.

ಮಾರಾಟ ತೆರಿಗೆ ಅನ್ವಯವಾಗುವ ಈ ಸಾಮಗ್ರಿಗಳನ್ನು ಬಿಟ್ಟರೆ, ಬೇರೆ ಯಾವುದೇ ವಸ್ತುವಿನ ಮೇಲಿನ ತೆರಿಗೆ ಇಲ್ಲವೇ ಅಬಕಾರಿ, ಮನರಂಜನೆ, ನಗರ ಜಮೀನು ತೆರಿಗೆ ಅಥವಾ ವಾಹನ ತೆರಿಗೆಗಳಲ್ಲಿ ರಿಯಾಯಿತಿ ತೋರಲು ಸಚಿವರು ಒಪ್ಪಲಿಲ್ಲ.

• ರಾಜ್ಯದ ಖಾಸಗಿ ಮೆಡಿಕಲ್ ಕಾಲೇಜುಗಳ ಮಾನ್ಯತೆ ರದ್ದಾಗದು: ಕಳವಳ ಅನಗತ್ಯ

ಬೆಂಗಳೂರು, ಮಾರ್ಚ್ 18- ರಾಜ್ಯದಲ್ಲಿ ಐದು ಮೆಡಿಕಲ್ ಕಾಲೇಜುಗಳಿಗೆ ಮಾನ್ಯತೆ ರದ್ದುಗೊಳಿಸಿ ಇಂಡಿಯನ್ ಮೆಡಿಕಲ್ ಕೌನ್ಸಿಲ್ ಮಾಡಿರುವ ನಿರ್ಣಯವು ವಾಸ್ತವಾಂಶಗಳ ಆಧಾರದ ಮೇಲಿಲ್ಲ ಎಂದು ವಿಧಾನ ಮಂಡಲದ ಉಭಯ ಸದನಗಳಲ್ಲಿ ಇಂದು ಪ್ರತಿಪಾದಿಸಿದ ಆರೋಗ್ಯ ಸಚಿವ ಎಚ್.ಸಿದ್ಧವೀರಪ್ಪ ಅವರು, ಆ ನಿರ್ಣಯ ನಮ್ಮ ರಾಜ್ಯಕ್ಕೆ ಅನ್ವಯಿಸುವುದಿಲ್ಲ ಎಂದು ಘೋಷಿಸಿದರು.

ಮಾನ್ಯತೆ ರದ್ದುಗೊಳಿಸುವ ಬಗ್ಗೆ ಮೆಡಿಕಲ್ ಕೌನ್ಸಿಲ್‌ನ ನಿರ್ಣಯದ ಸುದ್ದಿಯನ್ನು ಪ್ರಸ್ತಾಪಿಸಿ ಸದಸ್ಯರು ಕಳವಳ ವ್ಯಕ್ತಪಡಿಸಿದಾಗ ಹೇಳಿಕೆ ನೀಡಿದ ಸಚಿವರು, ಸುದ್ದಿಯ ಬಗ್ಗೆ ಕಳವಳ ಬೇಕಿಲ್ಲವೆಂದೂ ರಾಜ್ಯದಲ್ಲಿ ವಿದ್ಯಾರ್ಥಿಗಳ ಮತ್ತು ವೈದ್ಯಕೀಯ ಶಿಕ್ಷಣದ ಹಿತರಕ್ಷಣೆಗೆ ಸರ್ಕಾರ ಸರ್ವಪ್ರಯತ್ನ ಕೈಗೊಳ್ಳುವುದೆಂದೂ ಹೇಳಿದರು.

ನಿರ್ಣಯದ ಬಗ್ಗೆ ರಾಜ್ಯ ಸರ್ಕಾರದ ಆತಂಕವನ್ನು ವ್ಯಕ್ತಪಡಿಸಿ ಈಗಾಗಲೇ ಕೇಂದ್ರಕ್ಕೆ ತಂತಿ ಸಂದೇಶ ಕಳುಹಿಸಲಾಗಿದೆ ಎಂದರು.

• ವಿರೋಧಪಕ್ಷದ ನಾಯಕರ ಆಪಾದನೆ ನಿರಾಕರಣೆ

ಬೆಂಗಳೂರು, ಮಾರ್ಚ್ 18- ಉತ್ತರದ ಜಿಲ್ಲೆಗಳ ಅಭಾವ ಪರಿಹಾರ ಕಾಮಗಾರಿಗಳಲ್ಲಿ 20 ಕೋಟಿ ರೂಪಾಯಿಗಳ ದುರ್ವಿನಿಯೋಗ ಆಗಿದೆ ಎಂಬ ವಿರೋಧಪಕ್ಷದ ನಾಯಕರ ಆಪಾದನೆಗಳನ್ನು ಅರ್ಥಮಂತ್ರಿ ಎಂ.ವೈ. ಘೋರ್ಪಡೆ ಅವರು ಇಂದು ವಿಧಾನಸಭೆಯಲ್ಲಿ ನಿರಾಕರಿಸಿದರು.

ಕಳೆದ 2 ವರ್ಷಗಳಲ್ಲಿ ಖರ್ಚಾದ ಒಟ್ಟು ಹಣ 62.60 ಕೋಟಿ ರೂಪಾಯಿ. ಈ ಪೈಕಿ ಕೇಂದ್ರ 43 ಕೋಟಿ ನೀಡಿದೆ. ಉಳಿದ 20 ಕೋಟಿಗಳಲ್ಲಿ 5 ಕೋಟಿಗಳನ್ನು ರಾಜ್ಯವೇ ವಹಿಸಿಕೊಳ್ಳಬೇಕಾದದ್ದು. 10 ಕೋಟಿ ಯಂತ್ರೋಪಕರಣಗಳ ಖರ್ಚು; ಅದೂ ರಾಜ್ಯದ್ದೇ. ಉಳಿದ ಐದು ಕೋಟಿ ರೂಪಾಯಿ ಕೇಂದ್ರವು ವೆಚ್ಚ ವಹಿಸದ ಅಕ್ಟೋಬರ್‌ನಿಂದ ಡಿಸೆಂಬರ್‌ವರೆಗಿನ (1973) ವೆಚ್ಚ ಎಂದು ಸಚಿವರು ಲೆಕ್ಕ ನೀಡಿದರು.

ದೇಶದ ಅಭಿವೃದ್ಧಿಗೆ ಪೂರಕವಾದ ಲಿಂಗಸಂವೇದನೆ ಈ ಕಾಲದ ತುರ್ತು

ಹದಗೊಳ್ಳಬೇಕಿದೆ ಸಾಮೂಹಿಕ ಪ್ರಜ್ಞೆ

ವಿಶ್ಲೇಷಣೆ

ಗೀತಾ ವಸಂತ

ಮಹಿಳೆಯರಿಗೆ ಸಲ್ಲಬೇಕಾದ ನ್ಯಾಯವು ಸಾಮಾಜಿಕ ನ್ಯಾಯದ ಭಾಗವೇ ಆಗಿದೆ ಎಂಬುದು ಎಚ್ಚೆತ್ತುಕೊಂಡ ಸಮಾಜದ ಪರಿಭಾಷೆ. ಹೆಣ್ಣಿನ ಅಸ್ತಿತ್ವದ ಘನತೆಯನ್ನು ಕಾಪಾಡುವುದು ಸಾಮಾಜಿಕ ನೈತಿಕತೆಯ ಹೊಣೆಯೂ ಹೌದು. ಚರಿತ್ರೆಯ ತಪ್ಪುಗಳನ್ನು ಸರಿಪಡಿಸಿಕೊಂಡು ನಾಗರಿಕತೆಯನ್ನು ಹೊಸದಾಗಿ ಕಟ್ಟುತ್ತಾ ಹೋಗುವುದು ಮನುಷ್ಯಪ್ರಜ್ಞೆಯ ಚಲನೆಯ ದ್ಯೋತಕ.

ಯಾವುದೇ ಒಂದು ದೇಶದ ಅಭಿವೃದ್ಧಿಯನ್ನು ಮಹಿಳೆಯರ ಅಭಿವೃದ್ಧಿಯ ಅಳತೆಗೋಲಿನಿಂದ ಅಳೆಯಬೇಕು ಎಂದ ಅಂಬೇಡ್ಕರ್ ಹಾಗೂ ಮಹಿಳೆಯರು ಮಧ್ಯರಾತ್ರಿಯೂ ನಿರ್ಭಯವಾಗಿ ಸಂಚರಿಸುವ ಸ್ಥಿತಿ ಸಿದ್ಧಿಸಿದಾಗ ಮಾತ್ರ ಸ್ವಾತಂತ್ರ್ಯಕ್ಕೆ ನಿಜ ಅರ್ಥ ಬರುವುದೆಂದ ಗಾಂಧೀಜಿ ಈ ಇಬ್ಬರೂ ವ್ಯವಸ್ಥೆಯಲ್ಲಿ ಹೆಣ್ಣಿನ ಇರುವಿಕೆಯನ್ನು ಬಲವಾಗಿ ಪ್ರತಿಪಾದಿಸಿದ ಆಧುನಿಕ ಭಾರತದ ಪ್ರತಿನಿಧಿಗಳಾಗಿ ಕಾಣುತ್ತಾರೆ. ಒಂದು, ಸಾಮಾಜಿಕ ನೈತಿಕತೆ, ಇನ್ನೊಂದು, ವೈಯಕ್ತಿಕ ನೈತಿಕತೆ. ಹಾಗೆ ನೋಡಿದರೆ ಇವೆರಡೂ ಒಂದರೊಳಗೊಂದು ಬೆರೆತ ಪೂರ್ಣವೃತ್ತ.

ತನ್ನ ದೇಹದ ಕಾರಣಕ್ಕಾಗಿ ಭಯಗ್ರಸ್ತಳಾಗಿಯೇ ಇರಬೇಕಾದ ಹೆಣ್ಣು ತನ್ನ ಪ್ರಜ್ಞೆಯ ಅಸೀಮ ಸಾಧ್ಯತೆಗಳನ್ನು ಅರಿಯುವುದು ಕನಸಿನ ಮಾತು. ಈ ಭಯವನ್ನು ದಾಟಲು ದೇಹದ ಬಗೆಗಿನ ಮಿಥ್ಯೆಗಳನ್ನು ದಾಟುವ ಅವಳ ಅರಿವು ಎಷ್ಟು ಮುಖ್ಯವೋ ನಮ್ಮ ವ್ಯವಸ್ಥೆಯೂ ಅವಳು ನಿರ್ಭಯವಾಗಿರಲು ಬೇಕಾದ ಮನಃಸ್ಥಿತಿ ಹಾಗೂ ಸುರಕ್ಷಿತ ವಾತಾವರಣವನ್ನು ನಿರ್ಮಾಣ ಮಾಡಬೇಕಾದುದು ಅಷ್ಟೇ ಮುಖ್ಯ. ಇದು ಯಾವುದೇ ನಾಗರಿಕ ಸಮಾಜದ ಪ್ರಾಥಮಿಕ ಅವಶ್ಯಕತೆ. ಆಗಲೇ ಅವಳು ತನ್ನ ಕನಸುಗಳನ್ನು ತಾನೇ ಕಾಣುವ, ತನ್ನ ಬದುಕಿನ ನಿರ್ಧಾರಗಳನ್ನು ತಾನೇ ಕೈಗೊಳ್ಳುವ ಸ್ವಾತಂತ್ರ್ಯದ ಮೊದಲ ಹೆಜ್ಜೆಗಳನ್ನಿಡುತ್ತ ತನ್ನ ದಾರಿಗಳನ್ನು ಶೋಧಿಸಿಕೊಳ್ಳಲು ಸಾಧ್ಯ. ಹೆಣ್ಣು ತನ್ನ ದೇಹವನ್ನು ಸ್ವೀಕರಿಸುವ ಮೂರು ಮಾದರಿಗಳು ನೆನಪಾಗುತ್ತವೆ. ಒಂದು, ಅಕ್ಕಮಹಾದೇವಿಯ ಮಾದರಿ. ಇನ್ನೊಂದು, ದ್ರೌಪದಿಯ ಮಾದರಿ. ಮತ್ತೊಂದು, ದೋಪ್ದಿಯ ಮಾದರಿ. ಅಕ್ಕನ ಬೆತ್ತಲು, ದೇಹ ಮತ್ತು ಪ್ರಜ್ಞೆಗಳೆರಡನ್ನೂ ಬಯಲಾಗಿಸುವ ರೂಪಕ. ಸಂಸ್ಕೃತಿಯು ಬಿತ್ತಿದ ದೇಹದ ಲಜ್ಜೆಯನ್ನು ಮೀರಿ ಅದನ್ನು ಪ್ರಾಕೃತಿಕ ಸತ್ಯವಾಗಿ ಮಾತ್ರ ಕಾಣುವ ಎಚ್ಚರ ಹಾಗೂ ಆ ಮೂಲಕ ಎಲ್ಲ ಸಮಾಜೋ ಸಾಂಸ್ಕೃತಿಕ ರಚನೆಗಳನ್ನು ಮೀರುವ ಸಾಹಸ ಅವಳದು. ಕೀಳರಿಮೆ, ಭಯ ಹಾಗೂ ಅವನ್ನು ಮೂಡಿಸಲು ಕಾರಣವಾದ ಎಲ್ಲ ಲೌಕಿಕ ಅಧಿಕಾರವನ್ನೂ ನಿರಾಕರಿಸುವ ಆಧ್ಯಾತ್ಮಿಕ ಎತ್ತರದ ಸ್ಥಿತಿ ಅದು.

ದ್ರೌಪದಿಯನ್ನು ವಿವಸ್ತ್ರಗೊಳಿಸಲು ಪ್ರಯತ್ನಿಸಿದ್ದು ವ್ಯವಸ್ಥೆಯ ಅಧಿಕಾರ. ಅವಳನ್ನು ಪಣಕ್ಕಿಟ್ಟು ಜೂಜಾಡುವ ಅಧಿಕಾರವನ್ನು ಗಂಡನಿಗೂ ಸೋತ 'ವಸ್ತು'ವಿನ ಸೀರೆ ಸೆಳೆಯುವ ಅಧಿಕಾರವನ್ನು ಅನ್ಯ ಗಂಡಸರಿಗೂ ದಯಪಾಲಿಸಿದ ಪಿತೃಪ್ರಧಾನ ವ್ಯವಸ್ಥೆ ಹಾಗೂ ಅದರ ಬೆನ್ನಿಗೆ ಬಲವಾಗಿ ನಿಂತ ಪ್ರಭುತ್ವ ಹಾಗೂ ಧರ್ಮ. ಈ ಎಲ್ಲ ಸಿಕ್ಕುಗಳಲ್ಲಿ ದ್ರೌಪದಿಯ ದೇಹ ಮತ್ತು ಆತ್ಮ ಕಂಪಿಸುತ್ತವೆ. ಆದರೆ ಜಡ ವ್ಯವಸ್ಥೆಗೆ ಇದು ತಟ್ಟುವುದಿಲ್ಲ.

ಇನ್ನು ಈ ದೋಪ್ದಿಯು ಮಹಾಶ್ವೇತಾದೇವಿಯವರ ಕತೆಯಲ್ಲಿ ಬರುವ ಬುಡಕಟ್ಟು ಹೆಣ್ಣು. ಸೈನ್ಯಾಧಿಕಾರವು ಬುಡಕಟ್ಟು ಚಳವಳಿಯನ್ನು ನಿಗ್ರಹಿಸಲು ಹೆಣ್ಣುದೇಹವನ್ನು ಛಿದ್ರಗೊಳಿಸುವ ಹುನ್ನಾರ ಹೂಡಿದಾಗ ಅದನ್ನು ನಿಷ್ಕ್ರಿಯಗೊಳಿಸಿದ ಹೆಣ್ಣು ದೋಪ್ದಿ. ಹೆಣ್ಣಿನ ದನಿಯಡಗಿಸಲು ಪುರುಷಾಧಿಕಾರವು ಕಂಡುಕೊಂಡ ಸುಲಭ ಉಪಾಯ ಅವಳ ದೇಹ. ಅತ್ಯಾಚಾರದ ಮೂಲಕ ಅವಳನ್ನು ದಿಗ್ಭ್ರಮೆಗೆ ತಳ್ಳುವ ಹುನ್ನಾರ ಚರಿತ್ರೆಯುದ್ದಕ್ಕೂ ಕಾಣಸುತ್ತದೆ. ಆದರೆ ಈ ಹೊಸಕಾಲದ ದೋಪ್ದಿ ತನ್ನ ಬೆತ್ತಲುದೇಹದ ಮೂಲಕವೇ ಸೈನ್ಯಾಧಿಕಾರಿಯನ್ನು ಕಂಗೆಡಿಸುತ್ತಾಳೆ. ಅತ್ಯಾಚಾರದ ಮೂಲಕ ಅವಳ ಆತ್ಮಸ್ಥೈರ್ಯವನ್ನು ಭಗ್ನಗೊಳಿಸಲೆತ್ನಿಸಿದ ಸೈನ್ಯಾಧಿಕಾರಿಯ ಮುಂದೆ ಪೂರ್ಣ ಬೆತ್ತಲಾಗಿ ತಲೆಯೆತ್ತಿ ನಿಲ್ಲುವುದು ಅವಳು ವ್ಯವಸ್ಥೆಗೆ ತೋರುವ ಪ್ರತಿಭಟನೆ. 'ನಗ್ನತೆಯನ್ನು ಯಾರೂ ಮುಚ್ಚಲಾರಿರಿ' ಎಂಬ ಅವಳ ಮಾತು ಲೈಂಗಿಕ ನೈತಿಕತೆಯ ಕಲ್ಪನೆಯನ್ನು ಕಟ್ಟಿದ ಜ್ಞಾನಮಾದರಿಗಳಿಗೇ ಎಸೆಯುವ ಸವಾಲು.

ಈ ಮೂರೂ ಸಂದರ್ಭಗಳು ನಗ್ನತೆಯ ಮಹಾ-ರೂಪಕಗಳಾಗಿ ನಿಲ್ಲುತ್ತವೆ. ಇಂದಿಗೂ ನಡೆಯುತ್ತಿರುವ ದಲಿತ ಹೆಣ್ಣುಮಕ್ಕಳ ಬೆತ್ತಲೆ ಮೆರವಣಿಗೆ ಹಾಗೂ ಅತ್ಯಾಚಾರ ಪ್ರಕರಣಗಳು ಭಯವನ್ನು ಉತ್ಪಾದಿಸುತ್ತಲೇ ಇವೆ. ಸರ್ಕಾರವು ಹೆಣ್ಣುಮಕ್ಕಳಿಗೆ ಉಚಿತ ಶಿಕ್ಷಣ, ಸಮಾನ ಉದ್ಯೋಗಾವಕಾಶಗಳನ್ನು ಕಲ್ಪಿಸಿದ್ದರೂ ಅವರು ತಮ್ಮ ಪರಿಸರದಲ್ಲೇ ಸುರಕ್ಷಿತರಾಗಿಲ್ಲ ಎಂಬುದು ಮತ್ತೆಮತ್ತೆ ಮನವರಿಕೆಯಾಗುತ್ತಲೇ ಇದೆ. ಹೆಣ್ಣಿಗೆ ತನ್ನ ದೇಹದ ಬಗೆಗಿನ ಸ್ವಯಂ ಅರಿವು ಹಾಗೂ ಸಮಾಜದಲ್ಲಿ ಹೆಣ್ಣುದೇಹದ ಸ್ವಾಯತ್ತತೆಯ ಬಗೆಗಿನ ಅರಿವು ಎರಡೂ ಒಟ್ಟಿಗೆ ಕೆಲಸ ಮಾಡುವುದು ಮುಖ್ಯವಾಗುತ್ತದೆ. ನಮಗೆ ರಾಜಕೀಯ ಸ್ವಾತಂತ್ರ್ಯ ಬಂದರೂ ನಾವು ಮನುಷ್ಯರಾಗದ ಹೊರತು ನಿರ್ಭಯ ಸ್ಥಿತಿಯಲ್ಲಿ ಬದುಕು ಅರಳುವುದಿಲ್ಲ. ಪ್ರಜ್ಞೆಯಲ್ಲಾಗಬೇಕಾದ ಪರಿವರ್ತನೆಯನ್ನು ಅಂದು ಗಾಂಧಿ ಸೂಚಿಸಿದ್ದರು. ಅದಕ್ಕೆ ಬೇಕಾದ ಬೌದ್ಧಿಕ ಎಚ್ಚರ ಹಾಗೂ ಕಾನೂನಿನ ಬೆಂಬಲವನ್ನು ಅಂಬೇಡ್ಕರ್ ಪ್ರತಿಪಾದಿಸಿದ್ದರು.

ಆಧುನಿಕ ಸಂದರ್ಭದಲ್ಲಿ ನಮ್ಮ ಪ್ರಜ್ಞೆ ಎರಡು ನೆಲೆಯಲ್ಲಿ ರೂಪುಗೊಳ್ಳುತ್ತದೆ. ಒಂದು ನೆಲೆ ಕೌಟುಂಬಿಕ ಹಾಗೂ ಸಾಮಾಜಿಕ ಪರಿಸರದಲ್ಲಿ ರೂಪುಗೊಂಡರೆ, ಇನ್ನೊಂದು, ಶೈಕ್ಷಣಿಕ ಪರಿಸರದಲ್ಲಿ ವಿಕಾಸಗೊಳ್ಳುತ್ತದೆ. ಬಾಲ್ಯದಲ್ಲಿ ನಮ್ಮ ಸ್ವಭಾವದ ಪಡಿಯಚ್ಚು ರೂಪುಗೊಳ್ಳುತ್ತದೆ. ಹಿರಿಯರನ್ನು ನೋಡಿ, ಕೇಳಿ, ಅನುಕರಿಸಿ ನಮ್ಮ ಗ್ರಹಿಕೆಗಳ ವಿನ್ಯಾಸವೊಂದು ರೂಪುಗೊಳ್ಳುತ್ತದೆ. ಇದು ಅಪ್ರಜ್ಞಾ ಸ್ಥಿತಿಯಲ್ಲೇ ಆಗುವ ಕಲಿಕೆ. ಪ್ರಜ್ಞಾಪೂರ್ವಕವಾಗಿಯೂ ಕುಟುಂಬವು ಮೌಲ್ಯಗಳನ್ನು ಬಿತ್ತುವ ಕೆಲಸವನ್ನು ಮಾಡುತ್ತದೆ. ಧರ್ಮ, ಜಾತಿ, ಸಂಸ್ಕೃತಿ, ಸಂಪ್ರದಾಯ, ನಂಬಿಕೆ ಹೀಗೆ ಹಲವು ನೆಲೆಗಳಲ್ಲಿ ನಮ್ಮ ಸತ್ವವು ರೂಪುಗೊಳ್ಳುತ್ತಾ ಹೋಗುತ್ತದೆ. ನಂತರ ವ್ಯಕ್ತಿಯನ್ನು ಸದಸ್ಯನನ್ನಾಗಿ ರೂಪಿಸುವುದು ಶಿಕ್ಷಣ.

ಸಮಾಜದ ವಿವಿಧ ಸ್ತರಗಳ ಜನರು ಕೂಡಿ ಅರಿಯುವ, ಕೂಡಿ ಬದುಕುವ, ಪರಸ್ಪರರನ್ನು ಗೌರವಿಸುವ, ಹಂಚಿಕೊಳ್ಳುವ, ಸರ್ವರಿಗೂ ಸಮಬಾಳು ಸರ್ವರಿಗೂ ಸಮಪಾಲು ಎಂಬ ತತ್ವ ವಿಶಾಲ ಭಿತ್ತಿಯಲ್ಲಿ ಬದುಕನ್ನು ತೆರೆದಿಡುತ್ತದೆ. ಪ್ರಜಾಪ್ರಭುತ್ವದ ಈ ಮನೋಭಾವ ನಮ್ಮ ಬದುಕಿನ ಧರ್ಮವೇ ಆಗಬೇಕೆಂಬುದು ಸಂವಿಧಾನದ ಸಂಕಲ್ಪ. ಅದು ದೇಶವೊಂದರ ಕನಸೂ ಹೌದು, ಕಾನೂನೂ ಹೌದು. ದೇಶದ ಅಭಿವೃದ್ಧಿಯಲ್ಲಿ ಎಲ್ಲರ ತೊಡಗುವಿಕೆಯ ಪರಿಕಲ್ಪನೆಯು ಎಷ್ಟೋ ಸಲ ವ್ಯಕ್ತಿಗಳ ಸಾಂಪ್ರದಾಯಿಕ ಪಾತ್ರಗಳೊಂದಿಗೆ ಡಿಕ್ಕಿ ಹೊಡೆಯುತ್ತದೆ. ಪಿತೃಪ್ರಧಾನ ಕುಟುಂಬ ವ್ಯವಸ್ಥೆಯಲ್ಲಿ ಹೆಣ್ಣಿನ ಸಾಮಾಜಿಕ ತೊಡಗುವಿಕೆಯ ಸಾಧ್ಯತೆ ಗೌಣವಾಗಿದೆ. ಅದು ವಂಶಪಾರಂಪರ್ಯಕ್ಕಾಗಿ ಸಂತಾನವನ್ನು ಸೃಷ್ಟಿಸುವ ಸಾಧನವಾಗಿಯೇ ಹೆಣ್ಣನ್ನು ರೂಪಿಸುತ್ತಾ ಬಂದಿದೆ.

ವಿವಾಹದ ಮೂಲಕ ಅವಳ ದೇಹ, ಮನಸ್ಸು, ಪ್ರಜ್ಞೆಯನ್ನು ಆಳುವ ಒಡೆತನವನ್ನು ಪುರುಷನಿಗೆ ನೀಡುತ್ತಾ ಬಂದಿದೆ. ಆಧುನಿಕ ರಾಷ್ಟ್ರವು ನೀಡಿದ ಸಮಾನತೆ, ಸಮಾನ ಅವಕಾಶ, ಅವಳನ್ನು ಸಹಜವಾಗಿಯೇ ಸಮಾಜಮುಖಿಯಾಗಿಸಿವೆ. ದೇಹಮಗ್ನತೆಯಿಂದ ದೇಶವೆಂಬ ರಾಜಕೀಯ ಆಯಾಮಕ್ಕೆ ತೆರೆದುಕೊಳ್ಳುವಿಕೆ ಅವಳಿಗೆ ಹೊಸ ಅಸ್ತಿತ್ವವೊಂದನ್ನು ನೀಡಿದೆ. ಅಷ್ಟಕ್ಕೇ ನಿಲ್ಲದೆ ದೇಶದ ಅಭಿವೃದ್ಧಿಯಲ್ಲಿ ಅವಳ ಸಮಾನ ತೊಡಗುವಿಕೆ ಮುಖ್ಯವೆಂಬ ಅರಿವು ವಿಕಾಸವಾಗುತ್ತ ಬಂದಿದೆ. ಸಾರ್ವಜನಿಕ ನೀತಿಗಳು, ಕಾನೂನು, ಆಡಳಿತ, ಅಭಿವೃದ್ಧಿ ಮಾದರಿಗಳು ಎಲ್ಲವೂ ಲಿಂಗಸಂವೇದನಾಶೀಲಗೊಳ್ಳು-ವುದು ಈ ಕಾಲದ ತುರ್ತು. ಆದರೆ ಕುಟುಂಬದಲ್ಲಿ ಇಂಥ ಸಂವೇದನಾಶೀಲತೆ ವಿಕಾಸವಾಗದೇ ಅದು ಹೊರಗಿನ ವ್ಯವಸ್ಥೆಯಲ್ಲಿ ಮಾತ್ರ ಇರಬೇಕೆಂದು ಬಯಸುವುದು ದ್ವಂದ್ವ ನೀತಿಯಾಗುತ್ತದೆ. ಈ ಸಂದಿಗ್ಧವನ್ನು ಸೂಕ್ಷ್ಮವಾಗಿ ತಾಳ್ಮೆಯಿಂದ ನಿಭಾಯಿಸುವ ಕಾರ್ಯನೀತಿಗಳು ಇಂದು ಬೇಕಾಗಿವೆ. ಇದಕ್ಕಾಗಿ ಸಾಮೂಹಿಕ ಪ್ರಜ್ಞೆಯೊಂದು ಹದಗೊಳ್ಳುವುದು ಅಗತ್ಯ.

ಲೇಖಕಿ: ಸಹಪ್ರಾಧ್ಯಾಪಕಿ, ಡಾ. ಡಿ.ವಿ.ಜಿ. ಕನ್ನಡ ಅಧ್ಯಯನ ಕೇಂದ್ರ, ತುಮಕೂರು ವಿಶ್ವವಿದ್ಯಾಲಯ, ತುಮಕೂರು

ಚುರುಮುರಿ



ಕೊರಳುಸೇವೆ

• ಲಿಂಗರಾಜು ಡಿ.ಎಸ್.

'ನೋಡ್ರಿ ಸಾ, ರಾಜಕೀಯದೋವು 'ನನಗೆ ಟಿಕೇಟು ಸಿಗನಿಲ್ಲ. ಹೋಗ್ಲಿ ಬುಡಿ ಅತ್ತಗೆ, ನನ್ನ ಕಂದನಿಗಾದ್ರೂ ಸೀಟು ಕೊಡಬ್ಯಾಡ್ವಾ? ನಿಮ್ಮ ಸಂತಾನಕ್ಕೆ ಮಾತ್ರ ಹದ್ದುಬಸ್ತು ಮಾಡಿಕ್ಯಂಡುದರಿ' ಅಂತ ಕಣ್ಣು ಮೆಡ್ಡರಿಸಿಕ್ಯಂದು ಮಲ್ಲಾಗರು ಬಂದಂಗೆ ಕೂಗ್ತಾ ಕೊರಳುಸೇವೆ ಮಾಡ್ತಾ ಅದಾವಲ್ಲ ಸಾ' ಅಂತ ನೊಂದ್ಕಂದೆ.

'ರಾಜಕೀಯದ ಕುಂಡಲಿ ಲೆಕ್ಕಾಚಾರದೇಲಿ ಇವರಿಗೆ, ಇವರ ಮಕ್ಕಳಿಗೆ ಹೆಸರುಬಲ ಬಂದುಲ್ಲ ಕನೋ. ಅದುಕ್ಕೇ ಟಿಕೆಟ್ ಲ್ಯಾಪ್ಸಾದ ದುಃಖದ ಸಿಂಬಳ, ಕಣ್ಣೀರು ಒರೆಸೋರು ಇಲ್ದಂಗಾಗ್ಯದೆ' ಅಂದ್ರು ತುರೇಮಣೆ.

'ಕರೆಟ್ಟು ಕನಣ್ಣೈ, ರಾಜಕೀಯ ಜೀವನದಲ್ಲಿ ಕಣ್ಣೀರು ಒರೆಸೋರು ಸಿಗಬೈದು, ಆದರೆ ಸಿಂಬಳ ಒರೆಸೋರು ಸಿಕ್ಕುಲ್ಲ' ಚಂದ್ರು ಚಟಾಕಿ ಹಾರಿಸಿದ.

'ಯಾರ ಬಾಯಲ್ಲೂ 'ನನಗ್ಯಾಕೆ ಟಿಕೇಟು. ನಮ್ಮ ಕಾರ್ಯಕರ್ತರಿಗೆ ವೋಟು ಕೊಡಿ' ಅನ್ನೋ ಮಾತು ಕಡೀಲಿಲ್ಲವಲ್ಲಾ' ಅಂತಂದೆ.

'ವೋಟು ಅಂದ್ರೆ ಏನಂತ ತಿಳಕಂಡಿದ್ದಯ್? ಸ್ವತಂತ್ರ ಭಾರತದ ಪ್ರಜೆಗಳು ತಮ್ಮನ್ನೇ ತಾವು ಮೂರ್ಖರನ್ನಾಗಿ ಮಾಡಿಕೊಂಡು ಶತಮೂರ್ಖರ ಕೈಗೆ ದೇಸದ ಪಾರುಪತ್ಯ ಕೊಡೋ ಪ್ರಜಾಪ್ರಭುತ್ವದ ಹಬ್ಬ ಕಲಾ!' ಯಂಟಪ್ಪಣ್ಣ ವಿಚಾರ ಮಂಡಿಸಿತು.

'ಕುರಿತೇಟಾಗಿ ಹೇಳಿದೆ ಕನಣ್ಣೈ. ಇದೇ ಐನ್ ಟೇಮು ಅಂತ ಗೆಯ್ಯಕ್ಕೆ ಲಾಯಕ್ಕಿಲ್ಲದ ಹೀನಸುಳಿ, ಪಾತಾಳಸುಳಿ, ದಾವಣಿಸುಳಿ, ಪರಕಲಸುಳಿ, ನಮೂನಿಸುಳಿ, ಸಿಡಗಾಲು, ಕೋರಬಗ್ರಿ, ಕೋವೆಹಲ್ಲಿನ ದನಗಳೆಲ್ಲಾ ಈಗ ಬೀದಿಗೆ ಮೆಯ್ಯಕೆ ಬತ್ತವೆ' ತುರೇಮಣೆ ಉದ್ಗರಿಸಿದರು.

'ಸರಿ ಸಾ, ಈಗ ಎಲ್ಲ ಉಮ್ಮೇದುವಾರರೂ ಏನು ಘನಂದಾರಿ ಕೇಮೆ ಕಿಸಿದವ್ರೆ ಅಂತ ವೋಟು ಕೇಳಕ್ಕೆ ಬತ್ತರೆ?' ನನ್ನ ಅನುಮಾನ ಕೇಳಿದೆ.

'ನಾಯಕರ ಮುಖವಾಡ ಇಕ್ಕ್ಯಂದು 'ಅಣ್ಣೈ, ಅಕ್ಕೋ ನಾನು ಇನ್ನೈದು ವರ್ಸ ಇಕ್ಕಡಿಕೆ ತಲೆ ಹಾಕಕುಲ್ಲ. ಇಲ್ಲೀಗಂಟ ನಾನು ಮಾಡಿದ ಗಾಳಿಗಂಟಲು ನಿಮಗಿಷ್ಟ ಆಗಿದ್ರೆ ದಯವಿಟ್ಟು 420420 ನಂಬರಿಗೆ ಎಸ್‌ಎಂಎಸ್ ಮಾಡಿ' ಅಂತ ನುಲಿತರೆ ಕನೋ' ಅಂದ್ರು ತುರೇಮಣೆ.

ಸಂಗತ

ನಿಸರ್ಗ ನಿಯಮ: ನಿಯಂತ್ರಣ ವ್ಯವಸ್ಥೆ

ವನ್ಯಜೀವಿ ನಿರ್ವಹಣೆ ಕ್ರಮ ಬದಲಾಗಲಿ, ಮಾನವ ಹಸ್ತಕ್ಷೇಪ ತಪ್ಪಲಿ

• ಅಖಿಲೇಶ್ ಚಿಪ್ಪಳಿ

ಶರಾವತಿ ಸಿಂಗಳೀಕ ಅಭಯಾರಣ್ಯದಲ್ಲಿ ನೀರಿನ ಒರತೆಯ ಕೊರತೆಯಾಗಿ ಅನೇಕ ವನ್ಯಜೀವಿಗಳು ನೀರರಸಿಕೊಂಡು ಊರಿಗೂ ಬರುತ್ತಿವೆ. ಅರಣ್ಯ ಇಲಾಖೆ ಅವುಗಳಿಗೆ ನೀರಿನ ವ್ಯವಸ್ಥೆ ಮಾಡಬೇಕು ಎಂಬ ಒತ್ತಾಯ ಕಾಡಂಚಿನ ವನ್ಯಪ್ರೇಮಿಗಳಿಂದ ಕೇಳಿಬರುತ್ತಿದೆ. ಬೇಸಿಗೆ ಪ್ರಾರಂಭವಾಗುತ್ತಿದ್ದಂತೆ, ಖುದ್ದು ಅರಣ್ಯ ಸಚಿವರೇ ಸಭೆ ಕರೆದು, ಅಭಯಾ-ರಣ್ಯಗಳಲ್ಲಿ ವನ್ಯಜೀವಿಗಳಿಗೆ ಕುಡಿಯುವ ನೀರಿನ ಕೊರತೆಯಾಗದಂತೆ ವ್ಯವಸ್ಥೆ ಮಾಡಿ ಎಂದು ಅರಣ್ಯ ಭವನದ ಉನ್ನತಾಧಿಕಾರಿಗಳಿಗೆ ತಾಕೀತು ಮಾಡಿದ ವರದಿಯೂ ಬಂದಿದೆ.

ಬರವೆಂಬುದು ನಿಸರ್ಗ ತನಗೆ ತಾನೇ ರೂಪಿಸಿಕೊಂಡ ಒಂದು ವಿಲಕ್ಷಣ ವ್ಯವಸ್ಥೆ. ಬಿರುಬೇಸಿಗೆಯಲ್ಲಿ ಬಾಯಾರಿದ ಬೀಡಾಡಿ ದನಗಳಿಗೆ ನೀರಿನ ತೊಟ್ಟಿ ಇಟ್ಟಿರುವುದನ್ನು ನಗರ ಪ್ರದೇಶದ ಅನೇಕ ಮನೆಗಳ ಮುಂದೆ ನಾವು ಕಾಣುತ್ತೇವೆ. ವನ್ಯಜೀವಿಗಳ ವಿಷಯದಲ್ಲಿ ಈ ಕ್ರಮ ಅಷ್ಟು ಸೂಕ್ತವಲ್ಲ. ಡಾರ್ವಿನ್ ಹೇಳಿದ ನೈಸರ್ಗಿಕ ಆಯ್ಕೆ ಹಾಗೂ ಬಲಿಷ್ಠ-ವಾದದ್ದೇ ಬದುಕುಳಿಯುವುದು ಎಂಬ ಸಿದ್ಧಾಂತವನ್ನು ಪರಿಗಣಿಸಬೇಕಾಗುತ್ತದೆ. ಬಂಡೀಪುರ ಹಾಗೂ ನಾಗರಹೊಳೆ ಅಭಯಾರಣ್ಯಗಳಲ್ಲಿ ಪ್ರವಾಸಿಗರನ್ನು ಸೆಳೆಯಲು ಹುಲಿಗಳ ದರ್ಶನ ಮಾಡಿಸುವುದು ಅರಣ್ಯ ಇಲಾಖೆಯ ವನ್ಯಜೀವಿ ವಿಭಾಗಕ್ಕೆ ಅನಿವಾರ್ಯವಾಗಿದೆ. ಆದ್ದರಿಂದ ಅದು ಕಂಡುಕೊಂಡ ದಾರಿ, ಹೆಚ್ಚು ಹೆಚ್ಚು ನೀರಿನ ಹೊಂಡಗಳಿಗೆ ನೀರು ತುಂಬಿಸುವ ಯೋಜನೆ. ನೀರು ಕುಡಿಯಲು ಬರುವ ಜಿಂಕೆಗಳನ್ನು ಅರಸಿ ಹುಲಿ, ಚಿರತೆಗಳು ನೀರಿನ ಹೊಂಡದ ಹತ್ತಿರ ಬರುತ್ತವೆ. ಇಲ್ಲಿ ಬಲಿಷ್ಠವಾದುದು ಮಾತ್ರ ಬದುಕುಳಿಯುತ್ತದೆ ಎಂಬ ಸಿದ್ಧಾಂತವನ್ನು ಹಿಂದೆ ಸರಿಸಿ, ಕೃತಕ ನೀರಿನ ಗುಂಡಿ ನಿರ್ಮಿಸಿ, ದುರ್ಬಲ ಗೊರಸು ಪ್ರಾಣಿಗಳು ಬದುಕುಳಿಯುವಂತೆ ಹಾಗೂ ಆ ಮೂಲಕ ದುರ್ಬಲ ಪೀಳಿಗೆಯನ್ನು ಸೃಷ್ಟಿ ಮಾಡಿದಂತೆ ಆಗುತ್ತದೆ. ಉದಾಹರಣೆಗೆ, ನಾಗರಹೊಳೆಯಲ್ಲಿ ಕೃತಕವಾಗಿ ನೀರು ಲಭ್ಯವಾಗುವ ಹಾಗೆ ಮಾಡಿದ್ದರಿಂದ, ಹಿಂದಿನ ಎರಡು ದಶಕಗಳಲ್ಲಿ ಜಿಂಕೆಗಳ ಸಂಖ್ಯೆ ನೈಸರ್ಗಿಕ ಸಮತೋಲನ-ಕ್ಕಿಂತ ವಿಪರೀತ ಹೆಚ್ಚಾಗಿದೆ. ಅಂದರೆ, ಒಂದು ಚದರ ಕಿ.ಮೀ. ವ್ಯಾಪ್ತಿಯಲ್ಲಿ ಇವುಗಳ ಸಂಖ್ಯೆ 45 ದಾಟಿದೆ. ಅದೇ ಭದ್ರಾ ಹುಲಿ ಸಂರಕ್ಷಿತ ಅಭಯಾರಣ್ಯದಲ್ಲಿ ಜಿಂಕೆಗಳ ಸಂಖ್ಯೆ ಪ್ರತಿ ಚದರ ಕಿ.ಮೀಗೆ ಬರೀ 8.

ಚುಕ್ಕೆ ಜಿಂಕೆಗಳಿಗೆ ನೀರು ಅತ್ಯವಶ್ಯಕ. ಸಂಖ್ಯೆ ಹೆಚ್ಚಿಸಿಕೊಂಡ ಚುಕ್ಕೆ ಜಿಂಕೆಗಳನ್ನು ನೈಸರ್ಗಿಕವಾಗಿ ನಿಯಂತ್ರಿಸಲಿದೆ ಬರ. ಇಲ್ಲವಾದಲ್ಲಿ ಜಿಂಕೆಗಳ ಹಿಂಡು ಆಹಾರಕ್ಕಾಗಿ ಹುಲ್ಲಿನ ಬೇರುಗಳನ್ನು ಕಿತ್ತು ತಿಂದು, ಮಣ್ಣಿನ ರಚನೆಯನ್ನೇ ವಿರೂಪಗೊಳಿಸುವುದರ ಜೊತೆಗೆ, ನೈಸರ್ಗಿಕವಾಗಿ ಬೀಜ ಪ್ರಸರಣೆಗೊಂಡು ಹುಟ್ಟುವ ವೈವಿಧ್ಯಮಯ ಸಸ್ಯಸಂಪತ್ತನ್ನೂ ಬರಿದು ಮಾಡುತ್ತದೆ. ಆಗ ಕಾಡಿನ ಒಟ್ಟಾರೆ ಬೆಳವಣಿಗೆ ಕುಂಠಿತ ಆಗುತ್ತದೆ. ಇದರಿಂದ, ಮಳೆಗಾಲದಲ್ಲಿ ಮೇಲ್ಮಣ್ಣು ಕೊಚ್ಚಿ ಹೋಗಿ, ನೈಸರ್ಗಿಕ ನೀರಿನ ಮೂಲಗಳು ಹೂಳಿನಿಂದ ಮುಚ್ಚುತ್ತವೆ.

ಮನುಷ್ಯ ಪ್ರಪಂಚದಲ್ಲಿ ದುರ್ಬಲ ಸಂತತಿಯನ್ನು ವಿಶೇಷ ಕಾಳಜಿ ವಹಿಸಿ ಸಲಹುವ ಪರಿಪಾಟವಿದೆ. ನಾಗರಿಕ ಪ್ರಪಂಚದಲ್ಲಿ ಇದು ಸರಿ. ಆದರೆ, ವನ್ಯಲೋಕ-ದಲ್ಲಿ ಈ ಸೂತ್ರ ಸೋಲುತ್ತದೆ. ಬಾಯಾರಿದ ಪ್ರಾಣಿಗಳಿಗೆ ನೀರುಣಿಸುವುದು ಅಂತಃಕರುಣೆಯುಳ್ಳ ಯಾರಿಗೇ ಆದರೂ ಸರಿಯಾದ ಕ್ರಮವೆಂದು ಮೇಲ್ನೋಟಕ್ಕೆ ಕಂಡುಬಂದರೂ, ದೀರ್ಘಕಾಲೀನ ಫಲಿತಾಂಶವು ನೈಸರ್ಗಿಕ ಆಯ್ಕೆ ಮತ್ತು ಬಲಿಷ್ಠವಾದುದು ಮಾತ್ರ ಉಳಿಯುವ ಡಾರ್ವಿನ್ ಸಿದ್ಧಾಂತಕ್ಕೆ ವ್ಯತಿರಿಕ್ತವಾಗಿದೆ.

ನೈಸರ್ಗಿಕವಾಗಿ ಆಯಾ ಭೂಪ್ರದೇಶಗಳಿಗೆ ಹೊಂದಿಕೊಂಡು ಬದುಕುತ್ತಿರುವ ವನ್ಯಜೀವಿಗಳ ನೆಲೆಗಳನ್ನು ಸಂರಕ್ಷಿಸಬೇಕು ಎಂಬ ಕಾರಣಕ್ಕೆ ವನ್ಯಜೀವಿ ಸಂರಕ್ಷಣಾ ಕಾಯ್ದೆ- 1972 ಜಾರಿಯಾಯಿತು. ಈ ಕಾಯ್ದೆಯ ಸ್ಪಷ್ಟ ಆಶಯವೆಂದರೆ, ಯಾವುದೇ ಕಾರಣಕ್ಕೂ ವನ್ಯಜೀವಿಗಳಿಗೆ ಮೀಸಲಾಗಿಟ್ಟ ಪ್ರದೇಶಗಳನ್ನು ಅನ್ಯ ಉದ್ದೇಶಗಳಿಗೆ ಬಳಸಬಾರದು ಹಾಗೂ ಅಲ್ಲಿ ಮಾನವ ಹಸ್ತಕ್ಷೇಪ ಇರಬಾರದು. ಆದರೆ ದೇಶದಲ್ಲಿರುವ ಎಲ್ಲಾ ಹುಲಿ ಸಂರಕ್ಷಿತ ಪ್ರದೇಶಗಳು ಹಾಗೂ ವನ್ಯಜೀವಿ ಅಭಯಾರಣ್ಯಗಳಲ್ಲಿ ಪರಿಸರ ಪ್ರವಾಸೋದ್ಯಮವನ್ನು ಇನ್ನಿಲ್ಲದಂತೆ ಪ್ರೋತ್ಸಾಹಿಸಲಾಗುತ್ತಿದೆ.

ಮಲೆನಾಡಿನ ಹೆಬ್ಬಾಗಿಲು ಎಂದು ಕರೆಯಲಾಗುವ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿಯಿಂದ ಆಗುಂಬೆ ಮಾರ್ಗವಾಗಿ ದಕ್ಷಿಣ ಕನ್ನಡದತ್ತ ಹೋಗುವಾಗ ಕಡಿದಾದ ಘಾಟಿ ಮಾರ್ಗ ಸಿಗುತ್ತದೆ. ಈ ಪ್ರದೇಶವು ಸೋಮೇಶ್ವರ ವನ್ಯಜೀವಿ ಅಭಯಾರಣ್ಯದ ವ್ಯಾಪ್ತಿಯಲ್ಲಿ ಬರುತ್ತದೆ. ಘಾಟಿಯ ಇಕ್ಕೆಲಗಳಲ್ಲಿ ಸಿಂಗಳೀಕವೆಂಬ ಅತ್ಯಪರೂಪದ ವಾನರ ಸಂತತಿ ಕಂಡುಬರುತ್ತದೆ. ಪ್ರವಾಸಿಗರಿಗೆ ಇವುಗಳನ್ನು ನೋಡುವ, ಇವುಗಳ ಫೋಟೊ ತೆಗೆಯುವ ಹುಚ್ಚು. ಬಹಳ ನಾಚಿಕೆ ಸ್ವಭಾವದ ಹಾಗೂ ಮನುಷ್ಯರಿಂದ ಸದಾ ದೂರ ಇರಲು ಬಯಸುವ ಸಿಂಗಳೀಕಗಳನ್ನು ಆಕರ್ಷಿಸಲು ಅಲ್ಲಿ ಪೈಪೋಟಿ ನಡೆಯುತ್ತದೆ. ಪ್ರವಾಸಿಗರು ನೀಡುವ ಕುರ್ಕುರೆ, ಲೇಸ್‌ನಂತಹ ಜಂಕ್ ತಿಂಡಿಗಳು, ವಿಷಭರಿತವಾದ ತರಕಾರಿ, ಹಣ್ಣುಗಳೇ ಅವಕ್ಕೀಗ ಆಹಾರವಾಗಿದೆ. ನೈಸರ್ಗಿಕವಾದ ಆಹಾರವನ್ನು ಬಿಟ್ಟು ನಾಗರಿಕ ಪ್ರಪಂಚದ ಆಹಾರಕ್ಕೆ ಒಗ್ಗಿಕೊಂಡ ಅಲ್ಲಿನ ಸಿಂಗಳೀಕ ಸಂತತಿ ತನ್ನ ನೈಸರ್ಗಿಕ ಪ್ರಾಮುಖ್ಯತೆ ಕಳೆದುಕೊಳ್ಳುತ್ತಿದೆ. ಇದರ ವ್ಯತಿರಿಕ್ತ ಪರಿಣಾಮ ಆಗುಂಬೆ ಮಳೆಕಾಡುಗಳು, ಸೋಮೇಶ್ವರ ಅಭಯಾರಣ್ಯದ ಮೇಲೆ ಆಗುವುದರಲ್ಲಿ ಯಾವುದೇ ಸಂಶಯವಿಲ್ಲ.

ವಿವೇಚನಾರಹಿತವಾದ ನಮ್ಮ ನಡೆಗಳು ಒಂದು ಸಂತತಿಯನ್ನೇ ಅಪಾಯಕ್ಕೀಡು ಮಾಡುತ್ತವೆ. ಹಸಿದ ಸಿಂಗಳೀಕಗಳಿಗೆ ಆಹಾರ ನೀಡಿದೆ ಎಂಬ ಸಮಾಧಾನ ಪ್ರವಾಸಿಗರಿಗೆ ಸಿಗಬಹುದಾದರೂ, ಇವರ ಈ ಕ್ರಿಯೆಯೇ ಸಂರಕ್ಷಣೆಯ ಕೆಲಸಕ್ಕೆ ಅತಿದೊಡ್ಡ ಅಡ್ಡಿಯಾ-ಗುತ್ತದೆ. ಇದನ್ನು ಸರ್ಕಾರ, ಇಲಾಖೆ ಮತ್ತು ನಾಗರಿಕರು ಅರಿಯಬೇಕಾಗಿದೆ.

ವಾಚಕರ ವಾಣಿ

ಮಕ್ಕಳ ಮೇಲೆ ಅಡ್ಡಪರಿಣಾಮ

ರಾಜ್ಯ ಪಠ್ಯಕ್ರಮ ಅನುಸರಿಸುತ್ತಿರುವ ಶಾಲೆಗಳಲ್ಲಿ 5, 8 ಮತ್ತು 9ನೇ ತರಗತಿಗಳಿಗೆ ಬೋರ್ಡ್ ಮಟ್ಟದ ಮೌಲ್ಯಾಂಕನ ಪರೀಕ್ಷೆ ನಡೆಸುವುದರಲ್ಲಿ ಉಂಟಾಗಿರುವ ಅನಿಶ್ಚಿತತೆಯು ವಿದ್ಯಾರ್ಥಿಗಳ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿದೆ. ಅದಾಗಲೇ ಪರೀಕ್ಷೆಗಾಗಿ ಸಿದ್ಧತೆ ನಡೆಸಿ ಎರಡು ವಿಷಯಗಳ ಪರೀಕ್ಷೆಯನ್ನೂ ಬರೆದಿದ್ದ ವಿದ್ಯಾರ್ಥಿಗಳಲ್ಲಿ ಈಗ ಕಸಿವಿಸಿ, ಗೊಂದಲ, ಭಯ ಮನೆಮಾಡಿದೆ. ಅಲ್ಲದೆ ಅವರಲ್ಲಿ ಹಲವಾರು ಪ್ರಶ್ನೆಗಳು ಸಹ ಹುಟ್ಟಿವೆ. ಈಗಾಗಲೇ ಬರೆದಿರುವ ಕನ್ನಡ ಮತ್ತು ಇಂಗ್ಲಿಷ್ ವಿಷಯಗಳ ಪರೀಕ್ಷೆಯನ್ನು ಪುನಃ ಬರೆಯಬೇಕೆ? ಮುಂದಿನ ದಿನಗಳಲ್ಲಿ ಪುನಃ ಆರಂಭವಾಗುವ ಪರೀಕ್ಷೆಯಲ್ಲಿ ಆರು ವಿಷಯಗಳಿಗೆ ಸಿದ್ಧತೆ ನಡೆಸಬೇಕೆ ಅಥವಾ ಉಳಿದ ನಾಲ್ಕು ವಿಷಯಗಳಿಗೆ ಮಾತ್ರ ಸಿದ್ಧರಾಗಬೇಕೆ? ಪರೀಕ್ಷೆ ನಡೆಸಿದರೂ ಅದು ಬೋರ್ಡ್ ಮಟ್ಟದ್ದೇ ಅಥವಾ ಶಾಲಾ ಮಟ್ಟದ್ದಾಗಿರುತ್ತದೆಯೇ ಎಂಬ ಗೊಂದಲದಲ್ಲಿ ವಿದ್ಯಾರ್ಥಿಗಳು ಇದ್ದಾರೆ. ಇನ್ನೇನು ಪರೀಕ್ಷೆ ಆರಂಭವಾಗಬೇಕು ಎನ್ನುವ ಸಂದರ್ಭದಲ್ಲಿ ಗೊಂದಲಗಳು ಏಳದಂತೆ ಸರ್ಕಾರ ಮುನ್ನೆಚ್ಚರಿಕೆ ವಹಿಸಬೇಕು. ಪರೀಕ್ಷೆಗಳು ಸುಸೂತ್ರವಾಗಿ ನಡೆಯಲು ಶಾಲಾ ಆಡಳಿತ ಮಂಡಳಿಗಳು ಸಹಕರಿಸಬೇಕು. ತಕರಾರು ಇದ್ದರೆ ಮಾತುಕತೆ ಮೂಲಕ ಬಗೆಹರಿಸಿಕೊಳ್ಳಬೇಕು.

ರಾಗಿಣಿ ಎಚ್., ಬೆಂಗಳೂರು

ಸುದ್ದಿಗಳ ಸಂದೇಶದಿಂದ ಕಲಿಯಬೇಕಿದೆ ಪಾಠ

ಒಂದೇ ದಿನ ಪತ್ರಿಕೆಯಲ್ಲಿ ಪ್ರಕಟವಾದ ಎರಡು ಸುದ್ದಿಗಳು (ಪ್ರ.ವಾ., ಮಾರ್ಚ್ 18) ತದ್ವಿರುದ್ಧವಾದ ಸಂದೇಶ ರವಾನಿಸುವಂತೆ ಇವೆ. 'ನುಡಿ ಬೆಳಗು' ಅಂಕಣದಲ್ಲಿ ಮೂಡಿಬಂದ 'ಮೌಲ್ಯವೆಂಬ ಅಮೃತಧಾರೆ' ಬರಹವು ಎಲ್ಲರ ಮನಮುಟ್ಟುವ ಸತ್ಯಕತೆಯನ್ನು ಹೊಂದಿತ್ತು. ಸ್ಪೇನ್ ದೇಶದ ಇವಾನ್ ಫರ್ನಾಂಡಿಸ್ ಅನಾಯ ಎಂಬ ಕ್ರೀಡಾಪಟು, ಕೀನ್ಯಾ ದೇಶದ ಪ್ರತಿಸ್ಪರ್ಧಿ ಗೊಂದಲಕ್ಕೆ ಒಳಗಾದ ಕಾರಣದಿಂದ ಸುಲಭವಾಗಿ ತಮಗೆ ಒದಗಿಬರುತ್ತಿದ್ದ ಗೆಲುವಿನ ಅವಕಾಶವನ್ನು ಬದಿಗಿಟ್ಟು, ನ್ಯಾಯಯುತವಾಗಿ ಗೆಲ್ಲಬೇಕಿದ್ದ ಪ್ರತಿಸ್ಪರ್ಧಿಯೇ ಜಯಶಾಲಿಯಾಗಲು ಸಹಕರಿಸಿ ಕ್ರೀಡಾ ಮನೋಭಾವ ಮೆರೆದದ್ದು ಅತ್ಯಂತ ಸ್ಫೂರ್ತಿದಾಯಕ.

ಗುಜರಾತ್ ವಿಶ್ವವಿದ್ಯಾಲಯದ ಹಾಸ್ಟೆಲ್‌ನಲ್ಲಿ ನಮಾಜ್ ಮಾಡಿದ್ದಕ್ಕೆ ವಿದೇಶಿ ವಿದ್ಯಾರ್ಥಿಗಳ ಮೇಲೆ ಗುಂಪೊಂದು ಹಲ್ಲೆ ನಡೆಸಿದ ಇನ್ನೊಂದು ಸುದ್ದಿ, ನಮ್ಮ ಶಾಲಾ ಕಾಲೇಜುಗಳು ಪಟ್ಟಭದ್ರ ಹಿತಾಸಕ್ತಿಗಳ ಕೈಗೊಂಬೆ ಆಗುತ್ತಿರುವುದರ ಸಂಕೇತದಂತೆ ತೋರಿತು. ಕಾಲೇಜುಗಳಲ್ಲಿ ಸಹಪಾಠಿಗಳು ಗಣೇಶ ಹಬ್ಬದ ಕಡುಬು ಮತ್ತು ಬಕ್ರೀದ್ ಹಬ್ಬದ ಬಿರಿಯಾನಿಯನ್ನು ಒಟ್ಟಿಗೇ ಸವಿಯುತ್ತಿದ್ದ ಕಾಲ ದಾಟಿ, ವಿದ್ಯಾಲಯಗಳು 'ದ್ವೇಷ ಉತ್ಪಾದಿಸುವ' ಕಾರ್ಖಾನೆಗಳಾಗಿ ಮಾರ್ಪಡುತ್ತಿರುವುದಕ್ಕೆ ನಾವೆಲ್ಲರೂ ಒಂದಲ್ಲ ಒಂದು ರೀತಿ ಕಾಣಿಕೆ ನೀಡುತ್ತಿದ್ದೇವೆ. ಮುಂದಿನ ಪೀಳಿಗೆಯ ಹಿತದೃಷ್ಟಿಯಿಂದ ಈ ಬಗ್ಗೆ ಎಲ್ಲರೂ ಆತ್ಮವಿಮರ್ಶೆ ಮಾಡಿಕೊಳ್ಳಬೇಕಾಗಿದೆ.

ರವಿಚಂದ್ರ ಎಂ., ಬೆಂಗಳೂರು

ಎಲ್ಲಿ ಹೋಯಿತು ಪಕ್ಷನಿಷ್ಠೆ?

ಲೋಕಸಭಾ ಚುನಾವಣೆಗೆ ರಾಷ್ಟ್ರೀಯ ಪಕ್ಷಗಳ ಟಿಕೆಟ್ ಸಿಗದ ಆಕಾಂಕ್ಷಿಗಳು, ತಮಗೆ ಟಿಕೆಟ್ ಸಿಗುವುದಿಲ್ಲ ಎಂಬುದು ಖಾತರಿಯಾಗುತ್ತಿದ್ದಂತೆಯೇ ನಡೆದುಕೊಳ್ಳುತ್ತಿರುವ ರೀತಿ ಸೋಜಿಗ ಹುಟ್ಟಿಸುವಂತಿದೆ. 'ಸೂರ್ಯ, ಚಂದ್ರ ಇರುವವರೆಗೂ ನಾವು ಪಕ್ಷನಿಷ್ಠರು, ಸಿದ್ಧಾಂತಗಳಿಗೆ ಬದ್ಧರು' ಎನ್ನುತ್ತಿದ್ದವರು, ತಮಗೆ, ತಮ್ಮ ಮಕ್ಕಳಿಗೆ ಪಕ್ಷ ಟಿಕೆಟ್ ನೀಡದಿದ್ದಾಗ ಪಕ್ಷ ಮತ್ತು ನಾಯಕರ ವಿರುದ್ಧ ತಿರುಗಿ ಬೀಳುತ್ತಿರುವುದು ನಿಷ್ಠಾವಂತ ಕಾರ್ಯಕರ್ತರಿಗೆ ತೀವ್ರ ಮುಜುಗರ ಉಂಟು ಮಾಡುತ್ತಿದೆ. ಇವರೇನಾ ಹಿಂದೆ ಹಾಗೆಲ್ಲ ಮಾತನಾಡಿದ್ದವರು ಎಂದು ಯೋಚಿಸುವಂತೆ ಮಾಡಿದೆ.

ಎಚ್.ಎನ್.ಕಿರಣ್ ಕುಮಾರ್ ಹಳೇಹಳ್ಳಿ, ಗೌರಿಬಿದನೂರು

ಹೊಣೆಗೇಡಿತನದ ನಡೆ ಖಂಡನೀಯ

ನವೋದಯ ಸಾಹಿತ್ಯದ ತ್ರಿರತ್ನಗಳಲ್ಲಿ ಒಬ್ಬರಾದ ಪು.ತಿ.ನರಸಿಂಹಾಚಾರ್ ಅವರ ಸಮಾಧಿಯನ್ನು ಅವರ ಜನ್ಮದಿನದಂದೇ ಕೆಡವಿ ಕಸದ ತೊಟ್ಟಿ ಮಾಡಿರುವ ಗ್ರಾಮ ಪಂಚಾಯಿತಿಯ ಬೇಜವಾಬ್ದಾರಿತನ ಖಂಡನೀಯ. ಮೇಲುಕೋಟೆಯಲ್ಲಿರುವ ಈ ಸಮಾಧಿಯನ್ನು ವೈರಮುಡಿ ಬ್ರಹ್ಮೋತ್ಸವದ ನೆಪದಲ್ಲಿ ಜೆಸಿಬಿ ಯಂತ್ರದ ಮೂಲಕ ಒಡೆದು ಕಸವನ್ನು ತುಂಬಿರುವುದು ಸ್ಥಳೀಯ ಆಡಳಿತದ ಅತೀವ ನಿರ್ಲಕ್ಷ್ಯಕ್ಕೆ ಸಾಕ್ಷಿಯಾಗಿದೆ. ಸಮಾಧಿಯನ್ನು ಕಟ್ಟಿ 26 ವರ್ಷಗಳು ಕಳೆದಿದ್ದರೂ ಅದನ್ನು ಸ್ಮಾರಕವನ್ನಾಗಿ ರೂಪಿಸದೆ ನಿರ್ಲಕ್ಷ್ಯ ತೋರಿದ ಅಧಿಕಾರಿಗಳ ವಿರುದ್ಧ ಸರ್ಕಾರ ಕಠಿಣ ಕ್ರಮ ಕೈಗೊಳ್ಳಬೇಕು.

ಪುತಿನ ಅವರು ಕನ್ನಡ ಸಾಹಿತ್ಯಕ್ಕೆ ತಮ್ಮದೇ ಆದ ರೀತಿಯಲ್ಲಿ ಕೊಡುಗೆ ನೀಡಿದ್ದಾರೆ. ಅಂತಹ ಸಾಹಿತಿಗೆ ಈ ರೀತಿ ಅವಮಾನ ಮಾಡುವುದು ಸರಿಯಲ್ಲ. ಹೀಗೆ ಮಾಡಿದರೆ, ಕನ್ನಡ ಸಾಹಿತ್ಯದ ಅಭಿಮಾನಿಗಳಿಗೆ ಅವಮಾನ ಮಾಡಿದಂತೆ. ಇಂತಹ ನಿರ್ಲಕ್ಷ್ಯ ಧೋರಣೆಯ ಬಗ್ಗೆ ಸರ್ಕಾರ ಎಚ್ಚರ ವಹಿಸಬೇಕಾಗಿದೆ.

ಭೀಮಾಶಂಕರ ದಾದೆಲಿ ಹಳಿಸಗರ, ಶಹಾಪುರ

ಯುಎಪಿಎ ದುರ್ಬಳಕೆಗೆ ಶಿಕ್ಷೆಯಾಗಲಿ

ಸರ್ಕಾರದ ಧೋರಣೆಗಳನ್ನು ಪ್ರಶ್ನಿಸುವವರನ್ನು, ನೇರನುಡಿಯ ಮಾಧ್ಯಮದವರನ್ನು, ಸಾಮಾಜಿಕ ಹೋರಾಟಗಾರರನ್ನು ಇತ್ತೀಚಿನ ವರ್ಷಗಳಲ್ಲಿ ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯ್ದೆ (ಯುಎಪಿಎ) ಅಡಿಯಲ್ಲಿ ಬಂಧಿಸಿ ಕಿರುಕುಳ ನೀಡುತ್ತಿರುವುದು, ದೀರ್ಘಾವಧಿಯ ವಿಚಾರಣೆ ನಡೆದು ಕೊನೆಗೆ ಬಂಧಿತರು ನಿರ್ದೋಷಿಗಳೆಂದು ಸಾಬೀತಾಗುತ್ತಿರುವುದನ್ನು ನೋಡುತ್ತಿದ್ದೇವೆ. ಇದಕ್ಕೆ ಇತ್ತೀಚಿನ ನಿದರ್ಶನ, ದೆಹಲಿ ವಿಶ್ವವಿದ್ಯಾ-ಲಯದಲ್ಲಿ ಪ್ರೊಫೆಸರ್ ಆಗಿದ್ದ ಜಿ.ಎನ್.ಸಾಯಿಬಾಬಾ. ಇಂತಹ ಪ್ರಕರಣಗಳಲ್ಲಿ ಬಂಧಿತರು ಹಾಗೂ ಅವರ ಕುಟುಂಬ ಅನುಭವಿಸುವ ಮಾನಸಿಕ, ಆರ್ಥಿಕ, ಸಾಮಾಜಿಕ ಯಾತನೆ ವರ್ಣಿಸಲು ಅಸಾಧ್ಯ. ಸರ್ಕಾರಗಳು, ಸರ್ಕಾರದ ಅಧೀನ ಸಂಸ್ಥೆಗಳು ಹಾಗೂ ಅಧಿಕಾರಿಶಾಹಿಯ ಈ ನಡೆ ಅತ್ಯಂತ ಖಂಡನೀಯ.

ಆಡಳಿತ ನಡೆಸುವ ಪಕ್ಷದ ಸಿದ್ಧಾಂತಕ್ಕೆ ವಿರುದ್ಧ ನಿಲುವು ತಳೆದವರನ್ನು, ಸರ್ಕಾರದ ಧೋರಣೆಗಳನ್ನು ಟೀಕಿಸುವವರನ್ನು ಗುರಿಯಾಗಿಸಿಕೊಂಡು ನಡೆಸುವ ಈ ಬಗೆಯ ಬಂಧನಗಳ ವಿರುದ್ಧ ಸಮಾಜ ಧ್ವನಿ ಎತ್ತಬೇಕು.

ಶ್ರೀಕಾಂತ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಬಸ್ ಮಾರಾಟ ಒಪ್ಪಂದದ ಆಸುಪಾಸಿನಲ್ಲಿ ಬಾಂಡ್ ಖರೀದಿ

● ಸುಕೃತ ಎಸ್.

ಒಂದು ಕಡೆ ಕೇಂದ್ರ ಸರ್ಕಾರವು ವಿದ್ಯುತ್ ಚಾಲಿತ ವಾಹನಗಳ ಬಳಕೆಗೆ ಉತ್ತೇಜನ ನೀಡುತ್ತಿದೆ ಮತ್ತು ಇದಕ್ಕಾಗಿ ‘ಫೇಮ್’ ಯೋಜನೆ ಸೇರಿದಂತೆ ಹಲವು ಯೋಜನೆಗಳನ್ನು ಜಾರಿಗೆ ತಂದಿದೆ. ಇನ್ನೊಂದೆಡೆ, ರಾಜಕೀಯ ಪಕ್ಷಗಳಿಗೆ ದೇಣಿಗೆ ನೀಡಿರುವವರ ಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿರುವ ಮೇಘ ಎಂಜಿನಿಯರಿಂಗ್ ಆ್ಯಂಡ್ ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್‌ನ (ಎಂಇಐಎಲ್) ಅಧೀನ ಕಂಪನಿಯಾದ ಒಲೆಕ್ಟ್ರಾ ಗ್ರೀನ್‌ಟೆಕ್ ಲಿಮಿಟೆಡ್‌ನ ವಹಿವಾಟುಗಳು ಗಗನಮುಖಿಯಾಗಿವೆ. ಅದಾಗಲೇ ಅಶೋಕ್ ಲೇಲ್ಯಾಂಡ್ ಹಾಗೂ ಟಾಟಾ ಮೋಟರ್ಸ್ ಕಂಪನಿಗಳು ಇ-ವಾಹನಗಳ ತಯಾರಿಕೆಯಲ್ಲಿ ಮುಂಚೂಣಿಯಲ್ಲಿದ್ದವು. ಆದರೆ, ಒಲೆಕ್ಟ್ರಾ ಈ ಎಲ್ಲ ಕಂಪನಿಗಳನ್ನು ಹಿಂದಿಕ್ಕಿದೆ.

2015ರಲ್ಲಿಯೇ ಈ ಕಂಪನಿಯು ಇ-ಬಸ್‌ಗಳನ್ನು ತಯಾರಿಸಲು ಆರಂಭಿಸಿತ್ತಾದರೂ ಬಸ್‌ಗಳಿಗಾಗಿ ಬೇಡಿಕೆ ಬಂದಿರಲಿಲ್ಲ. ಆ ವೇಳೆ ಈ ಕಂಪನಿಯ ಆಡಳಿತ ಮಂಡಳಿಯು ಬೇರೆಯದಿತ್ತು. ಆದರೆ, 2018ರಲ್ಲಿ ಎಂಇಐಎಲ್ ಕಂಪನಿಯು ಒಲೆಕ್ಟ್ರಾ ಗ್ರೀನ್‌ಟೆಕ್ ಲಿಮಿಟೆಡ್ ಕಂಪನಿಯ ಶೇ 50.1ರಷ್ಟು ಷೇರುಗಳನ್ನು ಖರೀದಿಸುವ ಮೂಲಕ ಕಂಪನಿಯನ್ನು ತನ್ನ ತೆಕ್ಕೆಗೆ ತೆಗೆದುಕೊಂಡಿತು. ಅಲ್ಲಿಂದ ಈಚೆಗೆ ಒಲೆಕ್ಟ್ರಾ ಕಂಪನಿಯು ಹಿಂದೆ ತಿರುಗಿ ನೋಡಿದ್ದೇ ಇಲ್ಲ. ವರ್ಷದಿಂದ ವರ್ಷಕ್ಕೆ ಬೇಡಿಕೆಗಳು ಹಲವು ಪಟ್ಟು ಏರಿಕೆಯಾಗಿವೆ. ವಿದ್ಯುತ್ ಚಾಲಿತ ಬಸ್‌ಗಳ ತಯಾರಿಕೆಯಲ್ಲಿ ಭಾರತದಲ್ಲಿಯೇ ಮೊದಲಿಗ ಎಂದು ಒಲೆಕ್ಟ್ರಾ ಹೇಳಿಕೊಳ್ಳುತ್ತಿದೆ.

ಬಿಜೆಪಿ ಆಡಳಿತದ ರಾಜ್ಯ ಸರ್ಕಾರಗಳಿಂದ ಬೇಡಿಕೆ

ಮೊದಲೇ ಹೇಳಿದ ಹಾಗೆ, ಇ-ವಾಹನಗಳ ಬಳಕೆಗೆ ಕೇಂದ್ರ ಸರ್ಕಾರವು ಹೆಚ್ಚೆಚ್ಚು ಉತ್ತೇಜನ ನೀಡಿದೆ. ಇದಕ್ಕಾಗಿ ಹಲವು ಯೋಜನೆಗಳನ್ನೂ ಜಾರಿ ಮಾಡಿದೆ. ಇದರಲ್ಲಿ ‘ಫೇಮ್’ (ವಿದ್ಯುತ್ ಚಾಲಿತ-ಹೈಬ್ರಿಡ್ ವಾಹನಗಳ ತ್ವರಿತ ತಯಾರಿಕೆ ಮತ್ತು ಬಳಕೆ ಉತ್ತೇಜನ) ಪ್ರಮುಖವಾದುದು. ಈ ಯೋಜನೆಯ ಎರಡನೇ ಹಂತ ‘ಫೇಮ್ ಯೋಜನೆ 2’ ಈಗ ಜಾರಿಯಲ್ಲಿದೆ.

ಬಿಜೆಪಿ ನೇತೃತ್ವದ ಹಲವು ರಾಜ್ಯ ಸರ್ಕಾರಗಳು ‘ಫೇಮ್ ಯೋಜನೆ 2’ ಯೋಜನೆಯ ಅಡಿಯಲ್ಲಿ ಇ-ಬಸ್‌ಗಳನ್ನು ಒಲೆಕ್ಟ್ರಾದಿಂದ ಖರೀದಿಸಿವೆ. ಐದು ವರ್ಷ ಅವಧಿಯ ಈ ಯೋಜನೆಯು ಇದೇ ಮಾರ್ಚ್‌ನಲ್ಲಿ ಕೊನೆಗೊಳ್ಳಲಿದೆ. ಆದರೆ, ಕೇಂದ್ರ ಸರ್ಕಾರವು ಈ ಯೋಜನೆಯನ್ನು ಏಪ್ರಿಲ್‌ನಿಂದ ಮೂರು ತಿಂಗಳ ಅವಧಿಗೆ ವಿಸ್ತರಿಸಿದೆ. ಕೆಲವು ರಾಜ್ಯ ಸರ್ಕಾರಗಳು ‘ಮೇಕ್ ಇನ್ ಇಂಡಿಯಾ’ ಯೋಜನೆಯನ್ನು ಉತ್ತೇಜಿಸಲೂ ಈ ಕಂಪನಿಯ ಬಸ್‌ಗಳನ್ನು ಖರೀದಿಸುತ್ತಿದ್ದೇವೆ ಎಂದು ಹೇಳಿಕೊಂಡಿವೆ.

ಕರ್ನಾಟಕ, ಮಹಾರಾಷ್ಟ್ರ, ಅಸ್ಸಾಂ, ಗುಜರಾತ್, ಉತ್ತರಾಖಂಡ (2018ರಲ್ಲಿ ಒಲೆಕ್ಟ್ರಾದೊಂದಿಗೆ ಉತ್ತರಾಖಂಡ ಸರ್ಕಾರವು ₹700 ಕೋಟಿ ಮೊತ್ತದಲ್ಲಿ 500 ಬಸ್‌ಗಳಿಗೆ ಬೇಡಿಕೆ ಇರಿಸಿತ್ತು) – ಹೀಗೆ ಸಾಲು ಸಾಲು ರಾಜ್ಯ ಸರ್ಕಾರಗಳು ವಿದ್ಯುತ್ ಚಾಲಿತ ಬಸ್‌ಗಳನ್ನು ಪೂರೈಸುವಂತೆ ಒಲೆಕ್ಟ್ರಾದೊಂದಿಗೆ ಒಪ್ಪಂದ ಮಾಡಿಕೊಂಡಿವೆ. ತೆಲಂಗಾಣ ಸರ್ಕಾರವು ಇದೇ ಕಂಪನಿಗೆ ಬೇಡಿಕೆ ಇಟ್ಟಿದೆ. ಈ ಸಮಯದಲ್ಲಿ ರಾಜ್ಯದಲ್ಲಿ ಬಿಆರ್‌ಎಸ್ ಸರ್ಕಾರ ಇತ್ತು. ಆಂಧ್ರ ಪ್ರದೇಶ ಸರ್ಕಾರವು ಬೇಡಿಕೆ ಇಟ್ಟಿದ್ದು, ಇಲ್ಲಿ ವೈಎಸ್‌ಆರ್ ಕಾಂಗ್ರೆಸ್ ಪಕ್ಷವು ಅಧಿಕಾರದಲ್ಲಿದೆ.

ದೊಡ್ಡ ನೆಗೆತ: ಕಂಪನಿಯ ಬೇಡಿಕೆಗಳ ಸಂಖ್ಯೆಯಲ್ಲಿ ದೊಡ್ಡ ನೆಗೆತ ಕಂಡುಬಂದಿದ್ದು 2023ರಲ್ಲಿ. ಮಹಾರಾಷ್ಟ್ರ ರಾಜ್ಯ ರಸ್ತೆ ಸಾರಿಗೆ ಇಲಾಖೆಯು ₹10,000 ಕೋಟಿಗೂ ಅಧಿಕ ಮೊತ್ತದ ಬೇಡಿಕೆಯೊಂದನ್ನು ಸಲ್ಲಿಸಿತು. 5,150 ವಿದ್ಯುತ್ ಚಾಲಿತ ಬಸ್‌ಗಳನ್ನು ತಯಾರಿಸಿಕೊಡುವಂತೆ ಕಂಪನಿಯನ್ನು ಕೇಳಿಕೊಂಡಿತು. ಇದು ದೊಡ್ಡ ಮಟ್ಟದಲ್ಲಿ ಸುದ್ದಿಯಾಗಿತ್ತು. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ಕೂಡ ಒಲೆಕ್ಟ್ರಾದೊಂದಿಗೆ ಒಪ್ಪಂದ ಮಾಡಿಕೊಂಡಿತ್ತು. 50 ವಿದ್ಯುತ್ ಚಾಲಿತ ಬಸ್‌ಗಳನ್ನು 2023ರ ಮಾರ್ಚ್ ಒಳಗೆ ಪೂರೈಸುವಂತೆ ಕರ್ನಾಟಕ ಸರ್ಕಾರವು ಕೇಳಿಕೊಂಡಿತ್ತು.

ವಿಸ್ತರಿಸಿದ ಕಂಪನಿ: ವಿದ್ಯುತ್ ಚಾಲಿತ ಬಸ್‌ಗಳನ್ನು ಮಾತ್ರ ತಯಾರಿಸುತ್ತಿದ್ದ ಕಂಪನಿಯು ವಿದ್ಯುತ್ ಚಾಲಿತ ಟಿಪ್ಪರ್‌ಗಳನ್ನೂ ತಯಾರಿಸಲು ಆರಂಭಿಸಿದೆ. ವಿದ್ಯುತ್ ಚಾಲಿತ ಟ್ರಕ್‌ಗಳನ್ನು ತಯಾರಿಸಲು ಚಿಂತನೆ ನಡೆಸಿದೆ. ತನ್ನ ತಯಾರಿಕಾ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು ಕಂಪನಿ ನಿರ್ಧರಿಸಿದೆ. ಇದಕ್ಕಾಗಿ ತೆಲಂಗಾಣದಲ್ಲಿ 150 ಎಕರೆ ಪ್ರದೇಶದಲ್ಲಿ ತಯಾರಿಕಾ ಘಟಕವನ್ನು ಸ್ಥಾಪಿಸಲು ಮುಂದಾಗಿದೆ. ಈ ಮೂಲಕ ವಾರ್ಷಿಕವಾಗಿ 10,000 ವಿದ್ಯುತ್ ಚಾಲಿತ ಬಸ್ ಹಾಗೂ ಟ್ರಕ್‌ಗಳನ್ನು ತಯಾರಿಸುವುದು ಈ ಘಟಕ ಸ್ಥಾಪನೆಯ ಉದ್ದೇಶವಾಗಿದೆ.

ಚುನಾವಣಾ ಬಾಂಡ್

ರಾಜ್ಯಗಳೊಂದಿಗೆ ಒಪ್ಪಂದ ಮತ್ತು ಬಾಂಡ್ ಖರೀದಿ



● ಉತ್ತರಾಖಂಡ ಸರ್ಕಾರವು 2018ರ ಅಕ್ಟೋಬರ್‌ನಲ್ಲಿ **500** ಬಸ್‌ಗಳನ್ನು ಒದಗಿಸುವಂತೆ ಬೇಡಿಕೆ ಇಟ್ಟಿತ್ತು. 2018ರ ಬಾಂಡ್ ವಿವರಗಳು ಸಾರ್ವಜನಿಕವಾಗದ ಕಾರಣ, ಕಂಪನಿಯ ಬಾಂಡ್ ಖರೀದಿ ಕುರಿತು ಮಾಹಿತಿ ಲಭ್ಯವಿಲ್ಲ

ಇ-ಬಸ್ ಖರೀದಿ ಸಂಬಂಧ ಒಲೆಕ್ಟ್ರಾ ಕಂಪನಿಯು ವಿವಿಧ ರಾಜ್ಯ ಸರ್ಕಾರಗಳ ಜತೆಗೆ ಒಪ್ಪಂದ ಮಾಡಿಕೊಂಡ ಅವಧಿಗೂ ಒಂದೆರಡು ತಿಂಗಳು ಮುನ್ನವೇ ಹತ್ತಾರು ಕೋಟಿ ಮೊತ್ತದ ಚುನಾವಣಾ ಬಾಂಡ್‌ಗಳನ್ನು ಖರೀದಿಸಿದೆ. ಕೆಲವು ಸಂದರ್ಭಗಳಲ್ಲಿ ಒಪ್ಪಂದ ಆದ ತಿಂಗಳಿನಲ್ಲೇ ಬಾಂಡ್ ಖರೀದಿಸಿದೆ

1. ಗುಜರಾತ್

2022ರ ಜನವರಿಯಲ್ಲಿ ರಾಜ್ಯ ಸರ್ಕಾರವು **50** ಬಸ್‌ಗಳನ್ನು ಎಂಇಐಎಲ್‌ನಿಂದ ಖರೀದಿಸಿತು. ಅದಕ್ಕೂ ಮುನ್ನ 150 ಬಸ್‌ಗಳನ್ನು ಖರೀದಿಸಿತ್ತು

₹25 ಕೋಟಿ 2021ರ ಅಕ್ಟೋಬರ್‌ನಲ್ಲೇ ಎಂಇಐಎಲ್ ಖರೀದಿಸಿದ್ದ ಚುನಾವಣಾ ಬಾಂಡ್‌ಗಳ ಮೊತ್ತ

2. ಮಹಾರಾಷ್ಟ್ರ

2022ರ ಮೇನಲ್ಲಿ ಮುಂಬೈ ಮಹಾನಗರ ಸಾರಿಗೆ ಸಂಸ್ಥೆ ₹3,675 ಕೋಟಿ ವೆಚ್ಚದಲ್ಲಿ **2,100** ಬಸ್‌ಗಳನ್ನು ಖರೀದಿಸಲು ಎಂಇಐಎಲ್ ಜತೆಗೆ ಒಪ್ಪಂದ ಮಾಡಿಕೊಂಡಿತು

₹70 ಕೋಟಿ 2022ರ ಜನವರಿಯಲ್ಲೇ ಎಂಇಐಎಲ್ ಖರೀದಿಸಿದ್ದ ಚುನಾವಣಾ ಬಾಂಡ್‌ಗಳ ಮೊತ್ತ

2024ರ ಫೆಬ್ರುವರಿಯಲ್ಲಿ ಮುಂಬೈ ಮಹಾನಗರ ಸಾರಿಗೆ ಸಂಸ್ಥೆ ₹4,000 ಕೋಟಿ ವೆಚ್ಚದಲ್ಲಿ **2,400** ಬಸ್‌ಗಳನ್ನು ಖರೀದಿಸಲು ಎಂಇಐಎಲ್ ಜತೆಗೆ ಒಪ್ಪಂದ ಮಾಡಿಕೊಂಡಿತು

₹160 ಕೋಟಿ 2023ರ ಅಕ್ಟೋಬರ್‌ನಲ್ಲೇ ಎಂಇಐಎಲ್ ಖರೀದಿಸಿದ್ದ ಚುನಾವಣಾ ಬಾಂಡ್‌ಗಳ ಮೊತ್ತ

2023ರ ಜುಲೈನಲ್ಲಿ ಮಹಾರಾಷ್ಟ್ರ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ₹10,000 ಕೋಟಿ ವೆಚ್ಚದಲ್ಲಿ **5,150** ಬಸ್‌ಗಳನ್ನು ಖರೀದಿಸಲು ಎಂಇಐಎಲ್ ಜತೆಗೆ ಒಪ್ಪಂದ ಮಾಡಿಕೊಂಡಿತು

₹216 ಕೋಟಿ 2023ರ ಏಪ್ರಿಲ್–ಜುಲೈನಲ್ಲಿ ಎಂಇಐಎಲ್ ಖರೀದಿಸಿದ್ದ ಚುನಾವಣಾ ಬಾಂಡ್‌ಗಳ ಮೊತ್ತ

3. ಗೋವಾ

2021ರ ಡಿಸೆಂಬರ್‌ನಲ್ಲಿ ರಾಜ್ಯ ಸರ್ಕಾರವು ₹140 ಕೋಟಿ ವೆಚ್ಚದಲ್ಲಿ **100** ಬಸ್‌ಗಳನ್ನು ಖರೀದಿಸಲು ಎಂಇಐಎಲ್ ಜತೆಗೆ ಒಪ್ಪಂದ ಮಾಡಿಕೊಂಡಿತು

₹25 ಕೋಟಿ 2021ರ ಅಕ್ಟೋಬರ್‌ನಲ್ಲೇ ಎಂಇಐಎಲ್ ಖರೀದಿಸಿದ್ದ ಚುನಾವಣಾ ಬಾಂಡ್‌ಗಳ ಮೊತ್ತ

● ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಕ್ಕಾಗಿ 2022ರ ಜುಲೈ ಹೊತ್ತಿಗೆ **50** ಬಸ್‌ಗಳನ್ನು ಪೂರೈಸುವಂತೆ ರಾಜ್ಯ ಸರ್ಕಾರವು ಒಲೆಕ್ಟ್ರಾದೊಂದಿಗೆ ಒಪ್ಪಂದ ಮಾಡಿಕೊಂಡಿತ್ತು. ಈ ವೇಳೆ ಏಪ್ರಿಲ್–ಜುಲೈ ಹೊತ್ತಿನಲ್ಲಿ ಮೇಘ ಕಂಪನಿಯು ₹75 ಕೋಟಿ ಮೊತ್ತದ ಬಾಂಡ್ ಖರೀದಿಸಿತ್ತು

4. ತೆಲಂಗಾಣ

2022ರ ಜುಲೈನಲ್ಲಿ ರಾಜ್ಯ ಸರ್ಕಾರವು ₹500 ಕೋಟಿ ಮೌಲ್ಯದಲ್ಲಿ **300** ಬಸ್‌ಗಳನ್ನು ಖರೀದಿಸಲು ಎಂಇಐಎಲ್ ಜತೆಗೆ ಒಪ್ಪಂದ ಮಾಡಿಕೊಂಡಿತು

₹50 ಕೋಟಿ 2022ರ ಜುಲೈನಲ್ಲಿ ಎಂಇಐಎಲ್ ಖರೀದಿಸಿದ ಚುನಾವಣಾ ಬಾಂಡ್‌ಗಳ ಮೊತ್ತ

2023ರ ಮಾರ್ಚ್‌ನಲ್ಲಿ ರಾಜ್ಯ ಸರ್ಕಾರವು ₹1,000 ಕೋಟಿ ಮೌಲ್ಯದಲ್ಲಿ **550** ಬಸ್‌ಗಳನ್ನು ಖರೀದಿಸಲು ಎಂಇಐಎಲ್ ಜತೆಗೆ ಒಪ್ಪಂದ ಮಾಡಿಕೊಂಡಿತು

₹40 ಕೋಟಿ 2023ರ ಜನವರಿಯಲ್ಲೇ ಎಂಇಐಎಲ್ ಖರೀದಿಸಿದ ಚುನಾವಣಾ ಬಾಂಡ್‌ಗಳ ಮೊತ್ತ

5. ಆಂಧ್ರ ಪ್ರದೇಶ

2021ರ ನವೆಂಬರ್‌ನಲ್ಲಿ ರಾಜ್ಯ ಸರ್ಕಾರವು ₹140 ಕೋಟಿ ವೆಚ್ಚದಲ್ಲಿ **100** ಬಸ್‌ಗಳನ್ನು ಖರೀದಿಸಲು ಎಂಇಐಎಲ್ ಜತೆಗೆ ಒಪ್ಪಂದ ಮಾಡಿಕೊಂಡಿತು

₹25 ಕೋಟಿ 2021ರ ಅಕ್ಟೋಬರ್‌ನಲ್ಲೇ ಎಂಇಐಎಲ್ ಖರೀದಿಸಿದ ಚುನಾವಣಾ ಬಾಂಡ್‌ಗಳ ಮೊತ್ತ

6. ಅಸ್ಸಾಂ

2022ರ ಮೇನಲ್ಲಿ ರಾಜ್ಯ ಸರ್ಕಾರವು ₹151 ಕೋಟಿ ವೆಚ್ಚದಲ್ಲಿ **100** ಬಸ್‌ಗಳನ್ನು ಖರೀದಿಸಲು ಎಂಇಐಎಲ್ ಜತೆಗೆ ಒಪ್ಪಂದ ಮಾಡಿಕೊಂಡಿತು

₹70 ಕೋಟಿ 2022ರ ಜನವರಿಯಲ್ಲೇ ಎಂಇಐಎಲ್ ಖರೀದಿಸಿದ್ದ ಚುನಾವಣಾ ಬಾಂಡ್‌ಗಳ ಮೊತ್ತ

ಕಂಪನಿಯ ಇ-ಬಸ್‌ಗಳಿಗೆ ಸರ್ಕಾರಿ ಬೇಡಿಕೆ ಭಾರಿ ಏರಿಕೆ

‘9,000 ಬಸ್‌ಗಳನ್ನು ಪೂರೈಸಲು ನಮಗೆ ಬೇಡಿಕೆ ಬಂದಿದೆ’ ಎಂದು ಒಲೆಕ್ಟ್ರಾ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಕೆ.ವಿ. ಪ್ರದೀಪ್ ಅವರು ಖಾಸಗಿ ಸುದ್ದಿ ವಾಹಿನಿಯೊಂದಕ್ಕೆ ನೀಡಿದ ಸಂದರ್ಶನದಲ್ಲಿ 2023ರ ಸೆಪ್ಟೆಂಬರ್‌ನಲ್ಲಿ ಹೇಳಿದ್ದರು



ಚೀನಾ ಕಂಪನಿಯೊಂದಿಗೆ ಸಂಬಂಧ

ಚೀನಾದ ‘ಬಿಲ್ಡ್ ಯುವರ್ ಡ್ರೀಮ್’ (ಬಿವೈಡಿ) ಕಂಪನಿಯು ಭಾರತದಲ್ಲಿ ವಿದ್ಯುತ್ ಚಾಲಿತ ಬಸ್‌ಗಳ ತಯಾರಿಕೆಯನ್ನು ಎಂಇಐಎಲ್ ಜತೆಗೂಡಿ ಆರಂಭಿಸಿತ್ತು. ಎಂಇಐಎಲ್‌ನ ಮೂಲಕ ಒಲೆಕ್ಟ್ರಾ ಕಂಪನಿ ಪೂರೈಸಿದ ಇ-ಬಸ್‌ಗಳಲ್ಲಿ ಇದ್ದದ್ದು ಬಿವೈಡಿ ಕಂಪನಿಯ ತಂತ್ರಜ್ಞಾನ ಮತ್ತು ಉಪಕರಣಗಳು.

ಕಳೆದ ವರ್ಷವಷ್ಟೇ ಎಂಇಐಎಲ್ ಮತ್ತು ಬಿವೈಡಿ ಸಹಭಾಗಿತ್ವದಲ್ಲಿ ಹೈದರಾಬಾದ್‌ನಲ್ಲಿ ವಿದ್ಯುತ್‌ಚಾಲಿತ ಕಾರುಗಳ ತಯಾರಿಕೆಗೆ ಘಟಕ ಸ್ಥಾಪಿಸುವ ಪ್ರಸ್ತಾವ ಸಲ್ಲಿಸಿದ್ದವು. ಕೇಂದ್ರ ಸರ್ಕಾರ ಆ ಪ್ರಸ್ತಾವವನ್ನು ತಿರಸ್ಕರಿಸಿತ್ತು.

ಚೀನಾದ ಕಂಪನಿಯ ತಂತ್ರಜ್ಞಾನ ಬಳಸುತ್ತಿರುವ ಬಗ್ಗೆ ಎಂಇಐಎಲ್ ವಿರುದ್ಧವೂ ಆಕ್ಷೇಪ ವ್ಯಕ್ತವಾಗಿತ್ತು. ಆಗ ಎಂಇಐಎಲ್, ನಾವೀಗ ಬಿವೈಡಿ ಕಂಪನಿಯ ತಂತ್ರಜ್ಞಾನ ಮತ್ತು ಉಪಕರಣಗಳನ್ನು ಬಳಸುತ್ತಿಲ್ಲ ಎಂದು ಹೇಳಿತ್ತು.

ಆಧಾರ: ಪಿಟಿಐ, ಒಲೆಕ್ಟ್ರಾ ಕಂಪನಿಯ ವಾರ್ಷಿಕ ಹಾಗೂ ಇತರೆ ವರದಿಗಳು, ಚುನಾವಣಾ ಆಯೋಗಕ್ಕೆ ಎಸ್‌ಬಿಐ ನೀಡಿದ ಚುನಾವಣಾ ಬಾಂಡ್‌ಗಳ ಮಾಹಿತಿ, ಒಲೆಕ್ಟ್ರಾ ಕಂಪನಿಯ ಪತ್ರಿಕಾ ಪ್ರಕಟಣೆಗಳು

‘ಯುವ’ ಚಿತ್ರದಿಂದ ‘ಅಪ್ಪುಗೆ’

‘ಯುವ’ ಚಿತ್ರದ ‘ಅಪ್ಪುಗೆ’ ಹಾಡು ಬಿಡುಗಡೆ ಮಾಡಿದ ವಂದಿತಾ

ಯುವ ರಾಜ್‌ಕುಮಾರ್ ಅಭಿನಯದ ಚೊಚ್ಚಲ ಸಿನಿಮಾ ‘ಯುವ’ ಮಾರ್ಚ್ 29ರಂದು ಬಿಡುಗಡೆಯಾಗುತ್ತಿದ್ದು, ಮಾರ್ಚ್ 23ರಂದು ಹೊಸಪೇಟೆಯಲ್ಲಿ ಚಿತ್ರದ ಪ್ರಿರಿಲೀಸ್ ಕಾರ್ಯಕ್ರಮ ನಡೆಯಲಿದೆ ಎಂದಿದೆ ಚಿತ್ರತಂಡ.

ಇತ್ತೀಚೆಗೆ ಚಿತ್ರದ ಎರಡನೇ ಹಾಡು ‘ಅಪ್ಪುಗೆ’ ಬಿಡುಗಡೆಯಾಗಿದ್ದು, ನಟ ದಿವಂಗತ ಪುನೀತ್ ರಾಜ್‌ಕುಮಾರ್ ಅವರ ದ್ವಿತೀಯ ಪುತ್ರಿ ವಂದಿತಾ ಹಾಡನ್ನು ರಿಲೀಸ್ ಮಾಡಿದ್ದು ವಿಶೇಷವಾಗಿತ್ತು. ‘ಯುವ, ಕೌಟುಂಬಿಕ ಹಾಗೂ ಆ್ಯಕ್ಷನ್ ಕಥಾಹಂದರ ಹೊಂದಿರುವ ಸಿನಿಮಾ. ತಂದೆ-ಮಗನ ಬಾಂಧವ್ಯದ ಚಿತ್ರವೂ ಹೌದು. ಯಾವ ನಿರೀಕ್ಷೆಯೂ ಇಲ್ಲದೆ ಅಪ್ಪ ಕುಟುಂಬವನ್ನು ಸಲಹುತ್ತಾನೆ. ಅಂತಹ ಅಪ್ಪನ ಗುಣಗಳನ್ನು ವರ್ಣಿಸುವ ಹಾಡು ‘ಅಪ್ಪುಗೆ’. ಹಾಡನ್ನು ನಾನೇ ಬರೆದಿದ್ದೇನೆ. ವಿಜಯ್ ಪ್ರಕಾಶ್ ಹಾಡಿದ್ದಾರೆ. ಅಜನೀಶ್ ಲೋಕನಾಥ್ ಸಂಗೀತ ನೀಡಿದ್ದಾರೆ. ಅಪ್ಪನ ಕುರಿತಾದ ಹಾಡಾಗಿರುವುದರಿಂದ ಈ ಹಾಡನ್ನು ವಂದಿತಾ ಅವರಿಂದ ಬಿಡುಗಡೆ ಮಾಡಿಸಲು ನಿರ್ಧರಿಸಿದೆವು. ಮಾರ್ಚ್ 21ರಂದು ಚಿತ್ರದ ಟ್ರೇಲರ್ ಬಿಡುಗಡೆಯಾಗಲಿದೆ’ ಎಂದರು ನಿರ್ದೇಶಕ ಸಂತೋಷ್ ಆನಂದರಾಮ್.

‘ಚಿತ್ರದ ಕಥೆಗೂ ನನ್ನ ಜೀವನದ ಕಥೆಗೂ ಹಲವು ವಿಷಯಗಳು ಹೋಲುತ್ತವೆ’ ಎಂದು ಮಾತು ಆರಂಭಿಸಿದ ಯುವ ರಾಜ್‌ಕುಮಾರ್, ‘ಅಚ್ಯುತ್ ಕುಮಾರ್ ಅವರು ತಂದೆ ಪಾತ್ರ ಮಾಡಿದ್ದಾರೆ. ಅವರೊಂದಿಗೆ ಕೆಲವು ಸನ್ನಿವೇಶಗಳಲ್ಲಿ ನಟಿಸುವಾಗ ನನಗೆ ನಮ್ಮ ಅಪ್ಪ ಕಣ್ಣ ಮುಂದೆ ಬರುತ್ತಿದ್ದರು. ಅಂತಹ ಸಂಬಂಧವನ್ನು ಬಣ್ಣಿಸುವ ಈ ಹಾಡು ಎಲ್ಲರ ಮನಸ್ಸಿಗೂ ಹತ್ತಿರವಾಗುತ್ತದೆ’ ಎಂದರು. ಚಿತ್ರವನ್ನು ಹೊಂಬಾಳೆ ಫಿಲಂಸ್ ಲಾಂಛನದಲ್ಲಿ ವಿಜಯ್ ಕಿರಗಂದೂರು ನಿರ್ಮಿಸಿದ್ದಾರೆ.

ಮುಂಗಾರಿಗೆ ‘ಭುವನಂ ಗಗನಂ’

ಪ್ರಮೋದ್, ರೇಚಲ್ ಹಾಗೂ ಪೃಥ್ವಿ

ಚಂದನವನದ ಯುವ ಪ್ರತಿಭೆಗಳಾದ ‘ರತ್ನನ್ ಪ್ರಪಂಚ’, ‘ಸಲಾರ್’ ಖ್ಯಾತಿಯ ಪ್ರಮೋದ್ ಹಾಗೂ ‘ದಿಯಾ’ ಖ್ಯಾತಿಯ ಪೃಥ್ವಿ ಅಂಬಾರ್ ನಟನೆಯ ‘ಭುವನಂ ಗಗನಂ’ ಸಿನಿಮಾ ಬಿಡುಗಡೆಗೆ ಸಜ್ಜಾಗುತ್ತಿದೆ. ನಿರ್ಮಾಪಕ ಎಂ.ಮುನೇಗೌಡ ಜನ್ಮದಿನದ ಸಂದರ್ಭದಲ್ಲಿ ಚಿತ್ರತಂಡ ಟೀಸರ್ ಬಿಡುಗಡೆ ಮಾಡಿದೆ. ಆ್ಯಕ್ಷನ್ ಪ್ರಿನ್ಸ್ ಧ್ರುವ ಸರ್ಜಾ ಟೀಸರ್ ಅನಾವರಣ ಮಾಡಿ ಶುಭ ಕೋರಿದರು.

‘ಇದು ತುಂಬಾ ಇಷ್ಟಪಟ್ಟು ಒಪ್ಪಿಕೊಂಡ ಸಿನಿಮಾ. ಏಕೆಂದರೆ ನಾನು ಲವ್ ಸ್ಟೋರಿ ಸಿನಿಮಾ ಮಾಡಿರಲಿಲ್ಲ. ಈ ರೀತಿಯ ಸಿನಿಮಾ ಮಾಡಿದರೆ ತುಂಬಾ ಜನರಿಗೆ ತಲುಪುತ್ತದೆ. ಸಿನಿಮಾ ಚಿತ್ರೀಕರಣದ ವೇಗ ಬಹಳ ಕಡಿಮೆಯಿತ್ತು. ಇದೀಗ ಡಬ್ಬಿಂಗ್ ಶುರುವಾಗಿದೆ. ಆ ಸಂದರ್ಭದಲ್ಲಿ ನಿರ್ದೇಶಕರಾದ ಗಿರೀಶ್ ಅವರ ಕೆಲಸದ ಕ್ರಮ ಅರ್ಥವಾಯಿತು. ಅವರಂದುಕೊಂಡಂತೆ ಸಿನಿಮಾ ಮೂಡಿಬಂದಿದೆ’ ಎಂದರು ಪ್ರಮೋದ್.

ಗಿರೀಶ್ ಮೂಲಿಮನಿ ಕಥೆ, ಚಿತ್ರಕಥೆ ಬರೆದು ನಿರ್ದೇಶಿಸಿರುವ ಈ ಸಿನಿಮಾ, ನಗರ, ಹಳ್ಳಿ ಹೀಗೆ ಎರಡು ಬ್ಯಾಕ್‌ಡ್ರಾಪ್‌ನಲ್ಲಿ ನಡೆಯುವ ಕಥೆಯಾಗಿದೆ. ಪ್ರಮೋದ್‌ಗೆ ಜೋಡಿಯಾಗಿ ‘ಲವ್ ಮಾಕ್ಟೇಲ್’ ಖ್ಯಾತಿಯ ರೇಚಲ್ ಡೇವಿಡ್, ಪೃಥ್ವಿಗೆ ಜೋಡಿಯಾಗಿ ಅಶ್ವಥಿ ನಟಿಸಿದ್ದಾರೆ. ಅಚ್ಯುತ್ ಕುಮಾರ್, ಶರತ್ ಲೋಹಿತಾಶ್ವ, ಪ್ರಕಾಶ್ ತುಮ್ಮಿನಾಡು, ‘ಸಿದ್ಲಿಂಗು’ ಶ್ರೀಧರ್, ಹರಿಣಿ, ಸ್ಪರ್ಶ ರೇಖಾ, ಪ್ರಜ್ವಲ್ ಶೆಟ್ಟಿ, ಚೇತನ್ ದುರ್ಗ ತಾರಾಬಳಗದಲ್ಲಿದ್ದಾರೆ. ಜೂನ್‌ನಲ್ಲಿ ಸಿನಿಮಾ ತೆರೆಕಾಣುವ ಸಾಧ್ಯತೆ ಇದೆ.

ಗುಂಡಣ್ಣ



ಹೂವು ಹೇಳಿದ ಪಾಠ

ನುಡಿ ಬೆಳಗು



ಪಿ. ಚಂದ್ರಿಕಾ

ತನಗೆ ತೊಂದರೆ ಕೊಟ್ಟವರನ್ನು ಬಿಡುವುದಿಲ್ಲ ಅದೇನಾದರೂ ಆಗಲಿ ಎನ್ನುವ ನಿರ್ಧಾರಕ್ಕೆ ಮಗ ಬಂದಿದ್ದ. ಇದನ್ನೆಲ್ಲ ಅಪ್ಪ ನೋಡುತ್ತಿದ್ದ. ಮಗನಿಗೆ ತೊಂದರೆ ಆಗಿದ್ದೂ ನಿಜ, ಅದರಿಂದ ಅವನ ಮನಸ್ಸಿಗೆ ನೋವಾಗಿದ್ದು ನಿಜ, ಹಾಗೆಂದು ಅಪ್ಪನ ಜವಾಬ್ದಾರಿ ಹೋಗು ಅವರಿಗೆ ತೊಂದರೆ ಕೊಡು ಎಂದು ಹೇಳುವುದಲ್ಲ ಎನ್ನುವುದೂ ಅವನಿಗೆ ಗೊತ್ತಿತ್ತು. ಹಾಗೆಂದು ಇದನ್ನು ಮಾಡಬೇಡ ಎಂದರೆ ಮಗನಿಗೆ ಇನ್ನಷ್ಟು ಬೇಸರವಾಗುತ್ತದೆ, ಅಪ್ಪ ಕೂಡ ತನ್ನ ಪರವಾಗಿಲ್ಲ ಎಂದು. ಜಗತ್ತಿನಲ್ಲಿ ನಾವು ಹೇಗೆ ಇರಬೇಕು ಎನ್ನುವುದನ್ನು ಮಗನಿಗೆ ತಿಳಿಸುವುದು ಅವನ ಕರ್ತವ್ಯವಾಗಿತ್ತು.

ದಿನ ಕಳೆದಂತೆಲ್ಲ ತನ್ನ ನಿರ್ಧಾರವನ್ನು ಮಗ ಗಟ್ಟಿ ಮಾಡಿಕೊಳ್ಳುತ್ತಿದ್ದ. ಅದನ್ನು ಹೇಗೆ ಸಡಿಲಿಸಿ ಅವನ ಕೈಗಳಿಗೆ ಯಾವ ಕೆಡುಕೂ ತಾಕದ ಹಾಗೆ ನಿಲುವಿನಿಂದ ದೂರ ಕರೆದು ತರಬೇಕೆಂದು ಅಪ್ಪ... ಹೀಗೆ ಇಬ್ಬರೂ ಯೋಚಿಸುತ್ತಲೇ ಇದ್ದರು.

ಒಂದು ದಿನ ಮನೆಗೆ ಪೂಜೆಗಾಗಿ ಬುಟ್ಟಿಗಳಲ್ಲಿ ಹೂವನ್ನು ತರಲಾಗಿತ್ತು. ಬಣ್ಣ ಬಣ್ಣದ ಸುವಾಸನೆಯ ಹೂಗಳು. ಹೂಗಳ ಪರಿಮಳ ಮನೆಯ ತುಂಬೆಲ್ಲ ಹರಡಿ ಅಲೌಕಿಕ ವಾತಾವರಣ ಸೃಷ್ಟಿಯಾಗಿತ್ತು.

ಅಪ್ಪ ಆ ಬುಟ್ಟಿಗಳ ಮುಂದೆ ಕುಳಿತು ಹೂಗಳನ್ನು ಹೊಸಕ ತೊಡಗಿದ. ಮಗ ಅಪ್ಪನ ಕೆಲಸವನು ನೋಡುತ್ತಾ, ‘ಅಪ್ಪ ಇದೇಕೆ ಇಂಥಾ ಕೆಲಸವನ್ನು ಮಾಡುತ್ತಿರುವೆ’ ಎಂದು ಕೇಳಿದ. ಅದಕ್ಕೆ ಅಪ್ಪ ‘ಮಗನೇ, ನನಗೆ ಈ ಹೂಗಳಲ್ಲಿ ಒಂದೊಂದರಲ್ಲಿ ಒಂದೊಂದು ಗುಣ ಇಷ್ಟವಾಗುತ್ತಿಲ್ಲ. ಅದಕ್ಕೆ ಇವುಗಳನ್ನು ಇಲ್ಲವಾಗಿಸುತ್ತಿದ್ದೇನೆ’ ಎನ್ನುತ್ತಾನೆ. ಅಪ್ಪನದ್ದು ಹುಚ್ಚಾಟ ಅನ್ನಿಸಿ ಮಗ ‘ಅಲ್ಲಪ್ಪಾ ಹೂಗಳು ಇರುವ ಹಾಗಿರುತ್ತವೆ ಅವುಗಳಲ್ಲಿ ನಿನಗಿಷ್ಟ ಆಗಿಲ್ಲ ಎಂದು ನಾಶ ಮಾಡಲಿಕ್ಕೆ ಹೊರಟಿದ್ದೀಯಲ್ಲಾ ಇದು ಸರಿಯಾ, ಪಾಪ ಈ ಹೂಗಳು ಏನು ಮಾಡಿವೆ ಇಷ್ಟವಾಗುವುದು ಇಷ್ಟವಾಗದೇ ಇರುವುದು ನಿನ್ನ ಸಮಸ್ಯೆ’ ಎನ್ನುತ್ತಾನೆ.

ಅವನ ಮಾತಿಗೆ ಇನ್ನೂ ಏನನ್ನೋ ಹೇಳುವವನಂತೆ ಅಪ್ಪ ‘ನೋಡಿದ್ಯಾ ಮಗನೇ, ಈ ಹೂಗಳಿವೆಯಲ್ಲ ಇವುಗಳು ನಾನು ಬಣ್ಣ ವಾಸನೆ, ಆಕಾರ ಇಷ್ಟವಿಲ್ಲವೆಂದು ಹೊಸಕುತ್ತಿದ್ದೇನೆ. ಆದರೂ ಅವು ನನಗೆ ಏನನ್ನೂ ಮಾಡುತ್ತಿಲ್ಲ ಬದಲಿಗೆ ಹಿಸುಕಿದ ಕೈಗೆ ಕೂಡಾ ಸುವಾಸನೆಯನ್ನು ನೀಡುತ್ತಿವೆ’ ಎನ್ನುತ್ತಾನೆ. ಆಗ ಮಗ ‘ಹೌದು ತಾನೆ ಅವುಗಳ ಈ ಗುಣಕ್ಕಾದರೂ ಬಿಡು ಇನ್ನು ಹೊಸಕಬೇಡ’ ಎನ್ನುತ್ತಾನೆ

ಅಪ್ಪ ನಕ್ಕ, ‘ಹೂವು ಎಂಥಾ ದೊಡ್ಡ ಪಾಠವನ್ನು ಹೇಳುತ್ತಿದೆ ಅಲ್ಲವೇ ಮಗೂ? ನಾವೂ ಅಷ್ಟೆ ನಮಗೆ ತೊಂದರೆ ಕೊಡುವವರಿಗೆ ಪ್ರೀತಿಯನ್ನು ಹಂಚಿದರೆ ದ್ವೇಷಕ್ಕೆ ಎಡೆಯಿರುವುದಿಲ್ಲ. ಹೂವನ್ನು ನೋಡಿ ಕಲಿಯಬೇಕಾದದ್ದು ತುಂಬಾ ಇದೆ’ ಎನ್ನುತ್ತಾನೆ. ಮಗ ತನ್ನ ನಿರ್ಧಾರಗಳಿಂದ ದೂರ ಸರಿದು ಹಾದಿ ತಪ್ಪಿದ ತನ್ನ ಯೋಚನೆಗಳಿಗೆ ಕಡಿವಾಣ ಹಾಕಿ ಕೆಡುಕಿನ ಯೋಚನೆಗಳನ್ನು ಬಿಡುತ್ತಾನೆ.

ಇದನ್ನೇ ಧರ್ಮ ಗುರು ಗೋವಿಂದ ಸಿಂಗರು, ತನ್ನನ್ನು ಹೊಸಕಿದ ಕೈಗಳನ್ನೂ ಹೂವು ಸುಗಂಧಭರಿತಗೊಳಿಸುತ್ತದೆ ಎಂದಿರುವುದು. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಮಂಗಳವಾರ ಮಾರ್ಚ್ 19, 2024

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಫಾಲ್ಗುಣ ಶುಕ್ಲ ದಶಮಿ ಗಂ. 24-22 ನಕ್ಷತ್ರ: ಪುನರ್ವಸು ಗಂ. 20-10 ಯೋಗ: ಶೋಭನಾ ಗಂ. 16-37 ಕರಣ: ತೈತಿಲ ಗಂ. 11-32, ಮೀನ ಮಾಸದ 05 ನೇ ದಿನ, ಮಳೆನಕ್ಷತ್ರ: ಉತ್ತರಾಭಾದ್ರ 1.
ರಾಹುಕಾಲ : ಮಧ್ಯಾಹ್ನ 03-00 - 04-30
ಸೂರ್ಯೋದಯ : 06-38 ಸೂರ್ಯಾಸ್ತ : 06-38
ಮುಸ್ಲಿಂ ದಿನಾಂಕ : 08 ರಂಜಾನ್
ಅದೃಷ್ಟ ಸಂಖ್ಯೆ : 7, 1

ಮೇಷ : ಬಹಳ ಬೇಗ ಗುರಿ ತಲುಪಬೇಕು ಎಂಬ ಹಂಬಲ, ಆತುರ ಕೆಲಸಕ್ಕೆ ಅಡ್ಡಿ ಮಾಡಬಹುದು. ಸ್ನೇಹಿತರ ಹತ್ತಿರ ಯಾವುದೇ ಗೌಪ್ಯತೆಯನ್ನು ಹಂಚಿಕೊಳ್ಳಬೇಡಿ. ದೇವತಾ ಕಾರ್ಯಗಳಲ್ಲಿ ಭಾಗವಹಿಸುವಿರಿ.

ವೃಷಭ: ಇನ್ನೊಬ್ಬರಿಗೆ ವಿಶ್ವಾಸದಲ್ಲಿ ಸಾಲ ಕೊಡುವಾಗ ಸರಿಯಾಗಿ ಯೋಚಿಸಿ ತೀರ್ಮಾನ ಕೈಗೊಳ್ಳಿ. ವಂಶಪಾರಂಪರ್ಯವಾಗಿ ಬಂದ ವ್ಯಾಪಾರ ಮತ್ತಷ್ಟು ಏಳಿಗೆ ಕಾಣಲಿದೆ.

ಮಿಥುನ: ವೃತ್ತಿಯಲ್ಲಿ ಸಾಕಷ್ಟು ಪೈಪೋಟಿಯನ್ನು ಎದುರಿಸಬೇಕಾಗಬಹುದು. ಸ್ವಲ್ಪ ಪ್ರಯತ್ನ ಪಟ್ಟರೆ ಇದರಲ್ಲಿ ಜಯಗಳಿಸಬಹುದು. ಕುಟುಂಬ ವರ್ಗದಲ್ಲಿ ನಿರ್ಣಯಗಳಿಗೆ ಸಕಾರಾತ್ಮಕ ಬೆಂಬಲ ದೊರೆಯಲಿದೆ.

ಕರ್ಕಾಟಕ: ಸಾರ್ವಜನಿಕ ಹಿತಾಸಕ್ತಿಗಾಗಿ ಹಣ ಸಂಗ್ರಹ ಮಾಡುವುದು ಗೌರವಕ್ಕೆ ಚ್ಯುತಿಯನ್ನು ತರುತ್ತದೆ. ಹಣಕಾಸಿನ ಸ್ಥಿತಿಯನ್ನು ಸುಧಾರಿಸಿಕೊಳ್ಳಲು ಸೂಕ್ತ ಕಾಲವಾಗಿದೆ. ಕೆಲವರಿಗೆ ಸಂತಾನ ಭಾಗ್ಯ ಇದೆ.

ಸಿಂಹ: ಎಣಿಕೆಯಂತೆ ಕಾರ್ಯಗಳು ಸಿದ್ಧಿಸುವವು. ನೂತನವಾದ ಉದ್ಯೋಗ ಅಥವಾ ಕರಾರಿಗೆ ಆತುರದಲ್ಲಿ ಸಹಿ ಹಾಕಬೇಡಿ. ನಂತರದಲ್ಲಿ ನಿಲುವುಗಳನ್ನು ಬದಲಾಯಿಸಿಕೊಳ್ಳಬೇಕು ಎನಿಸಿದ್ದರೂ ಅದು ಅಷ್ಟು ಸುಲಭವಲ್ಲ.

ಕನ್ಯಾ: ಸಮಾಜದಲ್ಲಿನ ನಿಮ್ಮ ಮುಂದಾಳತ್ವವನ್ನು ಜನರು ಮೆಚ್ಚಿ, ದೊಡ್ಡ ದೊಡ್ಡ ವಿಚಾರಗಳಿಗೆ ಸಲಹೆಗಳನ್ನು ಕೇಳುವಂತಾಗಲಿದೆ. ವಿದ್ಯಾರ್ಥಿಗಳಿಗೆ ಸಾಧನೆಯ ತಯಾರಿಯನ್ನು ನಡೆಸಲು ಸೂಕ್ತ ದಿನವಾಗಿದೆ.

ತುಲಾ: ಅಸೂಯೆ ಪಡುವ ಸಹೋದ್ಯೋಗಿಗಳು ಹಾಗೂ ಮೇಲಧಿಕಾರಿಗಳೊಂದಿಗೆ ಜಾಣ್ಮೆಯಿಂದ ವ್ಯವಹರಿಸಿ. ದೇಹಕ್ಕೆ ಆಯಾಸವಾದಲ್ಲಿ ಅದನ್ನು ಸ್ವತಃ ಆರೈಕೆ ಮಾಡಿಕೊಳ್ಳುವುದು ಉತ್ತಮ.

ವೃಶ್ಚಿಕ: ಲೇವಾದೇವಿ ವ್ಯವಹಾರ ನಡೆಸುವವರು ಯಾರಿಗೂ ಸಾಲ ಕೊಡದಿರಲು ನಿಶ್ಚಯಿಸುವುದು ಉತ್ತಮ. ರಕ್ಷಣಾ ವಿಭಾಗದಲ್ಲಿ ಕಾರ್ಯ ನಿರ್ವಹಿಸಲು ಆಯ್ಕೆಗೊಳ್ಳುವಿರಿ. ಅನಿರೀಕ್ಷಿತವಾಗಿ ಶುಭ ಸುದ್ದಿ ಕೇಳುವಿರಿ.

ಧನು: ಕುಲದೇವರ ದರ್ಶನದಿಂದ ಈಗಿನ ವ್ಯವಹಾರಗಳಲ್ಲಿ ಅಭಿವೃದ್ಧಿಯನ್ನು ಸಾಧಿಸಬಲ್ಲಿರಿ. ಆಫೀಸಿನಲ್ಲಿ ಕೆಲಸವೊಂದಕ್ಕೆ ಸಿಬ್ಬಂದಿಗಳಿಂದ ಉತ್ತಮ ಸಹಕಾರ ಸಿಗಲಿದೆ. ಹಳದಿ ಬಣ್ಣವು ಶುಭ ತರಲಿದೆ.

ಮಕರ: ರಾಜಕೀಯ ವ್ಯಕ್ತಿಗಳು, ಸಮಾಜ ಸೇವಕರು ಉತ್ತಮ ಹೆಸರಿನಿಂದ ಜನಮನ್ನಣೆ ಗಳಿಸಬಹುದು. ಇಷ್ಟದ ಪ್ರಕಾರವೇ ಎಲ್ಲಾ ಕಾರ್ಯಗಳೂ ನಡೆಯುವ ಕಾಲ ಈ ದಿನವಾಗಿದೆ.

ಕುಂಭ: ಪ್ರಭಾವಶಾಲಿ ವ್ಯಕ್ತಿಯೊಂದಿಗಿನ ಭೇಟಿಯನ್ನು ತಳ್ಳಿಹಾಕದೆ ವೃತ್ತಿ ಕ್ಷೇತ್ರಕ್ಕೆ ಲಾಭ ಉಂಟಾಗುವಂತೆ ನೋಡಿಕೊಳ್ಳಿ. ಅವಿವೇಕಿಗಳ ನಡುವೆ ವಾದಿಸಲು ಹೋಗಬೇಡಿ. ಷೇರಿನಲ್ಲಿ ಹೆಚ್ಚು ಹಣ ತೊಡಗಿಸಬಹುದು.

ಮೀನ: ಕುಟುಂಬದಲ್ಲಿದ್ದ ಭಿನ್ನಾಭಿಪ್ರಾಯ ಹೋಗಲಾಡಿಸಿ ಸಂಘಟಿಸಲು ಮನೆಯವರಲ್ಲಿ ಚರ್ಚೆ ಮಾಡಲು ಸುದಿನ. ಆದರೆ ಕಾರ್ಯಕ್ಷೇತ್ರದಲ್ಲಿ ಯಾರೋ ಮಾಡಿದ ತಪ್ಪಿಗೆ ಹೆಗಲು ಕೊಡಬೇಕಾದಂತೆ ಆಗಲಿದೆ.

ಪದಬಂಧ 5625

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಇದು ನೇಯುವ ಸಾಧನ (3)
3.ಪರವಾಗಿ ತೆಗೆದುಕೊಂಡಿರುವ ವೇತನ (3)
5.ಉತ್ತರದವರ ಸತ್ಯ! (2)
6.ಗುಟುರು ಹಾಕುತ್ತಿರುವ ಗಂಡುಕುರಿ (3)
7.ನೆನಪಲ್ಲೇ ಇರುವ ಕಾರಣ (2)
9.ಒಂದು ಬಗೆಯ ಅಳತೆ (3)
10.ಬರಲು ಹೇಳದವ ಕುಂಟ! (3)
11.ಕರಾರು ಅಥವಾ ಸಂಧಾನ (2)
13.ವರ್ತಕನು ನಿಭಾಯಿಸಿದ ಕೆಲಸ (3)
15.ಕಾಮನೆ ಹುಟ್ಟಿಸಿರುವ ಸದನ! (2)
16.ಬಿಸಿಲು ಬಂದಾಗ ಚಿಗುರೊಡೆದ ರೆಂಬೆ (3)
17.ನೃತ್ಯವನ್ನು ಹೀಗೆನ್ನಿ (3)

ಮೇಲಿಂದ ಕೆಳಕ್ಕೆ
1.ಚಹಕ್ಕೆ ಕರೆದವನ ಮುದ್ರೆ (3)
2.ಕರದಲ್ಲಿ ಹಿಡಿದಿರುವ ಚಿಪ್ಪು (3)
3.ಸುಗಂಧಯುಕ್ತವಾದ ಜಲ (3)
4.ಸಾಗಿಸುವಿಕೆಗೊಂದು ಪರ್ಯಾಯ ಪದ (3)
5.ಇದು ಸ್ಪಷ್ಟವಾದುದು (5)
8.ವರ್ತನೆಯಲ್ಲಿ ಈ ಪರಿ ಆಗಿರುವ ಬದಲಾವಣೆ! (5)
12.ತೋಟಿಗ ಹಾಕಿದ ಅಂಕೆ! (3)
13.ನಕಲು ಎಂದಾಗ ಹೀಗೆ ಸಿಟ್ಟಿಗೇಳು! (3)
14.ವ್ಯವಸಾಯಗಾರನ ಅಳಲು (3)
15.ಮನದಲ್ಲಿ ನೀವುವಿಕೆ (3)



5624ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಉದಾಹರಣೆ
3.ಮದುವೆ 5.ಕರತಾಡನ
7.ಯವನ 9.ಒನಪು
11.ನರಕ 13.ರಕ್ತತಿಲಕ
15.ಪಾಕಡ 16.ಪಾಕಪ್ರವೀಣ

ಮೇಲಿಂದ ಕೆಳಕ್ಕೆ:
1.ಉಪಾಧ್ಯಾಯ
2.ರಥಿಕ 4.ದುಮ್ಮಾನ
6.ತಾರೀಪು 8.ವರ್ಷ
9.ಒಡತಿ 10.ದಾರ
12.ಕಡಿವಾಣ 13.ರಥಿಕ
14.ಕಟುಕ

ಸುಡೊಕು 6010

		6		7		3		8
			2		4			
7		1		5		4		9
	9		5				7	
1				4	7			3
	6				8		5	
9		5			6			1
				3			8	
6		8	4			9	3	5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6009 ಸುಡೊಕು

8	5	3	1	6	2	4	9	7
6	1	9	7	5	4	3	2	8
7	4	2	8	9	3	1	6	5
4	6	7	5	3	9	2	8	1
1	2	8	6	4	7	9	5	3
3	9	5	2	1	8	7	4	6
5	7	4	3	2	6	8	1	9
9	3	1	4	8	5	6	7	2
2	8	6	9	7	1	5	3	4

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	22,023
ಇಂದಿನ ಅಂತ್ಯ	22,055
▲	32
ದಿನದ ಗರಿಷ್ಠ	22,123

ವಿನಿಮಯ ದರ

$ ಡಾಲರ್	82.92
£ ಪೌಂಡ್	105.37
€ ಯುರೊ	90.37
¥ ಯೆನ್ (100ಕ್ಕೆ)	56

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹470
12 ಕ್ಕೆ	₹63
ಮೈಸೂರು	
100ಕ್ಕೆ	₹472

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಶನಿವಾರದ ದರ)

ಶೇಂಗಾ (ರಿಫೈನ್ಡ್)	₹1510 (1520)
ಸೋಯಾ (ರಿಫೈನ್ಡ್)	₹1030 (1030)
ಸೂರ್ಯಕಾಂತಿ (ರಿಫೈನ್ಡ್)	₹990 (990)
ಪಾಮೋಲಿನ್	₹967 (965)

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಅರಸೀಕೆರೆ	₹8000-9000
ತಿಪಟೂರು	₹7700-9800
ತುರುವೇಕೆರೆ	₹8600-8700

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹180
ಆರ್‌ಎಸ್‌ಎಸ್-5	₹170
ಗುಡ್ ಲಾಟ್ (ಪ್ರತಿ ಕೆ.ಜಿಗೆ)	₹160

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹232-435
ದ್ವಿತಳಿ (ಬಿ.ವಿ)	₹255-549

ನಾಳೆಯಿಂದ ಕರಣಪುರ ಘಟಕ ಕಾರ್ಯಾಚರಣೆ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ರಾಷ್ಟ್ರೀಯ ಉಷ್ಣ ವಿದ್ಯುತ್ ನಿಗಮವು (ಎನ್‌ಟಿಪಿಸಿ) ತನ್ನ ಎರಡನೇ ಘಟಕವಾದ ಉತ್ತರ ಕರಣಪುರನ ಸೂಪರ್ ಉಷ್ಣ ವಿದ್ಯುತ್ ಯೋಜನೆಯ ವಾಣಿಜ್ಯ ಕಾರ್ಯಾಚರಣೆಯನ್ನು ಬುಧವಾರ ಪ್ರಾರಂಭಿಸಲಿದೆ.

ಎನ್‌ಟಿಪಿಸಿಯ ಉತ್ತರ ಕರಣಪುರ ಸೂಪರ್ ಉಷ್ಣ ವಿದ್ಯುತ್ ಯೋಜನೆಯು (ಎಸ್‌ಟಿಪಿಪಿ) ಕಲ್ಲಿದ್ದಲು ಆಧಾರಿತ ವಿದ್ಯುತ್ ಸ್ಥಾವರವಾಗಿದ್ದು, ಜಾರ್ಖಂಡ್‌ನ ಚತ್ರಾ ಜಿಲ್ಲೆಯಲ್ಲಿದೆ ಎಂದು ಕಂಪನಿ ಷೇರುಪೇಟೆಗೆ ಸೋಮವಾರ ತಿಳಿಸಿದೆ.

ಇದರೊಂದಿಗೆ, ಎನ್‌ಟಿಪಿಸಿಯ ಸ್ವತಂತ್ರ ಮತ್ತು ಗುಂಪು ವಾಣಿಜ್ಯ ವಿದ್ಯುತ್ ಸಾಮರ್ಥ್ಯವು ಕ್ರಮವಾಗಿ 59,298 ಮೆಗಾವಾಟ್ ಮತ್ತು 75,418 ಮೆಗಾವಾಟ್ ಆಗಲಿದೆ. ಎನ್‌ಟಿಪಿಸಿ ಕೇಂದ್ರ ವಿದ್ಯುತ್ ಸಚಿವಾಲಯದಡಿ ಕಾರ್ಯ ನಿರ್ವಹಿಸುತ್ತಿದ್ದು, ದೇಶದ ಅತಿದೊಡ್ಡ ವಿದ್ಯುತ್ ಉತ್ಪಾದನೆ ಕಂಪನಿಯಾಗಿದೆ.

ಮಾರುಕಟ್ಟೆ ಧಾರಣೆ

ಬಂಟ್ವಾಳ (ಅಡಿಕೆ)	
ಕೋಕ	18000-28500
ಹೊಸತು	28500-34500
ಹಳತು	34500-43500
ಕಾರ್ಕಳ	
ಹೊಸತು	25000-35000
ಹಳತು	30000-44500
ಕುಮಟ	
ಚಿಪ್ಪು	23569-28099
ಕೋಕ	11569-23999
ಫ್ಯಾಕ್ಟರಿ	10869-21599
ಹಳೆಚಾಲಿ	33599-37479
ಹೊಸಚಾಲಿ	30099-34599
ಸಾಗರ	
ಬಿಳಿಗೋಟು	12989-26699
ಚಾಲಿ	24610-34510
ಕೋಕ	14699-26899
ಕೆಂಪುಗೋಟು	18899-32599
ರಾಶಿ	29199-48569
ಸಿಪ್ಪೆಗೋಟು	9999-18199
ಶಿವಮೊಗ್ಗ	
ಬೆಟ್ಟೆ	42000-53350
ಗೊರಬಲು	15166-32869
ರಾಶಿ	32009-49089
ಸರಕು	48100-81200
ಸಿದ್ದಾಪುರ	
ಬಿಳಿಗೋಟು	25000-29009
ಚಾಲಿ	34699-36299
ಕೋಕ	24400-29000
ಹೊಸಚಾಲಿ	31869-35869
ಕೆಂಪುಗೋಟು	30689-31889
ರಾಶಿ	43899-46509
ತಟ್ಟಿಬೆಟ್ಟೆ	37099-46509
ಶಿರಸಿ	
ಬೆಟ್ಟೆ	37260-42369
ಬಿಳಿಗೋಟು	23109-31613
ಚಾಲಿ	31608-35791
ಕೆಂಪುಗೋಟು	22199-32899
ರಾಶಿ	43160-46809
ಯಲ್ಲಾಪುರ	
ಅಪಿ	54629-67569
ಬಿಳಿಗೋಟು	22899-30090
ಚಾಲಿ	32012-38201
ಕೋಕ	16899-28899
ಕೆಂಪುಗೋಟು	26899-34350
ರಾಶಿ	43119-54029
ತಟ್ಟಿಬೆಟ್ಟೆ	36699-43101

ವಿಮಾ ವಲಯ: ₹54 ಸಾವಿರ ಕೋಟಿ ಎಫ್‌ಡಿಐ

ನವದೆಹಲಿ (ಪಿಟಿಐ): ದೇಶದ ವಿಮಾ ವಲಯವು ಕಳೆದ 9 ವರ್ಷದಲ್ಲಿ ₹54 ಸಾವಿರ ಕೋಟಿ ವಿದೇಶಿ ನೇರ ಬಂಡವಾಳ (ಎಫ್‌ಡಿಐ) ಸ್ವೀಕರಿಸಿದೆ.

ಸರ್ಕಾರವು ಸಾಗರೋತ್ತರ ಬಂಡವಾಳ ಹರಿವಿನ ನಿಯಮಾವಳಿಗಳನ್ನು ಮತ್ತಷ್ಟು ಉದಾರೀಕರಣ ಮಾಡಿದ್ದರಿಂದ ವಿಮಾ ವಲಯದಲ್ಲಿ ಈ ಬಂಡವಾಳದ ಒಳಹರಿವು ಆಗಿದೆ ಎಂದು ಹಣಕಾಸು ಸೇವೆಗಳ ಕಾರ್ಯದರ್ಶಿ ವಿವೇಕ್ ಜೋಶಿ ಪಿಟಿಐಗೆ ತಿಳಿಸಿದ್ದಾರೆ.

2014ರ ಡಿಸೆಂಬರ್‌ನಿಂದ 2024ರ ಜನವರಿ ನಡುವೆ ₹53,900 ಕೋಟಿಯಷ್ಟು ಎಫ್‌ಡಿಐನ್ನು ವಿಮಾ ಕಂಪನಿಗಳು ಸ್ವೀಕರಿಸಿವೆ. ಇದೇ ಅವಧಿಯಲ್ಲಿ ವಿಮಾ ಕಂಪನಿಗಳ ಸಂಖ್ಯೆಯು 53ರಿಂದ 70ಕ್ಕೆ ಹೆಚ್ಚಳವಾಗಿದೆ.

2013–14ರಲ್ಲಿ ₹21 ಲಕ್ಷ ಕೋಟಿಯಿದ್ದ ನಿರ್ವಹಣಾ ಸಂಪತ್ತಿನ ಮೌಲ್ಯವು (ಎಯುಎಂ) ಪ್ರಸ್ತುತ ₹60 ಲಕ್ಷ ಕೋಟಿಗೆ ಏರಿಕೆ ಆಗಿದೆ. ವಿಮಾ ಪ್ರೀಮಿಯಂ ₹3.94 ಲಕ್ಷ ಕೋಟಿಯಿಂದ ₹10.4 ಲಕ್ಷ ಕೋಟಿಗೆ ಹೆಚ್ಚಳವಾಗಿದೆ ಎಂದು ತಿಳಿಸಿದ್ದಾರೆ.

ಶೇ 87.29ರಷ್ಟು ಮತ • ಐದನೇ ಅವಧಿಗೆ ಅಧ್ಯಕ್ಷ ಸ್ಥಾನಕ್ಕೆ ಆಯ್ಕೆ

ರಷ್ಯಾ ಚುನಾವಣೆ: ಪುಟಿನ್ ಪುನರಾಯ್ಕೆ

ಮಾಸ್ಕೊ (ಎಪಿ/ರಾಯಿಟರ್ಸ್/ಎಎಫ್‌ಪಿ): ರಷ್ಯಾ ಅಧ್ಯಕ್ಷೀಯ ಚುನಾವಣೆಯಲ್ಲಿ ಹಾಲಿ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರು ಮತ್ತೆ ಗೆಲುವಿನ ನಗೆ ಬೀರಿದ್ದಾರೆ. ಅವರು ಐದನೇ ಅವಧಿಗೆ ಅಧ್ಯಕ್ಷ ಸ್ಥಾನಕ್ಕೆ ಆಯ್ಕೆಯಾಗಿದ್ದಾರೆ. ಈ ಬಾರಿ ಅವರು ಗೆಲ್ಲುವ ವಿಚಾರದಲ್ಲಿ ಅನುಮಾನಗಳೇ ಇರಲಿಲ್ಲ.

ವಿರೋಧಿಗಳ ದನಿಯನ್ನು ಹತ್ತಿಕ್ಕಿ, ಚುನಾವಣೆಯಲ್ಲಿ ಸಾಂಕೇತಿಕ ವಿರೋಧವನ್ನು ಮಾತ್ರ ಎದುರಿಸಿದ್ದ ಪುಟಿನ್ ಅವರು ಪುನರಾಯ್ಕೆ ಆಗುವುದು ಖಚಿತವಾಗಿತ್ತು. ಪುಟಿನ್ ಅವರು 1999ರ ಡಿಸೆಂಬರ್‌ನಿಂದ ಇದುವರೆಗೆ ಅಧ್ಯಕ್ಷರಾಗಿ ಅಥವಾ ಪ್ರಧಾನಿಯಾಗಿ ಅಧಿಕಾರದಲ್ಲಿ ಮುಂದುವರಿದಿದ್ದಾರೆ.

‘ನಮ್ಮ ಮುಂದೆ ಹಲವು ಕೆಲಸಗಳು ಇವೆ. ಆದರೆ ಎಲ್ಲರಿಗೂ ನಾನು ಇದನ್ನು ಸ್ಪಷ್ಟಪಡಿಸಲು ಬಯಸುವೆ: ನಾವು ಒಗ್ಗಟ್ಟಾಗಿದ್ದಾಗ ಯಾರಿಗೂ ನಮ್ಮನ್ನು ಬೆದರಿಸಲು, ನಮ್ಮ ಇಚ್ಛೆಯನ್ನು ಮತ್ತು ಆತ್ಮಸಾಕ್ಷಿಯನ್ನು ಹತ್ತಿಕ್ಕಲು ಆಗಿಲ್ಲ. ಅವರು ಹಿಂದೆಯೂ ವಿಫಲರಾಗಿದ್ದಾರೆ ಮುಂದೆಯೂ ವಿಫಲರಾಗುತ್ತಾರೆ’ ಎಂದು ಪುಟಿನ್ ಅವರು ಮತದಾನ ಪೂರ್ಣಗೊಂಡ ನಂತರದಲ್ಲಿ ಸ್ವಯಂಸೇವಕರನ್ನು ಉದ್ದೇಶಿಸಿ ಹೇಳಿದ್ದರು.

ವ್ಲಾದಿಮಿರ್ ಪುಟಿನ್

ರಷ್ಯಾದಲ್ಲಿ ಪುಟಿನ್ ಅವರನ್ನು ಬಹಿರಂಗವಾಗಿ ಟೀಕಿಸುವುದು, ಉಕ್ರೇನ್ ವಿರುದ್ಧದ ಸಮರವನ್ನು ಸಾರ್ವಜನಿಕವಾಗಿ ಟೀಕಿಸುವುದನ್ನು ಹತ್ತಿಕ್ಕಲಾಗಿದೆ. ಅಲ್ಲಿ ಸ್ವತಂತ್ರ ಮಾಧ್ಯಮಗಳ ದನಿ ಅಡಗಿಸಲಾಗಿದೆ. ರಾಜಕೀಯದಲ್ಲಿ ಪುಟಿನ್ ಅವರ ಕಡುವಿರೋಧಿ ಆಗಿದ್ದ ಅಲೆಕ್ಸಿ ನವಾಲ್ನಿ ಅವರು ಕಳೆದ ತಿಂಗಳು ಜೈಲಿನಲ್ಲಿ ಇದ್ದಾಗಲೇ ಮೃತಪಟ್ಟಿದ್ದಾರೆ. ಪುಟಿನ್ ಅವರ ಇತರ ಹಲವು ಟೀಕಾಕಾರರು ಒಂದೋ ಜೈಲಿನಲ್ಲಿದ್ದಾರೆ ಅಥವಾ ದೇಶದಿಂದ ಹೊರನಡೆದಿದ್ದಾರೆ.

ದೇಶದ ಎಲ್ಲ ಪ್ರದೇಶಗಳ ಮತ ಎಣಿಕೆಯು ಬಹುತೇಕ ಪೂರ್ಣಗೊಂಡಿದೆ, ಪುಟಿನ್ ಅವರು ಶೇಕಡ 87.29ರಷ್ಟು ಮತಗಳನ್ನು ಪಡೆದಿದ್ದಾರೆ ಎಂದು ರಷ್ಯಾದ ಕೇಂದ್ರ ಚುನಾವಣಾ ಆಯೋಗ ಸೋಮವಾರ ಹೇಳಿದೆ. ಸರಿಸುಮಾರು 7.6 ಕೋಟಿ ಮತದಾರರು ಪುಟಿನ್ ಅವರಿಗೆ ಬೆಂಬಲ ವ್ಯಕ್ತಪಡಿಸಿದ್ದಾರೆ ಎಂದು ಆಯೋಗದ ಮುಖ್ಯಸ್ಥೆ ಎಲ್ಲಾ ಪಾಮ್‌ಫಿಲೊವಾ ಹೇಳಿದ್ದಾರೆ. ಇದು ಪುಟಿನ್ ಅವರು ಈವರೆಗೆ ಪಡೆದಿರುವ ಅತಿಹೆಚ್ಚಿನ ಮತಗಳು.

ಉತ್ತರ ಕೊರಿಯಾ, ಹೊಂಡುರಾಸ್, ನಿಕರಾಗುವಾ ಮತ್ತು ವೆನೆಜುವೆಲಾ ದೇಶಗಳು ಪುಟಿನ್ ಅವರಿಗೆ ಅಭಿನಂದನೆ ಸಲ್ಲಿಸಿವೆ. ಆದರೆ ಪಾಶ್ಚಿಮಾತ್ಯ ದೇಶಗಳು ರಷ್ಯಾದಲ್ಲಿ ನಡೆದ ಚುನಾವಣಾ ಪ್ರಕ್ರಿಯೆಯನ್ನು ‘ಕಪಟ’ ಎಂದು ಕರೆದಿವೆ.

ಮುಕ್ತ ಹಾಗೂ ನ್ಯಾಯಸಮ್ಮತ ಚುನಾವಣೆಗಳು ಈ ರೀತಿಯಲ್ಲಿ ನಡೆಯುವುದಿಲ್ಲ ಎಂದು ಬ್ರಿಟನ್ನಿನ ವಿದೇಶಾಂಗ ಸಚಿವ ಡೇವಿಡ್ ಕ್ಯಾಮರೂನ್ ಹೇಳಿದ್ದಾರೆ. ‘ಪುಟಿನ್ ಅವರು ತಮ್ಮ ರಾಜಕೀಯ ವಿರೋಧಿಗಳನ್ನು ಇಲ್ಲವಾಗಿಸುತ್ತಾರೆ, ಮಾಧ್ಯಮಗಳನ್ನು ನಿಯಂತ್ರಿಸುತ್ತಾರೆ ಹಾಗೂ ನಂತರದಲ್ಲಿ ತಮ್ಮನ್ನು ತಾವು ವಿಜಯಿ ಎಂದು ಘೋಷಿಸಿಕೊಳ್ಳುತ್ತಾರೆ. ಇದು ಪ್ರಜಾತಂತ್ರ ವ್ಯವಸ್ಥೆ ಅಲ್ಲ’ ಎಂದು ಕ್ಯಾಮರೂನ್ ಟೀಕಿಸಿದ್ದಾರೆ.

ಪುಟಿನ್ ಅವರ ಬಗ್ಗೆ ಅಥವಾ ಉಕ್ರೇನ್ ವಿರುದ್ಧದ ಯುದ್ಧದ ಬಗ್ಗೆ ಅಸಮಾಧಾನ ಇರುವವರು ಭಾನುವಾರ ಮಧ್ಯಾಹ್ನದ ಹೊತ್ತಿಗೆ ಮತಗಟ್ಟೆಗಳ ಕಡೆ ಸಾಗಬೇಕು ಎಂದು ನವಾಲ್ನಿ ಅವರ ಜೊತೆಗಾರರು ಕರೆ ನೀಡಿದ್ದರು. ರಷ್ಯಾದಲ್ಲಿನ ಮತಗಟ್ಟೆಗಳಲ್ಲಿ ಹಾಗೂ ಬೇರೆ ದೇಶಗಳಲ್ಲಿ ಇರುವ ರಷ್ಯಾದ ರಾಯಭಾರ ಕಚೇರಿಗಳಲ್ಲಿ ಇರುವ ಮತಗಟ್ಟೆಗಳಲ್ಲಿ ಭಾನುವಾರ ಮಧ್ಯಾಹ್ನದ ಹೊತ್ತಿಗೆ ಜನರ ಸಂಖ್ಯೆಯು ಹೆಚ್ಚಾದಂತೆ ಕಂಡುಬಂತು. ಆದರೆ ಪ್ರತಿಭಟನೆ ಕರೆ ಬಗ್ಗೆ ಪ್ರತಿಕ್ರಿಯೆ ನೀಡಿರುವ ಪುಟಿನ್ ಅವರು, ತಾವು ಅದನ್ನು ಸ್ವಾಗತಿಸುವುದಾಗಿ ಸುದ್ದಿಗೋಷ್ಠಿಯಲ್ಲಿ ಹೇಳಿದ್ದಾರೆ.

ಪುಟಿನ್‌ಗೆ ಮೋದಿ ಅಭಿನಂದನೆ

ರಷ್ಯಾ ಅಧ್ಯಕ್ಷರಾಗಿ ಪುನರಾಯ್ಕೆಯಾದ ವ್ಲಾದಿಮಿರ್ ಪುಟಿನ್ ಅವರಿಗೆ ಪ್ರಧಾನಿ ನರೇಂದ್ರ ಮೋದಿ ‘ಪ್ರೀತಿಯ ಅಭಿನಂದನೆ’ ಸಲ್ಲಿಸಿದ್ದಾರೆ.

‘ಭಾರತ ಮತ್ತು ರಷ್ಯಾ ನಡುವಿನ ವಿಶೇಷವಾದ ಹಾಗೂ ಸಮಗ್ರ ಪಾಲುದಾರಿಕೆಯ ಸಂಬಂಧವು ಕಾಲದ ಪರೀಕ್ಷೆಯನ್ನು ಗೆದ್ದುಬಂದಿದೆ. ಈ ಸಂಬಂಧವನ್ನು ಮುಂದಿನ ವರ್ಷಗಳಲ್ಲಿ ಇನ್ನಷ್ಟು ಬಲಪಡಿಸಲು ನಾನು ಎದುರು ನೋಡುತ್ತಿದ್ದೇನೆ’ ಎಂದು ಮೋದಿ ಅವರು ಎಕ್ಸ್‌ನಲ್ಲಿ ಬರೆದಿದ್ದಾರೆ.

ಚೀನಾ ಅಭಿನಂದನೆ: ಪುಟಿನ್ ಪುನರಾಯ್ಕೆ ಆಗಿರುವುದಕ್ಕೆ ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಅಭಿನಂದನೆ ಸಲ್ಲಿಸಿದ್ದಾರೆ. ‘ನಿಮ್ಮ ಪುನರಾಯ್ಕೆಯು ರಷ್ಯಾದ ಜನ ನಿಮಗೆ ನೀಡಿರುವ ಬೆಂಬಲವನ್ನು ತೋರಿಸುತ್ತಿದೆ. ಚೀನಾ–ರಷ್ಯಾ ಸಂಬಂಧ ಬಲಪಡಿಸುವುದಕ್ಕೆ ನಾವು ಆದ್ಯತೆ ನೀಡುತ್ತೇವೆ’ ಎಂದು ಜಿನ್‌ಪಿಂಗ್ ಹೇಳಿದ್ದಾರೆ.

ಷೇರುಪೇಟೆ ಸೂಚ್ಯಂಕಗಳು ಏರಿಕೆ

ಮುಂಬೈ (ಪಿಟಿಐ): ಷೇರು ಸೂಚ್ಯಂಕಗಳಾದ ಸೆನ್ಸೆಕ್ಸ್ ಮತ್ತು ನಿಫ್ಟಿ ಸೋಮವಾರ ಏರಿಕೆ ಕಂಡಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ (ಬಿಎಸ್‌ಇ) ಸೆನ್ಸೆಕ್ಸ್ 104 ಅಂಶ ಏರಿಕೆಯಾಗಿ 72,748ಕ್ಕೆ ಸ್ಥಿರಗೊಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ (ಎನ್‌ಎಸ್‌ಇ) ನಿಫ್ಟಿ 32 ಅಂಶ ಹೆಚ್ಚಳವಾಗಿ 22,055ಕ್ಕೆ ಕೊನೆಗೊಂಡಿತು. ಟಾಟಾ ಸ್ಟೀಲ್, ಮಹೀಂದ್ರ ಆ್ಯಂಡ್ ಮಹೀಂದ್ರ, ಜೆಎಸ್‌ಡಬ್ಲ್ಯು ಸ್ಟೀಲ್, ಟಾಟಾ ಮೋಟರ್ಸ್, ಎಕ್ಸಿಸ್ ಬ್ಯಾಂಕ್, ಸನ್‌ಫಾರ್ಮಾ, ರಿಲಯನ್ಸ್ ಇಂಡಸ್ಟ್ರೀಸ್ ಮತ್ತು ಮಾರುತಿ ಕಂಪನಿಗಳ ಷೇರಿನ ಮೌಲ್ಯ ಏರಿಕೆ ಆಗಿದೆ. ಅದಾನಿ ಸಮೂಹದ ಎಲ್ಲ ಕಂಪನಿಗಳು, ಇನ್ಫೊಸಿಸ್, ಟಿಸಿಎಸ್, ಟೈಟನ್, ವಿಪ್ರೊ, ಹಿಂದುಸ್ತಾನ್ ಯೂನಿಲಿವರ್ ಮತ್ತು ನೆಸ್ಲೆ ಷೇರಿನ ಮೌಲ್ಯ ಇಳಿದಿದೆ.

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com

or

Scan QR code to access booking form

ಶ್ರದ್ಧಾಂಜಲಿ

ಎಂ. ವೆಂಕಟೇಶಪ್ಪ

ಮಾಜಿ ಯೋಧರು, ಮಾಜಿ ಎ.ಪಿ.ಎಂ.ಸಿ ಸದಸ್ಯರು

ಇವರು ದಿನಾಂಕ 18–03–2024 ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರ ಅಂತಿಮ ದರ್ಶನ ವರ್ತೂರಿನ ಸ್ವಗೃಹದಲ್ಲಿ ದಿ:19–03–2024ರ ಮಧ್ಯಾಹ್ನ 1:00 ತನಕ ಇದ್ದು ನಂತರ ಬಳಗೆರೆ ಗ್ರಾಮದಲ್ಲಿ ಇವರ ಅಂತ್ಯಕ್ರಿಯೆಯನ್ನು ಮಧ್ಯಾಹ್ನ 2 ಗಂಟೆ ನಂತರ ನೆರವೇರಿಸಲಾಗುವುದು.

ಇಂತಿ ದುಃಖತಪ್ತರು

ಶ್ರೀಮತಿ ರತ್ನಮ್ಮ ಮತ್ತು ಮಕ್ಕಳು ಹಾಗೂ ಕುಟುಂಬದವರು. 9980673232

ಮುಂಬೈ ಧಾರಣೆ

ಶೇಂಗಾ

18-03-2024

ಜಾವಾ 70/80(ಹೊಸ)	11200-11300
ಜಾವಾ 80/90(ಹೊಸ)	10800-10900
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10600-10700
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1520 (1530)
ಒಂದು ವಾರದ ಡೆಲಿವರಿ	1515 (1525)
ಸೋಯಾ ಕಚ್ಚಾ	1012 (1010)
ಪಾಮ್ ವಾರದ ಡೆಲಿವರಿ	965 (963)
ಸೂರ್ಯಕಾಂತಿ ಎಣ್ಣೆ ಕಚ್ಚಾ	925 (925)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10ಗ್ರಾಂ	₹65,250 (65,200)
ಬೆಳ್ಳಿ ಕೆ.ಜಿ	₹74,100 (73,875)

ಆವರಣದಲ್ಲಿ ಶನಿವಾರದ ಧಾರಣೆ

ಸುಧಾ, ಮಯೂರ ಓದಿರಿ

ಬೆಂಗಳೂರಿಂದ ಲಕ್ಷದ್ವೀಪಕ್ಕೆ ನೇರ ವಿಮಾನ

ನವದೆಹಲಿ (ಪಿಟಿಐ): ವಿಮಾನಯಾನ ಸಂಸ್ಥೆ ಇಂಡಿಗೊ, ಬೆಂಗಳೂರಿನಿಂದ ಲಕ್ಷದ್ವೀಪದ ಅಗತ್ತಿಗೆ ನೇರ ವಿಮಾನ ಸೇವೆಯನ್ನು ಮಾರ್ಚ್ 31ರಿಂದ ಆರಂಭಿಸಲಿದೆ.

ವಿಮಾನವು 78 ಆಸನಗಳನ್ನು ಹೊಂದಿದೆ. ಆಳ ಸಮುದ್ರದ ಮೀನುಗಾರಿಕೆ, ಸ್ಕೂಬಾ ಡೈವಿಂಗ್, ನೌಕಾಯಾನ, ಸ್ಕೀಯಿಂಗ್ ಬಯಸುವವರಿಗೆ ಅಗತ್ತಿ ಜನಪ್ರಿಯ ವಾಗಿದೆ.

ಪ್ರತಿದಿನ 2 ಸಾವಿರಕ್ಕೂ ಹೆಚ್ಚು ಇಂಡಿಗೊ ವಿಮಾನಗಳು ಕಾರ್ಯಾಚರಣೆ ನಿರ್ವಹಿಸುತ್ತಿವೆ ಎಂದು ವಿಮಾನಯಾನ ಸಂಸ್ಥೆ ತಿಳಿಸಿದೆ.

ಪ್ರಸ್ತುತ, ಅಲಯನ್ಸ್ ಏರ್ ಮಾತ್ರ ಅಗತ್ತಿಗೆ ಸೇವೆಗಳನ್ನು ಒದಗಿಸುತ್ತಿದೆ.

ಒಳ್ಳೆಯ ಉದ್ದೇಶದಿಂದ ಕಂಪನಿ ಆರಂಭಿಸಿ: ಜೊಮಾಟೊ ಸಿಇಒ

‘ಗುರಿಯತ್ತ ಗಮನ ಕೇಂದ್ರೀಕರಿಸಿ’

ನವದೆಹಲಿ (ಪಿಟಿಐ): ಕನಸಿನ ಕಂಪನಿ ಅಥವಾ ಹೊಸ ಸ್ಟಾರ್ಟ್‌ಅಪ್ (ನವೋದ್ಯಮ) ಆರಂಭಿಸಲು ಹಂಬಲಿಸುವ ಯುವಕರು ಮೊದಲು ತಮ್ಮ ಕೆಲಸ ಮೇಲಿನ ಬದ್ಧತೆ, ಪರಿಶ್ರಮ ಹಾಗೂ ಒತ್ತಡ ನಿರ್ವಹಣೆಯೊಂದಿಗೆ ಯಾವುದೇ ವಿಷಯಕ್ಕೂ ವಿಚಲಿತರಾಗದಂತೆ ಗುರಿ ಸಾಧಿಸುವತ್ತ ತಮ್ಮ ಗಮನವನ್ನು ಕೇಂದ್ರೀಕರಿಸಬೇಕು ಎಂದು ಆಹಾರ ಡೆಲಿವರಿ ಕಂಪನಿ ಜೊಮಾಟೊ ಸಿಇಒ ದೀಪಿಂದರ್ ಗೋಯಲ್ ಸಲಹೆ ನೀಡಿದ್ದಾರೆ.

ಸ್ಟಾರ್ಟ್‌ಅಪ್ ಮಹಾಕುಂಭ ಸಮಾರಂಭದಲ್ಲಿ ಮಾತನಾಡಿದ ಗೋಯಲ್, ಉತ್ಸಾಹ ಹಾಗೂ ಒಳ್ಳೆಯ ಉದ್ದೇಶದಿಂದ ಕಂಪನಿಯನ್ನು ಮುನ್ನಡೆಸಬೇಕೇ ಹೊರತು ಕೇವಲ ಹಣಗಳಿಸುವ ಗುರಿಯೊಂದಿಗೆ ಯಾವುದೇ ಕಂಪನಿಯನ್ನು ಸ್ಥಾಪಿಸಬಾರದು. ಇಂತಹ ಮನಃಸ್ಥಿತಿ ಕಂಪನಿ ಯಶಸ್ಸಿಗೆ ಕಾರಣವಾಗುವುದಿಲ್ಲ ಎಂದು ಹೇಳಿದರು.

ನಾನು ಅನೇಕ ಹೊಸ ಉದ್ಯಮಿಗಳನ್ನು ನೋಡಿದ್ದೇನೆ. ಅವರೊಂದಿಗೆ ಸಮಾಲೋಚನೆಯನ್ನು ಮಾಡಿದ್ದೇನೆ. ನೀವು ಏಕೆ ಕಂಪನಿಯನ್ನು ಸ್ಥಾಪಿಸಿದ್ದೀರಿ ಎಂದು ಕೇಳಿದಾಗ ಬಹಳಷ್ಟು ಜನರು ಹಣ ಗಳಿಸುವ ಉದ್ದೇಶದಿಂದ ಎಂದು ಉತ್ತರ ನೀಡಿದರು.

ಆದರೆ ಹೀಗೆ ಲಾಭ ಸಂಪಾದನೆ ಒಂದೇ ಉದ್ದೇಶದಿಂದ ಕಂಪನಿಯನ್ನು ಪ್ರಾರಂಭಿಸಿದರೆ ಮುಂದೊಂದು ದಿನ ಕಂಪನಿಯ ಕೆಟ್ಟ ಆಡಳಿತಕ್ಕೆ ಕಾರಣವಾಗುತ್ತದೆ ಎಂದು ಗೋಯಲ್ ಎಚ್ಚರಿಕೆ ನೀಡಿದರು.

ಅಂತಿಮ ಹಂತದಲ್ಲಿ ಡೀಪ್ ಟೆಕ್ ನವೋದ್ಯಮ ಮೀಸಲು ನೀತಿ

ನವದೆಹಲಿ (ಪಿಟಿಐ): ಡೀಪ್ ಟೆಕ್ ನವೋದ್ಯಮಗಳಿಗಾಗಿ ಮೀಸಲಾದ ನೀತಿಯು ಅಂತರ-ಸಚಿವಾಲಯದ ಚರ್ಚೆಯ ಅಂತಿಮ ಹಂತದಲ್ಲಿದ್ದು, ಶೀಘ್ರದಲ್ಲೇ ಅದನ್ನುಪ್ರ ಕಟಿಸಲಾಗುವುದು ಎಂದು ಸರ್ಕಾರದ ಹಿರಿಯ ಅಧಿಕಾರಿಯೊಬ್ಬರು ಸೋಮವಾರ ತಿಳಿಸಿದ್ದಾರೆ.

ಉದ್ಯಮ ಮತ್ತು ಆಂತರಿಕ ವ್ಯಾಪಾರದ ಉತ್ತೇಜನ ಇಲಾಖೆ (ಡಿಪಿಐಐಟಿ) ಕಾರ್ಯದರ್ಶಿ ರಾಜೇಶ್ ಕುಮಾರ್ ಸಿಂಗ್ ನವೋದ್ಯಮ ಮಹಾಕುಂಭದಲ್ಲಿ ಮಾತನಾಡುತ್ತಾ, ನವೋದ್ಯಮಗಳು ರಾಷ್ಟ್ರ ಮತ್ತು ತಮ್ಮ ಅನುಕೂಲಕ್ಕಾಗಿ ನಾವೀನ್ಯತೆಗಳನ್ನು ಬೌದ್ಧಿಕ ಆಸ್ತಿ ಹಕ್ಕುಗಳಾಗಿ ಪರಿವರ್ತಿಸುವ ಅಗತ್ಯವಿದೆ. ಡೀಪ್‌ಟೆಕ್ ಸ್ಟಾರ್ಟ್‌ಅಪ್‌ಗಳಿಗಾಗಿ ಪ್ರತ್ಯೇಕ ವಿಭಾಗ ಆರಂಭಿಸಲಾಗುವುದು ಎಂದು ಹೇಳಿದರು.

ಧನಸಹಾಯಕ್ಕಿಂತ ಹೆಚ್ಚಾಗಿ, ಸ್ಟಾರ್ಟ್‌ಅಪ್‌ಗಳ ಉತ್ಪನ್ನವನ್ನು ಸರ್ಕಾರವು ಖರೀದಿಸುವ ಅಗತ್ಯವಿದೆ. ಸರ್ಕಾರದ ಇ–ಮಾರುಕಟ್ಟೆ ಪೋರ್ಟಲ್ (ಜಿಇಎಂ) ಈ ಅವಕಾಶವನ್ನು ಒದಗಿಸುತ್ತಿದೆ ಎಂದು ಹೇಳಿದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

General

ತಕ್ಷಣ ಬೇಕಾಗಿದ್ದಾರೆ. ಟಯೋಟಾ,TVS, ಬ್ರಿಟಾನಿಯಾ, ಟಾಟಾ ಮೋಟಾರ್ಸ್ ಕಂಪನಿಗಳಿಗೆ SSLC, PUC,Degree, ITIನವರು. 18,000/- 60,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 9353185367

Part-Time Jobs

WORK FROM Home: ಮನೆಯಲ್ಲಿ ಕುಳಿತು 10,000–20,000 ದುಡಿಯಬಹುದು. ವಯೋಮಿತಿ ಇರುವುದಿಲ್ಲ. ಮೊದಲು ಬಂದವರಿಗೆ ಆದ್ಯತೆ. 8861041526, 9945791526

Wanted

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತಊಟ ವಸತಿ ಸಂಬಳ 15,000/- ರಿಂದ 20,000/- ESI, PF ಸೌಲಭ್ಯವಿರುತ್ತದೆ. ಬೆಂಗಳೂರು-56. ಸಂಪರ್ಕಿಸಿ: 9606385001, 9606523337

ಭವಿಷ್ಯ

Astrology

★ಓಂದುರ್ಗ ಆಂಜನಂ★ ನಿಮ್ಮ ಯಾವುದೇ ಧೀರ್ಘಕಾಲದ ಎಲ್ಲೂ ಪರಿಹಾರವಾಗದ ಸ್ತ್ರೀಪುರುಷ ಸಂಬಂಧಿತ ಸರ್ವಸಮಸ್ಯೆಗಳಿಗೆ 3 ದಿನಗಳಲ್ಲಿ ಪರಿಹಾರ. ಶ್ರೀ.ದೇವಾನಂದನ್. 9845005009

ಪ್ರವಾಸ

Travel

ಕೃಷ್ಣ ಹೆರಿಟೇಜ್ ಟೂರ್ಸ್ 16.04.2024 AC ಬಸ್ಸಿನಲ್ಲಿ ಊಟ ರೂಮಿನೊಂದಿಗೆ 6 ದಿನಗಳು. ಕೇರಳ ಮುನ್ನಾರ್ ಗುರುವಾಯೂರು ಕಾಲಡಿ ತ್ರಿವೇಂಡ್ರಮ್,ಆಲಪಿ ಕೊಂಡಲಂ ಚೊಟ್ಟಾನಿಕರ್ ಕೊಚ್ಚಿ 10500/-. 9448390735 9449721678 9731159966

Travel Accessories

ಶ್ರಿ ಶಿವನಂದಿ ಟೂರ್ಸ್ 8792104518, 8147311578, ಶ್ರೀಲಂಕಾ 8ದಿನ 15.04.2024. ಕಾಶಿ, ಅಯೋಧ್ಯ 9ದಿನ 29.04.2024. ಅಮರನಾಥ್, ವೈಷ್ಣೋದೇವಿ 8ದಿನ 08.07.2024

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವೆಯಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

ಶಿಕ್ಷಣ

ಶಿಕ್ಷಣಕ್ಕೆ ಸಂಬಂಧಿತ ಎಲ್ಲಾ ಜಾಹೀರಾತುಗಳ ಪ್ರಕಟಣೆಗಾಗಿ

www.dhclassifieds.com

ಬುಕ್ ಮಾಡಿ

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:

+91 9731810277 | +91 9886213331

+91 9845114560 | +91 9900428036

*Conditions apply

ಆಶ್ರಯಕ್ಕೆ ಮೊರೆ

ಸೆಂಟ್ರಲ್ ಗಾಜಾ ನಗರದಲ್ಲಿ ಸೋಮವಾರ ಇಸ್ರೇಲ್ ಬಾಂಬ್ ದಾಳಿ ನಡೆಸಿದ ನಂತರ ಪ್ಯಾಲೆಸ್ಟೀನಿಯನ್ನರು ಸುರಕ್ಷಿತ ಸ್ಥಳದತ್ತ ಹೊರಟರು (ಎಎಫ್‌ಪಿ ಚಿತ್ರ)

ಆಸ್ಪತ್ರೆ ಮೇಲೆ ಇಸ್ರೇಲ್ ದಾಳಿ

ರಫಾ (ಗಾಜಾಪಟ್ಟಿ): ಗಾಜಾಪಟ್ಟಿಯಲ್ಲಿನ ದೊಡ್ಡ ಆಸ್ಪತ್ರೆಯೊಂದರ ಮೇಲೆ ಇಸ್ರೇಲ್ ಪಡೆಗಳು ಸೋಮವಾರ ನಸುಕಿನಲ್ಲಿ ದಾಳಿ ನಡೆಸಿದ್ದು, ಹಮಾಸ್ ಬಂಡುಕೋರರು ಇಲ್ಲಿ ಆಶ್ರಯ ಪಡೆದಿದ್ದಾರೆ ಎಂದು ದೂರಿವೆ.

ಯುದ್ಧ ಟ್ಯಾಂಕರ್‌ಗಳು, ಫಿರಂಗಿಗಳೊಂದಿಗೆ ಆಸ್ಪತ್ರೆಯನ್ನು ಸುತ್ತುವರಿದಿರುವ ಇಸ್ರೇಲ್ ಪಡೆಗಳು, ಗುಂಡಿನ ದಾಳಿ ನಡೆಸಿವೆ ಎಂದು ಆಸ್ಪತ್ರೆಯೊಳಗೆ ಆಶ್ರಯ ಪಡೆದಿರುವವರು ಹೇಳಿದ್ದಾರೆ. ಸೇನಾ ಪಡೆಗಳು ಕಟ್ಟಡಗಳ ಮೇಲೆಯೂ ದಾಳಿ ನಡೆಸಿದ್ದು, ಹಲವರನ್ನು ಬಂಧಿಸಿವೆ ಎಂದಿದ್ದಾರೆ.

‘ಮೂರು ತಿಂಗಳಿನಿಂದ ಚಿಕಿತ್ಸೆಗಾಗಿ ಇಲ್ಲಿದ್ದು ಈಗ ಒಳಗೆ ಸಿಲುಕಿಕೊಂಡಿದ್ದೇನೆ. ಯಾರಾದರೂ ಓಡಾಡುವುದು ಕಾಣಿಸಿದರೆ ಗುಂಡಿನ ಮಳೆಗರೆಯ ಲಾಗುತ್ತಿದೆ. ವೈದ್ಯರು, ಆಂಬುಲೆನ್ಸ್‌ಗಳು ಸಹ ಓಡಾಡುವಂತಿಲ್ಲ’ ಎಂದು ಆಸ್ಪತ್ರೆಯೊಳಗಿರುವ ಅಬ್ದೆಲ್–ಹದಿ ಸಯೀದ್ ತಿಳಿಸಿದರು.

‘ರೋಗಿಗಳು, ವೈದ್ಯಕೀಯ ಸಿಬ್ಬಂದಿ ಹಾಗೂ ರಕ್ಷಣೆ ಕೋರಿ ಆಶ್ರಯ ಬಯಸಿರುವ 30 ಸಾವಿರಕ್ಕೂ ಹೆಚ್ಚು ಜನರು ಈ ಆಸ್ಪತ್ರೆಯೊಳಗಿದ್ದಾರೆ. ವಿಶೇಷ ಶಸ್ತ್ರಚಿಕಿತ್ಸೆ ನಡೆಸುವ ಕಟ್ಟಡವನ್ನೇ ಗುರಿಯಾಗಿಸಿಕೊಂಡು ಇಸ್ರೇಲ್ ಸೇನಾ ಪಡೆಗಳು ಗುಂಡಿನ ದಾಳಿ ನಡೆಸಿವೆ’ ಎಂದು ಗಾಜಾದ ಆರೋಗ್ಯ ಸಚಿವಾಲಯ ತಿಳಿಸಿದೆ.

ಶಿಫಾ ಆಸ್ಪತ್ರೆಯ ಕೆಳಭಾಗದಲ್ಲಿ ಹಲವು ಸೌಕರ್ಯಗಳೊಂದಿಗೆ ಹಮಾಸ್ ಬಂಡುಕೋರರು ಕಮಾಂಡಿಂಗ್ ಸೆಂಟರ್ ಹೊಂದಿದ್ದಾರೆ ಎಂದು ಆರೋಪಿಸಿದ್ದ ಇಸ್ರೇಲ್ ಪಡೆಯು, ವ್ಯಾಪಕ ದಾಳಿ ನಡೆಸುವ ಮೂಲಕ ಬಂಡುಕೋರರ ಅಡಗುದಾಣವನ್ನು ಕಳೆದ ನವೆಂಬರ್‌ನಲ್ಲೇ ನಾಶಪಡಿಸಿತ್ತು. ದಾಳಿಯ ವೇಳೆ ಬಂಡುಕೋರರು ಹೊಂದಿದ್ದ ಬಂಕರ್, ಶಸ್ತ್ರಾಸ್ತ್ರಗಳು ಹಾಗೂ ಸುರಂಗ ಮಾರ್ಗದ ವಿಡಿಯೊವನ್ನು ಬಿಡುಗಡೆ ಮಾಡಿತ್ತು. ಆಸ್ಪತ್ರೆಯು ಕಾರ್ಯಾಚರಣೆ ಸ್ಥಗಿತಗೊಳಿಸಿತ್ತು.

ಅಫ್ಗಾನಿಸ್ತಾನದ ಮೇಲೆ ಪಾಕ್ ವೈಮಾನಿಕ ದಾಳಿ

ಇಸ್ಲಾಮಾಬಾದ್ (ಪಿಟಿಐ): ‘ಅಫ್ಗಾನಿಸ್ತಾನದ ಮೇಲೆ ಪಾಕಿಸ್ತಾನವು ಸೋಮವಾರ ವೈಮಾನಿಕ ದಾಳಿ ನಡೆಸಿದ್ದು, ಮೂವರು ಮಕ್ಕಳು ಸೇರಿದಂತೆ 8 ಮಂದಿ ಮೃತಪಟ್ಟಿದ್ದಾರೆ ಎಂದು ತಾಲಿಬಾನ್ ಆಡಳಿತ ತಿಳಿಸಿದೆ.

ಅಫ್ಗಾನಿಸ್ತಾನದ ಪಕ್ತಿಕ ಮತ್ತು ಖೋಸ್ಟ್ ಪ್ರಾಂತ್ಯ ಮತ್ತು ಪಾಕಿಸ್ತಾನದ ಗಡಿಭಾಗದಲ್ಲಿ ವೈಮಾನಿಕ ದಾಳಿ ನಡೆದಿರುವ ಬಗ್ಗೆ ಅಫ್ಗಾನಿಸ್ತಾನ ಸರ್ಕಾರದ ಅಧಿಕಾರಿಗಳು ಖಚಿತಪಡಿಸಿದ್ದಾರೆ.

‘ಮುಂಜಾನೆ 3 ಗಂಟೆಯ ವೇಳೆಗೆ ಪಾಕಿಸ್ತಾನದ ಯುದ್ಧವಿಮಾನಗಳು ನಾಗರಿಕರ ಮನೆಗಳ ಮೇಲೆ ದಾಳಿ ನಡೆಸಿವೆ ಎಂದು ಅಫ್ಗಾನ್ ಸರ್ಕಾರದ ವಕ್ತಾರ ಝಬಿವುಲ್ಲ ಮುಜಾಹಿದ್ ಹೇಳಿಕೆ ನೀಡಿದ್ದಾರೆ’ ಎಂದು ಡಾನ್ ಪತ್ರಿಕೆ ವರದಿ ಮಾಡಿದೆ.

‘ಸಾಮಾನ್ಯ ಜನರ ಮನೆಗಳನ್ನೆ ಗುರಿಯಾಗಿಸಿಕೊಂಡು ದಾಳಿ ನಡೆಸಲಾಗಿದೆ. ಪಕ್ತಿಕದಲ್ಲಿ ಮೂವರು ಮಹಿಳೆಯರು ಮತ್ತು ಮೂವರು ಮಕ್ಕಳು ಸಾವಿಗೀಡಾಗಿದ್ದಾರೆ. ಖೋಸ್ಟ್‌ನಲ್ಲಿ ಒಂದು ಮನೆ ಸಂಪೂರ್ಣ ನಾಶವಾಗಿದ್ದು, ಇಬ್ಬರು ಮಹಿಳೆಯರು ಮೃತಪಟ್ಟಿದ್ದಾರೆ’ ಎಂದು ಆರೋಪಿಸಿದ್ದಾರೆ.

‘ಪಾಕಿಸ್ತಾನವು ಹಿಂಸಾತ್ಮಕ ಚಟುವಟಿಕೆಗಳ ನಿಯಂತ್ರಣದ ವೈಫಲ್ಯ ಮತ್ತು ಸಮಸ್ಯೆಗಳಿಗೆ ಅಫ್ಗಾನಿಸ್ತಾನವನ್ನು ಹೊಣೆಗಾರರನ್ನಾಗಿಸುವುದನ್ನು ನಿಲ್ಲಿಸಬೇಕು. ಇಂತಹ ಕೃತ್ಯಗಳು ಪಾಕಿಸ್ತಾನದ ಹಿಡಿತಕ್ಕೆ ಸಿಗದ ಭೀಕರ ಪರಿಣಾಮಗಳಿಗೆ ಕಾರಣವಾಗಬಹುದು’ ಎಂದು ಎಚ್ಚರಿಸಿದ್ದಾರೆ.

ಪಾಕಿಸ್ತಾನದ ಉತ್ತರ ವಾಜಿರಿಸ್ತಾನ್‌ನಲ್ಲಿ ಇಬ್ಬರು ಅಧಿಕಾರಿಗಳು ಸೇರಿದಂತೆ ಏಳು ಯೋಧರ ಸಾವಿಗೆ ಕಾರಣರಾದ ಭಯೋತ್ಪಾದಕರ ದಾಳಿಗೆ ಪ್ರತಿಕಾರ ತೀರಿಸಿಕೊಳ್ಳುವುದಾಗಿ ಪಾಕಿಸ್ತಾನ ಅಧ್ಯಕ್ಷ ಆಸೀಫ್ ಅಲಿ ಜರ್ದಾರಿ ಹೇಳಿಕೆ ನೀಡಿದ ಮರುದಿನವೇ ದಾಳಿ ನಡೆದಿದೆ.

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ

ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.

ಬುಕ್ ಮಾಡಿ

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ

Vishal: +91 9845114560 | Jerry: +91 9731810277 |

Tanveer: +91 9886213331 | Ravichandra: +91 9901641752 |

Anitha: +91 9900428036

‘ಉತ್ತರ ಕೊರಿಯಾ: ರಷ್ಯಾಕ್ಕೆ ಏಳು ಸಾವಿರ ಕಂಟೈನರ್ ಯುದ್ಧ ಸಾಮಗ್ರಿ’

ಸೋಲ್ (ಎಪಿ): ‘ಉಕ್ರೇನ್ ವಿರುದ್ಧದ ಯುದ್ಧಕ್ಕಾಗಿ ಉತ್ತರ ಕೊರಿಯಾವು ಕಳೆದ ವರ್ಷದಿಂದಲೂ ಶಸ್ತ್ರಾಸ್ತ್ರಗಳು ಮತ್ತು ಇತರ ಮಿಲಿಟರಿ ಉಪಕರಣಗಳನ್ನೊಳಗೊಂಡ ಸುಮಾರು 7 ಸಾವಿರ ಕಂಟೇನರ್‌ಗಳನ್ನು ರಷ್ಯಾಗೆ ರವಾನಿಸಿದೆ’ ಎಂದು ದಕ್ಷಿಣ ಕೊರಿಯಾದ ರಕ್ಷಣಾ ಸಚಿವರು ಸೋಮವಾರ ತಿಳಿಸಿದ್ದಾರೆ.

ಜಪಾನ್ ಮಿಲಿಟರಿಯೊಂದಿಗೆ ಜಂಟಿಯಾಗಿ ಅತ್ಯಲ್ಪ ದೂರದ ಖಂಡಾಂತರ ಕ್ಷಿಪಣಿಗಳನ್ನು ಪೂರ್ವ ತೀರದಲ್ಲಿ ಯಶಸ್ವಿಯಾಗಿ ಉಡ್ಡಯನಗೊಳಿಸಲಾಗಿದೆ ಎಂದು ದಕ್ಷಿಣ ಕೊರಿಯಾದ ಮಿಲಿಟರಿಯು ಪ್ರಕಟಿಸಿದ ಕೆಲವೇ ಗಂಟೆಗಳ ನಂತರ ನಡೆದ ಪತ್ರಿಕಾಗೋಷ್ಠಿಯಲ್ಲಿ ಶಿನ್ ವೊನ್–ಸಿಕ್ ಈ ವಿಷಯ ತಿಳಿಸಿದರು.

ಉಕ್ರೇನ್ ವಿರುದ್ಧದ ಯುದ್ಧಕ್ಕಾಗಿ ಉತ್ತರ ಕೊರಿಯಾವು ಈಚೆಗೆ ರಷ್ಯಾಕ್ಕೆ ಫಿರಂಗಿ ಶೆಲ್‌ಗಳು, ಕ್ಷಿಪಣಿಗಳು ಮತ್ತು ಇನ್ನಿತರ ಯುದ್ಧೋಪಕರಣಗಳನ್ನು ಪೂರೈಸುತ್ತಿದೆ ಎಂದು ಅಮೆರಿಕ ಮತ್ತು ದಕ್ಷಿಣ ಕೊರಿಯಾದ ಅಧಿಕಾರಿಗಳು ಆರೋಪಿಸಿದ್ದಾರೆ. ಕಳೆದ ಸೆಪ್ಟೆಂಬರ್‌ನಲ್ಲಿ ಉತ್ತರ ಕೊರಿಯಾದ ಅಧ್ಯಕ್ಷ ಕಿಮ್ ಮತ್ತು ರಷ್ಯಾದ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ನಡುವೆ ನಡೆದ ಶೃಂಗಸಭೆಯ ನಂತರ ಶಸ್ತ್ರಾಸ್ತ್ರಗಳ ವರ್ಗಾವಣೆ ವೇಗ ಪಡೆದುಕೊಂಡಿದೆ ಎಂದಿದ್ದಾರೆ.

ಇದಕ್ಕೆ ಪ್ರತಿಯಾಗಿ ಉತ್ತರ ಕೊರಿಯಾವು ತನ್ನ ಪಡೆಗಳ ಉನ್ನತೀಕರಣಕ್ಕೆ ಅವಶ್ಯವಿರುವ ಮಿಲಿಟರಿ ಉಪಕರಣ, ಆರ್ಥಿಕ ನೆರವು ಹಾಗೂ ಆಹಾರವನ್ನು ಪಡೆಯುತ್ತಿದೆ ಎಂದು ದಕ್ಷಿಣ ಕೊರಿಯಾದ ಅಧಿಕಾರಿಗಳು ತಿಳಿಸಿದ್ದಾರೆ.

ರಷ್ಯಾ ಮತ್ತು ಉತ್ತರ ಕೊರಿಯಾವು ಈ ಆರೋಪವನ್ನು ನಿರಾಕರಿಸಿವೆ.

ಪೊಲೀಸ್ ಠಾಣೆ ಮೇಲೆ ದಾಳಿ: 9 ಮಂದಿ ಸೆರೆ

ಪ್ಯಾರಿಸ್ (ರಾಯಿಟರ್ಸ್): ಪ್ಯಾರಿಸ್ ಹೊರವಲಯದಲ್ಲಿ ಪೊಲೀಸ್ ಠಾಣೆ ಮೇಲಿನ ದಾಳಿ ಪ್ರಕರಣಕ್ಕೆ ಸಂಬಂಧಿಸಿ ದಂತೆ 9 ಜನರನ್ನು ಪೊಲೀಸರು ಬಂಧಿಸಿದ್ದಾರೆ.

ಪ್ಯಾರಿಸ್‌ನ ಲಾ ಕಕೋನರ್ಯುವ್‌ನಲ್ಲಿರುವ ಪೊಲೀಸ್ ಠಾಣೆಯಲ್ಲಿ ಭಾನುವಾರ ಸಂಜೆ ಯುವಕರು ಹಾಗೂ ಪೊಲೀಸರ ನಡುವೆ ಸಂಘರ್ಷ ನಡೆದ ವೇಳೆ 9 ಯುವಕರನ್ನು ಬಂಧಿಸಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

ಎಸ್‌ಪಿ ನಾಯಕ ಆಜಂ ಖಾನ್‌ಗೆ 7 ವರ್ಷ ಜೈಲು

ಲಖನೌ: ಸಮಾಜವಾದಿ ಪಕ್ಷದ (ಎಸ್‌ಪಿ) ಪಕ್ಷದ ಪ್ರಧಾನ ಕಾರ್ಯದರ್ಶಿ ಆಜಂ ಖಾನ್ ಅವರಿಗೆ 2019ರಲ್ಲಿ ದಾಖಲಾದ ಹಲ್ಲೆ ಪ್ರಕರಣದಲ್ಲಿ ಉತ್ತರ ಪ್ರದೇಶದ ರಾಂಪುರ ಪಟ್ಟಣದ ನ್ಯಾಯಾಲಯ ಸೋಮವಾರ ಏಳು ವರ್ಷಗಳ ಜೈಲು ಶಿಕ್ಷೆ ವಿಧಿಸಿದೆ.

ಇತರ ಮೂವರು ಆರೋಪಿಗಳಾದ ರಾಂಪುರ ಪುರಸಭೆ ಅಧ್ಯಕ್ಷ ಅಝರ್ ಅಹ್ಮದ್ ಖಾನ್, ರಾಂಪುರದ ಮಾಜಿ ಅಧಿಕಾರಿ (ಸಿಒ) ಅಲಿ ಹಸನ್ ಮತ್ತು ಗುತ್ತಿಗೆದಾರ ಬರ್ಕತ್ ಅಲಿ ಅವರಿಗೂ ಈ ಪ್ರಕರಣದಲ್ಲಿ ತಲಾ ಐದು ವರ್ಷಗಳ ಶಿಕ್ಷೆಯನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯವು ವಿಧಿಸಿದೆ.

ಪ್ರಾಸಿಕ್ಯೂಷನ್ ಪ್ರಕಾರ, ಆಜಂ ಖಾನ್ ಸೂಚನೆ ಮೇರೆಗೆ ಅಲಿ ಹಸನ್ ಮತ್ತು ಇತರರು ರಾಂಪುರ ಪಟ್ಟಣದ ಡುಂಗರ್‌ಪುರ ಬಸ್ತಿ ನಿವಾಸಿ ಎಹ್ತೆಶಾಮ್ ಎಂಬುವರ ಮನೆಗೆ ನುಗ್ಗಿ ಹಲ್ಲೆ ನಡೆಸಿದ್ದರು. ಈ ಪ್ರಕರಣದಲ್ಲಿ ಆಜಂ ಖಾನ್ ವಿರುದ್ಧ ಕ್ರಿಮಿನಲ್ ಪಿತೂರಿ ಆರೋಪ ಹೊರಿಸಲಾಗಿತ್ತು. ಖಾನ್, ತಮ್ಮ ಮಗ ಅಬ್ದುಲ್ಲಾ ಆಜಂನ ನಕಲಿ ಜನನ ಪ್ರಮಾಣಪತ್ರದ ಪ್ರಕರಣದಲ್ಲಿ ಏಳು ವರ್ಷಗಳ ಜೈಲು ಶಿಕ್ಷೆಗೆ ಗುರಿಯಾಗಿದ್ದಾರೆ.

ಭಾರತೀಯ ವಿದ್ಯಾರ್ಥಿ ಅಮೆರಿಕದಲ್ಲಿ ಸಾವು

ನ್ಯೂಯಾರ್ಕ್(ಪಿಟಿಐ): ಬೋಸ್ಟನ್‌ನಗರದಲ್ಲಿಅಭಿಜಿತ್‌ಪರುಚುರುಎನ್ನುವಭಾರತೀಯ ವಿದ್ಯಾರ್ಥಿಯೊಬ್ಬ ಮೃತಪಟ್ಟಿದ್ದು, ಕ್ರಿಮಿನಲ್ ಅಪರಾಧ ಕೃತ್ಯವು ಈ ವಿದ್ಯಾರ್ಥಿಯ ಸಾವಿಗೆ ಕಾರಣ ಅಲ್ಲ ಎಂದು ಪ್ರಾಥಮಿಕ ತನಿಖೆ ಕೈಗೊಂಡ ಅಧಿಕಾರಿಗಳು ಹೇಳಿದ್ದಾರೆ.

‘ಅಭಿಜಿತ್ ಅವರ ಪಾಲಕರು ಕನೆಕ್ಟಿಕಟ್ ನಿವಾಸಿಗಳು. ಅವರು ಪತ್ತೆದಾರರ ಜೊತೆ ನೇರ ಸಂಪರ್ಕದಲ್ಲಿದ್ದಾರೆ’ ಎಂದು ನ್ಯೂಯಾರ್ಕ್‌ನಲ್ಲಿ ಇರುವ ಭಾರತದ ರಾಯಭಾರ ಕಚೇರಿ ಹೇಳಿದೆ. ಅಭಿಜಿತ್ ಅವರ ಪಾರ್ಥಿವ ಶರೀರದ ಅಂತಿಮ ಸಂಸ್ಕಾರವನ್ನು ಆಂಧ್ರಪ್ರದೇಶದ ತೆನಾಲಿಯಲ್ಲಿ ಈಗಾಗಲೇ ನಡೆಸಲಾಗಿದೆ ಎಂದು ಮೂಲಗಳು ಹೇಳಿವೆ. ಅಮೆರಿಕ ಮೂಲದ ಟೀಮ್ ಏಯ್ಡ್ ಸಂಸ್ಥೆಯು ಅಭಿಜಿತ್ ಅವರ ಮೃತದೇಹವನ್ನು ಭಾರತಕ್ಕೆ ತರಲು ನೆರವಾಗಿತ್ತು.

2024ರ ಆರಂಭದಿಂದ ಇದುವರೆಗೆ ಭಾರತೀಯ ಹಾಗೂ ಭಾರತ ಮೂಲದ ಕನಿಷ್ಠ ಆರು ವಿದ್ಯಾರ್ಥಿಗಳು ಮೃತಪಟ್ಟಿದ್ದಾರೆ. ಭಾರತ ಮೂಲದವರ ಮೇಲೆ ದಾಳಿಗಳು ಹೆಚ್ಚಾಗಿರುವುದು ಸಮುದಾಯದಲ್ಲಿ ಆತಂಕಕ್ಕೆ ಕಾರಣವಾಗಿದೆ.

ಭಾರತೀಯರು ಹಾಗೂ ಭಾರತ ಮೂಲದ ವ್ಯಕ್ತಿಗಳು, ವಿದ್ಯಾರ್ಥಿಗಳ ಮೇಲೆ ನಡೆದ ದಾಳಿಗಳ ಪರಿಣಾಮವಾಗಿ ವಾಷಿಂಗ್ಟನ್‌ನಲ್ಲಿ ಇರುವ ಭಾರತೀಯ ರಾಯಭಾರ ಕಚೇರಿಯು ವರ್ಚುವಲ್ ಆಗಿ ಸಭೆಯೊಂದನ್ನು ಆಯೋಜಿಸಿತ್ತು. ಅಮೆರಿಕದ ವಿವಿಧೆಡೆ ಇರುವ ಭಾರತೀಯ ವಿದ್ಯಾರ್ಥಿಗಳು ಇದರಲ್ಲಿ ಭಾಗಿಯಾಗಿದ್ದರು.

ಕೆ. ಪೊನ್ಮುಡಿ ಅವರನ್ನು ಸಚಿವರನ್ನಾಗಿ ನೇಮಿಸುವ ಪ್ರಸ್ತಾವ ತಿರಸ್ಕರಿಸಿದ್ದಕ್ಕೆ ಡಿಎಂಕೆ ಆಕ್ಷೇಪ

‘ರಾಜ್ಯಪಾಲ ಸ್ಥಾನಕ್ಕೆ ರವಿ ಯೋಗ್ಯರಲ್ಲ’

ಚೆನ್ನೈ (ಪಿಟಿಐ): ಶಾಸಕ ಕೆ. ಪೊನ್ಮುಡಿ ಅವರನ್ನು ಸಚಿವರನ್ನಾಗಿ ಪುನಃ ನೇಮಿಸುವಂತೆ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು ಸಲ್ಲಿಸಿದ್ದ ಮನವಿಯನ್ನು ತಿರಸ್ಕರಿಸಿರುವ ತಮಿಳುನಾಡು ರಾಜ್ಯಪಾಲ ಆರ್.ಎನ್. ರವಿ ಅವರ ಕ್ರಮಕ್ಕೆ ಆಡಳಿತಾರೂಢ ಡಿಎಂಕೆ ಪಕ್ಷವು ತೀವ್ರ ಕಿಡಿಕಾರಿದೆ.

ಕೆ.ಪೊನ್ಮುಡಿ

‘ರವಿ ಅವರು ರಾಜ್ಯಪಾಲರ ಸ್ಥಾನದಲ್ಲಿ ಮುಂದುವರಿಯಲು ಯೋಗ್ಯರಲ್ಲ. ಅವರ ಈ ಕ್ರಮ ಸಂವಿಧಾನದ ಉಲ್ಲಂಘನೆ’ ಎಂದೂ ವಾಗ್ದಾಳಿ ನಡೆಸಿದೆ.

‘ರಾಜ್ಯಪಾಲರು ಪದೇ ತಪ್ಪೆಸಗುವ ಅಪರಾಧಿ ಎಂಬುದನ್ನು ಸಾಬೀತು ಮಾಡುತ್ತಿದ್ದಾರೆ ಮತ್ತು ಅವರು ಸಂವಿಧಾನವನ್ನು ಅಗೌರವಿಸುತ್ತಿದ್ದಾರೆ’ ಎಂದು ಡಿಎಂಕೆ ರಾಜ್ಯಸಭೆ ಸದಸ್ಯ ಮತ್ತು ಹಿರಿಯ ವಕೀಲ ಪಿ. ವಿಲ್ಸನ್ ಆರೋಪಿಸಿದ್ದಾರೆ.

ಪೊನ್ಮುಡಿ ಅವರ ಅನರ್ಹತೆ ಮುಗಿದಿದೆ ಎಂದು ತಮಿಳುನಾಡು ವಿಧಾನಸಭೆಯು ಅಧಿಕೃತವಾಗಿ ಘೋಷಿಸಿದೆ. ಚುನಾವಣಾ ಆಯೋಗವು ಪೊನ್ಮುಡಿಯವರ ತಿರುಕೋಯಿಲೂರ್ ಕ್ಷೇತ್ರಕ್ಕೆ ಹೊರಡಿಸಿದ್ದ ಅಧಿಸೂಚನೆ ಹಿಂಪಡೆದಿದೆ. ಆದರೂ ರಾಜ್ಯಪಾಲರು, ‘ಮದ್ರಾಸ್ ಹೈಕೋರ್ಟ್‌ನ ತೀರ್ಪನ್ನು ಸುಪ್ರೀಂ ಕೋರ್ಟ್ ವಜಾಗೊಳಿಸಿಲ್ಲ, ಕೇವಲ ಅಮಾನತುಗೊಳಿಸಿದೆ’ ಎಂದು ಅಸಂಬದ್ಧವಾಗಿ ವ್ಯಾಖ್ಯಾನಿಸಿದ್ದಾರೆ. ಇದರಿಂದ ಸುಪ್ರೀಂ ಕೋರ್ಟ್‌ನ ಆದೇಶಕ್ಕೆ ಅಪಚಾರವಾಗಿದೆ ಎಂದು ವಿಲ್ಸನ್ ಹೇಳಿದ್ದಾರೆ.

ಸಚಿವರಾಗಿದ್ದ ಪೊನ್ಮುಡಿ ಅವರನ್ನು ಆಸ್ತಿ ಅಕ್ರಮ ಸಂಪಾದನೆ ಪ್ರಕರಣದಲ್ಲಿ ಮದ್ರಾಸ್ ಹೈಕೋರ್ಟ್ ದೋಷಿ ಎಂದು ನಿರ್ಧರಿಸಿ, 3 ವರ್ಷ ಶಿಕ್ಷೆ ವಿಧಿಸಿತ್ತು. ಈ ತೀರ್ಪನ್ನು ಸುಪ್ರೀಂ ಕೋರ್ಟ್ ಅಮಾನತುಗೊಳಿಸಿತ್ತು. ಈ ಬೆಳವಣಿಗೆಯ ನಂತರ ಪೊನ್ಮುಡಿ ಅವರನ್ನು ಸಂಪುಟಕ್ಕೆ ಮತ್ತೆ ಸೇರಿಸಿಕೊಳ್ಳುವ ಸಂಬಂಧ ಮಾರ್ಚ್ 13 ರಂದು ಸ್ಟಾಲಿನ್ ರಾಜ್ಯಪಾಲರಿಗೆ ಪತ್ರ ಬರೆದಿದ್ದರು. ಆದರೆ, ಇದಕ್ಕೆ ರಾಜ್ಯಪಾಲರು ಒಪ್ಪಿಗೆ ನೀಡಲಿಲ್ಲ.

ತಮಿಳುನಾಡು ಅರ್ಜಿ ವಿಚಾರಣೆಗೆ ಸಮ್ಮತಿಸಿದ ‘ಸುಪ್ರೀಂ’

ನವದೆಹಲಿ (ಪಿಟಿಐ): ಡಿಎಂಕೆ ಹಿರಿಯ ನಾಯಕ ಕೆ. ಪೊನ್ಮುಡಿ ಅವರನ್ನು ರಾಜ್ಯ ಸಂಪುಟಕ್ಕೆ ಪುನಃ ಸೇರ್ಪಡೆ ಮಾಡಿಕೊಳ್ಳಲು ಅನುಮತಿಸದ ರಾಜ್ಯಪಾಲರ ನಿರ್ಧಾರ ಪ್ರಶ್ನಿಸಿ ತಮಿಳುನಾಡು ಸರ್ಕಾರ ಸಲ್ಲಿಸಿರುವ ಅರ್ಜಿ ವಿಚಾರಣೆಗೆ ಸುಪ್ರೀಂ ಕೋರ್ಟ್ ಸೋಮವಾರ ಸಮ್ಮತಿಸಿದೆ.

ಮುಖ್ಯನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಮತ್ತು ನ್ಯಾಯಮೂರ್ತಿಗಳಾದ ಜೆ.ಬಿ.ಪಾರ್ದೀವಾಲ ಮತ್ತು ಮನೋಜ್ ಮಿಶ್ರಾ ಅವರಿದ್ದ ಪೀಠದ ಮುಂದೆ ತಮಿಳುನಾಡು ರಾಜ್ಯ ಸರ್ಕಾರದ ಪರವಾಗಿ ಹಾಜರಾದ ಹಿರಿಯ ವಕೀಲ ಅಭಿಷೇಕ್ ಸಿಂಘ್ವಿ, ಇದರಲ್ಲಿ ತುರ್ತು ಇರುವುದರಿಂದ ವಿಚಾರಣೆಗೆ ತೆಗೆದುಕೊಳ್ಳುವಂತೆ ಮನವಿ ಮಾಡಿದರು.

ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ನೇತೃತ್ವದ ಸಚಿವ ಸಂಪುಟದ ಸಲಹೆ ಮೇರೆಗೆ ರಾಜ್ಯಪಾಲರು ಕ್ರಮ ತೆಗೆದುಕೊಳ್ಳಲು ನಿರ್ದೇಶನ ನೀಡುವಂತೆ ಕೋರಿ ಸರ್ಕಾರ ಅರ್ಜಿ ಸಲ್ಲಿಸಿದೆ.

‘ಪೊನ್ಮುಡಿ ಅವರಿಗೆ ನೀಡಿದ್ದ ಶಿಕ್ಷೆಗೆ ಸುಪ್ರೀಂ ಕೋರ್ಟ್ ತಡೆ ನೀಡಿದೆ. ಅವರನ್ನು ಪುನಃ ಸಚಿವರಾಗಿ ನೇಮಕ ಮಾಡಲು ಮುಖ್ಯಮಂತ್ರಿ ಶಿಫಾರಸು ಮಾಡಿದ್ದಾರೆ. ಆದರೆ, ಈ ಹಿಂದೆಯೂ ತಪ್ಪಾಗಿ ನಡೆದುಕೊಂಡಿದ್ದ ರಾಜ್ಯಪಾಲರು ಡಿಎಂಕೆ ಹಿರಿಯ ನಾಯಕ ಮತ್ತು ಮಾಜಿ ಉನ್ನತ ಶಿಕ್ಷಣ ಸಚಿವರನ್ನು ಪುನಃ ಸಂಪುಟಕ್ಕೆ ಸೇರಿಸಿಕೊಳ್ಳುವುದು ಸಾಂವಿಧಾನಿಕ ನೈತಿಕತೆಗೆ ವಿರುದ್ಧವಾದುದು ಎಂದು ಅಭಿಪ್ರಾಯಪಟ್ಟ ರಾಜ್ಯಪಾಲರು, ರಾಜ್ಯ ಸರ್ಕಾರದ ಕೋರಿಕೆ ತಳ್ಳಿಹಾಕಿದ್ದಾರೆ’ ಎಂದು ಸಿಂಘ್ವಿ, ಪೀಠಕ್ಕೆ ತಿಳಿಸಿದರು.

ಆಗ ಇದಕ್ಕೆ ಪ್ರತಿಕ್ರಿಯಿಸಿದ ಮುಖ್ಯ ನ್ಯಾಯ ಮೂರ್ತಿಗಳು, ‘ವಿವರವನ್ನು ಇಮೇಲ್ ಕಳುಹಿಸಿ, ನಾನು ಪರಿಶೀಲಿಸುತ್ತೇನೆ’ ಎಂದರು.

‘ಎಎಪಿಗೆ ₹100 ಕೋಟಿ ಪಾವತಿ’

ಅಬಕಾರಿ ನೀತಿ: ಲಾಭಕ್ಕೆ ಬಿಆರ್‌ಎಸ್ ನಾಯಕಿ ಸಂಚು–ಇ.ಡಿ

ನವದೆಹಲಿ (ಪಿಟಿಐ): ಅಬಕಾರಿ ನೀತಿ ಮೂಲಕ ಅನುಕೂಲ ಪಡೆದುಕೊಳ್ಳಲು ದೆಹಲಿಯಲ್ಲಿ ಆಡಳಿತ ನಡೆಸುತ್ತಿರುವ ರಾಜಕೀಯ ಪಕ್ಷಕ್ಕೆ ₹ 100 ಕೋಟಿ ನೀಡುವ ಮೂಲಕ ಬಿಆರ್‌ಎಸ್ ನಾಯಕಿ ಕೆ.ಕವಿತಾ ‘ಸಂಚು’ ನಡೆಸಿದ್ದರು ಎಂದು ಇ.ಡಿ ಆರೋಪಿಸಿದೆ.

ಕೆ.ಕವಿತಾ

ಆಮ್ ಆದ್ಮಿ ಪಕ್ಷದ (ಎಎಪಿ) ಉನ್ನತ ನಾಯಕರಾದ ಅರವಿಂದ ಕೇಜ್ರಿವಾಲ್, ಮನೀಶ್ ಸಿಸೋಡಿಯಾ ಅವರ ಜೊತೆಗೂಡಿ ಕವಿತಾ ಮತ್ತು ಇತರರು ಸಂಚು ನಡೆಸಿದ್ದರು ಎಂದು ಜಾರಿ ನಿರ್ದೇಶನಾಲಯ (ಇ.ಡಿ) ಮಂಗಳವಾರ ಹೇಳಿಕೆ ನೀಡಿದೆ.

ತೆಲಂಗಾಣದ ಮಾಜಿ ಮುಖ್ಯಮಂತ್ರಿ ಕೆ.ಚಂದ್ರಶೇಖರ ರಾವ್ ಅವರ ಪುತ್ರಿ, 46 ವರ್ಷದ ಕವಿತಾ ಅವರನ್ನು ಇ.ಡಿ ಕಳೆದ ವಾರ ಹೈದರಾಬಾದ್‌ನ ಅವರ ನಿವಾಸದಲ್ಲಿಯೇ ಬಂಧಿಸಿತ್ತು. ಕವಿತಾ ಅವರನ್ನು ಮಾರ್ಚ್ 23ರವರೆಗೆ ಇ.ಡಿ ವಶಕ್ಕೆ ಒಪ್ಪಿಸಲಾಗಿದೆ.

2021–22ನೇ ಸಾಲಿನಲ್ಲಿ ಅಬಕಾರಿ ನೀತಿ ರೂಪಿಸಲು, ಜಾರಿಗೊಳಿಸಲು ಒತ್ತು ನೀಡಿದ್ದರು. ಭ್ರಷ್ಟಾಚಾರ ಮತ್ತು ಸಂಚು ನಡೆದಿದೆ. ಸಗಟು ವ್ಯಾಪಾರಿಗಳಿಂದ ನಿರಂತರವಾಗಿ ಕಿಕ್‌ಬ್ಯಾಕ್ ಪಡೆಯುವುದು ಇದರ ಉದ್ದೇಶವಾಗಿತ್ತು ಎಂದು ತಿಳಿಸಿದೆ.

ಅಬಕಾರಿಯ ವಹಿವಾಟು, ಲಾಭದಲ್ಲಿ ನಿರಂತರವಾಗಿ ಅನುಕೂಲ ಪಡೆಯುವುದು, ಎಎಪಿಗೆ ಮುಂಗಡವಾಗಿ ನೀಡಲಾಗಿದ್ದ ಹಣವನ್ನು ಪಡೆಯುವುದು ಕವಿತಾ ಮತ್ತು ಇತರರು ನಡೆಸಿದ್ದ ಸಂಚಿನ ಭಾಗವಾಗಿತ್ತು ಎಂದು ಇ.ಡಿ. ಹೇಳಿಕೆಯಲ್ಲಿ ತಿಳಿಸಿದೆ.

‘ಅಬಕಾರಿ ನೀತಿ ವಿಷಯದಲ್ಲಿ ತಮ್ಮ ಪಾತ್ರವಿಲ್ಲ’ ಎಂದು ಕವಿತಾ ಈ ಮೊದಲು ಅಲ್ಲಗಳೆದಿದ್ದರು. ಎಎಪಿ ಕೂಡಾ ‘ಬಿಜೆಪಿ ತನ್ನ ರಾಜಕೀಯ ಪ್ರತಿಸ್ಪರ್ಧಿಗಳನ್ನು ಹಣಿಯಲು ಇ.ಡಿ ಮತ್ತು ಸಿಬಿಐ ಅನ್ನು ಬಳಸಿಕೊಳ್ಳುತ್ತಿದೆ’ ಎಂದು ಆರೋಪಿಸಿತ್ತು.

ರಾಜ್ಯಗಳಿಗೆ ಚುನಾವಣಾ ಆಯೋಗ ಸೂಚನೆ

6 ಗೃಹ ಕಾರ್ಯದರ್ಶಿಗಳ ಬದಲು

ನವದೆಹಲಿ (ಪಿಟಿಐ): ಲೋಕಸಭೆ ಚುನಾವಣೆಯ ಹಿನ್ನೆಲೆಯಲ್ಲಿ ಆರು ರಾಜ್ಯಗಳಲ್ಲಿ ಗೃಹ ಇಲಾಖೆಯ ಕಾರ್ಯದರ್ಶಿಗಳ ಬದಲಾವಣೆಗೆ ಚುನಾವಣಾ ಆಯೋಗವು ಆದೇಶಿಸಿದೆ. ಜೊತೆಗೆ ಪಶ್ಚಿಮ ಬಂಗಾಳದ ಡಿಜಿಪಿ ರಾಜೀವ್ ಕುಮಾರ್ ಅವರನ್ನು ‘ಚುನಾವಣೇತರ’ ಕರ್ತವ್ಯಕ್ಕೆ ನಿಯೋಜಿಸಲೂ ನಿರ್ದೇಶಿಸಿದೆ.

ಗುಜರಾತ್, ಉತ್ತರ ಪ್ರದೇಶ, ಬಿಹಾರ, ಜಾರ್ಖಂಡ್, ಹಿಮಾಚಲ ಪ್ರದೇಶ ಮತ್ತು ಉತ್ತರಾಖಂಡ ರಾಜ್ಯಗಳ ಗೃಹ ಇಲಾಖೆಯ ಕಾರ್ಯದರ್ಶಿಗಳ ಬದಲಾವಣೆಗೆ ಆಯೋಗವು ಆದೇಶಿಸಿದೆ. ಚುನಾವಣೆಯಲ್ಲಿ ಹೋರಾಟಕ್ಕೆ ಸಮಾನ ಅವಕಾಶ ಇರಬೇಕು ಎಂದು ಆಯೋಗವು ಅಭಿಪ್ರಾಯಪಟ್ಟಿದೆ.

ಇದರ ಜೊತೆಗೆ ಮಿಜೋರಾಂ ಮತ್ತು ಹಿಮಾಚಲ ಪ್ರದೇಶದಲ್ಲಿ ಸಾಮಾನ್ಯ ಆಡಳಿತ ಇಲಾಖೆಯ ಕಾರ್ಯದರ್ಶಿ ಅವರ ಬದಲಾವಣೆಗೂ ಆದೇಶಿಸಿದೆ.

ಪಶ್ಚಿಮ ಬಂಗಾಳದ ಡಿಜಿಪಿ ಅವರನ್ನು ಈ ಹಿಂದೆ 2016ರ ವಿಧಾನಸಭೆ ಚುನಾವಣೆ ಮತ್ತು 2019ರ ಲೋಕಸಭೆ ಚುನಾವಣೆ ವೇಳೆಯಲ್ಲಿಯೂ ಚುನಾವಣಾ ಕರ್ತವ್ಯದಿಂದ ಮುಕ್ತಿಗೊಳಿಸಲಾಗಿತ್ತು. ಅದೇ ಹಿನ್ನೆಲೆಯಲ್ಲಿ ಈಗಲೂ ಬದಲಾವಣೆಗೆ ಸೂಚಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

‘ಡಿಜಿಪಿ ರಾಜೀವ್ ಕುಮಾರ್ ಅವರನ್ನು ‘ಚುನಾವಣಾಯೇತರ’ ಕರ್ತವ್ಯಕ್ಕೆ ನಿಯೋಜಿಸಬೇಕು. ಮಧ್ಯಂತರ ವ್ಯವಸ್ಥೆಯಾಗಿ ಅವರಿಗಿಂತಲೂ ಕಿರಿಯರಾದ ಅಧಿಕಾರಿಯನ್ನು ಡಿಜಿಪಿ ಹುದ್ದೆಗೆ ನಿಯೋಜಿಸಬೇಕು’ ಎದು ಆಯೋಗವು ಪಶ್ಚಿಮ ಬಂಗಾಳದ ಮುಖ್ಯ ಕಾರ್ಯದರ್ಶಿ ಅವರಿಗೆ ಆದೇಶಿಸಿದೆ.

ಆರು ರಾಜ್ಯಗಳಲ್ಲಿ ಗೃಹ ಇಲಾಖೆಯ ಕಾರ್ಯದರ್ಶಿಗಳು ಆಯಾ ರಾಜ್ಯಗಳ ಮುಖ್ಯಮಂತ್ರಿಗಳ ಸಚಿವಾಲಯವು ಒಳಗೊಂಡಂತೆ ಉಭಯ ಜವಾಬ್ದಾರಿ ನಿಭಾಯಿಸುತ್ತಿದ್ದಾರೆ ಎಂಬ ಹಿನ್ನೆಲೆಯಲ್ಲಿ ಬದಲಾವಣೆಗೆ ಆಯೋಜಿಸಿದೆ. ಇದು, ಚುನಾವಣಾ ಕರ್ತವ್ಯ ಮುಖ್ಯವಾಗಿ ಕಾನೂನು ಮತ್ತು ಸುವ್ಯವಸ್ಥೆಗೆ ಸಂಬಂಧಿಸಿದ ವಿಷಯಗಳಲ್ಲಿ ಹೊಂದಾಣಿಕೆಗೆ ಅವಕಾಶ ಕಲ್ಪಿಸಬಹುದು ಎಂದು ಆಯೋಗ ಅಭಿಪ್ರಾಯಪಟ್ಟಿದೆ.

ಚುನಾವಣೆಯ ಸಂದರ್ಭದಲ್ಲಿ ಆಯೋಗವು ಇಂಥ ತೀರ್ಮಾನ ತೆಗೆದುಕೊಳ್ಳುವುದು ಸಹಜ. ಸಾಮಾನ್ಯವಾಗಿ ತವರು ಜಿಲ್ಲೆಗಳಲ್ಲಿ ಮೂರು ವರ್ಷಗಳಿಗಿಂತ ಹೆಚ್ಚಿನ ಅವಧಿಯಿಂದ ಬೀಡುಬಿಟ್ಟಿರುವ ಅಧಿಕಾರಿಗಳ ವರ್ಗಾವಣೆಗೆ ಆದೇಶಿಸುವುದು ಸಹಜವಾಗಿದೆ.

ಚುನಾವಣೆ ವೇಳಾಪಟ್ಟಿ ಘೋಷಣೆಯ ಬಳಿಕ ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ಅವರು, ಬೃಹನ್ ಮುಂಬೈ ನಗರಪಾಲಿಕೆ ಆಯುಕ್ತ ಇಕ್ಬಾಲ್ ಸಿಂಗ್ ಚಾಹಲ್ ಮತ್ತು ಹೆಚ್ಚುವರಿ ಆಯುಕ್ತರು, ಉಪ ಆಯುಕ್ತರ ವರ್ಗಾವಣೆಗೆ ಆದೇಶಿಸಿತ್ತು. ಮಹಾರಾಷ್ಟ್ರ ಸರ್ಕಾರ ಇದಕ್ಕೆ ಸ್ಪಂದಿಸಿರಲಿಲ್ಲ. ಈ ನಡೆಗೆ ಆಯೋಗ ಅಸಮಾಧಾನ ವ್ಯಕ್ತಪಡಿಸಿದ ಹಿಂದೆಯೇ, ಮಹಾರಾಷ್ಟ್ರದ ಮುಖ್ಯ ಕಾರ್ಯದರ್ಶಿ ಅವರು, ಅಧಿಕಾರಿಗಳ ವರ್ಗಾವಣೆಗೆ ಆದೇಶಿಸಿದ್ದಾರೆ.

ಕಸಾಯಿಖಾನೆ ‘ಇಐಎ’ ವ್ಯಾಪ್ತಿಯಡಿ ತರಬೇಕಿಲ್ಲ: ಎನ್‌ಜಿಟಿಗೆ ಕೇಂದ್ರ

ನವದೆಹಲಿ (ಪಿಟಿಐ): ಕಸಾಯಿಖಾನೆ ಮತ್ತು ಮಾಂಸ ಸಂಸ್ಕರಣಾ ಘಟಕಗಳನ್ನು 2006ರ ಪರಿಸರದ ಮೇಲಿನ ಪರಿಣಾಮಗಳ ಮೌಲ್ಯಮಾಪನ (ಇಐಎ) ಅಧಿಸೂಚನೆ ವ್ಯಾಪ್ತಿಯಲ್ಲಿ ತರುವ ಅಗತ್ಯವಿಲ್ಲ ಎಂದು ಕೇಂದ್ರ ಸರ್ಕಾರವು ರಾಷ್ಟ್ರೀಯ ಹಸಿರು ನ್ಯಾಯಮಂಡಳಿಗೆ (ಎನ್‌ಜಿಟಿ) ತಿಳಿಸಿದೆ.

ಕಸಾಯಿಖಾನೆಗಳಿಂದ ಪರಿಸರಕ್ಕೆ ಆಗುವ ಹಾನಿಯನ್ನು ತಡೆಗಟ್ಟಲು ಬೇಕಾದ ಮಾರ್ಗಸೂಚಿಗಳು ಈಗಾಗಲೇ ಜಾರಿಯಲ್ಲಿವೆ ಎಂದು ಸರ್ಕಾರ ಹೇಳಿದೆ.

ಕಸಾಯಿಖಾನೆಗಳು ಹಾಗೂ ಮಾಂಸ ಸಂಸ್ಕರಣಾ ಘಟಕಗಳನ್ನು ಇಐಎ ವ್ಯಾಪ್ತಿಗೆ ತರಬೇಕೆಂದು ಒತ್ತಾಯಿಸಿ ಪ್ರಾಣಿ ಹಕ್ಕುಗಳ ಹೋರಾಟಗಾರ್ತಿ ಗೌರಿ ಮೌಲೇಖಿ ಎಂಬುವವರು ಕಳೆದ ವರ್ಷ ಹಸಿರು ನ್ಯಾಯಮಂಡಳಿ ಮೊರೆ ಹೋಗಿದ್ದರು.

ಕಸಾಯಿಖಾನೆಗಳಲ್ಲಿ ನೀರಿನ ಮಿತಿ ಮೀರಿದ ಬಳಕೆ, ಘನತ್ಯಾಜ್ಯಗಳ ಅಸಮರ್ಪಕ ವಿಲೇವಾರಿಯಿಂದ ಜಲಮೂಲಗಳು ಕಲುಷಿತಗೊಳ್ಳುವುದು ಮತ್ತು ಪ್ರಾಣಿಗಳಿಂದ ಮಾನವನಿಗೆ ಕಾಯಿಲೆಗಳು ಹರಡುವ ಅಪಾಯಗಳ ಬಗ್ಗೆ ಅವರು ಕಳವಳ ವ್ಯಕ್ತಪಡಿಸಿದ್ದರು.

ಕಳೆದ ವರ್ಷ ಆಗಸ್ಟ್‌ನಲ್ಲಿ ರಚಿಸಿದ್ದ ಎಂಟು ಸದಸ್ಯರ ಸಮಿತಿಯು ಸಿದ್ಧಪಡಿಸಿರುವ ವರದಿಯ ಆಧಾರದಲ್ಲಿ, ಕೇಂದ್ರ ಪರಿಸರ ಸಚಿವಾಲಯವು ಈಚೆಗೆ ಎನ್‌ಜಿಟಿಗೆ ಪ್ರಮಾಣಪತ್ರ ಸಲ್ಲಿಸಿದೆ.

‘ಪರಿಸರ ಸಂರಕ್ಷಣೆಯ ದೃಷ್ಟಿಯಿಂದ ಕಸಾಯಿಖಾನೆ/ ಮಾಂಸ ಸಂಸ್ಕರಣಾ ಘಟಕಗಳನ್ನು ನಿಯಂತ್ರಿಸಲು ಬೇಕಾದ ಮಾರ್ಗಸೂಚಿಗಳು ಮತ್ತು ಸುರಕ್ಷತಾ ಕ್ರಮಗಳು ಈಗಾಗಲೇ ಜಾರಿಯಲ್ಲಿವೆ. ಆದ್ದರಿಂದ ಇವುಗಳನ್ನು ಇಐಎ ಅಡಿ ತರಬೇಕಾದ ಅವಶ್ಯಕತೆಯಿಲ್ಲ’ ಎಂದಿದೆ.

ಬಣ್ಣದೋಕುಳಿ

ಉತ್ತರ ಪ್ರದೇಶದ ಮಥುರಾದ ಬಳಿಯ ಬರಸಾನಾದಲ್ಲಿ ನಂದಗಾಂವ್ ಮೂಲದ ಪುರುಷರು ಮತ್ತು ಬರಸಾನಾ ಮೂಲದ ಮಹಿಳೆಯರು ಸೋಮವಾರ ಹೋಳಿ ಸಂಭ್ರಮಾಚರಣೆಯಲ್ಲಿ ತೊಡಗಿದರು –ಪಿಟಿಐ ಚಿತ್ರ

ಹಿಮಾಚಲ ಪ್ರದೇಶದ ಸ್ಪೀಕರ್ ಕ್ರಮಕ್ಕೆ ಮನ್ನಣೆ

ಅನರ್ಹತೆ ಆದೇಶ ತಡೆಗೆ ‘ಸುಪ್ರೀಂ’ ನಕಾರ

ನವದೆಹಲಿ (ಪಿಟಿಐ): ಕಾಂಗ್ರೆಸ್‌ನ ಆರು ಶಾಸಕರನ್ನು ಅನರ್ಹಗೊಳಿಸಿ ಹಿಮಾಚಲ ಪ್ರದೇಶದ ವಿಧಾನಸಭೆಯ ಸ್ಪೀಕರ್ ನೀಡಿದ್ದ ಆದೇಶಕ್ಕೆ ತಡೆಯಾಜ್ಞೆ ನೀಡಲು ಸುಪ್ರೀಂ ಕೋರ್ಟ್ ಸೋಮವಾರ ನಿರಾಕರಿಸಿದೆ.

ಸುಧೀರ್ ಶರ್ಮಾ, ರವಿ ಠಾಕೂರ್, ರಾಜೇಂದರ್ ರಾಣಾ, ಇಂದರ್ ದತ್, ಲಖನ್‌ಪಾಲ್, ಚೇತನ್ಯ ಶರ್ಮಾ ಮತ್ತು ದೇವಿಂದರ್ ಕುಮಾರ್ ಭುಟ್ಟೊ ಅವರನ್ನು ಫೆಬ್ರುವರಿ 29ರಂದು ಶಾಸಕ ಸ್ಥಾನದಿಂದ ಅನರ್ಹಗೊಳಿಸಲಾಗಿತ್ತು.

ಸದನದಲ್ಲಿ ಹಣಕಾಸು ಮಸೂದೆಗೆ ಸರ್ಕಾರದ ಪರವಾಗಿ ಮತ ಚಲಾಯಿಸುವಂತೆ ಕಾಂಗ್ರೆಸ್ ನೀಡಿದ್ದ ವಿಪ್ ಅನ್ನು ಆರು ಮಂದಿ ಶಾಸಕರು ಉಲ್ಲಂಘಿಸಿದ್ದ ಕಾರಣಕ್ಕಾಗಿ ಅವರನ್ನು ಅನರ್ಹಗೊಳಿಸಲಾಗಿತ್ತು. ರಾಜ್ಯಸಭಾ ಚುನಾವಣೆಯಲ್ಲಿ ಅಡ್ಡಮತದಾನ ಮಾಡಿದ್ದ ಆರೋಪಕ್ಕೂ ಅವರು ಗುರಿಯಾಗಿದ್ದರು.

ನ್ಯಾಯಮೂರ್ತಿ ಸಂಜೀವ್ ಖನ್ನಾ ಮತ್ತು ದೀಪಂಕರ್ ದತ್ತಾ ಅವರನ್ನೊಳಗೊಂಡ ಪೀಠವು ಅರ್ಜಿಯ ಸಂಬಂಧ ಹಿಮಾಚಲ ಪ್ರದೇಶದ ವಿಧಾನಸಭೆ ಸ್ಪೀಕರ್ ಕುಲ್‌ದೀಪ್ ಸಿಂಗ್ ಪಠಾನಿಯಾ ಅವರಿಗೆ ನೋಟಿಸ್ ನೀಡಿದ್ದು, ನಾಲ್ಕು ವಾರಗಳಲ್ಲಿ ಪ್ರತಿಕ್ರಿಯೆ ನೀಡುವಂತೆ ಸೂಚಿಸಿದೆ.

ಕಾಂಗ್ರೆಸ್ ಶಾಸಕರ ಅರ್ಜಿಗೆ ಸಂಬಂಧಿಸಿದಂತೆ ನ್ಯಾಯಾಲಯವು ತನ್ನ ನಿರ್ಧಾರ ಪ್ರಕಟಿಸುವವರೆಗೆ ಶಾಸಕರು ಮತದಾನ ಮಾಡುವುದಕ್ಕೆ ಅಥವಾ ವಿಧಾನಸಭೆಯ ಕಾರ್ಯಕಲಾಪಗಳಲ್ಲಿ ಭಾಗಹಿಸುವುದಕ್ಕೆ ಅವಕಾಶವಿಲ್ಲ ಎಂದು ನ್ಯಾಯಪೀಠ ಹೇಳಿದೆ.

ನ್ಯಾಯಪೀಠವು ಪ್ರಕರಣದ ವಿಚಾರಣೆಯನ್ನು ಮೇ 6ಕ್ಕೆ ನಿಗದಿ ಮಾಡಿದ್ದು, ಬಂಡಾಯ ಶಾಸಕರಿಗೆ ತಮ್ಮ ವಾದ ದಾಖಲಿಸಲು ಒಂದು ವಾರ ಕಾಲಾವಕಾಶ ನೀಡಿದೆ.

ಖಾಲಿ ಇರುವ ಆರು ವಿಧಾನಸಭಾ ಕ್ಷೇತ್ರಗಳ ಚುನಾವಣೆಗೆ ನಾಮಪತ್ರ ಸಲ್ಲಿಕೆಯು ಮೇ 7ರಿಂದ ಆರಂಭವಾಗುತ್ತದೆ.

ಚುನಾವಣಾ ಬಾಂಡ್: ಕಾನೂನಿನ ಅಂಶಗಳ ಉಲ್ಲೇಖಿಸಿ ವಿವರ ಬಹಿರಂಗಪಡಿಸಲು ನಕಾರ

ದೇಣಿಗೆ: ಗುಟ್ಟು ಬಿಟ್ಟುಕೊಡದ ಪಕ್ಷಗಳು

ನವದೆಹಲಿ (ಪಿಟಿಐ): ಚುನಾವಣಾ ಬಾಂಡ್ ಮೂಲಕ ದೇಣಿಗೆ ಪಡೆದ ಪ್ರಮುಖ ಪಕ್ಷಗಳು, ಕಾನೂನಿನ ಹಲವು ಅಂಶಗಳನ್ನು ಉಲ್ಲೇಖಿಸುವ ಮೂಲಕ ತಮಗೆ ದೇಣಿಗೆ ನೀಡಿದವರ ಹೆಸರನ್ನು ಬಹಿರಂಗಪಡಿಸಿಲ್ಲ. ಇನ್ನು ಕೆಲವು ಪಕ್ಷಗಳು, ‘ನಾವು ಅನಾಮಧೇಯ’ ಮೂಲಗಳಿಂದ ದೇಣಿಗೆ ಪಡೆದಿದ್ದೇವೆ ಎಂದು ಹೇಳಿವೆ.

ಬಿಜೆಪಿಯು 1951ರ ಪ್ರಜಾಪ್ರಾತಿನಿಧ್ಯ ಕಾಯ್ದೆಯಲ್ಲಿನ ತಿದ್ದುಪಡಿ, ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಮತ್ತು ಆದಾಯ ತೆರಿಗೆ ಇಲಾಖೆ ಕಾಯ್ದೆಯ ಅಂಶಗಳನ್ನು ಉಲ್ಲೇಖಿಸಿ, ದೇಣಿಗೆ ನೀಡಿದವರ ವಿವರಗಳನ್ನು ಬಹಿರಂಗಪಡಿಸಿಲ್ಲ.

ಕಾಂಗ್ರೆಸ್ ಪಕ್ಷವು ಚುನಾವಣಾ ಬಾಂಡ್ ಮೂಲಕ ದೇಣಿಗೆ ನೀಡಿದವರ ವಿವರ, ದೇಣಿಗೆಯ ಮೊತ್ತ, ಜಮಾ ಆಗಿರುವ ಬ್ಯಾಂಕ್ ಖಾತೆ ಮತ್ತು ದಿನಾಂಕದ ವಿವರಗಳನ್ನು ಕೋರಿ ಎಸ್‌ಬಿ ಪತ್ರ ಬರೆದಿದೆ.

ಅದಕ್ಕೆ ಪ್ರತಿಕ್ರಿಯಿಸಿರುವ ಬ್ಯಾಂಕ್, ಚುನಾವಣಾ ಬಾಂಡ್‌ಗಳ ವಿವರಗಳು ರಾಜಕೀಯ ಪಕ್ಷಗಳ ಬಳಿಯೇ ಇವೆ. ದೇಣಿಗೆಗೆ ಸಂಬಂಧಿಸಿದ ಬ್ಯಾಂಕ್ ಖಾತೆ ವಿವರಗಳನ್ನು ಚುನಾವಣಾ ಆಯೋಗದ ಜತೆ ಹಂಚಿಕೊಳ್ಳಲಾಗಿದೆ ಎಂದಿದೆ.

ಸಮಾಜವಾದಿ ಪಕ್ಷವು ತನಗೆ ದೊರೆತ ಕಡಿಮೆ ಮೊತ್ತದ ದೇಣಿಗೆಯ ವಿವರಗಳನ್ನು (₹1 ಲಕ್ಷದಿಂದ ₹10 ಲಕ್ಷದವರೆಗಿನ) ಮಾತ್ರ ಬಹಿರಂಗ ಪಡಿಸಿದೆ. ತಲಾ ₹1 ಕೋಟಿ ಮೊತ್ತದ 10 ಬಾಂಡ್‌ಗಳು ಅಂಚೆ ಮೂಲಕ ಪಡೆದಿದ್ದು, ಅದರಲ್ಲಿ ದೇಣಿಗೆ ನೀಡಿದವರ ಹೆಸರು ನಮೂದಿಸಿರಲಿಲ್ಲ ಎಂದಿದೆ.

ಬಾಂಡ್ ಮೂಲಕ ಎಷ್ಟು ಮೊತ್ತದ ದೇಣಿಗೆ ನೀಡಿದ್ದೀರಿ ಎಂಬ ಮಾಹಿತಿಯನ್ನು ದೇಣಿಗೆ ನೀಡಿದವರನ್ನು ಸಂಪರ್ಕಿಸಿ ಕಲೆಹಾಕಿರುವುದಾಗಿ ತಮಿಳುನಾಡಿನ ಆಡಳಿತಾರೂಢ ಡಿಎಂಕೆ ಪಕ್ಷ ತಿಳಿಸಿದೆ.

‘ಬಾಂಡ್ ಯೋಜನೆಯಡಿ ದೇಣಿಗೆ ಪಡೆದವರು ದೇಣಿಗೆ ನೀಡಿದವರ ವಿವರ ಒದಗಿಸುವ ಅಗತ್ಯವಿಲ್ಲ. ಆದರೂ ಸುಪ್ರೀಂ ಕೋರ್ಟ್‌ನ ನಿರ್ದೇಶನದಂತೆ ನಾವು ದಾನಿಗಳನ್ನು ಸಂಪರ್ಕಿಸಿ ಅವರಿಂದ ಮಾಹಿತಿ ಕಲೆಹಾಕಿದ್ದೇವೆ’ ಎಂದು ಪಕ್ಷದ ಹೇಳಿದೆ.

‘ಲಾಟರಿ ಕಿಂಗ್’ ಸ್ಯಾಂಟಿಯಾಗೊ ಮಾರ್ಟಿನ್ ಮಾಲೀಕತ್ವದ ಫ್ಯೂಚರ್ ಗೇಮಿಂಗ್ ಆ್ಯಂಡ್ ಹೋಟೆಲ್ ಸರ್ವೀಸಸ್ ಸಂಸ್ಥೆಯು, ತಾನು ಖರೀದಿಸಿದ ₹1,368 ಕೋಟಿ ಮೊತ್ತದ ಚುನಾವಣಾ ಬಾಂಡ್‌ನಲ್ಲಿ ₹509 ಕೋಟಿಯನ್ನು ಡಿಎಂಕೆಗೆ ದೇಣಿಗೆ ನೀಡಿದೆ.

‘ನಮ್ಮ ಕಚೇರಿಯ ಸಿಬ್ಬಂದಿ ಚುನಾವಣಾ ಪ್ರಚಾರ ಸೇರಿದಂತೆ ಇತರ ಕೆಲಸಗಳಲ್ಲಿ ಮಗ್ನರಾಗಿದ್ದರು. ಆದ್ದರಿಂದ ದೇಣಿಗೆ ನೀಡಿದ ಪ್ರತಿಯೊಬ್ಬರ ಮಾಹಿತಿಯನ್ನು ಸಮೂದಿಸಲು ಸಾಧ್ಯವಾಗಿಲ್ಲ’ ಎಂಬ ಕಾರಣವನ್ನು ಎನ್‌ಸಿಪಿ ನೀಡಿದೆ.

ಮೋದಿ ಸರ್ಕಾರದ ‘ಹಫ್ತಾ ವಸೂಲಿ’ ಯೋಜನೆ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಚುನಾವಣಾ ಬಾಂಡ್‌ಗಳ ಮೂಲಕ ‘ಹಫ್ತಾ ವಸೂಲಿ’ ನಡೆಸಿದೆ ಎಂದು ಕಾಂಗ್ರೆಸ್ ಪಕ್ಷ ಆರೋಪಿಸಿದೆ. ಸಿಬಿಐ, ಇ.ಡಿ., ಐ.ಟಿ ದಾಳಿಗೊಳಗಾಗಿದ್ದ 21 ಸಂಸ್ಥೆಗಳು ಬಾಂಡ್‌ಗಳ ಮೂಲಕ ದೇಣಿಗೆಯನ್ನು ಸಲ್ಲಿಸಿದ್ದವು ಎಂದೂ ಹೇಳಿದೆ.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಂ ರಮೇಶ್ ಅವರು ‘ಎಕ್ಸ್’ ಜಾಲತಾಣದಲ್ಲಿ ಈ ಕುರಿತು ಪೋಸ್ಟ್ ಮಾಡಿದ್ದು, ‘ಚುನಾವಣಾ ಬಾಂಡ್ ಹಗರಣದ ಆಳ ಕುರಿತಂತೆ ಪ್ರತಿನಿತ್ಯವು ಹೆಚ್ಚಿನ ಉದಾಹರಣೆಗಳು ಬಯಲಾಗುತ್ತಿವೆ’ ಎಂದು ಹೇಳಿದ್ದಾರೆ.

‘ಪ್ರಧಾನ ಮಂತ್ರಿ ಹಫ್ತಾ ವಸೂಲಿ ಯೋಜನೆ’ ಕುರಿತು ನಾವು ಇನ್ನಷ್ಟು ವಿವರಗಳನ್ನು ಗಮನಿಸೋಣ. ಇದು, ‘ಚಂದಾ ಕೊಡಿ, ವ್ಯವಹಾರ ಮಾಡಿ’ ಹಾಗೂ ‘ಹಫ್ತಾ ವಸೂಲಿ’ ಕಾರ್ಯಕ್ರಮವಾಗಿತ್ತು ಎಂದೂ ಅವರು ಟೀಕಿಸಿದ್ದಾರೆ.

‘ಅರಬಿಂದೊ ಫಾರ್ಮಾ ನಿರ್ದೇಶಕ ಪಿ.ಶರದ್‌ಚಂದ್ರ ರೆಡ್ಡಿ ಅವರ ಅವರನ್ನು ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಇ.ಡಿ ನವೆಂಬರ್ 10, 2022ರಂದು ಬಂಧಿಸುತ್ತದೆ. ಐದು ದಿನದ ನಂತರ ಅರಬಿಂದೊ ಫಾರ್ಮಾ ₹ 5 ಕೋಟಿ ಮೊತ್ತದ ಬಾಂಡ್ ನೀಡಲಿದೆ.

ನವಯುಗ ಎಂಜಿನಿಯರಿಂಗ್ ಕಂಪನಿ ಲಿಮಿಟೆಡ್ ಏಪ್ರಿಲ್ 2019ರಲ್ಲಿ ₹ 30 ಕೋಟಿ ಮೌಲ್ಯದ ಚುನಾವಣಾ ಬಾಂಡ್‌ಗಳನ್ನು ಖರೀದಿಸುತ್ತದೆ. ಅದಕ್ಕೆ ಆರು ತಿಂಗಳ ಹಿಂದೆ ಅಂದರೆ ಅಕ್ಟೋಬರ್ 2018ರಲ್ಲಿ ಈ ಸಂಸ್ಥೆಯ ಮೇಲೆ ಆದಾಯ ತೆರಿಗೆ ಇಲಾಖೆ ದಾಳಿ ನಡೆದಿರುತ್ತದೆ.

ಅಂತೆಯೇ, ಡಿಸೆಂಬರ್ 7, 2023ರಂದು ರಂಗ್ಟಾ ಸನ್ಸ್ ಪ್ರೈವೇಟ್ ಲಿಮಿಟೆಡ್ ಮೂರು ಘಟಕಗಳ ಮೇಲೆ ಐ.ಟಿ ದಾಳಿ ನಡೆಯಲಿದೆ. ಬಳಿಕ ಜನವರಿ 11, 2024ರಂದು ಕಂಪನಿಯು ₹ 1 ಕೋಟಿ ಮೌಲ್ಯದ 50 ಚುನಾವಣಾ ಬಾಂಡ್‌ಗಳನ್ನು ಖರೀದಿಸುತ್ತದೆ’ ಎಂದು ಕೆಲ ಉದಾಹರಣೆಗಳನ್ನು ಉಲ್ಲೇಖಿಸಿದ್ದಾರೆ.

ಮುಖ್ಯಾಂಶಗಳು

- ಅನಾಮಧೇಯ ಮೂಲಗಳಿಂದ ದೇಣಿಗೆ
- ಬಾಂಡ್ ವಿವರಗಳು ಪಕ್ಷಗಳ ಬಳಿಯೇ ಇವೆ: ಎಸ್‌ಬಿಐ

‘ಡ್ರಾಪ್ ಬಾಕ್ಸ್‌ಗೆ ಹಾಕಿದ್ದರು’

‘ಕೆಲವರು ಚುನಾವಣಾ ಬಾಂಡ್‌ಗಳನ್ನು ಪಕ್ಷದ ಕಚೇರಿಗೆ ಕಳುಹಿಸಿದ್ದರು. ಅದನ್ನು ತಂದವರು ಕಚೇರಿಯ ಡ್ರಾಪ್ ಬಾಕ್ಸ್‌ನಲ್ಲಿ ಹಾಕಿ ಹೋಗಿದ್ದರು’ ಎಂದು ತೃಣಮೂಲ ಕಾಂಗ್ರೆಸ್ ಹೇಳಿದೆ. ‘ಪಕ್ಷವನ್ನು ಬೆಂಬಲಿಸಲು ಬಯಸುವ ಹಲವರು ತಮ್ಮ ಪ್ರತಿನಿಧಿಗಳ ಮೂಲಕವೂ ಬಾಂಡ್‌ಗಳನ್ನು ಕಳುಹಿಸಿದ್ದರು. ಅವರಲ್ಲಿ ಕೆಲವರು ತಮ್ಮ ಹೆಸರನ್ನು ಬಹಿರಂಗಪಡಿಸಿಲ್ಲ’ ಎಂದು ತಿಳಿಸಿದೆ.

ಸಂಕ್ಷಿಪ್ತ ಸುದ್ದಿ

ಇ.ಡಿ ಸಮನ್ಸ್‌ಗೆ ಕೇಜ್ರಿವಾಲ್ ಗೈರು

ನವದೆಹಲಿ (ಪಿಟಿಐ): ದೆಹಲಿಯ ಜಲ ಮಂಡಳಿಯಲ್ಲಿ ನಡೆದಿದೆ ಎನ್ನಲಾದ ಅವ್ಯಹಾರಗಳಿಗೆ ಸಂಬಂಧಿಸಿದಂತೆ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ವಿಚಾರಣೆಗೆ ಹಾಜರಾಗುವಂತೆ ಜಾರಿ ನಿರ್ದೇಶನಾಲಯ (ಇ.ಡಿ) ನೀಡಿದ್ದ ಸಮನ್ಸ್‌ಗೆ ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಗೈರಾಗಿದ್ದಾರೆ.

‘ಇ.ಡಿ ನೀಡಿರುವ ಸಮನ್ಸ್ ಕಾನೂನು ಬಾಹಿರವಾಗಿದ್ದು, ಲೋಕಸಭೆ ಚುನಾವಣೆಗೆ ಕೇಜ್ರಿವಾಲ್ ಪ್ರಚಾರ ಮಾಡದಂತೆ ತಡೆಯಲು ಕೇಂದ್ರ ಬಿಜೆಪಿ ಸರ್ಕಾರವು ಇ.ಡಿಯನ್ನು ಬಳಸಿಕೊಳ್ಳುತ್ತಿದೆ. ಇ.ಡಿಯನ್ನು ಬಳಸಿಕೊಂಡು ಲೋಕಸಭೆಗೆ ಹೋರಾಟ ನಡೆಸಲು ಬಿಜೆಪಿ ಯೋಜಿಸಿದೆ.’ ಎಂದು ಆಮ್ ಆದ್ಮಿ ಪಕ್ಷ ಆರೋಪಿಸಿದೆ.

ದೆಹಲಿಯ ಅಬಕಾರಿ ನೀತಿ ಹಗರಣದಲ್ಲಿ ಹಣ ಅಕ್ರಮ ವರ್ಗಾವಣೆ ನಡೆಸಿದ ಪ್ರಕರಣದಲ್ಲಿ ಕೇಜ್ರಿವಾಲ್ ಅವರಿಗೆ ಇ.ಡಿ ಈಗಾಗಲೇ 8 ಬಾರಿ ಸಮನ್ಸ್ ಜಾರಿ ಮಾಡಿದೆ. ಯಾವುದೇ ವಿಚಾರಣೆಗೆ ಅವರು ಈವರೆಗೆ ಹಾಜರಾಗಿಲ್ಲ. ಮಾರ್ಚ್21 ರಂದು ಹಾಜರಾಗುವಂತೆ ಕೇಜ್ರಿವಾಲ್ ಇ.ಡಿ 9ನೇ ಸಮನ್ಸ್ ಜಾರಿ ಮಾಡಿದೆ. ಈ ನಡುವೆ ಜಲ ಮಂಡಳಿ ಅವ್ಯವಹಾರ ದಲ್ಲೂ ಅವರಿಗೆ ಇ.ಡಿ ಸಮನ್ಸ್ ನೀಡಿದೆ.

ಸೇನೆ: ತಂತ್ರಜ್ಞಾನ ಘಟಕ ಸ್ಥಾಪನೆ

ನವದೆಹಲಿ (ಪಿಟಿಐ): ಕೃತಕ ಬುದ್ಧಿಮತ್ತೆ (ಎ.ಐ), 6ಜಿ, ಮಷಿನ್ ಲರ್ನಿಂಗ್ ಮತ್ತು ಕ್ವಾಂಟಮ್ ಕಂಪ್ಯೂಟಿಂಗ್ ಮೊದಲಾದ ಭವಿಷ್ಯದ ಸಂವಹನ ತಂತ್ರಜ್ಞಾನಗಳನ್ನು ಸೇನಾಪಡೆಗಳಿಗೆ ಬಳಸುವ ಕುರಿತು ಸಂಶೋಧನೆ ನಡೆಸಲು ಮತ್ತು ಮೌಲ್ಯಮಾಪನ ಮಾಡಲು ಭಾರತೀಯ ಸೇನೆಯು ತಂತ್ರಜ್ಞಾನ ಘಟಕವನ್ನು ರಚಿಸಿದೆ.

ಸಿಗ್ನಲ್ ಟೆಕ್ನಾಲಜಿ ಇವ್ಯಾಲುವೇಶನ್ ಆ್ಯಂಡ್ ಅಡಾಪ್ಟನ್ ಗ್ರೂಪ್ (ಎಸ್‌ಟಿಇಎಜಿ) ಎಂದು ಘಟಕಕ್ಕೆ ಹೆಸರಿಡಲಾಗಿದೆ. ಭವಿಷ್ಯದಲ್ಲಿ ಯುದ್ಧರಂಗದ ಚಿತ್ರಣವನ್ನೇ ಬದಲಾಯಿಸುವ ತಂತ್ರಜ್ಞಾನಗಳನ್ನು ಅಭಿವೃದ್ಧಿ ಪಡಿಸುವುದು ಮತ್ತು ಸಂಶೋಧನೆ ನಡೆಸುವುದು ಈ ಘಟಕದ ಮುಖ್ಯ ಕೆಲಸವಾಗಿದೆ ಎಂದು ಅಧಿಕಾರಿಗಳು ತಿಳಿಸಿದರು.

ಮೊಬೈಲ್ ಸಂವಹನ, ಯುದ್ಧದಲ್ಲಿ ಬಳಕೆ ಮಾಡುವ ಎಲೆಕ್ಟ್ರಾನಿಕ್ ವ್ಯವಸ್ಥೆ ಸೇರಿದಂತೆ ಮುಂಬರುವ ಸಂಕೀರ್ಣ ತಂತ್ರಜ್ಞಾನಗಳನ್ನು ಕೇಂದ್ರೀಕರಿಸಿ ಎಸ್‌ಟಿಇಎಜಿ ಕಾರ್ಯ ನಿರ್ವಹಿಸಲಿದೆ ಎಂದರು.

ತಮಿಳುನಾಡು: ಬಿಜೆಪಿ ಮೈತ್ರಿ ಸೇರಿದ ಪಿಎಂಕೆ

ಚೆನ್ನೈ: ವಣ್ಣಿಯಾರ್ ಸಮುದಾಯ ದವರು ಹೆಚ್ಚಿರುವ ಉತ್ತರ ತಮಿಳುನಾಡಿನಲ್ಲಿ ಹೆಚ್ಚು ರಾಜಕೀಯ ಪ್ರಭಾವಿ ಪಕ್ಷವಾದ ಪಟ್ಟಾಳಿ ಮಕ್ಕಳ್ ಕಚ್ಚಿ (ಪಿಎಂಕೆ) ಸೋಮವಾರ ಬಿಜೆಪಿ ಮೈತ್ರಿಕೂಟ ಸೇರಿದೆ.

ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಂಡು ಲೋಕಸಭೆ ಚುನಾವಣೆ ಎದುರಿಸಲಿದೆ ಎಂದು ಪಿಎಂಕೆ ಸಂಸ್ಥಾಪಕ ಎಸ್. ರಾಮದಾಸ್ ಅವರು ಪಕ್ಷದ ಉನ್ನತ ಮಟ್ಟದ ಸಮಿತಿ ಸಭೆಯಲ್ಲಿ ಘೋಷಿಸಿದ್ದಾರೆ ಎಂದು ಪಿಎಂಕೆ ಪ್ರಧಾನ ಕಾರ್ಯದರ್ಶಿ ವಡಿವೇಲ್ ರಾವಣನ್ ಸುದ್ದಿಗಾರರಿಗೆ ತಿಳಿಸಿದ್ದಾರೆ.

ಸತ್ಯೇಂದ್ರ ಕುಮಾರ್ ಜೈನ್ ಜಾಮೀನು ಅರ್ಜಿ ವಜಾ

ನವದೆಹಲಿ: ದೆಹಲಿಯ ಮಾಜಿ ಸಚಿವ ಸತ್ಯೇಂದ್ರ ಕುಮಾರ್ ಜೈನ್ ಅವರ ಜಾಮೀನು ಅರ್ಜಿಯನ್ನು ಸುಪ್ರೀಂ ಕೋರ್ಟ್ ಸೋಮವಾರ ವಜಾ ಮಾಡಿತು. ‘ತಪ್ಪಿತಸ್ಥ ಎಂದು ನಿರೂಪಿಸಲು ಮೇಲ್ನೋಟಕ್ಕೆ ಅಗತ್ಯ ಸಾಕ್ಷ್ಯಗಳಿವೆ’ ಎಂದೂ ಕೋರ್ಟ್ ಹೇಳಿತು.

21 ಸ್ಥಾನಗಳಲ್ಲಿ ಡಿಎಂಕೆ ಸ್ಪರ್ಧೆ

ಪ್ರಜಾವಾಣಿ ವಾರ್ತೆ

ಚೆನ್ನೈ: ಮಿತ್ರಪಕ್ಷಗಳ ಜೊತೆ ಸೀಟು ಹಂಚಿಕೆ ಮಾತುಕತೆಯನ್ನು ಮುಕ್ತಾಯಗೊಳಿಸಿರುವ ತಮಿಳುನಾಡಿನ ಆಡಳಿತಾರೂಢ ಡಿಎಂಕೆ ಪಕ್ಷವು, ಲೋಕಸಭಾ ಚುನಾವಣೆಯಲ್ಲಿ 21 ಸ್ಥಾನಗಳಲ್ಲಿ ಸ್ಪರ್ಧಿಸಲು ನಿರ್ಧರಿಸಿದೆ. ತನ್ನ ಅಭ್ಯರ್ಥಿಗಳ ಪಟ್ಟಿಯನ್ನು ಬುಧವಾರ ಬಿಡುಗಡೆ ಮಾಡುವ ನಿರೀಕ್ಷೆ ಇದೆ.

ರಾಜ್ಯದ ಪ್ರತಿಷ್ಠಿತ ಕ್ಷೇತ್ರಗಳಾದ ಕೊಯಮತ್ತೂರು, ತೂತುಕುಡಿ ಮತ್ತು ಚೆನ್ನೈನ ಮೂರು ಕ್ಷೇತ್ರಗಳನ್ನು ಡಿಎಂಕೆ ತನಗೇ ಉಳಿಸಿಕೊಂಡಿದೆ.

ರಾಜ್ಯದ ‘ಜಾತ್ಯತೀತ ಪ್ರಗತಿಪರ ಮೈತ್ರಿಕೂಟ’ದ ಎರಡನೇ ದೊಡ್ಡ ಪಕ್ಷವಾಗಿರುವ ಕಾಂಗ್ರೆಸ್ ತಿರುವಳ್ಳೂರು, ಕೃಷ್ಣಗಿರಿ, ಕರೂರ್, ಶಿವಗಂಗಾ, ವಿರುಧುನಗರ್, ಕನ್ಯಾಕುಮಾರಿ ಮತ್ತು ಪುದುಚೇರಿ ಕ್ಷೇತ್ರಗಳನ್ನು ತನ್ನಲ್ಲೇ ಉಳಿಸಿಕೊಂಡಿದೆ. ಜೊತೆಗೆ, ಕಡಲೂರ್, ಮಯಿಲಾದುತುರೈ ಮತ್ತು ತಿರುನೆಲ್ವೇಲಿ ಕ್ಷೇತ್ರಗಳನ್ನು ಪಡೆದುಕೊಂಡಿದೆ. ಆದರೆ ಅರಣಿ, ಥೇಣಿ ಮತ್ತು ತಿರುಚಿರಾಪಳ್ಳಿ ಕ್ಷೇತ್ರಗಳನ್ನು ಈ ಬಾರಿ ಕಳೆದುಕೊಂಡಿದೆ.

ತನ್ನ ಸ್ವಂತ ಚಿಹ್ನೆಯೊಂದಿಗೆ ಈ ಬಾರಿ ಕಣಕ್ಕಿಳಿಯಲಿರುವ ವೈಕೋ ನೇತೃತ್ವದ ಎಂಡಿಎಂಕೆಗೆ ತಿರುಚಿರಾಪಳ್ಳಿಯನ್ನು ಬಿಟ್ಟುಕೊಡಲಾಗಿದೆ.

2014ರ ಲೋಕಸಭೆ ಚುನಾವಣೆ ಬಳಿಕ ಇದೇ ಮೊದಲ ಬಾರಿಗೆ ಕೊಯಮತ್ತೂರಿನಲ್ಲಿ ಡಿಎಂಕೆ ಸ್ಪರ್ಧಿಸುತ್ತಿದೆ. ಈ ಕ್ಷೇತ್ರದಲ್ಲಿ 2014ರಲ್ಲಿ ಸೋತ ಬಳಿಕ ಕಾಂಗ್ರೆಸ್‌ಗೆ ಈ ಕ್ಷೇತ್ರವನ್ನು ಡಿಎಂಕೆ ಬಿಟ್ಟುಕೊಟ್ಟಿತ್ತು.

2019ರ ಲೋಕಸಭಾ ಚುನಾವಣೆಯಲ್ಲಿ ಡಿಎಂಕೆ ಅಭ್ಯರ್ಥಿ ಕನಿಮೊಳಿ ಕರುಣಾನಿಧಿ ಅವರು ತೂತುಕುಡಿ ಕ್ಷೇತ್ರದಿಂದ ಸ್ಪರ್ಧಿಸಿ ತೆಲಂಗಾಣ ರಾಜ್ಯಪಾಲರಾಗಿದ್ದ ತಮಿಳ್ ಇಸೈ ಸೌಂದರ್‌ರಾಜನ್ ಅವರನ್ನು ಸೋಲಿಸಿದ್ದರು. ಈ ಬಾರಿಯೂ ಅವರು ಅದೇ ಕ್ಷೇತ್ರದಿಂದ ಕಣಕ್ಕಿಳಿಯಲಿದ್ದಾರೆ.

ಕಾಂಗ್ರೆಸ್ ತನ್ನ ಐವರು ಹಾಲಿ ಸಂಸದರಿಗೆ ಈ ಬಾರಿಯೂ ಟಿಕೆಟ್ ನೀಡುವ ನಿರೀಕ್ಷೆ ಇದೆ. ಕರ್ನಾಟಕ ಕೇಡರ್‌ನ ಮಾಜಿ ಐಎಎಸ್ ಅಧಿಕಾರಿ ಶಶಿಕಾಂತ್ ಸೆಂಥಿಲ್ ಅವರು ತಿರುವಳ್ಳೂರು ಕ್ಷೇತ್ರದಿಂದ ಸ್ಪರ್ಧಿಸುವ ಇಂಗಿತ ವ್ಯಕ್ತಪಡಿಸಿದ್ದಾರೆ. ಶಿವಗಂಗಾ ಸಂಸದ ಕಾರ್ತಿ ಚಿದಂಬರ ಅವರು ಈ ಬಾರಿಯೂ ಅದೇ ಕ್ಷೇತ್ರದ ಟಿಕೆಟ್ ಆಕಾಂಕ್ಷಿ ಆಗಿದ್ದಾರೆ.

ವಿದೇಶಿ ವಿದ್ಯಾರ್ಥಿಗಳ ಸ್ಥಳಾಂತರ

ಅಹಮದಾಬಾದ್ (ಪಿಟಿಐ): ನಮಾಜ್ ಮಾಡಿದ್ದಕ್ಕೆ ವಿದೇಶಿ ವಿದ್ಯಾರ್ಥಿಗಳ ಮೇಲೆ ಹಲ್ಲೆ ಮಾಡಿದ ಘಟನೆಯ ಹಿನ್ನೆಲೆಯಲ್ಲಿ ಗುಜರಾತ್ ವಿಶ್ವವಿದ್ಯಾಲಯದಲ್ಲಿನ ವಿದೇಶಿ ವಿದ್ಯಾರ್ಥಿಗಳನ್ನು ಹೊಸ ವಸತಿ ನಿಲಯಕ್ಕೆ ಸ್ಥಳಾಂತರಿಸಲು ಮತ್ತು ವಿದೇಶಿ ವಿದ್ಯಾರ್ಥಿ ಸಲಹಾ ಸಮಿತಿ ರಚಿಸಲು ನಿರ್ಧರಿಸಲಾಗಿದೆ ಎಂದು ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ.

ನಿವೃತ್ತ ಸೇನಾ ಸಿಬ್ಬಂದಿಯನ್ನು ನಿಯೋಜಿಸುವ ಮೂಲಕ ವಸತಿ ನಿಲಯಗಳ ಭದ್ರತೆಯನ್ನು ಹೆಚ್ಚಿಸುವಂತೆಯೂ ವಿ.ವಿ.ಯು ಭದ್ರತಾ ಸಂಸ್ಥೆಗಳಿಗೆ ತಿಳಿಸಿದೆ. ವಿದೇಶಿ ವಿದ್ಯಾರ್ಥಿಗಳನ್ನು ಮೂರು ದಿನದಲ್ಲಿ ಅನಿವಾಸಿ ಭಾರತೀಯ (ಎನ್‌ಆರ್‌ಐ) ವಿದ್ಯಾರ್ಥಿಗಳಿಗೆ ಮೀಸಲಾದ ವಸತಿ ನಿಲಯಕ್ಕೆ ಸ್ಥಳಾಂತರಿಸಬೇಕೆಂದು ತೀರ್ಮಾನಿಸಲಾಗಿದೆ ಎಂದು ವಿ.ವಿ ಉಪಕುಲಪತಿ ನೀರಜಾ ಗುಪ್ತಾ ಹೇಳಿದ್ದಾರೆ.

ಗುಜರಾತ್ ವಿವಿ: ವಿದೇಶಿ ವಿದ್ಯಾರ್ಥಿಗಳಿಗೆ ಹೆಚ್ಚಿನ ರಕ್ಷಣೆ

ಮತ್ತೆ ಮೂವರ ಬಂಧನ

ಅಹಮದಾಬಾದ್ (ಪಿಟಿಐ): ಗುಜರಾತ್ ವಿಶ್ವವಿದ್ಯಾಲಯದ ಹಾಸ್ಟೆಲ್‌ನಲ್ಲಿ ನಮಾಜ್ ಮಾಡಿದ್ದಕ್ಕೆ ವಿದೇಶಿ ವಿದ್ಯಾರ್ಥಿಗಳ ಮೇಲೆ ಹಲ್ಲೆ ನಡೆಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಸೋಮವಾರ ಮತ್ತೆ ಮೂವರನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಬಂಧಿತರನ್ನು ಕ್ಷಿತಿಜ್ ಪಾಂಡೆ (22), ಜಿತೇಂದ್ರ ಪಟೇಲ್ (31) ಮತ್ತು ಸಾಹಿಲ್ ದುಧಾತಿಯಾ (21) ಎಂದು ಗುರುತಿಸಲಾಗಿದ್ದು, ಎಲ್ಲರೂ ಅಹಮದಾಬಾದ್ ನಿವಾಸಿಗಳಾಗಿದ್ದಾರೆ. ಇದರೊಂದಿಗೆ ಈ ಪ್ರಕರಣದಲ್ಲಿ ಬಂಧಿತರ ಸಂಖ್ಯೆ ಐದಕ್ಕೇರಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ನಗರ ಅಪರಾಧ ವಿಭಾಗವು ಭಾನುವಾರ ಹಿತೇಶ್ ಮೇವಾಡ ಮತ್ತು ಭರತ್ ಪಟೇಲ್ ಅವರನ್ನು ಬಂಧಿಸಿತ್ತು.

ಬಂಧಿತ ಐವರು ಆರೋಪಿಗಳು ಬಜರಂಗ ದಳ ಮತ್ತು ವಿಶ್ವ ಹಿಂದೂ ಪರಿಷತ್ ಜೊತೆ ಗುರುತಿಸಿಕೊಂಡಿದ್ದಾರೆ. ಆರೋಪಿಗಳ ಪೈಕಿ ಒಬ್ಬ ಸಂಘಟನೆಯ ಮುಖ್ಯ ಹುದ್ದೆ ಹೊಂದಿದ್ದರೆ, ಉಳಿದವರು ಕಾರ್ಯಕರ್ತರಾಗಿದ್ದಾರೆ. ಒಬ್ಬ ಆರೋಪಿಯು ಎ.ಸಿ. ಮೆಕ್ಯಾನಿಕ್ ಆಗಿದ್ದರೆ, ಉಳಿದವರು ಪೇಯಿಂಗ್ ಗೆಸ್ಟ್ ಒಂದರಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಗುಜರಾತ್ ವಿಶ್ವವಿದ್ಯಾಲಯದಲ್ಲಿ ಅಧ್ಯಯನ ಮಾಡಲು ಬಂದಿರುವ ಹಲವು ದೇಶಗಳ ವಿದ್ಯಾರ್ಥಿಗಳು ವಸತಿನಿಲಯದಲ್ಲಿ ನಮಾಜ್ ಮಾಡಿದ ಕಾರಣಕ್ಕೆ ಅವರ ಮೇಲೆ ಗುಂಪೊಂದು ಶನಿವಾರ ರಾತ್ರಿ ಹಲ್ಲೆ ನಡೆಸಿತ್ತು. ಘಟನೆಯಲ್ಲಿ ಗಾಯಗೊಂಡ ಶ್ರೀಲಂಕಾ ಮತ್ತು ತಜಿಕಿಸ್ತಾನದ ಇಬ್ಬರು ವಿದ್ಯಾರ್ಥಿಗಳನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ವಿದೇಶಿ ವಿದ್ಯಾರ್ಥಿಗಳ ಮೇಲೆ ಹಲ್ಲೆ ನಡೆದಿರುವುದನ್ನು ನಾಗರಿಕ ಸಂಸ್ಥೆಗಳು ಮತ್ತು ಸಾಮಾಜಿಕ ಕಾರ್ಯಕರ್ತರು ಖಂಡಿಸಿದ್ದಾರೆ. ಹಲ್ಲೆ ಮಾಡಿದವರನ್ನು ಮತ್ತು ಹಲ್ಲೆ ತಡೆಯಲು ವಿಫಲರಾದ ಪೊಲೀಸರ ಮೇಲೆ ಕಠಿಣ ಕ್ರಮ ಜರುಗಿಸುವಂತೆ ಅವರು ಸರ್ಕಾರವನ್ನು ಒತ್ತಾಯಿಸಿದ್ದಾರೆ.

‘ಬಂಧಿತರೆಲ್ಲರೂ ನಮ್ಮ ಕಾರ್ಯಕರ್ತರಾಗಿದ್ದಾರೆ. ಹಲ್ಲೆಯು ಕ್ರಿಯೆಗೆ ಪ್ರತಿಕ್ರಿಯೆಯಾಗಿದೆ. ವಿದೇಶಿ ವಿದ್ಯಾರ್ಥಿಯೊಬ್ಬ ನಮ್ಮ ಕಾರ್ಯಕರ್ತನ ಕೆನ್ನೆಗೆ ಹೊಡೆದಿದ್ದ. ಸಾರ್ವಜನಿಕ ಸ್ಥಳದಲ್ಲಿ ನಮಾಜ್ ಮಾಡುವುದನ್ನು ತಡೆದರೆ ಅದು ಅಪರಾಧವಾಗುತ್ತದೆಯೇ? ಅವರು ನಮ್ಮ ದೇಶದಲ್ಲಿ, ನಮ್ಮ ವಿಶ್ವವಿದ್ಯಾಲಯದಲ್ಲಿ, ನಮ್ಮ ಹಣದಲ್ಲಿ ಬದುಕುತ್ತಿದ್ದಾರೆ. ಆದರೂ ಅವರು ನಮ್ಮವರ ಮೇಲೆ ಹಲ್ಲೆ ಮಾಡುತ್ತಾರೆ. ಅದನ್ನು ನಾವು ಸಹಿಸಿಕೊಳ್ಳಲು ಸಾಧ್ಯವೇ?’ ಎಂದು ಬಜರಂಗ ದಳದ ವಕ್ತಾರ ಹಿತೇಂದ್ರ ರಜಪೂತ್ ಪ್ರತಿಕ್ರಿಯಿಸಿದ್ದಾರೆ.

ನ್ಯಾಯ ಕೋರಿ ಗುಜರಾತ್ ಹೈಕೋರ್ಟ್ ಮೊರೆ ಹೋದ ಟೆಕಿ

ಡ್ರೈವ್‌ಗೆ ಬಾಲ್ಯದ ಚಿತ್ರ: ಖಾತೆ ತಡೆಹಿಡಿದ ಗೂಗಲ್

ಅಹಮದಾಬಾದ್ (ಪಿಟಿಐ): ಬಾಲ್ಯದಲ್ಲಿ ಇದ್ದಾಗ ತೆಗೆದ ಬೆತ್ತಲೆ ಚಿತ್ರವೊಂದನ್ನು ಗೂಗಲ್ ಡ್ರೈವ್‌ಗೆ ಸೇರಿಸಿದ್ದಕ್ಕಾಗಿ ನೀಲ್ ಶುಕ್ಲಾ ಎನ್ನುವವರಿಗೆ ತಮ್ಮ ಇಮೇಲ್ ಖಾತೆಯ ಸೇವೆಯನ್ನು ಒಂದು ವರ್ಷದಿಂದ ಪಡೆಯಲಾಗುತ್ತಿಲ್ಲ. ಈಗ ಅವರು ನ್ಯಾಯ ಕೋರಿ ಗುಜರಾತ್ ಹೈಕೋರ್ಟ್‌ನ ಮೊರೆ ಹೋಗಿದ್ದಾರೆ.

ಅರ್ಜಿಯ ವಿಚಾರಣೆ ನಡೆಸಿದ ಹೈಕೋರ್ಟ್, ಗೂಗಲ್ ಇಂಡಿಯಾ ಪ್ರೈವೆಟ್ ಲಿಮಿಟೆಡ್ ಕಂಪನಿಗೆ ನೋಟಿಸ್ ಜಾರಿಗೆ ಆದೇಶಿಸಿದೆ. ಶುಕ್ಲಾ ಅವರು ತಾವು ಎರಡು ವರ್ಷ ವಯಸ್ಸಿನ ಬಾಲಕ ಆಗಿದ್ದಾಗ ತಮ್ಮ ಅಜ್ಜಿಯ ಕೈಯಿಂದ ಸ್ನಾನ ಮಾಡಿಸಿಕೊಂಡಿದ್ದರು. ಆ ಚಿತ್ರವನ್ನು ಅವರು ಗೂಗಲ್ ಡ್ರೈವ್‌ಗೆ ಸೇರಿಸಿದ್ದರು. ಶುಕ್ಲಾ ಅವರು ‘ಮಕ್ಕಳ ಮೇಲಿನ ದೌರ್ಜನ್ಯದ’ ಚಿತ್ರವನ್ನು ಡ್ರೈವ್‌ಗೆ ಸೇರಿಸಿದ್ದಾರೆ ಎಂದು ಗೂಗಲ್ ಕಂಪನಿಯು ಅವರ ಇಮೇಲ್ ಖಾತೆಯನ್ನು ತಡೆಹಿಡಿದಿದೆ.

ನ್ಯಾಯಮೂರ್ತಿ ವೈಭವಿ ಡಿ. ನಾನಾವತಿ ಅವರು ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಕ್ಕೆ ಕೂಡ ನೋಟಿಸ್ ಜಾರಿಗೆ ಆದೇಶಿಸಿದ್ದಾರೆ. ಶುಕ್ಲಾ ಅವರು ಕಂಪ್ಯೂಟರ್ ಎಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದಾರೆ.

ಶುಕ್ಲಾ ಅವರು ಬಾಲ್ಯದ ಚಿತ್ರಗಳನ್ನು ಡ್ರೈವ್‌ಗೆ ಸೇರಿಸಿದ್ದರು. ಅದರಲ್ಲಿ ತಮ್ಮ ಅಜ್ಜಿ ತಮಗೆ ಸ್ನಾನ ಮಾಡಿಸಿದ್ದ ಬಾಲ್ಯದ ಚಿತ್ರ ಕೂಡ ಒಂದಾಗಿತ್ತು. ‘ಮಕ್ಕಳ ಮೇಲಿನ ದೌರ್ಜನ್ಯದ’ ಚಿತ್ರವನ್ನು ಸೇರಿಸಲಾಗಿದೆ ಎಂದು ಕಂಪನಿಯು ಕಳೆದ ವರ್ಷದ ಏಪ್ರಿಲ್‌ನಲ್ಲಿ ಶುಕ್ಲಾ ಅವರ ಖಾತೆಯನ್ನು ತಡೆಹಿಡಿದಿದೆ ಎಂದು ವಕೀಲರು ಕೋರ್ಟ್‌ಗೆ ತಿಳಿಸಿದ್ದಾರೆ.

ಇಮೇಲ್ ಖಾತೆಯನ್ನು ಗೂಗಲ್ ತಡೆಹಿಡಿದಿರುವ ಕಾರಣ ಶುಕ್ಲಾ ಅವರಿಗೆ ಇಮೇಲ್‌ಗಳನ್ನು ಪರಿಶೀಲಿಸಲು ಆಗುತ್ತಿಲ್ಲ. ಇದರಿಂದಾಗಿ ಅವರ ವಹಿವಾಟಿಗೆ ನಷ್ಟ ಆಗಿದೆ ಎಂದು ಶುಕ್ಲಾ ಪರ ವಕೀಲರು ದೂರಿದ್ದಾರೆ.

ಶುಕ್ಲಾ ಅವರು ತಮ್ಮ ಸಮಸ್ಯೆಯನ್ನು ಹೇಳಿಕೊಂಡು ಗುಜರಾತ್ ಪೊಲೀಸರು ಹಾಗೂ ಕೇಂದ್ರ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಬಾಗಿಲು ತಟ್ಟಿದ್ದರು. ಆದರೆ ಅಲ್ಲಿ ಕೂಡ ಸಮಸ್ಯೆಗೆ ಪರಿಹಾರ ಸಿಗಲಿಲ್ಲ.

ಖಾತೆಯನ್ನು ತಡೆಹಿಡಿದ ಒಂದು ವರ್ಷದ ನಂತರ ಆ ಖಾತೆಯಲ್ಲಿ ಇರುವ ಎಲ್ಲ ಮಾಹಿತಿಯನ್ನು ಅಳಿಸಲಾಗುತ್ತದೆ. ಅಂದರೆ, ಈ ವರ್ಷದ ಏಪ್ರಿಲ್‌ನಲ್ಲಿ ಗೂಗಲ್ ಕಂಪನಿಯು ತಮ್ಮ ಖಾತೆಯಲ್ಲಿನ ಮಾಹಿತಿಯನ್ನು ಅಳಿಸಿಹಾಕಲಿದೆ. ಹೀಗಾಗಿ ತಮ್ಮ ಅರ್ಜಿಯನ್ನು ತ್ವರಿತವಾಗಿ ವಿಚಾರಣೆಗೆ ಕೈಗೆತ್ತಿಕೊಳ್ಳಬೇಕು ಎಂದು ಶುಕ್ಲಾ ಕೋರಿದ್ದಾರೆ.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ಆಟಗಾರರ ತಾಲೀಮು

‘ಕೊಹ್ಲಿ ಜೊತೆ ಬ್ಯಾಟಿಂಗ್ ಹಿತಾನುಭವ’

ಬೆಂಗಳೂರು (ಪಿಟಿಐ): ಸೂಪರ್ ಸ್ಟಾರ್ ಆಟಗಾರ ವಿರಾಟ್ ಕೊಹ್ಲಿ ಅವರ ಸದಾ ಲವಲವಿಕೆಯ ವ್ಯಕ್ತಿತ್ವವನ್ನು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ನಾಯಕ ಫಫ್ ಡು ಪ್ಲೆಸಿ ಅವರು ಕೊಂಡಾಡಿದ್ದಾರೆ. ರನ್ ಯಂತ್ರ ಕೊಹ್ಲಿ ಅವರ ಜೊತೆ ಬ್ಯಾಟಿಂಗ್ ಮಾಡುವುದು ‘ಅದ್ಭುತ ಅನುಭವ’ ಎಂದು ಫಫ್ ಡುಪ್ಲೆಸಿ ಬಣ್ಣಿಸಿದ್ದಾರೆ.

2021ರ ಋತುವಿನ ನಂತರ ಕೊಹ್ಲಿ ನಾಯಕತ್ವ ತ್ಯಜಿಸಿದ ನಂತರ ದಕ್ಷಿಣ ಆಫ್ರಿಕಾ ತಂಡದ ಮಾಜಿ ನಾಯಕ ಆರ್‌ಸಿಬಿ ತಂಡವನ್ನು ಮುನ್ನಡೆಸುತ್ತಿದ್ದಾರೆ.

‘ಅವರ ಜೊತೆಗೆ ಬ್ಯಾಟಿಂಗ್ ಮಾಡುವುದು ಅದ್ಭುತ ಅನುಭವ. ಜೊತೆಯಾಗಿ ಬ್ಯಾಟಿಂಗ್ ಮಾಡಲು ಬಯಸುವ ಅಚ್ಚುಮೆಚ್ಚಿನ ಆಟಗಾರರಲ್ಲಿ ಅವರೂ ಒಬ್ಬರು. ಅವರು ನನ್ನಲ್ಲಿ ಉತ್ಸಾಹ ತುಂಬುತ್ತಾರೆ’ ಎಂದು ಡುಪ್ಲೆಸಿ ‘ಸ್ಟಾರ್ ಸ್ಪೋರ್ಟ್ಸ್’ಗೆ ತಿಳಿಸಿದ್ದಾರೆ.

ಕೊಹ್ಲಿ ತಂಡದ ನಾಯಕರಾಗಿಲ್ಲದೇ ಇರಬಹುದು. ಆದರೆ ಅವರು ನೀಡುವ ಸಲಹೆಗಳು, ತಂಡಕ್ಕೆ ತುಂಬುವ ಹುರುಪು ಡುಪ್ಲೆಸಿ ಅವರ ಮೆಚ್ಚುಗೆಗೆ ಪಾತ್ರವಾಗಿದೆ. ‘ಕ್ಷೇತ್ರರಕ್ಷಣೆ ನಿಯೋಜನೆ ವೇಳೆ ಅವರು ಮಹತ್ವದ ಪಾತ್ರ ವಹಿಸುತ್ತಾರೆ. ಹಲವು ವಿಷಯಗಳಲ್ಲಿ ತಂಡದ ಮುಂಚೂಣಿಯಲ್ಲಿರುತ್ತಾರೆ. ವಿಶೇಷವಾಗಿ ಕ್ಷೇತ್ರರಕ್ಷಣೆ ನಿಯೋಜನೆ ಮತ್ತು ತಂಡಕ್ಕೆ ಉತ್ಸಾಹ ತುಂಬುವಲ್ಲಿ ಅವರ ಪಾತ್ರ ಮಹತ್ವದ್ದು’ ಎಂದಿದ್ದಾರೆ ಡುಪ್ಲೆಸಿ.

ಕ್ರೀಡಾಂಗಣದ ಆಚೆಯೂ ಕೊಹ್ಲಿ ತಮ್ಮ ಮೇಲೆ ಬೀರಿರುವ ಪ್ರಭಾವ ಅಸದಳ ಎಂದಿದ್ದಾರೆ. ನಾವಿಬ್ಬರೂ ಬೇರೆ ಬೇರೆ ಶೈಲಿಯ ಅಡುಗೆ ಇಷ್ಟಪಡುತ್ತೇವೆ. ಫ್ಯಾಷನ್ ಬಗ್ಗೆಯೂ ಚರ್ಚಿಸುತ್ತೇವೆ. ಧರಿಸುವ ಸ್ಟೈಲಿಷ್ ಉಡುಪುಗಳ ಚಿತ್ರಗಳನ್ನು ಹಂಚಿಕೊಳ್ಳುತ್ತೇವೆ. ಕೈಗಡಿಯಾರಗಳ ಬಗ್ಗೆಯೂ ಅವರಿಗೆ ವಿಶೇಷ ಮೋಹವಿದೆ’ ಎಂದಿದ್ದಾರೆ.

ಮ್ಯಾಕ್ಸ್‌ವೆಲ್‌ಗೆ ಮೆಚ್ಚುಗೆ: ಕಳೆದ ಮೂರು ವರ್ಷಗಳಿಂದ ತಂಡದ ಬ್ಯಾಟಿಂಗ್ ಶಕ್ತಿಯಾಗಿರುವ ಮ್ಯಾಕ್ಸ್‌ವೆಲ್ ಬಗ್ಗೆಯೂ ಡುಪ್ಲೆಸಿ ಮಾತನಾಡಿದರು. ಮ್ಯಾಕ್ಸ್‌ವೆಲ್ 2021 ಋತುವಿನಲ್ಲಿ 513 ರನ್ ಗಳಿಸಿದ್ದರು. ನಂತರದ ಎರಡು ವರ್ಷ 301 ಮತ್ತು 400 ರನ್ ಗಳಿಸಿದ್ದರು. ಐದು ಅಥವಾ ಆರನೇ ಕ್ರಮಾಂಕದಲ್ಲಿ ಅವರು ಫಿನಿಷರ್ ಪಾತ್ರ ನಿರ್ವಹಿಸುತ್ತಿದ್ದಾರೆ.

‘ಐಪಿಎಲ್ ಕ್ರಿಕೆಟ್‌ಗೆ ಸಂಬಂಧಿಸಿ ಆರ್‌ಸಿಬಿಯೊಂದಿಗೆ ಮ್ಯಾಕ್ಸಿ ಅವರ ಕಳೆದ ಋತುಗಳು ಫಲಪ್ರದವಾಗಿದೆ. ಅವರು ಕೆಲವು ಚಮತ್ಕಾರಿಕ ಇನಿಂಗ್ಸ್‌ಗಳನ್ನು ಆಡುತ್ತಾರೆ. 80 ಅಥವಾ 90 ರನ್‌ಗಳ ಇನಿಂಗ್ಸ್‌ನಂತೆ. ಅವರು ಅಗ್ಗವಾಗಿ ವಿಕೆಟ್ ನೀಡುವುದು ಕಡಿಮೆ’ ಎಂದಿದ್ದಾರೆ.

‘ಆರ್‌ಸಿಬಿಗೆ ಬಂದ ನಂತರ ಅವರು ಸ್ಥಿರತೆ ಕಂಡುಕೊಂಡಿದ್ದಾರೆ. ಎರಡು ವರ್ಷ ಅಮೋಘವಾಗಿ ಆಡಿದ್ದಾರೆ. ಅವರ ಜೊತೆ ಆಡುವಾಗ ಬ್ಯಾಟಿಂಗ್ ಸುಲಭವಾದಂತೆ ಅನಿಸುತ್ತದೆ. ಅವರು ಯಾವುದೇ ದಾಳಿಯನ್ನು, ವಿಶೇಷವಾಗಿ ಸ್ಪಿನ್ ದಾಳಿಯನ್ನು ಪುಡಿಗಟ್ಟಬಲ್ಲರು’ ಎಂದು ಡುಪ್ಲೆಸಿ ಮೆಚ್ಚುಗೆಯ ಮಾತನಾಡಿದ್ದಾರೆ. ‘ಸ್ಪಿನ್ನರ್‌ಗಳೆದುರು ಅವರು ಎಷ್ಟೊಂದು ಬಲಿಷ್ಠ ಆಟಗಾರ ಎಂದರೆ, ಅವರ ಜೊತೆ ಆಡುತ್ತಲೇ, ಜೊತೆಗಾರರಾಗಿ ನಾವೂ ಆ ವೇಗಕ್ಕೆ ಹೊಂದಿಕೊಂಡು ಆಡಬಲ್ಲವೆಂಬ ಭಾವನೆ ಮೂಡುತ್ತದೆ’ ಎಂದಿದ್ದಾರೆ.

ತರಬೇತಿ ಶಿಬಿರ ಸೇರಿಕೊಂಡ ಕೊಹ್ಲಿ

ಬೆಂಗಳೂರು: ಭಾರತದ ಬ್ಯಾಟಿಂಗ್ ತಾರೆ ವಿರಾಟ್ ಕೊಹ್ಲಿ ಅವರು ಸೋಮವಾರ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ತರಬೇತಿ ಶಿಬಿರದಲ್ಲಿ ಮೊದಲ ಬಾರಿ ಕಾಣಿಸಿಕೊಂಡರು. ಇದೇ 22ರಂದು ಇಂಡಿಯನ್ ಪ್ರೀಮಿಯರ್ ಲೀಗ್ ಆರಂಭವಾಗಲಿದೆ.

ಕೊಹ್ಲಿ ಲಂಡನ್‌ನಿಂದ ಭಾನುವಾರ ಸ್ವದೇಶಕ್ಕೆ ಮರಳಿದ್ದರು. ಎರಡನೇ ಮಗು ಅಕಾಯ್ ಜನನದ ಕಾರಣ ಅವರು ಲಂಡನ್‌ನಲ್ಲಿದ್ದರು. ಸೋಮವಾರ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಕೊಹ್ಲಿ ವಾರ್ಮ್ ಅಪ್ ನಡೆಸಿದರು. ಆರ್‌ಸಿಬಿ ಚೆನ್ನೈನಲ್ಲಿ ಶುಕ್ರವಾರ ನಡೆಯುವ ಮೊದಲ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಚೆನ್ನೈ ಸೂಪರ್ ಕಿಂಗ್ಸ್ ತಂಡವನ್ನು ಎದುರಿಸಲಿದೆ.

ಆರ್‌ಸಿಬಿ ಪರ ಈ ಹಿಂದಿನ ಆವೃತ್ತಿಯಲ್ಲಿ ಅವರು ಎರಡು ಶತಕ, ಆರು ಅರ್ಧ ಶತಕಗಳ ನೆರವಿನಿಂದ ಪರ 639 ರನ್ ಕಲೆಹಾಕಿದ್ದರು.

35 ವರ್ಷದ ಕೊಹ್ಲಿ ಅವರಿಗೆ ಐಪಿಎಲ್‌ನ ಪ್ರದರ್ಶನ ಮಹತ್ವದ್ದಾಗಲಿದೆ. ಈ ಟೂರ್ನಿಯ ನಂತರ ಅಮೆರಿಕ ಮತ್ತು ಕೆರಿಬಿಯನ್‌ನಲ್ಲಿ ಐಸಿಸಿ ಟಿ20 ವಿಶ್ವಕಪ್ ಪಂದ್ಯಾವಳಿ ಇರುವ ಕಾರಣ ಐಪಿಎಲ್‌ನಲ್ಲಿ ಅವರ ಪ್ರದರ್ಶನದ ಮೇಲೆ ಎಲ್ಲರ ಗಮನ ನೆಟ್ಟಿದೆ. ಕೊಹ್ಲಿ, ಇಂಗ್ಲೆಂಡ್ ವಿರುದ್ಧದ ಐದು ಟೆಸ್ಟ್‌ಗಳ ಸರಣಿಯಲ್ಲಿ ಆಡಿರಲಿಲ್ಲ.

ವಿರಾಟ್ ಕೊಹ್ಲಿ

ಆರ್‌ಸಿಬಿ ಅನ್‌ಬಾಕ್ಸ್ ಕಾರ್ಯಕ್ರಮ ಇಂದು

ಬೆಂಗಳೂರು: ರಾಯಲ್ ಚಾಲೆಂಜರ್ಸ್ ಬೆಂಗಳೂರ್ ತಂಡದ ಅನ್‌ಬಾಕ್ಸ್ ಕಾರ್ಯಕ್ರಮವು ಇದೇ 19ರಂದು ನಡೆಯಲಿದೆ.

ಈ ಸಂದರ್ಭದಲ್ಲಿ ತಂಡದ ಹೆಸರಿನಲ್ಲಿ ಬೆಂಗಳೂರ್ ಪದವನ್ನು ಬೆಂಗಳೂರು ಎಂದು ಬದಲಾವಣೆ ಮಾಡಲಾಗುವುದು ಎಂದು ಮೂಲಗಳು ತಿಳಿಸಿವೆ.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಅಂದು ಸಂಜೆ 4 ಗಂಟೆಯಿಂದ ಕಾರ್ಯಕ್ರಮ ನಡೆಯಲಿದೆ. ಈ ಸಂದರ್ಭದಲ್ಲಿ ತಂಡದ ಆಟಗಾರರೆಲ್ಲರೂ ಅಭ್ಯಾಸ ನಡೆಸುವರು. ತಂಡದ 12ನೇ ಪ್ಲೇಯರ್ ಆರ್ಮಿ (ಅಭಿಮಾನಿಗಳು)ಯೊಂದಿಗೆ ಬಾಂಧವ್ಯ ಬೆಸೆಯುವ ಕಾರ್ಯಕ್ರಮ ಇದಾಗಿದೆ.

ಫಫ್ ಡು ಪ್ಲೆಸಿ –ಪಿಟಿಐ ಚಿತ್ರಗಳು

ಐಪಿಎಲ್‌ಗೆ ಸಜ್ಜಾದ ರಾಹುಲ್



ನವದೆಹಲಿ (ಪಿಟಿಐ): ಲಖನೌ ಸೂಪರ್ ಜೈಂಟ್ಸ್ ನಾಯಕ ಕೆ.ಎಲ್. ರಾಹುಲ್ ಅವರು ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿಯಿಂದ ಫಿಟ್‌ನೆಟ್ ಪ್ರಮಾಣಪತ್ರವನ್ನು ಪಡೆದಿದ್ದಾರೆ. ಆದರೆ, ಐಪಿಎಲ್‌ನ ಟೂರ್ನಿಯ ಆರಂಭಿಕ ಕೆಲವು ಪಂದ್ಯಗಳಲ್ಲಿ ವಿಕೆಟ್ ಕೀಪಿಂಗ್ ಮಾಡದಂತೆ ಅವರಿಗೆ ಎನ್‌ಸಿಎ ಸಲಹೆ ನೀಡಿದೆ.

ಹೈದರಾಬಾದ್‌ನಲ್ಲಿ ನಡೆದ ಇಂಗ್ಲೆಂಡ್ ವಿರುದ್ಧದ ಮೊದಲ ಟೆಸ್ಟ್‌ನಲ್ಲಿ ಆಡಿದ್ದ ರಾಹುಲ್ ಗಾಯದ ಕಾರಣಕ್ಕಾಗಿ ಉಳಿದ ಪಂದ್ಯಗಳಿಗೆ ಅಲಭ್ಯವಾಗಿದ್ದರು. ಮೂರನೇ ಟೆಸ್ಟ್ ಪಂದ್ಯಕ್ಕೆ ಬರುವ ನಿರೀಕ್ಷೆ ಇತ್ತಾದರೂ, ಪೂರ್ಣ ಗುಣಮುಖರಾಗದ ಕಾರಣ ಸರಣಿಯ ಉಳಿದ ಪಂದ್ಯಗಳಿಗೆ ವಾಪಸ್ ಆಗಿರಲಿಲ್ಲ.

ಇದೀಗ ಚೇತರಿಸಿಕೊಂಡಿರುವ ಅವರು, ಎನ್‌ಸಿಎನಲ್ಲಿ ಬ್ಯಾಟಿಂಗ್, ಕೀಪಿಂಗ್ ಮತ್ತು ಔಟ್‌ಫೀಲ್ಡಿಂಗ್ ಅಭ್ಯಾಸ ನಡೆಸುತ್ತಿರುವ ಕಿರು ವಿಡಿಯೊವನ್ನು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದು, ಐಪಿಎಲ್ ಟೂರ್ನಿ ಆಡಲು ಸಜ್ಜಾಗಿದ್ದಾರೆ.

‘ರಾಹುಲ್, ಮಾರ್ಚ್ 24ರಂದು ರಾಜಸ್ಥಾನ್ ರಾಯಲ್ಸ್ ವಿರುದ್ಧದ ಉದ್ಘಾಟನಾ ಪಂದ್ಯಕ್ಕಾಗಿ ಜೈಪುರಕ್ಕೆ ಪ್ರಯಾಣಿಸುವ ಮೊದಲು ಅವರು ಗುರುವಾರ (ಮಾರ್ಚ್ 20) ಲಖನೌದಲ್ಲಿ ತಂಡವನ್ನು ಸೇರಿಕೊಳ್ಳಲಿದ್ದಾರೆ. ಆರಂಭದ ಕೆಲ ಪಂದ್ಯಗಳಲ್ಲಿ ಅವರು ಬ್ಯಾಟರ್ ಆಗಿ ಮಾತ್ರ ಕಾಣಿಸಿಕೊಳ್ಳಲಿದ್ದಾರೆ. ನಂತರದಲ್ಲಿ ವಿಕೆಟ್ ಕೀಪಿಂಗ್ ಮಾಡಬಹುದಾಗಿದೆ’ ಎಂದು ಬಿಸಿಸಿಐ ಮೂಲಗಳು ತಿಳಿಸಿವೆ.

‘ರೋಹಿತ್ ಶರ್ಮಾ ಮಾರ್ಗದರ್ಶನ ಮುಂದುವರಿಯಲಿದೆ’

ಮುಂಬೈ (ಪಿಟಿಐ): ಈ ಹಿಂದಿನ ಆವೃತ್ತಿಯಲ್ಲಿ ನಾಯಕರಾಗಿದ್ದ ರೋಹಿತ್ ಶರ್ಮಾ ಅವರು ಮುಂದೆಯೂ ತಮಗೆ ಮಾರ್ಗದರ್ಶಕರಾಗಿ ಮುಂದುವರಿಯಲಿದ್ದಾರೆ ಎಂದು ಮುಂಬೈ ಇಂಡಿಯನ್ಸ್ ನಾಯಕ ಹಾರ್ದಿಕ್ ಪಾಂಡ್ಯ ಸೋಮವಾರ ಹೇಳಿದರು.

ಕಳೆದ ವರ್ಷ ಅನಿರೀಕ್ಷಿತ ಬೆಳವಣಿಗೆಯಲ್ಲಿ ಮುಂಬೈ ತಂಡ, ಗುಜರಾತ್ ಟೈಟನ್ಸ್‌ನಿಂದ ಏಕಗಂಟಿನ ಒಪ್ಪಂದದಲ್ಲಿ ಪಾಂಡ್ಯ ಅವರನ್ನು ತನ್ನ ತೆಕ್ಕೆಗೆ ಸೆಳೆದುಕೊಂಡಿತ್ತು. ಅದರ ಬೆನ್ನಲ್ಲೇ ಅವರನ್ನು 2024ರ ಐಪಿಎಲ್‌ಗೆ ನಾಯಕರನ್ನಾಗಿ ಮಾಡಿದ್ದು, ರೋಹಿತ್ ಅಭಿಮಾನಿಗಳಿಗೆ ಅಸಮಾಧಾನ ಉಂಟುಮಾಡಿತ್ತು.

ಹಾರ್ದಿಕ್ ಪಾಂಡ್ಯ

ಪಾಂಡ್ಯ ಅವರು ಎರಡು ವರ್ಷ ಟೈಟನ್ಸ್ ನಾಯಕರಾಗಿದ್ದರು.

‘ಇದರಿಂದ ತುಂಬಾ ವ್ಯತ್ಯಾಸವೇನೂ ಆಗುವುದಿಲ್ಲ. ಅವರ ಸಹಾಯ ನನಗೆ ಎಂದೆಂದೂ ಇರುತ್ತದೆ. ಅವರು ಭಾರತ ತಂಡದ ನಾಯಕರಾಗಿದ್ದವರು. ಈ ತಂಡ (ಮುಂಬೈ) ಏನು ಸಾಧನೆ ಮಾಡಿದೆಯೊ ಅದನ್ನೆಲ್ಲಾ ಅವರ ನಾಯಕತ್ವದಲ್ಲೇ ಮಾಡಿತ್ತು’ ಎಂದು ಪಾಂಡ್ಯ ಮಾಧ್ಯಮ ಸಂವಾದದಲ್ಲಿ ತಿಳಿಸಿದರು.

ಕೇಂದ್ರೀಯ ಗುತ್ತಿಗೆಗೆ ಸರ್ಫರಾಜ್, ಜುರೇಲ್

ಚಳಿಗಾಲದ ವೇಳೆ ಉತ್ತರ ಭಾರತದಲ್ಲಿ ರಣಜಿ ಪಂದ್ಯ ಇಲ್ಲ

ನವದೆಹಲಿ (ಪಿಟಿಐ): ಭಾರತ ತಂಡದ ನವತಾರೆ ಸರ್ಫರಾಜ್ ಖಾನ್ ಮತ್ತು ಯುವ ವಿಕೆಟ್ ಕೀಪರ್ ಧ್ರುವ್ ಜುರೇಲ್ ಅವರನ್ನು ಬಿಸಿಸಿಐನ ಕೇಂದ್ರೀಯ ಗುತ್ತಿಗೆ ಸಿ ಕೆಟಗರಿಗೆ ಸೇರ್ಪಡೆ ಮಾಡಲಾಗಿದೆ. ಇವರಿಬ್ಬರೂ ಹಾಲಿ ಋತುವಿನಲ್ಲಿ ಮೂರು ಟೆಸ್ಟ್‌ಗಳನ್ನು ಆಡುವ ಮಾನದಂಡ ಪೂರೈಸಿದ್ದಾರೆ.

ಸೋಮವಾರ ನಡೆದ ಬಿಸಿಸಿಐನ ಅಪೆಕ್ಸ್ ಕೌನ್ಸಿಲ್ ಸಭೆಯಲ್ಲಿ ಇವರಿಬ್ಬರ ಹೆಸರು ಸೇರ್ಪಡೆ ಸ್ಥಿರೀಕರಿಸಲಾಯಿತು. ಮುಂಬೈನ ಆಟಗಾರ ಸರ್ಫರಾಜ್, ಇಂಗ್ಲೆಂಡ್ ವಿರುದ್ಧ ಸರಣಿಯಲ್ಲಿ ಮೂರು ಅರ್ಧ ಶತಕಗಳನ್ನು ಬಾರಿಸಿದ್ದರು. ಇದೇ ಸರಣಿಯ ರಾಂಚಿ ಟೆಸ್ಟ್ ಪಂದ್ಯದಲ್ಲಿ ಜುರೆಲ್ 90 ಮತ್ತು ಅಜೇಯ 39 ರನ್ ಗಳಿಸಿ ಗೆಲುವಿಗೆ ನೆರವಾಗಿದ್ದರು. ಎರಡನೇ ಟೆಸ್ಟ್ ಪಂದ್ಯದಲ್ಲೇ ‘ಪಂದ್ಯದ ಆಟಗಾರ’ ಪುರಸ್ಕಾರ ಪಡೆದಿದ್ದರು.

ರಣಜಿ ಟ್ರೋಫಿ: ಬಿಸಿಸಿಐ, ಮುಂದಿನ ಸಾಲಿನ ರಣಜಿ ಟ್ರೋಫಿ ವೇಳಾಪಟ್ಟಿಯಲ್ಲಿ ಬದಲಾವಣೆಗಳನ್ನು ಮಾಡುವ ಸಾಧ್ಯತೆಯಿದೆ. ಡಿಸೆಂಬರ್, ಜನವರಿ ತಿಂಗಳ ಅವಧಿಯಲ್ಲಿ ಉತ್ತರ ಭಾರತದ ಹಲವೆಡೆ ಮಂಜು ಮುಸುಕುವುದರಿಂದ ಮತ್ತು ಮಬ್ಬಿನಿಂದಾಗಿ ಆಟಕ್ಕೆ ತೊಂದರೆಯಾಗುತ್ತಿರುವ ಕಾರಣ, ಮುಂದಿನ ಸಾಲಿನಿಂದ ಆ ಸಮಯದಲ್ಲಿ ಅಲ್ಲಿ ಪಂದ್ಯಗಳನ್ನು ಆಡಿಸದಿರಲು ಮುಂದಾಗಿದೆ. 2024–25ನೇ ಸಾಲಿಗೆ ವಿವರವಾದ ದೇಶಿಯ ಕ್ರಿಕೆಟ್ ವೇಳಾಪಟ್ಟಿಯನ್ನು ಮುಂದೆ ಪ್ರಕಟಿಸಲಾಗುವುದು.

ಕೆಲ ವರ್ಷಗಳಿಂದ ದೆಹಲಿ, ಚಂಡೀಗಢ, ಕಾನ್ಪುರ, ಧರ್ಮಶಾಲಾ, ಜಮ್ಮು, ಮೀರತ್ ಮೊದಲಾದ ಕಡೆ ಹವಾಮಾನದ ಕಾರಣದಿಂದ ಪಂದ್ಯಗಳಿಗೆ ಅಡ್ಡಿಯಾಗಿತ್ತು. ಹೀಗಾಗಿ ಕೆಲವು ತಂಡಗಳು ಅಮೂಲ್ಯ ಪಾಯಿಂಟ್ಸ್ ಕಳೆದುಕೊಳ್ಳುತ್ತಿವೆ. ರಣಜಿ ಟ್ರೋಫಿಯಲ್ಲಿ ಆಟಗಾರರ ಪ್ರದರ್ಶನದ ಮೇಲೆ ಐಪಿಎಲ್ ಫ್ರಾಂಚೈಸಿಗಳು ಕಣ್ಣಿಡುತ್ತವೆ.

ಧ್ರುವ ಜುರೇಲ್, ಸರ್ಫರಾಜ್ ಖಾನ್

‘ನಿರಾಕ್ಷೇಪಣಾ ಪತ್ರ ಅಗತ್ಯ’

ಯಾವುದೇ ರಾಜ್ಯ ಕ್ರಿಕೆಟ್ ಸಂಸ್ಥೆಗಳು, ಅಂತರರಾಷ್ಟ್ರೀಯ ತಂಡಕ್ಕೆ ಆತಿಥ್ಯ ವಹಿಸುವ ಮೊದಲು ಬಿಸಿಸಿಐನಿಂದ ನಿರಾಕ್ಷೇಪಣಾ ಪತ್ರ ಪಡೆದಿರಬೇಕು ಎಂದೂ ಅಪೆಕ್ಸ್ ಕೌನ್ಸಿಲ್ ಸಭೆಯಲ್ಲಿ ಸ್ಪಷ್ಟಪಡಿಸಲಾಗಿದೆ.

ಸಾಮರ್ಥ್ಯದ ನಂಬಿಕೆಯಿಂದ ಜಯ: ಸ್ಮೃತಿ

ನವದೆಹಲಿ (ಪಿಟಿಐ): ‘ಕಳೆದ ವರ್ಷ ಮಹಿಳಾ ಪ್ರೀಮಿಯರ್ ಲೀಗ್‌ನ ಒತ್ತಡದ ಸಂದರ್ಭಗಳಲ್ಲಿ ನಮ್ಮ ಸಾಮರ್ಥ್ಯದ ಮೇಲೆ ವಿಶ್ವಾಸ ಹೊಂದಿರದ ಕಾರಣ ಫಲಿತಾಂಶ ನಮಗೆ ಕೈಕೊಟ್ಟಿತು. ಈ ಬಾರಿಯ ಆವೃತ್ತಿಯಲ್ಲಿ ನಾವು ನಮ್ಮ ಸಾಮರ್ಥ್ಯದ ಮೇಲೆ ನಂಬಿಕೆಯಿಡುವಲ್ಲಿ ಯಶಸ್ವಿಯಾದ ಕಾರಣ ಗೆಲ್ಲಲು ಸಾಧ್ಯವಾಯಿತು’ ಎಂದು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ನಾಯಕಿ ಸ್ಮೃತಿ ಮಂದಾನ ಹೇಳಿದರು.

‘ನಾನು ಕಲಿತ ಒಂದು ವಿಚಾರವೆಂದರೆ ನಮ್ಮ ಸಾಮರ್ಥ್ಯದ ಮೇಲೆ ನಂಬಿಕೆ ಇರಬೇಕು ಎನ್ನುವುದು. ಕಳೆದ ವರ್ಷ ನನ್ನಲ್ಲಿ ಅದರ ಕೊರತೆಯಿತ್ತು’ ಎಂದು ಮಂದಾನ ಹೇಳಿದರು.

ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಭಾನುವಾರ ರಾತ್ರಿ ಡಬ್ಲ್ಯುಪಿಎಲ್ ಟ್ರೋಫಿ ಜಯಿಸಿದ ನಂತರ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

ಸ್ಮೃತಿ ಮಂದಾನ

ಎರಡನೇ ಆವೃತ್ತಿಯಲ್ಲಿ ಮಂದಾನ ಟ್ರೋಫಿಯನ್ನು ಗೆದ್ದರೆ, ಹರ್ಮನ್‌ಪ್ರೀತ್ ಕೌರ್ ಉದ್ಘಾಟನಾ ಆವೃತ್ತಿಯಲ್ಲಿ ಮುಂಬೈ ಇಂಡಿಯನ್ಸ್ ತಂಡವನ್ನು ಪ್ರಶಸ್ತಿವರೆಗೆ ಮುನ್ನಡೆಸಿದ್ದರು. ಇದು ಭಾರತೀಯ ಕ್ರಿಕೆಟ್‌ನ ಸಮಗ್ರತೆ ತೋರಿಸುತ್ತದೆ ಎಂದು ಹೇಳಿದರು.

‘ಕಳೆದ ವರ್ಷ ಮುಂಬೈ ಇಂಡಿಯನ್ಸ್ ಮತ್ತು ಡೆಲ್ಲಿ ಕ್ಯಾಪಿಟಲ್ಸ್ ನಡುವೆ ಫೈನಲ್ ನಡೆಯುವಾಗ, ಹರ್ಮನ್ ಟ್ರೋಫಿ ಜಯಿಸುತ್ತಾರೆ ಎಂದು ಭಾವಿಸಿದ್ದೆ. ಏಕೆಂದರೆ ಡಬ್ಲ್ಯುಪಿಎಲ್‌ನ ಮೊದಲ ಆವೃತ್ತಿ ಮತ್ತು ಭಾರತ ತಂಡದ ನಾಯಕಿಯಾಗಿ ಅವರು ಗೆಲ್ಲಬೇಕಿತ್ತು. ಎರಡನೇ ಆವೃತಿಯಲ್ಲಿ ಟ್ರೋಫಿ ಗೆದ್ದ ಭಾರತ ತಂಡದ ಎರಡನೇ ನಾಯಕಿ ಆಗಿದ್ದೇನೆ. ಇದು ಕೇವಲ ಆರಂಭ, ಇನ್ನೂ ಬಹಳ ದೂರ ಸಾಗಬೇಕಾಗಿದೆ’ ಎಂದರು.

ಚಿನ್ನ ಗೆದ್ದ ಆಳ್ವಾಸ್‌ನ ಸಾಯಿ ಸಂಗೀತಾ

ಮಂಗಳೂರು: ಮೂಡುಬಿದಿರೆ ಆಳ್ವಾಸ್ ಕಾಲೇಜಿನ ಸಾಯಿ ಸಂಗೀತಾ, ಭಾರತ ಅಥ್ಲೆಟಿಕ್ ಫೆಡರೇಷನ್ ಆಶ್ರಯದಲ್ಲಿ ತಿರುವನಂತಪುರದಲ್ಲಿ ಸೋಮವಾರ ಆರಂಭಗೊಂಡ ರಾಷ್ಟ್ರೀಯ ಮುಕ್ತ 400 ಮೀಟರ್ಸ್ ಓಟದಲ್ಲಿ ಚಿನ್ನದ ಪದಕ ಗೆದ್ದುಕೊಂಡಿದ್ದಾರೆ.

ಎಲ್‌ಎನ್‌ಸಿಪಿ ಆವರಣದಲ್ಲಿ ನಡೆಯುತ್ತಿರುವ ಕೂಟದ ಐದನೇ ಆವೃತ್ತಿಯ 20 ವರ್ಷದೊಳಗಿನ ಬಾಲಕಿಯರ ವಿಭಾಗದಲ್ಲಿ ಸಾಯಿ ಸಂಗೀತಾ 55.3 ಸೆಕೆಂಡುಗಳಲ್ಲಿ ಓಟ ಪೂರೈಸಿದರು. ತೆಲಂಗಾಣ ರಾಜ್ಯ ಪ್ರತಿನಿಧಿಸಿದ ಅವರು ಫೈನಲ್‌ನಲ್ಲಿ ರಾಜಸ್ತಾನದ ಮಿಶ್ತಿ ಕಾಜ್ಲಾ (55.70 ಸೆ) ಅವರನ್ನು ಹಿಂದಿಕ್ಕಿದರು. ಕೇರಳದ ಸಾಂಡ್ರಾ ಮೋಳ್ ಸಾಬು ಕಂಚಿನ ಪದಕ ತಮ್ಮದಾಗಿಸಿಕೊಂಡರು.

ಮಹಿಳೆಯರ ವಿಭಾಗದಲ್ಲಿ ಕರ್ನಾಟಕದ ಪೂವಮ್ಮ ರಾಜು ಬೆಳ್ಳಿ ಪದಕ ಗಳಿಸಿದರು. ಅವರ ಪೈಪೋಟಿಯನ್ನು ಮೀರಿದ ತಮಿಳುನಾಡಿನ ವಿದ್ಯಾ ರಾಮ ರಾಜ್ ಚಿನ್ನದ ಪದಕ ಗೆದ್ದುಕೊಂಡರು.

ತೀವ್ರ ಕುತೂಹಲ ಕೆರಳಿಸಿದ್ದ ಪುರುಷರ ವಿಭಾಗದ ಮೂರೂ ಪದಕಗಳು ಕೇರಳದ ಪಾಲಾದವು. 2019ರಲ್ಲಿ 45.21 ಸೆಕೆಂಡುಗಳ ಸಾಧನೆಯೊಂದಿಗೆ ರಾಷ್ಟ್ರೀಯ ದಾಖಲೆ ನಿರ್ಮಿಸಿದ್ದ ಮುಹಮ್ಮದ್ ಅನಾಸ್ ಯಾಹಿಯಾ ಇಲ್ಲಿ 46.48 ಸೆಕೆಂಡುಗಳೊಂದಿಗೆ ಬೆಳ್ಳಿ ಪದಕ ಗಳಿಸಿದರು. ನೋಹ್ ನಿರ್ಮಲ್ ಟೋಮ್ (46.40) ಚಿನ್ನ ಗೆದ್ದರೆ, ಮುಹಮ್ಮದ್ ಅಜ್ಮಲ್ ಕಂಚಿನ ಪದಕ ಗಳಿಸಿದರು. ಯಶಸ್ ಎಸ್.ಪಿ (47.52 ಸೆ) ಅವರಿಗೆ ಆರನೇ ಸ್ಥಾನ ದೊರೆಯಿತು.

ಅಡ್‌ಹಾಕ್ ಸಮಿತಿ ವಿಸರ್ಜನೆ: ಡಬ್ಲ್ಯುಎಫ್‌ಐಗೆ ಅಧಿಕಾರ

ನವದೆಹಲಿ (ಪಿಟಿಐ): ಭಾರತ ಒಲಿಂಪಿಕ್ ಸಂಸ್ಥೆ (ಐಒಎ)ಯು ಸೋಮವಾರ ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ಅಡ್‌ಹಾಕ್ ಸಮಿತಿಯನ್ನು ವಿಸರ್ಜಿಸಿದೆ. ಫೆಡರೇಷನ್ ಮೇಲಿನ ಅಮಾನತು ಹಿಂತೆಗೆದುಕೊಂಡ ನಂತರ ಸಮಿತಿಯನ್ನು ಮುಂದುವರಿಸುವ ಅಗತ್ಯವಿಲ್ಲ ಎಂದು ಹೇಳಿದೆ. ಆ ಮೂಲಕ ಫೆಡರೇಷನ್‌ಗೆ ಆಡಳಿತಾತ್ಮಕ ಅಧಿಕಾರ ಮರಳಿ ದೊರೆತಂತಾಗಿದೆ.

ಮುಂದಿನ ತಿಂಗಳು ನಡೆಯಲಿರುವ ಒಲಿಂಪಿಕ್ ಅರ್ಹತಾ ಪಂದ್ಯಾವಳಿಗೆ ಆಯ್ಕೆ ಟ್ರಯಲ್ಸ್ ಅನ್ನು ಡಬ್ಲ್ಯುಎಫ್‌ಐ ಸಹಭಾಗಿತ್ವದೊಂದಿಗೆ ಯಶಸ್ವಿಯಾಗಿ ನಡೆಸಿದ್ದರಿಂದ ಈ ನಿರ್ಧಾರಕ್ಕೆ ಬರಲಾಗಿದೆ ಎಂದು ಐಒಎ ತಿಳಿಸಿದೆ.

ಕಳೆದ ವರ್ಷ ಡಿಸೆಂಬರ್‌ನಲ್ಲಿ ಕ್ರೀಡಾ ಸಚಿವಾಲಯವು, ಅಧ್ಯಕ್ಷ ಸಂಜಯ್ ಸಿಂಗ್ ನೇತೃತ್ವದ ಡಬ್ಲ್ಯುಎಫ್‌ಐ ನೂತನ ಆಡಳಿತ ಮಂಡಳಿಯನ್ನು ಅಮಾನತುಗೊಳಿಸಿದ ಬಳಿಕ ಅಡ್‌ಹಾಕ್ ಸಮಿತಿ ರಚಿಸಲಾಗಿತ್ತು. ವಿಶ್ವ ಕುಸ್ತಿ ಸಂಸ್ಥೆಯಾದ ಯುಡಬ್ಲ್ಯುಡಬ್ಲ್ಯು (ವಿಶ್ವ ಕುಸ್ತಿ ಸಂಘಟನೆ) ಫೆಬ್ರುವರಿಯಲ್ಲಿ ಫೆಡರೇಷನ್‌ನ ಮೇಲಿನ ಅಮಾನತನ್ನು ವಾಪಸ್ ಪಡೆದಿತ್ತು.

ಅಮಾನತು ತೆರವು ಹಿನ್ನೆಲೆಯಲ್ಲಿ ಮತ್ತು ದೆಹಲಿ ಹೈಕೋರ್ಟ್ ನಿರ್ದೇಶನದಂತೆ ಐಒಎ ನೇಮಿಸಿದ ಅಡ್‌ಹಾಕ್ ಸಮಿತಿಯು ಆಯ್ಕೆ ಟ್ರಯಲ್ಸ್ ಅನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ಬೆನ್ನಲ್ಲಿ ಸಮಿತಿಯನ್ನು ವಿಸರ್ಜಿಸುವ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಐಒಎ ಮಾ. 10 ರಂದು ಹೊರಡಿಸಿದ ಆದೇಶದಲ್ಲಿ ತಿಳಿಸಿದೆ.

ಸಂಜಯ್ ಸಿಂಗ್

‘ಡಬ್ಲ್ಯುಎಫ್‌ಐಗೆ ಪೂರ್ಣ ಪ್ರಮಾಣದ ಅಧಿಕಾರ ನೀಡಿದ್ದಕ್ಕಾಗಿ ಐಒಎಗೆ ಧನ್ಯವಾದ ಅರ್ಪಿಸುತ್ತೇವೆ. ಕುಸ್ತಿಪಟುಗಳಿಗೆ ನಾವು ಎಲ್ಲಾ ಸೌಲಭ್ಯಗಳನ್ನು ನೀಡುತ್ತೇವೆ. ಶೀಘ್ರದಲ್ಲೇ ರಾಷ್ಟ್ರೀಯ ಶಿಬಿರ ಆಯೋಜಿಸುತ್ತೇವೆ’ ಎಂದು ಭಾರತ ಕುಸ್ತಿ ಫೆಡರೇಷನ್ ಅಧ್ಯಕ್ಷ ಸಂಜಯ್ ಸಿಂಗ್ ತಿಳಿಸಿದ್ದಾರೆ.

ಲೈಂಗಿಕ ಕಿರುಕುಳ ಮತ್ತು ನಿಯಮಗಳ ಅನುಸರಣೆಯಂತಹ ಇತರ ಸಮಸ್ಯೆಗಳನ್ನು ಪರಿಹರಿಸಲು ‘ಸುರಕ್ಷತಾ ಸಮಿತಿ’ ನೇಮಿಸುವಂತೆ ಐಒಎ ಡಬ್ಲ್ಯುಎಫ್‌ಐಗೆ ಸೂಚನೆ ನೀಡಿದೆ.

ಸ್ವಿಸ್ ಓಪನ್ ಟೂರ್ನಿ ಇಂದಿನಿಂದ ಲಕ್ಷ್ಯ, ಸೇನ್, ಸಿಂಧು ಮೇಲೆ ನಿರೀಕ್ಷೆ

ಬಾಸೆಲ್ (ಸ್ವಿಡ್ಜರ್ಲೆಂಡ್), (ಪಿಟಿಐ): ಭಾರತದ ಲಕ್ಷ್ಯ ಸೇನ್ ಅವರು ಇಲ್ಲಿ ಮಂಗಳವಾರ ಆರಂಭವಾಗಲಿರುವ ಸ್ವಿಸ್ ಓಪನ್ ಸೂಪರ್ 300 ಟೂರ್ನಿಯಲ್ಲಿ ಯಶಸ್ಸಿನ ಓಟ ಮುಂದುವರಿಸುವ ನಿರೀಕ್ಷೆಯಲ್ಲಿದ್ದಾರೆ. ಇನ್ನೊಂದೆಡೆ, ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆ ಪಿ.ವಿ.ಸಿಂಧು ಅವರು ಲಯಕ್ಕೆ ಮರಳಲು ಪ್ರಯತ್ನಿಸಲಿದ್ದಾರೆ.

ಫ್ರೆಂಚ್ ಓಪನ್ ಮತ್ತು ಆಲ್ ಇಂಗ್ಲೆಂಡ್ ಚಾಂಪಿಯನ್‌ಷಿಪ್‌ನ ಸೆಮಿಫೈನಲ್‌ವರೆಗೆ ತಲುಪಿದ್ದ 22 ವರ್ಷದ ಸೇನ್, ₹1.74 ಕೋಟಿ ಬಹುಮಾನದ ಈ ಟೂರ್ನಿಯಲ್ಲಿ ಪಾಲ್ಗೊಳ್ಳುತ್ತಿದ್ದಾರೆ. 7ನೇ ಶ್ರೇಯಾಂಕದ ಸೇನ್, ಮಲೇಷ್ಯಾದ ಲಿಯೊಂಗ್ ಜುನ್ ಹಾವೊ ವಿರುದ್ಧ ತಮ್ಮ ಅಭಿಯಾನವನ್ನು ಆರಂಭಿಸಲಿದ್ದಾರೆ.

ವಿಶ್ವದ ಮಾಜಿ ಅಗ್ರಮಾನ್ಯ ಆಟಗಾರ ಕಿದಂಬಿ ಶ್ರೀಕಾಂತ್ ಮೊದಲ ಸುತ್ತಿನಲ್ಲಿ ಏಷ್ಯನ್ ಗೇಮ್ಸ್ ಕಂಚಿನ ಪದಕ ವಿಜೇತ, ಚೀನಾ ತೈಪೆಯ ವಾಂಗ್ ಝು-ವೀ ಅವರನ್ನು ಎದುರಿಸಲಿದ್ದಾರೆ.

ಆರಂಭಿಕ ಪಂದ್ಯದಲ್ಲಿ ಸಿಂಧು ಅವರು ಜರ್ಮನಿಯ ಯೊವೊನ್ ಲಿ ಅವರನ್ನು ಎದುರಿಸಲಿದ್ದಾರೆ.

ಪಿ.ವಿ. ಸಿಂಧು

ಆಸ್ಟ್ರೇಲಿಯಾ ಪ್ರವಾಸ: ಹಾಕಿ ತಂಡಕ್ಕೆ ಹರ್ಮನ್ ನಾಯಕ

ನವದೆಹಲಿ (ಪಿಟಿಐ): ಆಸ್ಟ್ರೇಲಿಯಾ ವಿರುದ್ಧದ ಐದು ಪಂದ್ಯಗಳ ಹಾಕಿ ಟೆಸ್ಟ್ ಸರಣಿಯಲ್ಲಿ ಡ್ರ್ಯಾಗ್-ಫ್ಲಿಕರ್ ಹರ್ಮನ್ ಪ್ರೀತ್ ಸಿಂಗ್ 27 ಸದಸ್ಯರ ಬಲಿಷ್ಠ ಭಾರತ ತಂಡವನ್ನು ಮುನ್ನಡೆಸಲಿದ್ದಾರೆ. ತಂಡದ ಮುಖ್ಯ ಕೋಚ್ ಕ್ರೇಗ್ ಫುಲ್ಟನ್ ಅವರು ಭುವನೇಶ್ವರದಲ್ಲಿ ತರಬೇತಿ ಪಡೆಯುತ್ತಿರುವ ಅನುಭವಿ ಆಟಗಾರರ ಜತೆ ಪ್ರವಾಸಕ್ಕೆ ತೆರಳಲು ಬಯಸಿದ್ದಾರೆ.

ಭಾರತ ತಂಡ ಏ.1 ರಂದು ಆಸ್ಟ್ರೇಲಿಯಾಕ್ಕೆ ತೆರಳಲಿದ್ದು, ಏ.6 ರಂದು ಮೊದಲ ಪಂದ್ಯವನ್ನು ಆಡಲಿದೆ. ನಂತರ ಏ.7, 10, 12 ಮತ್ತು 13 ರಂದು ಉಳಿದ 4 ಪಂದ್ಯಗಳನ್ನು ಆಡಲಿದೆ. ಎಲ್ಲಾ ಪಂದ್ಯಗಳು ಪರ್ತ್‌ನಲ್ಲಿ ನಡೆಯಲಿವೆ.

ಹಾಕಿ ಆಡುವ ಅತ್ಯುತ್ತಮ ರಾಷ್ಟ್ರಗಳಲ್ಲಿ ಒಂದಾದ ಆಸ್ಟ್ರೇಲಿಯಾ ತಂಡದ ವಿರುದ್ಧದ ಈ ಪ್ರವಾಸ, ಪ್ಯಾರಿಸ್ ಒಲಿಂಪಿಕ್ಸ್‌ಗೆ ಮುಂಚಿತವಾಗಿ ತನ್ನ ಸಿದ್ಧತೆಗೆ ಅಂತಿಮ ಸ್ಪರ್ಶ ನೀಡಲು ಭಾರತಕ್ಕೆ ನೆರವಾಗಲಿದೆ.

ಒಲಿಂಪಿಕ್ಸ್‌ಗೆ 16 ಮಂದಿ ಸಂಭವ ನೀಯ ಆಟಗಾರರ ಮೇಲೆ ಗಮನ ಇಡಲೂ ಕೋಚ್ ಫುಲ್ಟನ್ ಅವರಿಗೆ ಈ ಪ್ರವಾಸ ಅವಕಾಶ ನೀಡಲಿದೆ. ಇದರ ಜೊತೆಗೆ, ಒಲಿಂಪಿಕ್ಸ್‌ಗೆ ಮುಂಚಿತವಾಗಿ ಪ್ರೊ ಲೀಗ್‌ನ ಬೆಲ್ಜಿಯಂ ಲೆಗ್ ಕೂಡ ನಡೆಯಲಿದ್ದು, ಫುಲ್ಡನ್ ಅವರಿಗೆ ಪೂರ್ಣಪ್ರಮಾಣದ ತಂಡ ಅಂತಿಮ ಗೊಳಿಸಲು ಹೆಚ್ಚಿನ ಆಯ್ಕೆ ನೀಡಿದೆ.



ತಂಡ ಇಂತಿದೆ: ಗೋಲ್ ಕೀಪರ್ಸ್: ಪಿ.ಆರ್.ಶ್ರೀಜೇಶ್, ಕೃಷನ್ ಬಹಾದ್ದೂರ್ ಪಾಠಕ್ ಮತ್ತು ಸೂರಜ್ ಕರ್ಕೇರಾ. **ಡಿಫೆಂಡರ್ಸ್:** ಹರ್ಮನ್‌ಪ್ರೀತ್ ಸಿಂಗ್, ಜರ್ಮನ್‌ಪ್ರೀತ್ ಸಿಂಗ್, ಅಮಿತ್ ರೋಹಿದಾಸ್, ಜುಗರಾಜ್ ಸಿಂಗ್, ಸಂಜಯ್, ಸುಮಿತ್, ಅಮೀರ್ ಅಲಿ.**ಮಿಡ್ ಫೀಲ್ಡರ್ಸ್:** ಮನ್‌ಪ್ರೀತ್ ಸಿಂಗ್, ಹಾರ್ದಿಕ್ ಸಿಂಗ್, ವಿವೇಕ್ ಸಾಗರ್ ಪ್ರಸಾದ್, ಶಂಷೇರ್ ಸಿಂಗ್, ನೀಲಕಂಠ ಶರ್ಮಾ, ರಾಜ ಕುಮಾರ್ ಪಾಲ್, ವಿಷ್ಣುಕಾಂತ್ ಸಿಂಗ್ . **ಫಾರ್ವರ್ಡ್ಸ್:** ಆಕಾಶ್‌ದೀಪ್ ಸಿಂಗ್, ಮನ್‌ದೀಪ್ ಸಿಂಗ್, ಲಲಿತ್ ಕುಮಾರ್ ಉಪಾಧ್ಯಾಯ, ಅಭಿಷೇಕ್, ದಿಲ್‌ಪ್ರೀತ್ ಸಿಂಗ್, ಸುಖಜೀತ್ ಸಿಂಗ್, ಗುರ್ಜಂತ್ ಸಿಂಗ್, ಮೊಹಮ್ಮದ್ ರಹೀಲ್ ಮೌಸೀನ್, ಬಾಬಿ ಸಿಂಗ್ ಧಾಮಿ, ಅರಿಜಿತ್ ಸಿಂಗ್ ಹುಂಡಲ್.

ಸಂಕ್ಷಿಪ್ತ ಸುದ್ದಿ

ಬರ್ನಾಡ್ ಡನ್ ರಾಜೀನಾಮೆ ಸ್ವೀಕೃತ

ನವದೆಹಲಿ (ಪಿಟಿಐ): ಪ್ರಥಮ ವಿಶ್ವ ಒಲಿಂಪಿಕ್ಸ್ ಅರ್ಹತಾ ಟೂರ್ನಿಯಲ್ಲಿ ಭಾರತದ ಬಾಕ್ಸರ್‌ಗಳ ನಿರಾಶಾದಾಯಕ ಪ್ರದರ್ಶನದ ಹಿನ್ನೆಲೆಯಲ್ಲಿ ಹೈ ಪರ್ಫಾಮೆನ್ಸ್ ಡೈರೆಕ್ಟರ್ ಬರ್ನಾಡ್ ಡನ್ ಅವರು ನೀಡಿದ ರಾಜೀನಾಮೆಯನ್ನು ಸೋಮವಾರ ಬಾಕ್ಸಿಂಗ್ ಫೆಡರೇಷನ್ ಆಫ್ ಇಂಡಿಯಾ (ಬಿಎಫ್‌ಐ) ಅಂಗೀಕರಿಸಿದೆ.

ತಂಡವು ವಿದೇಶಿ ತರಬೇತುದಾರ ದಿಮಿತ್ರಿ ಮಿಟ್ರುಕ್ ಅವರ ಮಾರ್ಗದರ್ಶನದಲ್ಲಿ ತರಬೇತಿ ಮುಂದುವರಿಸಲಿದೆ.

ಐರ್ಲೆಂಡ್‌ನ ವೃತ್ತಿಪರ ಬಾಕ್ಸರ್ ಆಗಿರುವ ಡನ್ ಅವರನ್ನು 2022ರ ಅಕ್ಟೋಬರ್‌ನಲ್ಲಿ ಎಚ್‌ಪಿಡಿ ಆಗಿ ನೇಮಕ ಮಾಡಲಾಗಿತ್ತು. ಒಂಬತ್ತು ಬಾಕ್ಸರ್‌ಗಳು ಬರಿಗೈಯಲ್ಲಿ ಹಿಂದಿರುಗಿದ್ದರು.

‘ಬರ್ನಾಡ್ ಡನ್ ಬಿಎಫ್‌ಐನ ವ್ಯವಸ್ಥೆಯ ಅವಿಭಾಜ್ಯ ಅಂಗವಾಗಿದ್ದರು. ಅವರ ರಾಜೀನಾಮೆಯನ್ನು ಸಮಿತಿ ಅಂಗೀಕರಿಸಿದೆ’ ಎಂದು ಬಿಎಫ್‌ಐ ಅಧ್ಯಕ್ಷ ಅಜಯ್ ಸಿಂಗ್ ತಿಳಿಸಿದ್ದಾರೆ.

ಅಖಿಲ್, ಅನೀಶ್‌ಗೆ ಚಿನ್ನ

ನವದೆಹಲಿ (ಪಿಟಿಐ): ಪ್ಯಾರಿಸ್ ಒಲಿಂಪಿಕ್ಸ್ ಕೋಟಾ ಸಂಪಾದಿಸಿರುವ ಅಖಿಲ್ ಶೈರಾಣ್ ಮತ್ತು ಅನೀಶ್ ಭಾನವಾಲಾ ಅವರು ಪೋಲಿಶ್ ಗ್ರ್ಯಾನ್‌ಪ್ರಿ ಶೂಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಭಾನುವಾರ ಒಂದೊಂದು ಚಿನ್ನದ ಪದಕ ಗೆದ್ದುಕೊಂಡಿದ್ದಾರೆ. ಆ ಮೂಲಕ ಈ ಕೂಟದಲ್ಲಿ ಭಾರತ ಒಟ್ಟು ಆರು ಪದಕಗಳೊಡನೆ ಅಭಿಯಾನ ಮುಗಿಸಿದಂತಾಗಿದೆ.

ಶೈರಾಣ್ ಅವರು ವ್ರೊಕ್ಲಾವಿಯಾ ಆ್ಯಂಡ್ ಡೊಲ್ನೆಗೊ ಸ್ಲಾಸ್ಕಾ ಗ್ರ್ಯಾನ್‌ಪ್ರಿ ಕೂಟದ ಪುರುಷರ 50 ಮೀ. ರೈಫಲ್ 3–ಪೊಸಿಷನ್‌ನ ಎರಡನೇ ಸ್ಪರ್ಧೆಯಲ್ಲಿ 468.4 ಸ್ಕೋರ್‌ನೊಡನೆ ವಿಶ್ವ ದಾಖಲೆ ಮುರಿದರು. 2.2 ಪಾಯಿಂಟ್ ಅಂತರದಿಂದ ಹಿಂದೆಬಿದ್ದು ಎರಡನೇ ಸ್ಥಾನ ಪಡೆದ ಝೆಕ್ ರಿಪಬ್ಲಿಕ್‌ನ ಪ್ಯಾಟ್ರಿಕ್ ಜಾನಿ ಕೂಡ ಹಳೆಯ ದಾಖಲೆ ಸುಧಾರಿಸಿದರು. ಇಬ್ಬರ ಸ್ಕೋರ್‌ಗಳು ಕೂಡ ಈ ಹಿಂದಿನ ವಿಶ್ವದಾಖಲೆ (466.1) ಗಿಂತ ಹೆಚ್ಚು. ಹಳೆಯ ದಾಖಲೆ ಝೆಕ್ ರಿಪಬ್ಲಿಕ್‌ನ ಜಿರಿ ಪ್ರಿವ್ರಾಟ್‌ಸ್ಕಿ ಹೆಸರಿನಲ್ಲಿತ್ತು. ಭಾನವಾಲಾ ಅವರು ಜೋಸೆಫ್ ಝುಪೆಡ್‌ಝ್ಕಿ ಗ್ರ್ಯಾನ್‌ಪ್ರಿ ಟೂರ್ನಿಯ ಪುರುಷರ 25 ಮೀ. ರ‍್ಯಾಪಿಡ್ ಫೈರ್ ಪಿಸ್ತೂಲ್ ವಿಭಾಗದಲ್ಲಿ ಚಿನ್ನ ಗೆದ್ದರು.

ಹಾಕಿ ಮಾಜಿ ಆಟಗಾರ ಕರುಣಾಕರನ್ ನಿಧನ

ಬೆಂಗಳೂರು: ಕರ್ನಾಟಕದ ಮಾಜಿ ಹಾಕಿ ಆಟಗಾರ ಪಿ.ಕರುಣಾಕರನ್ (62) ಸೋಮವಾರ ಬೆಳಿಗ್ಗೆ ಹೃದಯಾಘಾತದಿಂದ ನಿಧನರಾದರು. ಅವರು ಕರ್ನಾಟಕ ಸೀನಿಯರ್ ತಂಡ ಮತ್ತು ಬೆಂಗಳೂರಿನ ಬೆಮೆಲ್ ತಂಡವನ್ನು ಮುನ್ನಡೆಸಿದ್ದರು. 1982ರ ಜೂನಿಯರ್ ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ ರಾಜ್ಯ ತಂಡವನ್ನು ಪ್ರತಿನಿಧಿಸಿದ್ದರು. ರಕ್ಷಣಾ ವಿಭಾಗದಲ್ಲಿ ಲೆಫ್ಟ್ ಬ್ಯಾಕ್ ಸ್ಥಾನದಲ್ಲಿ ಆಡುತ್ತಿದ್ದರು.



ಅವರು 1988ರವರೆಗೆ ವಲಯ ಮತ್ತು ರಾಷ್ಟ್ರೀಯ ಚಾಂಪಿಯನ್‌ಷಿಪ್‌ಗಳಲ್ಲಿ ಸೀನಿಯರ್ ತಂಡದಲ್ಲಿ ಆಡಿದ್ದರು.